
ಆಗಸ್ಟ್ 1997 ರೂ. 10

ಮನೆಯಲ್ಲಿ
ಎಲ್ಲರಿಗೂ
ಇಷ್ಟವಾಗುವ
ವಿಶಿಷ್ಟ ಮಾಸಿಕ


ಬಿಸಿಲ ಬದುಕು

• ವಾಣಿಜ್ಯ • ವಿಕಾಸ • ಮಾಹಿತಿ • ಸಂಪರ್ಕ

- ಐಪಿಎಸ್ ಮಾಡುವುದು ಹೇಗೆ?
- ಗರ್ಭಿಣಿಯರಿಗೆ ಕಿವಿಮಾತು
- ಆಪ್ತ ಸಮಾಲೋಚನೆ
  -ಉಷಾ ನವರತ್ನರಾಂ
- ಹಾಸನದ ಅಂಗವಿಕಲ ಸಾಧಕ
- ಶಿಕ್ಷಣ ಕ್ಷೇತ್ರದ ಭಕ್ಷಕರು
- ವಿದ್ಯೆ - ಉದ್ಯೋಗ
  ಎಂ.ಬಿ.ಎ.
  ಪತ್ರಿಕೋದ್ಯಮ
  ಬಿ.ಎಸ್.ಆರ್.ಬಿ.
  ಅಂಚೆ ಶಿಕ್ಷಣ
- ನಾನು ಮುಖ್ಯ ಮಂತ್ರಿಯಾದರೆ?



ಸ್ವಾತಂತ್ರ್ಯ:



ಯಾರಿಗೆ ಎಲ್ಲಿಗೆ ಬಂತು ?


ಬಿಸಿಲ ಬದುಕು

• ವಾಣಿಜ್ಯ • ವಿಕಾಸ • ಮಾಹಿತಿ • ಸಂಪರ್ಕ



ಸ್ವಾತಂತ್ರ್ಯ ಯಾರಿಗೆ ಬಂತು? ಎಲ್ಲಿಗೆ ಬಂತು?

ಎಲ್ಲರಿಗೂ ಅನ್ನ, ನೀರು, ವಸತಿ ಕಲ್ಪಿಸಿದಾಗಲೇ ಅರ್ಧ ರಾತ್ರಿಯ ಸ್ವಾತಂತ್ರ್ಯಕ್ಕೆ ಅರ್ಥ ಬರುವುದು. ಆದರೆ ಭಾರತ ಸಾಗಿಬಂದ ೫೦ ವರ್ಷಗಳು ಇಂಥ ಯಾವ ಸೂಚನೆಯನ್ನೂ ನೀಡುವುದಿಲ್ಲ!




ವಿದ್ಯೆ - ಉದ್ಯೋಗ



ಬಳ್ಳಾರಿ ಶಿಕ್ಷಣ ಇಲಾಖೆಯ ಎಂಜಲು ನಾಯಿಗಳು

ಗುಡುಗುವ ಗೋವಿಂದೇಗೌಡರೇ ಕಪಟ ನಾಟಕ ಬೇಡ

ಸ್ಥಿರ ಶೀರ್ಷಿಕೆಗಳು



ಚಾಲಕ ಖಳನಾಯಕನಾದ ಕಥೆ

ತನ್ನ ವೃತ್ತಿ ಬದುಕನ್ನು ಚಲನಚಿತ್ರದೆಡೆ ತಿರುಗಿಸಿಕೊಳ್ಳುವ ಮುಂಚೆ ಈ ಮಾಜಿ ಬಸ್ ಚಾಲಕ ಕೆಲ ಕಾಲ ದೇವೇಗೌಡರನ್ನು ನಂಬಿ ರಾಜಕೀಯ ನಿಲ್ದಾಣದಲ್ಲೂ ತಂಗಿದ್ದ.

ಸಂಪಾದಕ
ಚಂದ್ರಕಾಂತ ವಡ್ಡು

ನಿರ್ವಹಣೆ
ಸಿ.ಪಿ. ಸುರೇಶ್

ಪ್ರಸಾರ
ವೈ.ಬಿ. ವಿಜಯಕುಮಾರ

ಅಕ್ಷರ ಜೋಡಣೆ
ಜಿ. ಸುರೇಶ್

ಈ ಸಂಚಿಕೆ ಲೇಖಕರು :

ಉಷಾ ನವರತ್ನರಾಮ್
ಡಾ. ನಾರಾಯಣ್ ಮಹಿಷಿ
ಎನ್.ಕೆ. ಕುಲಕರ್ಣಿ
ಡಾ. ಎಸ್.ಸಿ. ಶರ್ಮಾ
ಕೋ. ಚೆನ್ನಬಸಪ್ಪ
ಡಾ. ಸುನಂದಾ ಕುಲಕರ್ಣಿ
ಗೋಪಾಲಕೃಷ್ಣ ವಂಡ್ಸೆ
ಎಂ.ಎಸ್. ನರಸಿಂಹಮೂರ್ತಿ
ವಿಜಯ ಸಾಸನೂರು
ಡಾ. ವಸುಂಧರಾ ಭೂಪತಿ
ಪ್ರೊ. ಕೆ.ಹೆಚ್.ಮುಕ್ಕಣ್ಣನವರ
ಶೇಖರ ಭೀಮಪ್ಪ ಮಲ್ಲೂರ
ವಿಜಯ್ ಅಂಗಡಿ
ಆರೂರು ಲಕ್ಷ್ಮಣ್ ಶೇಟ್
ಡಾ. ಟಿ.ಕೆ. ತಾಪಸ್

ರಕ್ಷಾಕವಚ
ಮಗು ಭಾವಚಿತ್ರ
ಎಂ. ವಿಶ್ವನಾಥ

ಸತ್ಯಾಗ್ರಹ ಸಾಥ ವರ್ಣಪಾರದರ್ಶಿಕೆ
ಡಾ. ಹೆಚ್. ಚಂದ್ರಶೇಖರ

ಹಕ್ಕಿ ವರ್ಣಪಾರದರ್ಶಿಕೆ
ಹೆಚ್.ಎನ್. ಅಲ್ಲಮಪ್ರಭು

ವಿನ್ಯಾಸ
ಚಂದ್ರಶೇಖರ ಗುಬ್ಬಿ

ವಿಳಾಸ
ಬಿಸಿಲ ಬದುಕು ಮಾಸ ಪತ್ರಿಕೆ
ಅಂಕುರ ಪ್ರಕಾಶನ, ಅಂಚೆ ಪೆಟ್ಟಿಗೆ : 7951
ಬಸವೇಶ್ವರ ನಗರ, ಬೆಂಗಳೂರು- 560 079

Edited, Printed, Published and Owned by CHANDRAKANTA VADDU
473, I Cross, I Block, III Stage, Near Water Tank Bus Stop, Basaveshwaranagar,
BANGALORE - 560 079. Tel : 080 3358198 Fax : 080 5091136

ಕನ್ನಡದಲ್ಲಿ ಇಂಥದೊಂದು ಪರಿಪೂರ್ಣ ಪತ್ರಿಕೆ ಎಂದಾದರೂ ಪ್ರಕಟವಾದೀತೇ ಎಂದು ಕನಸುತ್ತಿದ್ದ ನನ್ನಂಥ ಭಾವುಕರಿಗೆ ನಿಮ್ಮ ಪತ್ರಿಕೆ ತಂಪೆರೆಯಿತು. ಇದೋ ಬೆಳಗಾವಿ ಕನ್ನಡ ಬರಹಗಾರ ಬಳಗದ ಪರವಾಗಿ ಹಾರ್ದಿಕ ಸುಸ್ವಾಗತ.

- ''ಋತುರಾಜ'', ಬೆಳಗಾವಿ

◆

'ಬಿಸಿಲ ಬದುಕು' ಕಂಡು ಮರುಭೂಮಿಯಲ್ಲಿ ನೀರು ಸಿಕ್ಕಷ್ಟು ಸಂತೋಷವಾಯಿತು.

- ದೀಪಾ ಮಂಜುನಾಥ, ಬೆಂಗಳೂರು

◆

ಕಾವಲಿಯ ಮೇಲಿನ ದೋಸೆ ಹೊತ್ತಿದ್ದಕ್ಕೂ ಪ್ರತ್ಯೇಕತೆಯ ಕೂಗು ಹಾಕುವ ಈ ಸಂದರ್ಭದಲ್ಲಿ ಅಖಂಡ ಕರ್ನಾಟಕದ ಸುಂದರ ಚಿತ್ರ ಹೀಗಿರುವಂತೆಯೆ ಇರಲು 'ಬಿಸಿಲ-ಬದುಕು' ಹೆಗಲು ಕೊಡಬೇಕಾಗಿದೆ.

- ಕಲಿವೀರ ಕಳ್ಳಿಮನಿ, ಕಮ್ಮತ್ತಹಳ್ಳಿ

◆

ಇವತ್ತಿನ ದಿನಮಾನದಲ್ಲಿ ಎಲ್ಲವನ್ನೂ ಲಾಭದ ಕಣ್ಣಲ್ಲೇ ನೋಡುವಾಗ ಒಂದು ಆಹ್ವಾನ ಪತ್ರವನ್ನೂ ಪ್ರಯೋಜನವಿಲ್ಲದೆ ಕಳಿಸುವುದಿಲ್ಲ. ನಮ್ಮ...... ಅವರು ಎದುರಿಗೆ ಕಂಡಾಗ ಶತಶತಮಾನದ ಗೆಳೆಯರ ಹಾಗೆ ಮಾತಾಡುತ್ತಾರೆ. ಆದರೆ ಈವರೆಗೆ ತಮ್ಮ ಒಂದೇ ಒಂದು ಸಮಾರಂಭದ ಆಹ್ವಾನ ಪತ್ರಿಕೆ ಕಳಿಸಿಲ್ಲ. ಹಾಗಿರುವಾಗ ನೀವು ಆತ್ಮೀಯತೆಯಿಂದ ನನ್ನನ್ನು ನೆನೆದು ಪತ್ರಿಕೆ ಕಳಿಸಿದ್ದೀರಿ.

- ಯು.ಆರ್.ಲಲಿತಾ, ಬೆಂಗಳೂರು

ಸಾಮಾನ್ಯ ಮಾಸಿಕಗಳಿಗಿಂತ ವಿಭಿನ್ನವಾಗಿ ಮತ್ತು ಅರ್ಥವತ್ತಾಗಿ ಪತ್ರಿಕೆ ತರಲು ತಾವು ಆಲೋಚಿಸಿರುವುದು ತುಂಬಾ ಸಂತಸದ ಸಂಗತಿ. ಜುಲೈ ಸಂಚಿಕೆಯ ಲೇಖನಗಳೆಲ್ಲವೂ ಚೆನ್ನಾಗಿವೆ.

- ಭಾಗೀರಥಿ ಹೆಗಡೆ, ಶಿರಸಿ

ಉತ್ತಮ ಲೇಖನಗಳನ್ನು ಒಳಗೊಂಡ ಸಾತ್ವಿಕ ಪತ್ರಿಕೆ ಬಗ್ಗೆ ತುಂಬಾ ಅಭಿಮಾನ ಉಂಟಾಯಿತು.

- ಕೆ.ಆರ್.ಪಂಚಣ್ಣ, ದೊಡ್ಡಬ್ಬಿಗೆರೆ

ಡಾ.ಸುನಂದಾ ಕುಲಕರ್ಣಿ ಅವರ ಲೇಖನ ಅನೇಕ ಉಪಯುಕ್ತ ಮಾಹಿತಿ ನೀಡಿತು. ಅವರು ಆರೋಗ್ಯದ ಬಗ್ಗೆ ನಿಯಮಿತವಾಗಿ ಬರೆಯುತ್ತಾರೆಂದು ತಿಳಿದು ಸಂತೋಷವೂ ಆಯಿತು.

- ಡಾ. ಸುರೇಶ ಗುರವ, ಮುಗಳಖೇಡ

ವಿದ್ಯಾರ್ಥಿಗಳಿಗೆ ನಿರುದ್ಯೋಗಿಗಳಿಗೆ ನಿಮ್ಮ ಪತ್ರಿಕೆ ದಾರಿದೀಪವಾಗಲಿದೆ. ಬಿಜಾಪುರದ ದರ್ಶನವನ್ನು ಮಧು ಬಗರೆ ಚೆನ್ನಾಗಿ ಮಾಡಿಸಿದ್ದಾರೆ.

- ಡಿ.ರಂಗನಾಥ್, ಗೊರವಿನಕಲ್ಲು

ಪ್ರಥಮ ಸಂಚಿಕೆಯೇ ಹೋಳಿಗೆ ಊಟದಂತಿತ್ತು. ಪ್ರತಿ ತಿಂಗಳೂ ಹೀಗೇ ಸಿಹಿಯೂಟ ನೀಡುವಿರಾ?


- ಎಸ್.ಎಂ.ಗಿರೀಶ್, ನಾಗರಹಾಳು

ನಾನು ಮೊದಲು 'ದಿಕ್ಸೂಚಿ', 'ಚುಟುಕು' ಪತ್ರಿಕೆ ಓದುತ್ತಿದ್ದೆ. ಅಂಗಡಿಯಲ್ಲಿ ಅನಿರೀಕ್ಷಿತವಾಗಿ 'ಬಿಸಿಲ ಬದುಕು' ನೋಡಿದಾಗ ಕೊಂಡು ತಂದೆ. ಇನ್ನು ಮುಂದೆ ನಾನು ನಿಮ್ಮ ಖಾಯಂ ಓದುಗ.

- ಜೆ.ಸಿ. ಅಶೋಕ, ಕೆರೆಸೂರಗೊಂಡನಹಳ್ಳಿ

'ಬಿಸಿಲ ಬದುಕು' ಎಲ್ಲ ಪತ್ರಿಕೆಗಳಿಗಿಂತ ಭಿನ್ನವಾಗಿದೆ.

- ಗುರುಕುಮಾರ ಚೌಕಿಮಠ, ಬೆಂಗಳೂರು



'ಕೋಚೆ' ಅವರ ''ಈ ಕಳ್ಳನ ಕೈ ಆ ಕಳ್ಳನ ಜೇಬಿನಲ್ಲಿ', ಉಷಾ ನವರತ್ನರಾಮ್ ಅವರ ''ಮದುವೆಯೋ ಮಾರಣ ಹೋಮವೋ?'', ಎನ್ಕೆ ಅವರ 'ಬ್ಲಾಕ್ ಮೇಲ್ ಗಾಡಿ' ಹಾಗೂ 'ವಿದ್ಯೆ-ಉದ್ಯೋಗ' ಅಂಕಣ ಸ್ವಾರಸ್ಯಕರವಾಗಿ ಮೂಡಿ ಬಂದಿವೆ.

- ಕಲ್ಯಾಣ ಮಳಗ್ಯಾನವರ, ಧಾರವಾಡ

ಪತ್ರಿಕೆಯ ಬಹಳಷ್ಟು ಪುಟಗಳನ್ನು 'ವಿದ್ಯೆ-ಉದ್ಯೋಗ' ಆಕ್ರಮಿಸಿಕೊಂಡಿದೆ. ಕಥೆ, ಕವನಗಳಿಗೆ ವಂಚಿಸಿದಂತೆ ಕಂಡಿತು!

- ಲಕ್ಷ್ಮಣ ಬಾರಿಕೇರ್, ವಟಗಲ್

ಪತ್ರಿಕೆ ವಿಷಯ ವೈವಿಧ್ಯದಿಂದ ಓದುಗರನ್ನು ಸೂಜಿಗಲ್ಲಿನಂತೆ ತನ್ನತ್ತ ಸೆಳೆದುಕೊಂಡಿದೆ.

- ಡಾ. ಅರ್ಜುನ ಗೊಳಸಂಗಿ, ಹುಲಕೋಟಿ

'ವಿದ್ಯೆ-ಉದ್ಯೋಗ' ಅಂಕಣ ನಿರುದ್ಯೋಗಿಗಳ ಭಾವನೆಗೆ ನಿಜಕ್ಕೂ ಸ್ಪಂದಿಸುವಂತಿದೆ. ಮಾರ್ಗ ದರ್ಶಿಯೂ ಹೌದು.

- ಬಿ.ಡಿ. ಮುಕಾರ್ತಿಹಾಳ, ದದಾಮಟ್ಟಿ

ಸುಂದರ ಮುದ್ರಣವಿದ್ದೂ ಒಳಗಣ ಹೂರಣವೇಕೋ ಮನಸ್ಸಿಗೆ ಇಡಿಯಾಗಿ ಹಿಡಿಸಲಿಲ್ಲ.

- ಚಿತ್ರಶೇಖರ ಕಂಠಿ, ಕಲಬುರ್ಗಿ

ವಾಣಿಜ್ಯ, ವಿಕಾಸ, ಮಾಹಿತಿ, ಸಂಪರ್ಕ ಉದ್ದೇಶವಿಟ್ಟುಕೊಂಡು ಪತ್ರಿಕೆ ರೂಪಿಸಿರುವ ನಿಮಗೆ ಓದುಗರ ಬೆಂಬಲ ಸದಾ ಇದೆ.

- ಎಂ. ಪರಶುರಾಮ ಪ್ರಿಯ, ಗಂಗಾವತಿ

ಪತ್ರಿಕೆ ಕೇವಲ ಯುವಕರಿಗೆ ಮಾತ್ರವಲ್ಲ, ಜನಸಾಮಾನ್ಯರೆಲ್ಲರಿಗೆ ದಾರಿದೀಪವಾಗಿದೆ.

- ಬಿ.ಎಲ್.ದೇಶಪಾಂಡೆ, ಧಾರವಾಡ

ಈ ನಮೂನೆಯ ಮಾಸಪತ್ರಿಕೆ ಇನ್ನೂವರೆಗೆ ಹೊರಬಂದಿರಲಿಲ್ಲ.

- ಚಂದ್ರಶೇಖರ ಮಿಣಜಗಿ, ಬಿಜಾಪುರ

ಎಲ್ಲಾ ಓದುಗರ ಅವಶ್ಯಕತೆ ಪೂರೈಸುವ ಲಕ್ಷಣಗಳನ್ನು ಪ್ರಥಮ ಸಂಚಿಕೆಯಲ್ಲೇ ತೋರಿಸಿರುವಿರಿ.

- ಶ್ರೀನಾಥ ರಾಯಸಂ, ಬೆಂಗಳೂರು

ಪ್ರಥಮ ಸಂಚಿಕೆ ಉತ್ತಮವಾಗಿದೆ. ನನಗೆ ಹಿಡಿಸಿದೆ.

- ಲಕ್ಷ್ಮಣ ಗಂಟಿ, ಬಳ್ಳಾರಿ

ಹಾಸ್ಯ ಗದ್ಯ ಲೇಖನಗಳನ್ನು ತಮ್ಮ ಪತ್ರಿಕೆಗೆ ಸ್ವೀಕರಿಸುವಿರಾ? ಪ್ರತಿ ತಿಂಗಳು ಕಳಿಸಿದರೆ ಸಂಭಾವನೆ ಕೊಡುವಿರಾ? ತಿಳಿಸುವಿರಾ? ಅವು ಯೋಗ್ಯವೆನಿಸಿದಲ್ಲಿ.

- ಕುಂ.ಬಾ. ಸದಾಶಿವಪ್ಪ, ಹರಪನಹಳ್ಳಿ

[ಬಳ್ಳಾರಿ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರ ಈ ಮೇಲಿನ ಪತ್ರದ ಭಾಷೆಯನ್ನು ಒಂಚೂರೂ ತಿದ್ದದೆ ಹಾಗೇ ಪ್ರಕಟಿಸುತ್ತಿದ್ದೇವೆ! - ಸಂ.]

''ಪತ್ರಿಕೆ ನಡೆಸಿನೋಡು, ಬಾಡಿಗೆ ಮನೆ ಹುಡುಕಿ ನೋಡು'' ಎಂಬುದು ಆಧುನಿಕರ ಜೋಕು. ನಿಮ್ಮ ಪತ್ರಿಕೆಗೆ ''ಮಾರ್ಕಂಡೇಯನ ಆಯಸ್ಸು''

ದೊರೆಯಲಿ.

- ಟಿ.ವಿ. ವೆಂಕಟರಮಣಯ್ಯ, ಬೆಂಗಳೂರು

ಪತ್ರಿಕೆ ಓದುಗರ ನಿರೀಕ್ಷೆಗೆ ತಕ್ಕಂತಿಲ್ಲ. ಮುಂದಿನ ಸಂಚಿಕೆಗಳಿಂದ ತಿದ್ದಿಕೊಳ್ಳಿರಿ.

- ಲಕ್ಷ್ಮೀಕಾಂತ ಭಾವಿಕಟ್ಟಿ, ಹ.ಬೊ.ಹಳ್ಳಿ

''ಬಿಸಿಲ ಬದುಕು'' ನಿಜಕ್ಕೂ ಭರವಸೆ ಮೂಡಿಸಿದೆ. ಆದರ ಕಳಕಳಿಯೂ ಬಿಸಿಲಿನ ಝಳದಿಂದ ಹೊರತಾಗಿಲ್ಲ. ಇಂಥ ಬದುಕಿಗೆ ಬಿಸಿಲಿನ ಮಂದಿ ಒಗ್ಗಿಕೊಳ್ಳದಿದ್ದರೆ ಹೇಗೆ? ಅಲ್ಲವೇ? ನಾನಂತೂ ಹೆಚ್ಚೂಕಮ್ಮಿ ಒಗ್ಗಿಕೊಂಡಿದ್ದೇನೆ.

- ವಿಜಯಕಾಂತ ಪಾಟೀಲ, ಧಾರವಾಡ

ಮಾಸಿಕವನ್ನು ಗಮನಿಸಿದೆ. ಇದು ಕನ್ನಡ ಭಾಷೆಯ ಅತ್ಯುತ್ತಮ ಪತ್ರಿಕೆಯಾಗಿ ಹೊರಹೊಮ್ಮುವುದರಲ್ಲಿ ಯಾವ ಸಂದೇಹವೂ ಇಲ್ಲ. ಕೆಲವೇ ತಿಂಗಳಲ್ಲಿ ಪತ್ರಿಕೆ ಜನಮನ್ನಣೆ ಪಡೆಯುವುದು ಖಂಡಿತ!

- ಪ್ರಶಾಂತಕುಮಾರ ಕುಲಕರ್ಣಿ, ಇಳಕಲ್ಲ

ಪತ್ರಿಕೆ ನೋಡಿ 'ದುಬಾರಿ' ಎಂದು ಹೌಹಾರಿದೆ. ಮಿತ್ರ ಮಲ್ಲಪ್ಪ, ''ಹತ್ತು ರೂಪಾಯಿ ಬಹಳವೆನಿಸಲಿಲ್ಲ'' ಎಂದಾಗ ಸಮಾಧಾನವೆನಿಸಿತು.

- ಮಧು ಬಗರೆ, ಹರಪನಹಳ್ಳಿ

ವರದಕ್ಷಿಣೆ ಪಿಡುಗಿನ ಬಗ್ಗೆ ಓದಿ ದಿಗ್ಭ್ರಮೆಯಾಯಿತು. ಇಂಥ ಲೇಖನ ಹೆಚ್ಚೆಚ್ಚು ಪ್ರಕಟವಾಗಲಿ.

- ಶಿವಕುಮಾರ ಎಸ್. ಜವಳಿ, ಕಲಬುರ್ಗಿ

ಪತ್ರಿಕೆ ಓದಿ ಖುಷಿಯಾಯಿತು. ವೈವಿಧ್ಯವಿದೆ. ಅದನ್ನು ಮುಂದುವರಿಸಿದರೆ ಖಂಡಿತ ಯಶಸ್ಸಿದೆ.

- ಕೃಷ್ಣ ಕೊಲ್ಹಾರ ಕುಲಕರ್ಣಿ, ಬಿಜಾಪುರ

ಮೊದಲ ಸಂಚಿಕೆಯಲ್ಲೇ ಎಷ್ಟೆಲ್ಲಾ ವಿಷಯ ಸಂಗ್ರಹಿಸಿರುವ ಈ ಪತ್ರಿಕೆ ಯಶಸ್ವಿಯಾಗುವುದರಲ್ಲಿ ಅನುಮಾನವಿಲ್ಲ. ಇನ್ನೂ ಹೆಚ್ಚಿಗೆ ಪ್ರತಿ ಮಾರಾಟ ಮಾಡಲು ಯತ್ನಿಸುವೆ.

- ಕೆ.ಬಸವರಾಜ್, ಕುರುಗೋಡು

ಪತ್ರಿಕೆಯ ಧೋರಣೆಗೂ ಪತ್ರಿಕೆಯ ಹೆಸರಿಗೂ ಬಹಳ ಅಂತರವಿದೆ.

- ಯು.ಬಿ.ಹಿರೇಮಠ, ಯಲಬುರ್ಗಾ

ನಾನು ನಿಮ್ಮನ್ನು 'ಅಂಕುರ'ದಲ್ಲಿ ನೋಡಿದಾಗ 'ಬಿಸಿಲ ಬದುಕು' ಹೊರತರುವ ಕಾರ್ಯದಲ್ಲಿ ಮಗ್ನರಾಗಿದ್ದಿರಿ. ನನಗೆ ನಿಮ್ಮ ಬಗ್ಗೆ ಅಂಥ ಭರವಸೆ ಇರಲಿಲ್ಲ. ಒಂಟಿ ಮನುಷ್ಯ ಏನು ತಾನೇ ಮಾಡಿಯಾನು ಎಂಬ ಅನುಮಾನ, ನಷ್ಟಕಾರ್ಯಕ್ಕೆ ಕೈಹಾಕುತ್ತೀರೆಂಬ ಆತಂಕ ನನ್ನಲ್ಲಿತ್ತು. ಆದರೆ ನಿಮ್ಮ ಕೈಚಳಕದಲ್ಲಿ ಮೂಡಿಬಂದ ಪ್ರಥಮ ಸಂಚಿಕೆ ನೋಡಿದಾಗ ನೀವು ಬೇರೆಯವರಂತೆ ಬಡಾಯಿ ಕೊಚ್ಚಿಕೊಳ್ಳುವವರಲ್ಲ, ಕಾರ್ಯಗತ ಮಾಡಿ ತೋರಿಸುವವರು ಎಂದೆನಿಸಿತು.

- ದಮ್ಮೂರು ಮಲ್ಲಿಕಾರ್ಜುನ, ತೆಕ್ಕಲಕೋಟೆ

ಪಿ.ಯು.ಸಿ. ಶಿಕ್ಷಣ, ಮೌಲ್ಯಮಾಪನ ಹಾಗೂ ಪರೀಕ್ಷಾ ಪದ್ಧತಿಗಳಲ್ಲಿ ಕಾಪಿ ಮಾಡುವ, ತಪ್ಪು ಮಾಡುವ ಸಾಧ್ಯತೆಗಳಿರುವ ಕಾರಣ ಇವುಗಳಿಗೆ ಅಷ್ಟು ಸುಲಭ ಅವಕಾಶವಿಲ್ಲದ ಪ್ರವೇಶ ಪರೀಕ್ಷೆಯಿಂದ ವಿದ್ಯಾರ್ಥಿಗಳಿಗೆ ನ್ಯಾಯ ದೊರೆಯುತ್ತದೆ. ನೆರೆಯ ಆಂಧ್ರ, ಮಹಾರಾಷ್ಟ್ರ, ತಮಿಳುನಾಡು ಹಾಗೂ ಅನೇಕ ಉತ್ತರದ ರಾಜ್ಯಗಳಲ್ಲೂ ಸಿ.ಇ.ಟಿ. ಇದೆ. ಬೇರೆ ರಾಜ್ಯಗಳಲ್ಲಿರುವಂತೆ ಎಲ್ಲ ವೃತ್ತಿ ಶಿಕ್ಷಣಗಳನ್ನೂ ಸಿ.ಇ.ಟಿ. ಪರಿಧಿಯೊಳಗೆ ತರುವುದು ಉತ್ತಮ.

- ಕಾಶಿನಾಥ ಮಾಶೆಟ್ಟಿ, ಚೆನ್ನೈ

ನೀವು..... ಪತ್ರಿಕೆ ಮತ್ತು ನಾನು !

'ಬಿಸಿಲ ಬದುಕು' ಆಮಂತ್ರಣ ನೋಡಿ ಸಹಜವಾಗಿಯೇ ಸರ್‌ಪ್ರೈಸ್ ಆಯ್ತು. ನೀವು ಮೂಲತಃ Slow and Steady win the race ಪೈಕಿ. ಸ್ವಲ್ಪ ಮುಂಗೋಪಿ, ಸ್ವಲ್ಪ ಒಳ್ಳೆಯವರು, ಆತ್ಮವಿಶ್ವಾಸಿ, ಸ್ವಲ್ಪ ಕಮರ್ಶಿಯಲ್ ಹಾಗೂ ಭಯಂಕರ ಕ್ರಿಯೇಟಿವ್. ಹಾಗೆ ನೋಡಿದರೆ ಕತೆಗಾರನಾಗಿ ನಿಮ್ಮ ಬಗ್ಗೆ ಯಾವಾಗ್ಲೂ ಫೇವರೇಟ್-ನೀವು ಎಲ್ಲದರಲ್ಲೂ ಎಲ್ಲರಿಗಿಂತ ಡಿಫರೆಂಟ್! ಟೈಟಲ್ ಚೆನ್ನಾಗಿದೆ. ಕವರ್‌ಪೇಜ್ ಆಕರ್ಷಕವಾಗಿದೆ. ಹ್ಯಾಂಡ್‌ರಿಟನ್ ಕಾಲಿಗ್ರಾಫಿಕ್ ಟೈಟಲ್ ಇರದೇ ಇರೋದು ದೊಡ್ಡ ಮೈನಸ್ ಪಾಯಿಂಟ್. ಒಳಪುಟಗಳ ವಿನ್ಯಾಸ ಸರಿ ಇಲ್ಲ. ತೀರಾ ಡ್ರೈ ಅನಿಸ್ತದೆ. ದೊಡ್ಡ ಲೋಪ ಲೇಔಟ್ ಆರ್ಟಿಸ್ಟ್ ಇಲ್ಲ. ಹುಬ್ಳಿಕರ್-ಅರ್ಜೆನ್ಸಿ ಲೈನ್ಸ್! ಗುಜ್ಜಾರ್ ಚಿತ್ರ ಹಿಡಿಸಿದೆ. ಬಿಸಿಲ ಬದುಕಿಗೆ ನಾನು ಏನೆಲ್ಲಾ ಮಾಡ್ಬೇನೆ-Please Communicate! ಹೊಸ ಪತ್ರಿಕೆ ಕುರಿತು ನಾನು ೪ ವರ್ಷಗಳ ಹಿಂದೆ ಬರೆದ ಪತ್ರಗಳನ್ನು ವೆಂಕಟ್ರಮಣಗೌಡರಿಗೆ ತೋರಿಸಿ ನೀವು ಆಡಿದ Comments ಮರೆಯೋಹಾಗಿಲ್ಲ.

ಮರೆತಿದ್ದೆ. ನನ್ನ Classmate - Structural Engineer ಹುಡುಗಿ-ಯೊಂದಿಗೆ ನನ್ನ ಮದುವೆ ಆಗಸ್ಟ್ ಆರರಂದು. ದಯಮಾಡಿ ಬನ್ನಿ. ಸರಳ ವಿವಾಹ-ಎಲ್ರನ್ನೂ ಒಪ್ಪಿಸಿ! ಅಭಿಮಾನ ಇದ್ದರೆ ನನ್ನ Card (ನಿಮ್ಮ ನಿರೀಕ್ಷೆಗೂ ಮೀರಿ ಆಕರ್ಷಕ Creative!) ಪತ್ರಿಕೆಯಲ್ಲಿ ಅಚ್ಚು ಹಾಕಿ.

- 'ಸೃಜನ್' (ಪಿ.ಶ್ರೀಕಾಂತ), ಬಳ್ಳಾರಿ

ವೈವಿಧ್ಯಮಯವಾದ ನಿಮ್ಮ ಸುಂದರ ಪತ್ರಿಕೆ ಸ್ವಲ್ಪ ಸಮಯದಲ್ಲೇ ಜನರ ಮೆಚ್ಚುಗೆ ಗಳಿಸುವುದರಲ್ಲಿ ಸಂಶಯವೇ ಇಲ್ಲ.

- ಗುರುರಾಜ ಕಡಕೋಳ, ಹುಬ್ಬಳ್ಳಿ

◆

ಕೇವಲ ಹತ್ತು ರೂಪಾಯಿಗೆ ಎಷ್ಟೊಂದು ಸಮಾಚಾರ ಕೊಡುತ್ತಿದ್ದೀರಿ! ಕನ್ನಡ ಭಾಷೆ ಬಲ್ಲ ಪ್ರತಿಯೊಬ್ಬರೂ ಕೊಂಡು ಓದಬೇಕಾದ ಪತ್ರಿಕೆ ನಿಮ್ಮದು.

- ಎಂ.ಕೆ. ಕೇಶವಮೂರ್ತಿ, ಬೆಂಗಳೂರು

◆

ನಿಮ್ಮ ಏಜೆಂಟರೊಬ್ಬರ ''ಪಾಪು ಪತ್ರಿಕೆಯೊ?'' ಪತ್ರ ಇಲ್ಲಿ ಪಾಪು ಅವರಿಗೇ ಮೋಜೆನಿಸಿದೆ.

- ಎನ್ಕೆ, ಧಾರವಾಡ

◆

ವೈವಿಧ್ಯತೆಯಿಂದ ಕೂಡಿದ್ದರೂ ಕತೆ-ಕವನ ಇಲ್ಲದ್ದಕ್ಕೆ ನಿರಾಶೆಯಾಯಿತು. ಈ ಕೊರತೆ ತುಂಬಿಸಿ.....ಪ್ಲೀಸ್.

-ನೀ. ಶ್ರೀಶೈಲ, ಜಮಖಂಡಿ

◆


ಬದುಕಿಗೆ ಬೇಡವಾದ ಒಂದೇ ಒಂದು ಸಂಗತಿಯೂ ಪತ್ರಿಕೆಯಲ್ಲಿ ಇಲ್ಲವೆಂಬುದು ಗಮನಾರ್ಹ. ಇಷ್ಟೆಲ್ಲ ಉಪಯುಕ್ತ ಮಾಹಿತಿ ನೀಡುತ್ತಿರುವ ಈ ಪತ್ರಿಕೆಯನ್ನು ಅವರಿವರ ಮಾತು ಕೇಳಿ ಇನ್ನೊಂದು ಮನರಂಜನೆಯ ಸಾಮಾನ್ಯ ಮಾಸಿಕವಾಗಿಸಬೇಡಿ.

- ಡಿ.ಪಿ. ಅರುಣ, ಮಡಿಕೇರಿ

ಸ್ವಾತಂತ್ರ್ಯ ಯಾರಿಗೆ ಬಂತು? ಎಲ್ಲಿಗೆ ಬಂತು?

○ ಕೆ. ಶಾಂತಕುಮಾರಿ
ಪತ್ರಕರ್ತೆ
ಜೆ.ಜೆ. ಎಕ್ಸ್‌ಪೋರ್ಟ್ ಹಿಂಭಾಗ,
ಶ್ರೀಗಂಧದ ಕಾವಲು,
ಸುಂಕದ ಕಟ್ಟೆ,
ಬೆಂಗಳೂರು - ೯೧

ಭಾರತ ಬಿಳಿದೊರೆಗಳಿಗೆ ವಿದಾಯಹೇಳಿ ಕಪ್ಪು ದೊರೆಗಳ ಹಿರಿತನದಲ್ಲಿ ನಡೆದು ಬಂದ ದಾರಿಯ ಒಂದು ಹಿನ್ನೋಟ ಇಲ್ಲಿದೆ.



ಭಾರತ ಸ್ವಾತಂತ್ರ್ಯದ ಸ್ವರ್ಣೋತ್ಸವ ಸಂದರ್ಭವಿದು. ಸ್ವತಂತ್ರ ಬಂದು ಐವತ್ತು ವರ್ಷಗಳು ಕಳೆದವು. ಜವಾಹರಲಾಲ್ ನೆಹರೂರವರಿಂದ ಹಿಡಿದು ಐ.ಕೆ.ಗುಜ್ರಾಲ್ ರವರೆಗೆ ವಿಸ್ತರಿಸಿದ ಸುದೀರ್ಘ ಕಾಲಪರ್ವ. ಒಂಬತ್ತು ಪಂಚವಾರ್ಷಿಕ ಯೋಜನೆ, ಹನ್ನೊಂದು ಲೋಕಸಭಾ ಚುನಾವಣೆಗಳು ಪೂರ್ತಿಗೊಂಡಿವೆ. ಪಾಕಿಸ್ತಾನ, ಚೈನಾ ಗಳೊಂದಿಗೆ ಯುದ್ಧಗಳು, ಆರ್ಥಿಕ ಬಿಕ್ಕಟ್ಟು, ಪ್ರಧಾನಿ, ಮಾಜಿ ಪ್ರಧಾನಿಗಳ ಹತ್ಯೆಗಳು, ಬ್ಯಾಂಕುಗಳ ರಾಷ್ಟ್ರೀಕರಣ ಮೊದಲಾದ ಆರ್ಥಿಕ ಸುಧಾರಣೆಗಳು, ಅಂತಾರಾಷ್ಟ್ರೀಯ ಸಾಲಗಳು, ಕುಟುಂಬ ನಿಯಂತ್ರಣದಿಂದ ಕಂಪ್ಯೂಟರೀಕರಣದವರೆಗೆ ಸಾಗಿದ ಮಹಾಪ್ರಸ್ಥಾನವಿದು.

೧೯೯೭ರಲ್ಲಿ ಇರುವ ನಾವು ನಮ್ಮ ಸುತ್ತಮುತ್ತ ಚಿಕಿತ್ಸಕ ದೃಷ್ಟಿ ಹರಿಸಬೇಕಾಗಿದೆ. ''ವಿದೇಶಿ ಆಡಳಿತವನ್ನು ತೊಲಗಿಸಿದ ಕೂಡಲೆ ಎಲ್ಲಾ ಮುಗಿದುಹೋದಂತೆ ಅಲ್ಲ. ಭಾರತೀಯರೆಲ್ಲರೂ ಸ್ವತಂತ್ರವಾಗಿ ಉಸಿರಾಡುವಂತಾಗಬೇಕು. ಕಷ್ಟಗಳು ಕಡಿಮೆಯಾಗಿ ಜೀವನಮಟ್ಟ ಸುಧಾರಿಸಬೇಕು. ಅಲ್ಲಿಯವರೆಗೂ ನಮ್ಮ ಜವಾಬ್ದಾರಿ ಮುಂದುವರಿಯುತ್ತದೆ''. ಜವಾಹರಲಾಲ್ ನೆಹರು ಹೇಳಿದ ಮಾತಿದು.

ನೆಹರೂರ ಆಶಯಗಳ ಫಲವನ್ನು ನಾವು ಉಂಡಿದ್ದೇವೆಯೆ? ಇಂದಿಗೂ ಏಳುಕೋಟಿ ಚಿಣ್ಣರಿಗಳು ತಮ್ಮ ಬಾಲ್ಯಕ್ಕೆ ಎರವಾಗಿ ಕಾರ್ಮಿಕರಾಗಿ ದುಡಿಯುತ್ತಿರುವ ವಾಸ್ತವ ನಮ್ಮ ಮುಂದಿದೆ. ಹೊಟ್ಟೆತುಂಬಾ ಆಹಾರ ಸಿಗದ ದಾರಿದ್ರ್ಯರೇಖೆಗಿಂತಲೂ ಕೆಳಗೆ ಕೊಳೆಯುತ್ತಿರುವ ಜನರ ನಡುವೆ ಇದ್ದುಕೊಂಡು ನಮ್ಮ ಕಷ್ಟಗಳು ತೀರಿದವು ಎಂದು ಸಮಾಧಾನಪಟ್ಟುಕೊಳ್ಳಬೇಕೆ?

ಫಲವಿಲ್ಲದ ವ್ಯವಸಾಯ ಪದ್ಧತಿ

ನಮ್ಮದು ಕೃಷಿ ಪ್ರಧಾನ ದೇಶ. ಅತಿವೃಷ್ಟಿ, ಅನಾವೃಷ್ಟಿಗಳು ಈಗಲೂ ಕೃಷಿ ಮೇಲೆ ಪ್ರಭಾವ

ಬೀರುತ್ತಿವೆ. ಕಡಿಮೆ ಕಾಲದಲ್ಲಿ ಹೆಚ್ಚು ಉತ್ಪತ್ತಿ ಮಾಡುವಂತಹ ಪರಿಸ್ಥಿತಿಗೆ ಹೊಂದಿಕೊಂಡಿದ್ದೇವೆ. ಈ ಕ್ರಾಂತಿಕಾರಕ ಬದಲಾವಣೆ ಕೆಲವೇ ರಾಜ್ಯಗಳಿಗೆ ಸೀಮಿತವಾಗಿದೆ. ಶೇ. ೧೫ರಷ್ಟು ಹೊಲಗಳಿಂದ ಶೇ. ೫೦ರಷ್ಟು ಧಾನ್ಯ ಉತ್ಪತ್ತಿ ಮಾಡುವಲ್ಲಿ ನಾವು ಸಾಧನೆ ಮಾಡಿದ್ದೇವೆ. ಉಳಿದ ಶೇ. ೮೫ರಷ್ಟು ಹೊಲಗಳು ನಾಮ ಮಾತ್ರಕ್ಕೆ ಫಸಲು ನೀಡುತ್ತಿವೆ. ನದಿ ಜಲಗಳೆಲ್ಲವೂ ಸಮುದ್ರದ ಪಾಲಾಗುತ್ತಿದೆ. ಸಾಮಾನ್ಯ ರೈತ ವರುಣನ ಕರುಣಕಟಾಕ್ಷದಿಂದಲೇ ಬದುಕಬೇಕಾಗಿದೆ. ಕೃಷಿ ಹೊಲಗಳಲ್ಲಿ ಶೇ. ೫೦ರಷ್ಟು ಮಳೆಯ ಮೇಲೆ ಆಧಾರಪಟ್ಟಿವೆ. ಗೊಬ್ಬರಗಳಲ್ಲಿ ಸಬ್ಸಿಡಿಗಳಿದ್ದರೂ ಅದನ್ನು ಬಳಸಲು ಸಾಧ್ಯವಾಗಿರುವುದು ಕೆಲವರಿಂದ ಮಾತ್ರ. ದೇಶದಲ್ಲಿರುವ ಎಲ್ಲಾ ಪ್ರದೇಶಲ್ಲಿರುವ ಅಸಮಾನತೆಯನ್ನು ತೊಲಗಿಸಲು ಎಂಟನೇ ಪಂಚವಾರ್ಷಿಕ ಯೋಜನೆಯಲ್ಲಿ ಪ್ರಯತ್ನಿಸಲಾಯಿತು. ಪರಿಸ್ಥಿತಿ ಏನೂ ಬದಲಾಗಲಿಲ್ಲ. ೧೯೫೦-೫೧ರಲ್ಲಿ ಕೃಷಿ ೧೩೧.೪೯ ದಶಲಕ್ಷ ಹೆಕ್ಟೇರುಗಳಾದರೆ ನೀರಾವರಿ ಹೊಂದಿರುವ ಭೂಮಿ ೨೨.೫೬ ದಶಲಕ್ಷ ಹೆಕ್ಟೇರುಗಳು. ೧೯೯೦-೯೧ರಲ್ಲಿ ಒಟ್ಟು ಕೃಷಿ ಭೂಮಿ ೧೮೫.೪೭ ಮಿಲಿಯನ್ ಹೆಕ್ಟೇರುಗಳಾದರೆ, ನೀರಾವರಿ ಭೂಮಿ ೬೧.೭೮ ದಶಲಕ್ಷ ಹೆಕ್ಟೇರು. ಅಂದರೆ, ಕೇವಲ ೩೩.೩೧ ದಶಲಕ್ಷ ಹೆಕ್ಟೇರ್‌ನಷ್ಟು ಹೊಲಕ್ಕೆ ನೀರಾವರಿ ಒದಗಿಸಲು ಸಾಧ್ಯವಾಯಿತು. ಕೃಷಿ ಭೂಮಿಗೆಲ್ಲ ನೀರಾವರಿ ಸೌಲಭ್ಯ ಕಲ್ಪಿಸಿಕೊಡದೆಯಿರುವಾಗ ಕೃಷಿ ರಂಗ ಹೇಗೆ ಅಭಿವೃದ್ಧಿ ಸಾಧಿಸಲು ಸಾಧ್ಯ? ಗ್ರಾಮೀಣ ರೈತರು ತಮಗೆ ಅವಶ್ಯವಿರುವ ಧಾನ್ಯಗಳನ್ನೇ ಬೆಳೆಯದಿರುವಾಗ ತಮ್ಮ ಮೇಲೆ ಆಧಾರಪಟ್ಟಿರುವವರಿಗೆ ಹೇಗೆ ಆಹಾರ ಒದಗಿಸಲು ಸಾಧ್ಯ? ೧೯೫೦-೫೧ರಲ್ಲಿ ಮುಖ್ಯ ಆಹಾರ ಪದಾರ್ಥಗಳಾದ ಅಕ್ಕಿ, ಗೋಧಿ, ಬೇಳೆ ಮೊದಲಾದವುಗಳ ಆಮದು ೫೦.೮ ಮಿಲಿಯನ್ ಟನ್‌ಗಳಾಗಿವೆ. ೧೯೯೩-೯೪ರಲ್ಲಿ ಆಮದು ೧೮೨.೧ ಮಿಲಿಯನ್ ಟನ್‌ಗಳಿಗೆ ಏರಿತು. ಬೆಳೆಯುತ್ತಿರುವ ಜನಸಂಖ್ಯೆಗೆ ಆಮದು ಮಾಡಿಕೊಳ್ಳುವುದು ಅವಶ್ಯವಾಗಿದೆ.

ಕೃಷಿರಂಗಕ್ಕೆ ಸಹಕಾರ ಸಂಸ್ಥೆಗಳ ಬ್ಯಾಂಕುಗಳ ಮೂಲಕ ೧೯೫೦-೫೧ರಲ್ಲಿ ಕೇವಲ ೨೪ ಕೋಟಿ ಸಾಲ ಕೊಡಲಾಗಿತ್ತು. ೧೯೯೩-೯೪ರಲ್ಲಿ ೧೫,೧೦೦ ಕೋಟಿ ಸಾಲ ಒದಗಿಸಲಾಯಿತು. ೧೯೫೦ರಲ್ಲಿ ೧.೭ಕೋಟಿ ಟನ್ ಹಾಲು ಉತ್ಪಾದನೆ ಮಾಡಲಾಯಿತು. ೧೯೯೩ರ ಹೊತ್ತಿಗೆ ಹಾಲಿನ ಉತ್ಪತ್ತಿ ೬.೩ ಕೋಟಿ ಟನ್‌ಗೆ ಬೆಳೆಯಿತು. ಮಾಂಸ ೫.೧೪ ಲಕ್ಷಟನ್‌ಗಳಿಂದ ೩೯.೯ ಲಕ್ಷ ಟನ್ನಿಗೆ ಹೆಚ್ಚಾಯಿತು. ೧೯೫೦ರಲ್ಲಿ ೮೩.೨ ಮಿಲಿಯನ್ ಕೋಳಿಮೊಟ್ಟೆ ಉತ್ಪತ್ತಿಯಾದರೆ ೧೯೯೩ರ ಹೊತ್ತಿಗೆ ಅದರ ಸಂಖ್ಯೆ ೨೩,೭೧೮ ಮಿಲಿಯನ್‌ಗಳಿಗೆ ಹೆಚ್ಚಾಯಿತು. ೧೯೫೧ರಲ್ಲಿ ಮೀನಿನ ಉತ್ಪತ್ತಿ ೭.೫೨ ಲಕ್ಷ ಟನ್ನಿನಿಂದ ಹಿಡಿದು ೧೯೯೪ರ ಹೊತ್ತಿಗೆ ೪೬.೮೧ ಲಕ್ಷ ಟನ್ನಿಗೆ ಬೆಳೆಯಿತು.

ಆದರೂ ಶೇ. ೪೦ರಷ್ಟು ಜನತೆಗೆ ಹಾಲಿನ ರುಚಿ ಗೊತ್ತಿಲ್ಲ. ಲಭ್ಯವಿರುವ ಪೋಷಕಾಂಶದ ಆಹಾರವನ್ನು ದೇಶಕ್ಕೆ ಹಂಚಿದರೆ ಒಂದು ತಿಂಗಳಿಗೆ ಸಹ ಸಾಕಾಗುವುದಿಲ್ಲ. ದೇಶದ ಪ್ರಜೆಗಳೆಲ್ಲರೂ ಹೊಟ್ಟೆ ತುಂಬುವಷ್ಟು ಆಹಾರ ಸೇವಿಸಲು ಸಾಧ್ಯವಾಗದ ಪರಿಸ್ಥಿತಿಯಲ್ಲಿ ನಾವಿದ್ದೇವೆ.

ಕುಡಿಯುವ ನೀರಿಲ್ಲ

ಕುಡಿಯುವ ನೀರಿಗಾಗಿ ಮೂರು ಕಿ.ಮಿ. ದೂರ ಪ್ರಯಾಣಿಸಬೇಕಾದ ಹಳ್ಳಿಗಳು ದೇಶದಲ್ಲಿ ಬಹಳಷ್ಟಿವೆ. ಉಪ್ಪು ನೀರಿನಿಂದಲೇ ಜೀವನ ನಡೆಸುವಂತಹ ಸಾವಿರಾರು ಗ್ರಾಮಗಳು ಇವೆ. ಉಪ್ಪು ನೀರಿನಿಂದ ದಂತಗಳು ಹಾಳಾಗುತ್ತಿದ್ದರೂ, ಎಲುಬುಗಳು ಕರಗುತ್ತಿದ್ದರೂ ಅದೇ ನೀರನ್ನು ಬಳಸಬೇಕಾದಂತಹ ಅನಿವಾರ್ಯ ಪರಿಸ್ಥಿತಿಯಲ್ಲಿ ಹಲವಾರು ಗ್ರಾಮಗಳಿಗಿವೆ. ೧೯೮೫ರಲ್ಲಿ ಶೇ. ೫೬.೩ರಷ್ಟು ಗ್ರಾಮಗಳಿಗೆ ಕುಡಿಯುವ ನೀರಿನ ಸೌಕರ್ಯ ಒದಗಿಸಿರುವುದಾಗಿ ಅಂಕಿ ಅಂಶಗಳು ತಿಳಿಸುತ್ತಿವೆ. ೧೯೯೩ರ ಹೊತ್ತಿಗೆ ಶೇ. ೭೯.೨ ರಷ್ಟು ಗ್ರಾಮಗಳಿಗೆ ಈ ಸೌಲಭ್ಯವನ್ನು ಕಲ್ಪಿಸಲಾಗಿದೆ. ಪಟ್ಟಣ ಪ್ರದೇಶಗಳಲ್ಲಿ ೧೯೯೩ರಲ್ಲಿ ಶೇ. ೮೪.೯ ರಷ್ಟು ಕುಡಿಯುವ ನೀರಿನ ಸೌಕರ್ಯ ಒದಗಿಸಲಾಗಿದೆ. ಸ್ವಚ್ಛವಾದ ನೀರನ್ನು ಹೊಂದಲಾರದ ಅನೇಕ ಹಳ್ಳಿಗಳು ಇಂದಿಗೂ ದೇಶದಲ್ಲಿ ಇವೆ. ಕನಿಷ್ಠ ಕುಡಿಯುವ ಸೌಕರ್ಯವನ್ನು ಸಹ ಕಲ್ಪಿಸಲಾಗದಂತಹ ಹೀನಾಯ ಪರಿಸ್ಥಿತಿಯಲ್ಲಿ ಸ್ವರ್ಣೋತ್ಸವ ಆಚರಿಸಲಾಗುತ್ತಿದ್ದೇವೆ. ಯಾಕ್ಸಲೆರೆಟೆಡ್ ರೂರಲ್‌ವಾಟರ್ ಸಪ್ಲೈ ಪ್ರೋಗ್ರಾಂ, ಮಿನಿಮಂ ನೀಡ್ಸ್ ಪ್ರೋಗ್ರಾಂ, ರಾಜೀವ್‌ಗಾಂಧಿ ನ್ಯಾಷನಲ್ ಡ್ರಿಂಕಿಂಗ್ ವಾಟರ್‌ಮಿಷನ್‌ಗೆಂದು ಕೋಟ್ಯಾಂತರ ರೂಪಾಯಿಗಳನ್ನು ಖರ್ಚು ಮಾಡಿದರೂ ನೀರಿಗಾಗಿ ಹಳ್ಳಿಗರು ಹಾಹಾಕಾರ ಪಡುತ್ತಲೇ ಇದ್ದಾರೆ.

ಆರೋಗ್ಯ ವ್ಯವಸ್ಥೆ

ನಮ್ಮ ದೇಶದ ಆರೋಗ್ಯ ವ್ಯವಸ್ಥೆ ಕೆಲವು ಮಂದಿಗೆ ಮಾತ್ರ ಲಭ್ಯ. ಇಂದಿಗೂ ಮಲೇರಿಯಾ, ಕ್ಯಾನ್ಸರ್, ಅಂಧತ್ವ, ಕ್ಷಯ, ಕುಷ್ಠ ರೋಗಗಳೊಂದಿಗೆ ಅತಿಸಾರ, ಕಾಲರಾ ಹಳ್ಳಿಗಳನ್ನು ಪೀಡಿಸುತ್ತಿವೆ. ೧೯೫೧ರಲ್ಲಿ ಲಕ್ಷ ಜನಸಂಖ್ಯೆಗೆ ೧೭ ಮಂದಿ ಡಾಕ್ಟರುಗಳಿದ್ದರೆ, ೩೨ ಹಾಸಿಗೆಗಳು ಇರುತ್ತಿದ್ದವು. ೧೯೯೨ರಲ್ಲಿ ಡಾಕ್ಟರ್‌ಗಳ ಸಂಖ್ಯೆ ೪೮ಕ್ಕೆ ಏರಿ ಹಾಸಿಗೆ ಸಂಖ್ಯೆ ೯೬ಕ್ಕೆ ಮಾತ್ರ ಹೆಚ್ಚಾಯಿತು. ವೈದ್ಯರು ಇಲ್ಲದಿರುವ ಆಸ್ಪತ್ರೆಗಳೇ ಹೆಚ್ಚು. ೧೯೫೦ರಲ್ಲಿ ನರ್ಸ್‌ಗಳು, ಆಯಾಗಳು, ಹೆಲ್ತ್ ವಿಜಿಟರ್‌ಗಳು ಮುಂತಾದವರು ೩೩,೭೧೪ ಇದ್ದರೆ, ಇವರ ಸಂಖ್ಯೆ ಇಂದು ಶೇ. ೬.೧೩ ಹೆಚ್ಚಾಗಿದೆ. ೧೯೯೨ರಲ್ಲಿ ಸಬ್‌ಸೆಂಟರ್‌ಗಳು ೧,೩೧,೭೧೫ ಇದ್ದರೆ, ಪ್ರಾಥಮಿಕ ಆರೋಗ್ಯ ಕೇಂದ್ರಗಳು ೨೦,೫೬೪, ಕಮ್ಯುನಿಟಿ ಹೆಲ್ತ್‌ಸೆಂಟರ್ ೨,೨೩೬. ೩೦,೦೦೦ ಜನಸಂಖ್ಯೆಗೆ ಒಂದು ಪ್ರಾಥಮಿಕ ಆರೋಗ್ಯಕೇಂದ್ರ, ೫೦೦೦ ಮಂದಿಗೆ ಒಂದು ಉಪಕೇಂದ್ರ, ಲಕ್ಷಮಂದಿಗೆ ಒಂದು ಕಮ್ಯುನಿಟಿ ಹೆಲ್ತ್ ಸೆಂಟರ್ ಇವೆ.

೧೯೫೧ರಲ್ಲಿ ಪ್ರತಿ ಸಾವಿರ ಮಂದಿಗೆ ಮರಣದ ಸಂಖ್ಯೆ ೨೭.೪ ಇರುತ್ತಿತ್ತು. ಅದು ೧೯೯೧ರ ಹೊತ್ತಿಗೆ ೯.೮ಕ್ಕೆ ಕಡಿಮೆಯಾಗಿದೆ. ಆದರೆ ಶಿಶುಮರಣಗಳ ಸಂಖ್ಯೆ ಆತಂಕಕಾರಿಯಾಗಿದೆ. ೧೯೫೧ರಲ್ಲಿ ಸಾವಿರ

ನನ್ನಾಕೆ

ನನ್ನಾಕೆ ನನ್ನ ಕಟ್ಟಿಕೊಂಡಾಕೆ
ಸಂಸಾರದ ಭಾರವನ್ನೆಲ್ಲ ಹೊತ್ತಾಕೆ
ಸಂಸಾರವನ್ನು - ಸಸಾರ ಮಾಡಿದಾಕೆ
ನನ್ನ ಮಕ್ಕಳ ಮುದ್ದು ತಾಯಿಯಾಕೆ
ಅಷ್ಟೇ ಏಕೆ ನನ್ನ ಹೃದಯದ
ಮೊದ್ದುಮಣಿ ಆಕೆ.

- ಹೇಮಲತಾ ದೇಸಾಯಿ

ಮಂದಿ ಮಕ್ಕಳಲ್ಲಿ ೧೪೬ ಮರಣಸುತ್ತಿದ್ದರು. ೧೯೯೧ರಲ್ಲಿ ಇವರ ಸಂಖ್ಯೆ ೮೦ಕ್ಕೆ ಇಳಿಮುಖವಾಯಿತು. ಮೃತ್ಯುಪಾಶದಿಂದ ಮಕ್ಕಳನ್ನು ರಕ್ಷಿಸುವ ಮಾರ್ಗವನ್ನು ಕಂಡುಕೊಳ್ಳಬೇಕಾಗಿದೆ.

ಸಾಕ್ಷರತೆ

ನಿರಕ್ಷರತೆ ದೇಶದ ಪ್ರಗತಿಗೆ ಕೊಡಲಿಪೆಟ್ಟು ಎಂದು ಅರಿತಿದ್ದರೂ ಅರ್ಧ ಸಾಕ್ಷರತೆ ಸಾಧಿಸಿದ್ದೇವೆ. ೧೯೬೮ರಲ್ಲಿ ಸಂಪೂರ್ಣ ಸಾಕ್ಷರತೆ ಸಾಧಿಸುವ ಯೋಜನೆಗಳನ್ನು ರೂಪಿಸಲಾಯಿತು. ೧೯೫೧ರಲ್ಲಿ ೨,೦೯,೬೭೧ ಪ್ರಾಥಮಿಕ ಪಾಠಶಾಲೆಗಳಿದ್ದರೆ, ೧೯೯೩ರಲ್ಲಿ ೫,೭೨,೫೪೪ ಇದ್ದವು, ಹೈಸ್ಕೂಲ್‌ಗಳು ೧೩,೫೯೬ರಿಂದ ೧,೩೫,೯೨೧ ಕ್ಕೆ ಹೆಚ್ಚಾದವು. ಸೆಕೆಂಡರಿ ಪಾಠಶಾಲೆಗಳು ೭,೪೧೬ರಿಂದ ೮೪,೦೮೬ಕ್ಕೆ, ಕಲಾಶಾಲೆಗಳು ೩೭೦ರಿಂದ ೫,೩೩೪ಕ್ಕೆ ೮,೨೧೦ ಹೆಚ್ಚಾದವು. ವಿಶ್ವವಿದ್ಯಾಲಯಗಳು ಮೊದಲು ೨೭ ಮಾತ್ರ ಇದ್ದವು. ಈಗ ಈ ಸಂಖ್ಯೆ ೨೦೦ ಕ್ಕೆ ಏರಿದೆ. ಶಾಲೆ, ಕಾಲೇಜು, ವಿಶ್ವವಿದ್ಯಾಲಯಗಳು ಹೀಗೆ ಹಲವಾರು ಪ್ರಾರಂಭವಾದರೂ ಸ್ವಾತಂತ್ರ್ಯ ಪೂರ್ವದಲ್ಲಿ ಶೇ. ೧೫ ರಷ್ಟಿದ್ದ ಸಾಕ್ಷರತೆ ಇಂದು ೫೧.೨ ಕ್ಕೆ ತಲುಪಿದೆ. ೨೦೦೦ ವರ್ಷಕ್ಕೆ ಕಾಲಿಡಲು ಕೇವಲ ಎರಡೂವರೆ ವರ್ಷ ಉಳಿದಿದೆ. ಅರ್ಧಸಾಕ್ಷರತೆ ಸಾಧಿಸಿ ಮುಂದಡಿಯಿಡುತ್ತಿದ್ದೇವೆ!

ಕುಂಟುತ್ತಿರುವ ಆದಾಯ ಪ್ರಮಾಣ

೧೯೬೦-೬೧ ಹಾಗೂ ೧೯೮೦-೮೧ರಲ್ಲಿ ಆಹಾರ ಪದಾರ್ಥಗಳು ಮತ್ತು ಇತರ ವಸ್ತ್ರಗಳಿಗೆ ಬೇಡಿಕೆ ಹೆಚ್ಚಾಯಿತು. ಗ್ರಾಮಗಳಲ್ಲಿ ಕೆಲವು ತಿಂಗಳುಗಳು ದಿನಕ್ಕೆ ಎರಡು ಹೊತ್ತು ಊಟ ಮಾಡಲಾರದ ಕುಟುಂಬಗಳು ೧೯೯೨ರ ಸರ್ವೆಪ್ರಕಾರ ಸಾವಿರಕ್ಕೆ ೭೦ ಇದ್ದವು. ಪಟ್ಟಣ ಪ್ರದೇಶದಲ್ಲಿ ಈ ಸಂಖ್ಯೆ ೨೩ ಇತ್ತು. ದಾರಿದ್ರ್ಯ ರೇಖೆಗಿಂತ ಕಡಿಮೆ ಇರುವ ಜನಸಂಖ್ಯೆ ಶೇ. ೫೧.೫ ರಷ್ಟಾದಾರೆ, ೧೯೭೭-೭೮ರಲ್ಲಿ ಅದು ೪೮.೩, ೧೯೮೩-೮೪ರಲ್ಲಿ ೩೭.೪, ೧೯೮೭-೮೮ರಲ್ಲಿ ಶೇ. ೨೯.೯ರಷ್ಟೇ ನಮೂದಾಯಿತು. ೧೯೬೦-೬೧ರಲ್ಲಿ ಸರಾಸರಿ ದಿನಕ್ಕೆ ೩೯೫ ಗ್ರಾಂ ಆಹಾರ ಪದಾರ್ಥ ಲಭ್ಯವಾದರೆ ೧೯೯೦-೯೧ರಲ್ಲಿ ಅದು ೫೧೦ ಗ್ರಾಂ ಆಯಿತು. ೧೯೬೦-೬೧ರಲ್ಲಿ ಸರಾಸರಿ ೧೫ ಮೀಟರ್ ಬಟ್ಟೆಯನ್ನು ಬಳಸುತ್ತಿದ್ದರೆ ೧೯೯೦-೯೧ಕ್ಕೆ ಅದು ೨೪.೧ಕ್ಕೆ ಏರಿತು. ಹಾಗೆಯೇ ಒಂದು ಕುಟುಂಬ ೧೯೬೦-೬೧ರಲ್ಲಿ ೩.೪ ಕಿಲೊವ್ಯಾಟ್ ವಿದ್ಯುತ್ ವಿನಿಯೊಗಿಸಿದರೆ. ೧೯೯೦-೯೧ರ ಹೊತ್ತಿಗೆ ೩೮.೨ ಕಿಲೊವ್ಯಾಟ್ ವಿನಿಯೋಗಿಸಿದೆ. ತಲಾದಾಯ ಹೆಚ್ಚಿಸಲು ೨೦ ಸೂತ್ರಗಳ ಯೋಜನೆಗಳು ಬಂದರೂ ತಲಾದಾಯದ ಪ್ರಗತಿ ಮಂದಗತಿಯಲ್ಲೆ ಸಾಗುತ್ತಿದೆ.


ನಂಬರ್ ಒಂದು ಭಾರತ

ನಮ್ಮ ದೇಶ ಪ್ರಗತಿ ಸಾಧಿಸಿದರೂ, ಸಾಧಿಸದಿದ್ದರೂ ಸರಿ ಆದರೆ ಜನಸಂಖ್ಯೆಯ ಪ್ರಮಾಣ ಮಾತ್ರ ನಾಗಾಲೋಟದಿಂದ ಸಾಗುತ್ತಲೆ ಇದೆ. ೧೯೫೧ರಲ್ಲಿ ೩೬.೧೦ ಕೋಟಿ ಇದ್ದ ಜನಸಂಖ್ಯೆ ೧೯೯೧ರ ಜನಗಣತಿ ಪ್ರಕಾರ ೮೪.೬೩ ಕೋಟಿಗೆ ಏರಿದೆ. ೧೯೦೧ರಲ್ಲಿ ಒಂದು ಚದರ ಕಿಲೋ ಮೀಟರ್‌ಗೆ ೭೭ಮಂದಿ ಇರುತ್ತಿದ್ದರೆ, ೧೯೮೧ಕ್ಕೆ ೨೩೦, ೧೯೯೧ ಕ್ಕೆ ೨೭೩ ಹೀಗೆ ಹೆಚ್ಚಾಯಿತು. ಕೃಷಿರಂಗದಲ್ಲಿ ೧೯೫೧ರಲ್ಲಿ ೭೨.೧ ರಷ್ಟು ಇದ್ದವರು ೧೯೯೧ರಲ್ಲಿ ೬೬.೯ ಕ್ಕೆ ಕಡಿಮೆಯಾಗಿದೆ. ಕಾರ್ಮಿಕರಂಗದಲ್ಲಿ ೧೯೩೧ರಲ್ಲಿ ಶೇ. ೧೦.೨ ಇದ್ದವರು ೧೯೫೧ರಲ್ಲಿ ಶೇ. ೧೦.೭ಕ್ಕೆ, ೧೯೯೧ರಲ್ಲಿ ಶೇ. ೧೨.೫ ಹೆಚ್ಚಾಗಿದ್ದಾರೆ. ಕುಟುಂಬ ನಿಯಂತ್ರಣದ ಕಾರ್ಯಕ್ರಮಗಳು ಹೆಚ್ಚಾದರೂ ಶಸ್ತ್ರ ಚಿಕಿತ್ಸೆ ಮಹಿಳೆಯರಿಗೇ ಮೀಸಲಾಗಿ, ಗಂಡಸರು ಇದರ ಕಡೆ ಆಸಕ್ತಿ ವಹಿಸುತ್ತಿಲ್ಲ. ಮೂಢನಂಬಿಕೆ, ಮತ ವಿಶ್ವಾಸಗಳು ಜನಸಂಖ್ಯೆ ಬೆಳೆಯಲು ಕಾರಣವಾಗಿದೆ.

ಮನೆಗೊಂದು ಉದ್ಯೋಗ ಕನಸೆ?

ಪ್ರತಿಯೊಬ್ಬ ಪ್ರಜೆಗೂ ಜೀವನಾಧಾರದ ಕೆಲಸ ಕಲ್ಪಿಸಿ ಕೊಡುವುದು ಸರಕಾರದ ಜವಾಬ್ದಾರಿ ಇದನ್ನು ಪರಿಗಣಿಸಿಯೇ ರಾಜಕೀಯ ಪಕ್ಷಗಳು 'ಮನೆಗೊಂದು ಉದ್ಯೋಗ' ಎಂಬ ಘೋಷಣೆಯನ್ನು ಮುಂದಿಟ್ಟಿವೆ. ಭಾರತದ ಅಸಂಘಟಿತ ಕಾರ್ಮಿಕವರ್ಗವೇ ಅಧಿಕ ಜನಸಂಖ್ಯೆಗೆ ಜೀವನಾಧಾರವಾಗಿದೆ. ಎಂಟನೆ ಪಂಚವಾರ್ಷಿಕ ಯೋಜನೆ ಪ್ರಕಾರ ನಿರುದ್ಯೋಗದ ಸಂಖ್ಯೆ ೩.೫ ಕೋಟಿಗೆ ಏರಿದೆ. ನಿರುದ್ಯೋಗ ಕಡಿಮೆಗೊಳಿಸಲು ರೋಜಗಾರ್ ಯೋಜನೆ, ಐ.ಆರ್.ಡಿ.ಪಿ., ಟ್ರೈಸಂ ಮುಂತಾದ ಯೋಜನೆಗಳನ್ನು ಜಾರಿಗೆ ತಂದರು. ೧೯೫೧ರಲ್ಲಿ ೧೨೬ ಎಂಪ್ಲಾಯ್‌ಮೆಂಟ್ ಎಕ್ಸ್‌ಚೇಂಜ್ ಮೂಲಕ ೪.೮೬ಲಕ್ಷ ನಿರುದ್ಯೋಗಿಗಳು ನಮೂದಿಸಲ್ಪಟ್ಟರು.

೧೯೮೧ರ ವೇಳೆಗೆ ಎಕ್ಸ್‌ಚೇಂಜ್‌ಗಳು ೫೮೧ಕ್ಕೆ ಹೆಚ್ಚಾದವು. ನಿರುದ್ಯೋಗಿಗಳ ನೋಂದಣಿ ೬೨.೭೭ ಲಕ್ಷ, ೧೯೯೪ ಎಕ್ಸ್‌ಚೇಂಜ್‌ಗಳ ಸಂಖ್ಯೆ ೮೦೨, ನಮೂದಾದ ನಿರುದ್ಯೋಗಿಗಳ ಸಂಖ್ಯೆ ೬೦.೮೪ ಲಕ್ಷ. ೧೯೯೪ಕ್ಕೆ ನಮೂದಾಗಿದ್ದವರಲ್ಲಿ ೩.೬ ಕೋಟಿ ಉದ್ಯೋಗ ಪಡೆದರೆಂದು ಅಂಕಿ ಸಂಖ್ಯೆ ಹೇಳುತ್ತದೆ. ಈ ಉದ್ಯೋಗಪಡೆದವರೆಲ್ಲರೂ ಉನ್ನತ ಪಾಠಶಾಲೆಗಳಲ್ಲಿ ಹೆಚ್ಚು ವಿದ್ಯಾಭ್ಯಾಸ ಪಡೆದವರು. ಕಲಿತವರಿಗೆ ಮಾತ್ರ ಎಂಪ್ಲಾಯ್



ಮೆಂಟ್ ಎಕ್ಸ್‌ಚೇಂಜ್, ನಿರಕ್ಷರಕುಕ್ಷಿಗಳಿಗೆ ಎಕ್ಸ್‌ಛೇಂಜ್‌ಗಳು ಎಲ್ಲಿಂದ ಬರಬೇಕು.

ಕಂಪನಿಗಳು

೧೯೪೭ರಿಂದ ಕಾರ್ಮಿಕ ರಂಗ ಕುರಿತು ಪ್ರಧಾನ ಮಂತ್ರಿಗಳು ಶ್ರದ್ಧೆ ತೋರಿಸುತ್ತಲೇ ಇದ್ದಾರೆ. ಆದ್ದರಿಂದಲೇ ಪಂಚವಾರ್ಷಿಕ ಯೋಜನೆಗಳಲ್ಲಿ ಹೆಚ್ಚು ನಿಧಿ ಇಡಲಾಗುತ್ತಿದೆ. ೧೯೫೬ರಿಂದೀಚೆಗೆ ಸರ್ಕಾರಿ ಕಂಪನಿ ಲಾಭ ಗಳಿಸುವ ನಿಟ್ಟಿನಲ್ಲಿ ಸಾಗಿದವು. ಸರ್ಕಾರಿ ಕಂಪನಿಗಳು ಬಂಗಾರದ ಮೊಟ್ಟೆಯಿಡುವ ಕೋಳಿಯಂತೆ ಭಾವಿಸಿದರು. ಆದರೆ ಇಂದು ಸರ್ಕಾರಿ ರಂಗದ ಕಂಪನಿಗಳು ನಷ್ಟದಲ್ಲಿ ನಡೆಯುತ್ತಿವೆ. ೧೯೭೦-೭೧ರಲ್ಲಿ ೬೪,೫೬೫ ಕಾರ್ಖಾನೆಗಳಿದ್ದರೆ ೧೯೯೧-೯೨ರಲ್ಲಿ ಇದು ೧,೧೨,೨೮೬ಕ್ಕೆ ಮುಟ್ಟಿತು. ಸ್ಥಿರ ಬಂಡವಾಳ ೮,೭೫೨ ಕೋಟಿಯಿಂದ ೧,೫೧,೯೦೨ ಕೋಟಿಯವರೆಗೆ ಹೆಚ್ಚಾಯಿತು. ಕಾರ್ಮಿಕರ ಸಂಖ್ಯೆ ೬೨.೬೯ ಲಕ್ಷಕ್ಕೆ ಬೆಳೆಯಿತು. ಸಿಮೆಂಟ್ ೧೯೮೪-೮೫ರಲ್ಲಿ ೩೦೨ ಲಕ್ಷ ಟನ್‌ನಿಂದ ೧೯೯೩-೯೪ರಲ್ಲಿ ೫೮೦ ಲಕ್ಷ ಟನ್‌ಗೆ ಹೆಚ್ಚಾಯಿತು.

ಇದ್ದಿಲು ೧,೪೭೪ ಲಕ್ಷ ಟನ್ನಿನಿಂದ ೨,೫೨೩ ಲಕ್ಷಕ್ಕೆ ಹೆಚ್ಚಾಯಿತು. ಗೊಬ್ಬರದ ಉತ್ಪತ್ತಿ ಹೆಚ್ಚಾಗುತ್ತ ಬಂದರೂ ೧೯೯೩-೯೪ರ ಹೊತ್ತಿಗೆ ೭೩.೭೩ ಲಕ್ಷ ಟನ್ನಿಗೆ ಇಳಿಯಿತು. ೧೯೯೨ ರಲ್ಲಿ ೨,೪೭,೭೨೪ ಕಾರ್ಖಾನೆಗಳು ಮುಚ್ಚಲ್ಪಟ್ಟವು. ಬ್ಯಾಂಕಿಗೆ ಬರಬೇಕಾಗಿದ್ದ ೧೧,೫೫೩ ಕೋಟಿ ರೂಪಾಯಿ ಬಡ್ಡಿ ಬ್ಯಾಂಕಿಗೆ ಬರಲಾರದೆ ನಿಂತಿತು. ಕ್ರಮೇಣ ಮುಚ್ಚಲ್ಪಡುತ್ತಿರುವ ಕಾರ್ಖಾನೆಗಳಿಂದ ಲಕ್ಷಾಂತರ ಕಾರ್ಮಿಕರು ಬೀದಿಪಾಲಾಗುತ್ತಿದ್ದಾರೆ.

ವಿದ್ಯುತ್ ಖೋತಾ

ಮಾನವನ ಜೀವನವನ್ನು ಗುಣಾತ್ಮಕವಾಗಿ ಬದಲಾಯಿಸುವ ಶಕ್ತಿ ವಿದ್ಯುತ್‌ನದೇ ಆಗಿದೆ. ವಿದ್ಯುತ್, ಇದ್ದಿಲು, ಗ್ಯಾಸ್ ಇವೆಲ್ಲಾ ವಿದ್ಯುತ್ ಗುಂಪಿನೊಳಗೆ ಬರುತ್ತವೆ. ೧೯೪೭ರಲ್ಲಿ ೧,೪೦೦ ಮೆಗಾವ್ಯಾಟ್ ಉತ್ಪತ್ತಿಯಾಗುತ್ತಿದ್ದ ವಿದ್ಯುತ್ ೧೯೯೩-೯೪ರಲ್ಲಿ ೭೬,೭೧೮ ಮೆಗಾವ್ಯಾಟ್ ಉತ್ಪಾದನೆಯಾಯಿತು. ಇದರಲ್ಲಿ ಹೈಡ್ರೊಪವರ್ ೨೦,೩೬೫.೯೧ ಮೆಗಾವ್ಯಾಟ್, ಥರ್ಮಲ್ ಪವರ್ ೫೪,೩೪೭,೩೦ ಮೆಗಾವ್ಯಾಟ್, ನ್ಯೂಕ್ಲಿಯರ್ ಪವರ್ ೨,೦೦೫ ಮೆಗಾವ್ಯಾಟ್ ಆಗಿದೆ. ದೇಶದ ಅವಶ್ಯಕತೆಗೆ ಬೇಕಾಗುವಷ್ಟು ವಿದ್ಯುತ್ ಎಂದೂ ಉತ್ಪತ್ತಿಯಾಗಿಲ್ಲ. ೧೯೭೪-೭೫ರಲ್ಲಿ ೭೮.೬ ಬಿಲಿಯನ್ ಕಿಲೋವ್ಯಾಟ್ ವಿದ್ಯುತ್ ಬೇಕಾಗಿದ್ದರೆ ಅದರಲ್ಲಿ ಉತ್ಪತ್ತಿಯಾಗಿದ್ದು ೬೬.೫ ಬಿಲಿಯನ್ ಕಿಲೋವ್ಯಾಟ್ ಮಾತ್ರ. ೧೯೮೫-೮೬ರಲ್ಲಿ ೧೬೦.೭ ಬಿಲಿಯನ್ ಕಿಲೋವ್ಯಾಟ್ ಬೇಕಾಗಿದ್ದರೆ, ಉತ್ಪತ್ತಿಯಾಗಿದ್ದು ೧೫೭.೩ ಬಿಲಿಯನ್ ಕಿಲೋವ್ಯಾಟ್ ಮಾತ್ರ. ೧೯೯೫-೯೬ರಲ್ಲಿ ಸಹ ೩೭೮.೨ ಬಿಲಿಯನ್ ಕಿಲೋವ್ಯಾಟ್ ಅವಶ್ಯವಾದರೆ ಉತ್ಪತ್ತಿಯಾದದ್ದು ೩೫೧.೩ ಬಿಲಿಯನ್ ಕಿಲೋವ್ಯಾಟ್. ಎಲ್ಲಾ ರಾಜ್ಯಗಳಲ್ಲೂ ಎಲೆಕ್ಟ್ರಿಸಿಟಿ ಬೋರ್ಡ್, ನ್ಯಾಷನಲ್, ರೀಜಿನಲ್ ಪವರ್ ಗ್ರಿಡ್, ರೂರಲ್ ಎಲೆಕ್ಟ್ರಿಫಿಯನ್ ಕಾರ್ಪೊರೇಷನ್, ಥರ್ಮಲ್ ಪವರ್ ಕಾರ್ಪೊರೇಷನ್, ಹೈಡ್ರೋ ಎಲೆಕ್ಟ್ರಿಕಲ್ ಪವರ್ ಕಾರ್ಪೊರೇಷನ್‌ಗಳಿಂದ ೩,೦೦೫ ಮೆಗಾವ್ಯಾಟ್ ವಿದ್ಯುತ್ ಆದರೂ ದೇಶದ ಎಲ್ಲಾ ಗ್ರಾಮಗಳಿಗೆ ವಿದ್ಯುತ್ ಸೌಕರ್ಯವಿಲ್ಲ. ದೇಶದ ರಾಜಧಾನಿಯಿಂದ ಹಳ್ಳಿಯವರೆಗೂ ಹಲವು ಗಂಟೆಗಳ ಕಾಲ ಅಂಧಕಾರದಲ್ಲಿ ಮುಳುಗಿರಬೇಕಾಗುತ್ತದೆ. ೧೯೯೫ ಡಿಸೆಂಬರ್ ೩೧ಕ್ಕೆ ೪.೯೭ ಲಕ್ಷ ಗ್ರಾಮಗಳಿಗೆ ವಿದ್ಯುತ್ ಒದಗಿಸಲಾಗಿದೆಯೆಂದು, ಒಂದು ಕೋಟಿ ಏಳು ಲಕ್ಷ ಪಂಪ್‌ಸೆಟ್‌ಗಳಿಗೆ ಸಂಪರ್ಕ ಮಾಡಲಾಗಿದೆಯೆಂದು ವಿದ್ಯುತ್ ಇಲಾಖೆ ತಿಳಿಸುತ್ತದೆ. ೧,೧೧,೮೮೬ ಗಿರಿಜನ ಗ್ರಾಮಗಳಲ್ಲಿ ೭೮,೮೧೩ ಗ್ರಾಮಗಳಿಗೆ ವಿದ್ಯುತ್ ಒದಗಿಸಲಾಗಿದೆ. ೨,೬೫,೨೧೭ ದಲಿತ ಕಾಲನಿಗಳಿಗೆ ವಿದ್ಯುತ್ ಒದಗಿಸಲಾಗಿದೆ. ಇವೆಲ್ಲಕ್ಕೆ ವಿದ್ಯುತ್ ಒದಗಿಸಿದರೂ ದಿನಕ್ಕೆ ಕನಿಷ್ಠ ಮೂರು, ನಾಲ್ಕು ಗಂಟೆಯಾದರೂ ದೀಪಗಳು ಉರಿಯುತ್ತವೆಯೆ ಎನ್ನುವುದು ಪ್ರಶ್ನಾರ್ಥಕವಾಗಿದೆ.

ಭಾರವಾದ ಪ್ರಯಾಣ

೧೮೫೩ ರಲ್ಲಿ ಮೊದಲ ಬಾರಿಗೆ ಭಾರತದೇಶದಲ್ಲಿ ಬೊಂಬಾಯಿಂದ ಥಾಣೆಗೆ ರೈಲು ಪ್ರಯಾಣಿಸಿತು. ಅದರ ದೂರ ೩೪ ಕಿ.ಮೀ. ೧೯೫೦-೫೧ರಲ್ಲಿ ಬ್ರಾಡ್, ಮೀಟರ್, ನ್ಯಾರೋಗೇಜ್‌ಗಳಿಂದ ಎಲ್ಲಾ ಸೇರಿಸಿ ೫೩,೩೯೬ಕಿ.ಮೀ. ಇದರಲ್ಲಿ ವಿದ್ಯುತ್ ಒದಗಿಸಿದ್ದು ೧೧,೨೬೦ ಕಿ.ಮಿ. ದೂರಕ್ಕೆ ಮಾತ್ರ. ೧೯೫೦-೫೧ರಲ್ಲಿ ೧,೨೮೪ ಕೋಟಿ ಮಂದಿ ಪ್ರಯಾಣಿಕರಿದ್ದರೆ, ಅವರ ಸಂಖ್ಯೆ ೧೯೯೧-೯೨ರಲ್ಲಿ ೪,೦೪೮ ಕೋಟಿಗೆ ಹೆಚ್ಚಾಗಿ ನಂತರ ಈಗ ಇಳಿಮುಖವಾಗುತ್ತಿದೆ. ೧೯೯೩-೯೪ರಲ್ಲಿ ಪ್ರಯಾಣಿಕರ ಸಂಖ್ಯೆ ೩,೭೦೮ ಕೋಟಿ ಮಾತ್ರ. ದೇಶದಲ್ಲಿ ಡಾಂಬರ್ ರೋಡ್‌ಗಳ ಸಂಖ್ಯೆ ೧೦,೪೩,೩೬೫ ಕಿ.ಮಿ. ಮಣ್ಣಿನ ರೋಡ್‌ಗಳ ಸಂಖ್ಯೆ ೧೦,೨೧,೮೪೪ ಕಿ.ಮಿ. ಹನ್ನೊಂದು ನೂರು ಜನಸಂಖ್ಯೆಯಿರುವ ಗ್ರಾಮಗಳಿಗೆ ಪಕ್ಕಾ ರಸ್ತೆ ನಿರ್ಮಿಸಬೇಕೆನ್ನುವುದು ಗುರಿಯಾಗಿತ್ತು. ಕೆಲವು ಹಳ್ಳಿಗಳಿಗೆ ಹೋಗಬೇಕಾದರೆ ರಸ್ತೆ ಇಲ್ಲದೆ ಹೊಲಗಳ ಬದುವಿನಿಂದ ಸಾಗಬೇಕಾದಂತಹ ಪರಿಸ್ಥಿತಿ ದೇಶದಲ್ಲಿವೆ. ರಹದಾರಿಗಳಲ್ಲಿ ಎಲ್ಲಿಯಾದರೂ ಅಪಘಾತವಾದರೆ ನಾಲ್ಕೈದು ಗಂಟೆ ವಾಹನ ತಡೆಯಲಾಗುತ್ತದೆ. ರೈಲಾದರೂ, ಬಸ್ಸಾದರೂ, ಪ್ರಯಾಣ ಎನ್ನುವುದು ಭಾರವಾಗಿದೆ. ಪ್ರತಿವರ್ಷ ಚಾರ್ಜ್‌ಗಳು ಹೆಚ್ಚಾಗುತ್ತಿದೆ. ಗಂಟೆಗಟ್ಟಲೆ ಕಾದು, ಇಲ್ಲವೆ ರೈಲುಗಳಿಗೆ ಲಿಂಕ್ ದೊರೆಯದೆ ಇರುವುದರಿಂದ ಪ್ರಯಾಣ ಎಂದರೆ ಭಯಪಡಬೇಕಾದಂತಹ ಪರಿಸ್ಥಿತಿ ಒದಗಿದೆ.

ನೆನಪು

ಹೀಗೆಯೇ
ಎಷ್ಟೋ ರಾತ್ರಿಗಳನ್ನು
ಕಳೆದಿದ್ದೇನೆ -
ಕಂಬನಿಯ ಕಣ್ಣಲ್ಲಿ
ನಿನ್ನ ನೆನಪುಗಳನ್ನು
ಏಣಿಸುತ್ತಾ

- ಸಿದ್ಧರಾಜ ಸೊನ್ನದ

ಮಣ್ಣುಪಾಲು

ಬ್ಯಾಂಕುಗಳ ರಾಷ್ಟ್ರೀಕರಣದಿಂದಾಗಿ ಪ್ರಗತಿ ಆಗಿದೆ ಎಂದು ಹೇಳುತ್ತಿರುತ್ತಾರೆ. ೧೯೬೯ರಲ್ಲಿ ಮೊದಲ ಬಾರಿಗೆ ೧೪ ವಾಣಿಜ್ಯ ಬ್ಯಾಂಕ್‌ಗಳ ರಾಷ್ಟ್ರೀಕರಣ ಆದಕೂಡಲೇ ಡಿಪಾಸಿಟ್‌ಗಳು ಜಾಸ್ತಿಯಾದವು. ೧೯೬೦-೬೧ರಲ್ಲಿ ಒಟ್ಟು ಬ್ಯಾಂಕುಗಳು ೩೪೫ ಇದ್ದವು. ೧೯೮೦-೮೧ಕ್ಕೆ ಈ ಸಂಖ್ಯೆ ೩೫,೭೦೭ಗೆ ಹೆಚ್ಚಾಯಿತು. ೧೯೯೩-೯೪ರಲ್ಲಿ ೨೭೬ ಬ್ಯಾಂಕುಗಳು ಹೆಚ್ಚಾದಂತೆ ೬೧,೮೦೩ ಬ್ರಾಂಚ್‌ಗಳು ಹೆಚ್ಚಾದವು. ಈ ಬ್ಯಾಂಕುಗಳ ಮೂಲಕ ಕೃಷಿಗೆ ವ್ಯಯಮಾಡಿದ ಹಣ ೧೯೬೯ರಲ್ಲಿ ಶೇ. ೫.೨ ರಿಂದ ೧೯೯೪ಕ್ಕೆ ಶೇ. ೧೩.೫ರಲ್ಲಿ ಹೆಚ್ಚಾಯಿತು. ಪ್ರತಿ ಹದಿನೈದು

ಸಾವಿರ ಜನ ಸಂಖ್ಯೆಗೆ ಒಂದು ಬ್ಯಾಂಕ್ ಶುರುವಾಯಿತು. ಕೃಷಿ ರಂಗಕ್ಕೆ ನೀಡಿದ ಹಣ ವಾಪಸ್ಸಾಗಲಿಲ್ಲವೆಂದು ಬ್ಯಾಂಕುಗಳು ನಷ್ಟ ಹೊಂದುತ್ತಿವೆಯೆಂದು ಬೊಬ್ಬೆ ಹೊಡೆಯಲಾಯಿತು. ಸತ್ಯ ಸಂಗತಿಯೆಂದರೆ ಕಾರ್ಖಾನೆಗಳಿಂದ ಬರಬೇಕಾದ ಸಾಲ ಬರಲಿಲ್ಲ. ೧೯೯೪ಕ್ಕೆ ೨೧,೨೦೮ ಕೋಟಿ ಕೃಷಿ ರಂಗದಿಂದ ಬರಬೇಕಾದ ಸಾಲವಾದರೆ ಕಾರ್ಖಾನೆ ಉದ್ಯಮಿ ಹಾಗೂ ವ್ಯಾಪಾರಸ್ಥರಿಂದ ೧,೨೪,೭೨೧ ಕೋಟಿ ರೂಪಾಯಿ ವಸೂಲಿ ಆಗಬೇಕಾಗಿತ್ತು. ಇದರಿಂದ ಮಂದಿ ಹಣ ಮಣ್ಣುಪಾಲು ಎನ್ನುವಂತಾಗಿದೆ.

ಹೆಚ್ಚಾದ ಆಮದು

ಆಮದು ಮತ್ತು ರಫ್ತು ಹೋಲಿಸಿದರೆ ನಾವು ಯಾವಾಗಲು ಆಮದಿನಲ್ಲಿ ಮುಂದಿದ್ದೇವೆ. ನಾವು ರಫ್ತು ಮಾಡುವ ವಸ್ತುಗಳು ೭,೫೦೦ ಇವೆ. ಇವುಗಳನ್ನು ೧೯೦ ದೇಶಗಳಿಗೆ ರಫ್ತು ಮಾಡುತ್ತಿದ್ದೇವೆ. ನಾವು ತರಿಸಿಕೊಳ್ಳುತ್ತಿರುವ ವಸ್ತುಗಳು ೬,೦೦೦. ಸುಮಾರು ೧೪೦ ದೇಶಗಳಿಂದ ಇವುಗಳನ್ನು ಆಮದು ಮಾಡಿಕೊಳ್ಳುತ್ತಿದ್ದೇವೆ. ೧೯೫೦ರಲ್ಲಿ ೬೦೮ ಕೋಟಿ ರೂಪಾಯಿಗಳ ಬೆಲೆಯುಳ್ಳ ವಸ್ತುಗಳನ್ನು ತರಿಸಿಕೊಂಡು ೬೦೬ ಕೋಟಿ ರೂಪಾಯಿಗಳ ವಸ್ತುಗಳನ್ನು ರಫ್ತು ಮಾಡಿದ್ದೇವೆ. ಬ್ಯಾಲೆನ್ಸ್ ಆಫ್ ಟ್ರೇಡ್(-) ೨ ಕೋಟಿ. ಇದು ೧೯೯೪-೯೫ಕ್ಕೆ (-)೬,೩೬೭ ಕೋಟಿಗೆ ಹೆಚ್ಚಾಯಿತು. ೧೯೭೨-೭೩ರಲ್ಲಿ ೧೦೪ ಕೋಟಿ, ೧೯೭೬-೭೭ರಲ್ಲಿ ೬೮ ಕೋಟಿ ರಫ್ತನ್ನು ಮಾಡಿದ್ದೇವೆ. ಉಳಿದ ವರ್ಷಗಳಲ್ಲಿ ರಫ್ತಿಗಿಂತಲೂ ಆಮದು ಹೆಚ್ಚಾಗಿ ಮಾಡಿಕೊಂಡಿದ್ದೇವೆ. ಹೀಗಾದರೆ ಅಭಿವೃದ್ಧಿ ಸಾಧಿಸಲು ಹೇಗೆ ಸಾಧ್ಯ?

ಮಂದಗತಿಯ ಅಂಚೆ, ತಂತಿ


ಅಂಚೆ ವ್ಯವಸ್ಥೆ ಮೊಟ್ಟಮೊದಲ ಬಾರಿಗೆ ೧೮೩೭ರಲ್ಲಿ ಪ್ರಾರಂಭವಾಯಿತು. ಮೊದಲ ಸ್ಟಾಂಪು ೧೮೫೨ರಲ್ಲಿ ಬಿಡುಗಡೆಯಾಯಿತು. ೧೯೪೭ರಲ್ಲಿ ೨೩,೩೨೧ ಪೋಸ್ಟಾಫಿಸುಗಳಿದ್ದವು. ಈಗ ೧,೫೨,೭೮೬ ಪೋಸ್ಟಾಫಿಸುಗಳಿವೆ. ಅಂದರೆ ಪ್ರತಿ ೫,೫೨೭ ಮಂದಿಗೆ ೨೧.೪೯ ಚದರ ಕಿ.ಮೀ. ದೂರದಲ್ಲಿ ಒಂದು ಪೋಸ್ಟಾಫೀಸು ಇದೆ. ಆದರೂ ಕಾಗದ ಪತ್ರಗಳು ತಲುಪಬೇಕಾದರೆ ನಾಲ್ಕು ದಿವಸ ಹಿಡಿಯುತ್ತದೆ. ಒಂದೇ ನಗರದಲ್ಲಿ ವಾಸಿಸುವ ಜನತೆಯ ಪತ್ರಗಳು ಮುಟ್ಟಲು ಮೂರು ದಿವಸ ಬೇಕಾಗುತ್ತದೆ. ಮನಿಯಾರ್ಡರ್ ಮತ್ತು ರಿಜಿಸ್ಟರ್ಡ್ ಪತ್ರಗಳೂ ಸರಿಯಾದ ಸಮಯಕ್ಕೆ ದೊರೆಯುತ್ತಿಲ್ಲ. ೧೯೮೬ರಲ್ಲಿ ಸ್ಪೀಡ್ ಪೋಸ್ಟ್ ಜಾರಿಗೆ ತಂದರು. ಇದರ ಗೋಳೂ ಹೀಗೆಯೇ?

ಕೊರಿಯರ್ ಸರ್ವಿಸ್‌ಗಳ ಮೇಲೆ ಜನ ಆಧಾರಪಟ್ಟರು. ಗ್ರಾಮೀಣ ಪ್ರಾಂತಗಳಿಗೆ ಟೆಲಿಗ್ರಾಂ ಕಳುಹಿಸಿದರೆ ಅದು ಸಾಮಾನ್ಯ ಪತ್ರದೊಂದಿಗೆ ಮುಟ್ಟುತ್ತದೆ. ನಗರಗಳಿಗೆ ಬೇಗನೆ ಟೆಲಿಗ್ರಾಂ ತಲುಪುತ್ತದೆ. ಟೆಲಿಫೋನ್ ಕನೆಕ್ಷನ್ ಬೇಡಿಕೆ ಸಂಖ್ಯೆ ಸಾವಿರಾರು ಸಂಖ್ಯೆಯಲ್ಲಿದ್ದರೂ ವಿಸ್ತರಣೆ ಬಹಳ ಮಂದ ಗತಿಯಿಂದ ಸಾಗುತ್ತಿದೆ. ೧೯೮೧-೮೨ರಲ್ಲಿ ೫.೯೪ ಲಕ್ಷ ಮಂದಿ ವೈಯಿಟಿಂಗ್ ಲಿಸ್ಟ್‌ನಲ್ಲಿ ಇದ್ದಾರೆ. ಎಲೆಕ್ಟ್ರಾನಿಕ್ ಮೆಯಿಲ್ ಮೊದಲಾದ ಆಧುನಿಕ ಸೌಕರ್ಯಗಳು ಪ್ರಮುಖ ನಗರಗಳಿಗೆ ಸೀಮಿತವಾಗಿವೆ.

ದುಬಾರಿ ರಕ್ಷಣಾ ವ್ಯವಸ್ಥೆ

ದೇಶದ ರಕ್ಷಣಾವ್ಯವಸ್ಥೆ ವರ್ಷದಿಂದ ವರ್ಷಕ್ಕೆ ಜಾಸ್ತಿಯಾಗುತ್ತಿದೆ. ರಕ್ಷಣಾ ವ್ಯವಸ್ಥೆಯಲ್ಲಿ ಅಧಿಕಾರಗಳ ಸೌಲಭ್ಯ, ಆಯುಧ, ಯಂತ್ರಗಳ ಕೊಡುಕೊಳ್ಳುವಿಕೆ, ನಿರ್ವಹಣೆ, ವಾಹನ, ವರ್ಕ್‌ಶಾಪ್ ಯಂತ್ರಗಳ ಕೊಳ್ಳುವಿಕೆ. ಸಾಕಷ್ಟು ಖರ್ಚು ಕಂಡುಬರುತ್ತಿದೆ. ನಿರ್ದಿಷ್ಟವಾದ ಯೋಜನೆ ಬೇಕೆಂದು ಸಮಿತಿಯೊಂದು ಸೂಚಿಸಿದೆ. ನಮ್ಮ ರಕ್ಷಣಾ ವ್ಯವಸ್ಥೆಗೆ ದೇಶದ ಆದಾಯದಲ್ಲಿ ಶೇ.೩.೮ ರಷ್ಟು ಖರ್ಚು ಮಾಡಲಾಗುತ್ತಿದೆ. ೧೯೬೨ರಲ್ಲಿ ಚೈನಾಯುದ್ಧ ನಡೆದ ನಂತರ ಸುಮಾರು ೨೫ ವರ್ಷಗಳವರೆಗೆ ದೇಶದ ಆದಾಯದ ಶೇ.೩.೦೮ರಷ್ಟು ಹಣ ರಕ್ಷಣಾ ವ್ಯವಸ್ಥೆಗೆ ಖರ್ಚು ಮಾಡಲಾಯಿತು. ಮೊದಲಬಾರಿ ೧೯೯೪-೯೫ರ ಬಡ್ಜೆಜ್‌ನಲ್ಲಿ ಶೇ.೨.೫೩ಕ್ಕೆ ಕಡಿಮೆಯಾಯಿತು. ಭಾರತದ ರಕ್ಷಣಾ ವ್ಯವಸ್ಥೆಗೆ ಅಧಿಕ ಖರ್ಚು ಮಾಡುತ್ತಿದೆ ಎಂದು ಪಾಕಿಸ್ತಾನ, ಪಾಕಿಸ್ತಾನ ಹೆಚ್ಚು ಖರ್ಚು ಮಾಡುತ್ತಿದೆಯೆಂದು ಭಾರತ ಹೀಗೆ ವಾದ ವಿವಾದಗಳಲ್ಲಿ ಖರ್ಚು ಹೆಚ್ಚು ಮಾಡಲಾಗುತ್ತಿದೆ.

ನಮ್ಮ ದೇಶ ಖರ್ಚು ಮಾಡಿದ ವಿವರ ಹೀಗಿದೆ. ೧೯೮೩-೮೪ರಲ್ಲಿ ೫,೮೩೧ ಕೋಟಿ, ೧೯೮೪-೮೫ರಲ್ಲಿ ೭,೦೬೧ ಕೋಟಿ. ೧೯೮೮-೮೯ರಲ್ಲಿ ೧೩,೩೪೧ ಕೋಟಿ, ೧೯೯೩-೯೪ರಲ್ಲಿ ೧೯,೧೮೦ ಕೋಟಿ



"ಅಯ್ಯೋ.. ಮೂರ್ಖ! 'ಹಯವದನ ನಿಲಯ' ಅಂತ ಅಲ್ವೇನೋ ನಿನ್ಗೆ ಬರೆಯಲು ಹೇಳಿದ್ದು ?! ..."

೧೯೯೪-೯೫ರಲ್ಲಿ ೨೩,೨೪೫ ಕೋಟಿ, ೧೯೯೫-೯೬ರಲ್ಲಿ ೨೬,೮೭೯ ಕೋಟಿ ರೂ. ರಕ್ಷಣಾ ವ್ಯವಸ್ಥೆಗೆ ಖರ್ಚು ಮಾಡಲಾಗಿದೆ. ೧೯೯೪-೯೫ರಲ್ಲಿ ರಕ್ಷಣಾವ್ಯಯವು ದೇಶದ ಆದಾಯದಲ್ಲಿ ಶೇ. ೨.೪೮ರಷ್ಟು ಆಗಿ ಅದು ಈಗ ೨.೨೩ಕ್ಕೆ ಕಡಿಮೆಯಾಗಿದೆ.

ಸೈನ್ಯದಲ್ಲಿ ಒಟ್ಟು ಹನ್ನೊಂದು ಲಕ್ಷಮಂದಿ ಸಿಬ್ಬಂದಿ ಇದ್ದಾರೆ. ಐದು ವಿಭಾಗೀಯ ಕಮಾಂಡ್‌ಗಳು, ೧೧ ಕೋರ್‌ಗಳು, ಎರಡೂ ಆಯುಧ ವಿಭಾಗಗಳು, ಒಂದು ಯಂತ್ರವಿಭಾಗ, ೨೨ ಇನ್‌ಫೆಂಟ್ರಿಗಳು, ೧೦ ಮೌಂಟನ್ ಡಿವಿಜನ್‌ಗಳು, ೧೪ ಸ್ವತಂತ್ರ ಬ್ರಿಗೇಡುಗಳಿವೆ. ಇನ್ನೂ ಸಾಧನ ಸಾಮಗ್ರಿಯಲ್ಲಿ ೩,೪೦೦ ಯುದ್ಧ ಟ್ಯಾಂಕುಗಳು, ೧೦೦ ಲೈಟ್ ಬ್ಯಾಂಕುಗಳು, ೧೩೦೦ ಯುದ್ಧ ವಿಮಾನಗಳು, ೩,೩೨೫ ಟೋಯ್ಡ್ ಆರ್ಟಿಲ್ಲರಿ, ೧೮೦ ಸೆಲ್ಫ್ ಪ್ರಾಪೆಲ್ಡ್ ಆರ್ಟಿಲ್ಲೆರಿ, ೨೦೦ ಹೆಲಿಕಾಪ್ಟರ್‌ಗಳು. ೧೨೬೩ ಎಯಿರ್ ಮಿಸ್ಸೆಲ್ಸ್ ಇವೆ. ವಿಮಾನ ದಳದಲ್ಲಿ ಒಂದು ಲಕ್ಷ ಹತ್ತು ಸಾವಿರ ಸಿಬ್ಬಂದಿ ಇದ್ದಾರೆ. ೭೦೩ ಕೆಂಬಾಟ್ ಎಯಿರ್‌ಕ್ರಾಫ್ಟ್‌ಗಳು ಇವೆ. ಇದರಲ್ಲಿ ಎಂ-ಐ-ಜಿ ೨೯,೨೭,೨೩,೨೧ ಮೀರಜ್ ೨೦೦೦, ಜಾಗ್ವಾರ್, ೩೬ ಆಯುಧ ಹೆಲಿಕಾಪ್ಟರ್‌ಗಳು ಇವೆ.

ನೌಕಾದಳದಲ್ಲಿ ೫೫,೦೦೦ ಮಂದಿ

ಸಿಬ್ಬಂದಿ ಇದ್ದಾರೆ. ಎಯಿರ್‌ಕ್ರಾಫ್ಟ್ ಕ್ಯಾರಿಯರ್ಸ್ ಎರಡು, ಸಬ್‌ಮೆರೈನು ೧೫, ಡೆಸ್ಟ್ರಾಯರ್ಸ್ ೫, ಫ್ರಿಗೆಟ್ಸ್ ೧೭, ಪಾಟ್ರಲ್ ಕೋಸ್ಟಲ್ ಕಂಬಾಟೆಂಟ್ಸ್ ೨೫, ಕಾರ್ವೆಟ್ಸ್ ೧೫ ಇವೆ. ನೇವಲ್ ಏವಿಯೇಷನ್‌ನಲ್ಲಿ ೬೪ ಯುದ್ಧ ವಿಮಾನಗಳು, ೭೫ ಆಯುಧ ಯುದ್ಧ ಹೆಲಿಕಾಪ್ಟರ್‌ಗಳು ಇದ್ದಾವೆ. ರಕ್ಷಣಾ ದಳವಲ್ಲದ ಬೋರ್ಡರ್ ಸೆಕ್ಯೂರಿಟಿ ಫೋರ್ಸ್, ಇಂಡೊಟಿಬೆಟನ್ ಬೋರ್ಡರ್ ಪೋಲಿಸ್, ಅಸ್ಸಾಂ ರೈಫಲ್ಸ್, ಇಂಡೋ ಬಾಂಗ್ಲಾದೇಶ್ ಬೋರ್ಡರ್ ಫೋರ್ಸ್‌ನಂತಹ ದಳಗಳ ಮೇಲೆ ಪ್ರತಿ ವರ್ಷ ೧೬೫೦ ಕೋಟಿಗಿಂತಲೂ ಹೆಚ್ಚಾಗಿ ಖರ್ಚು ಮಾಡಲಾಗುತ್ತದೆ. ಏಶಿಯ ಖಂಡದಲ್ಲಿ ದಶಕಗಳಿಂದ ಮುಂದುವರಿಯುತ್ತಿರುವ ಭಯಾಂದೋಳನಗಳು, ಯುದ್ಧ ವಾತಾವರಣ, ರಕ್ಷಣ ವ್ಯಯ ಜಾಸ್ತಿಯಾಗಲು ಕಾರಣವಾಗಿದೆ. ಬಡ್ಜೆಟ್‌ನಲ್ಲಿ ಹೆಚ್ಚು ಹಣವನ್ನು ರಕ್ಷಣೆಗಾಗಿ ಖರ್ಚು ಮಾಡಿದರೆ ಅಭಿವೃದ್ಧಿ ಹೇಗೆ ಸಾಧ್ಯ. ದೇಶದ ಸಾರ್ವಭೌಮತೆಯನ್ನು ಕಾಪಾಡದಿದ್ದರೆ ದೇಶ ಉಳಿಯದು. ಆದ್ದರಿಂದ ರಕ್ಷಣಾ ವ್ಯವಸ್ಥೆಯಲ್ಲಿ ಕಡಿತಗೊಳಿಸಲು ಆಗುವುದಿಲ್ಲ. ಮತ್ತೆ ಸ್ವತಂತ್ರ ಹೋರಾಟಗಳು ನಡೆಯುತ್ತವೆ ಎಂಬ ಆತಂಕದಿಂದ ಏಶಿಯಾದ ದೇಶಗಳು ರಕ್ಷಣೆಗಾಗಿ ಹೆಚ್ಚು ಖರ್ಚು ಮಾಡುತ್ತಿವೆ. ಯುದ್ಧವೆಂದರೆ ಭಯವಿಲ್ಲ ಎನ್ನುತ್ತಿದ್ದಂತೆಯೇ ಒಳಗೆ ಭಯಪಡಲಾಗುತ್ತಿದೆ. ಈ ಭಯದಿಂದಲೇ ಮುಂದಡಿ ಇಡುತ್ತಿವೆ. ಇದಕ್ಕೆ ಭಾರತ ದೇಶವೂ ಹೊರತಾಗಿಲ್ಲ.


ನಿಜವಾದ ಸ್ವಾತಂತ್ರ್ಯ ಎಂದು?

ಐವತ್ತು ವರ್ಷಗಳಲ್ಲಿ ಹಿಂದಿರುಗಿ ನೋಡಿದರೆ ನಾವು ಸಾಧಿಸಿದ ಪ್ರಗತಿ ಇಷ್ಟೇನಾ ಎಂದು ಅನಿಸುತ್ತದೆ. ಹಾಗೆಂದು ವಿಶ್ವಾಸವನ್ನು ಕಳೆದುಕೊಂಡು ಇದ್ದ ಜಾಗದಲ್ಲೆ ಇರಲಾರೆವು. ರಾಜಕೀಯ, ಆರ್ಥಿಕ, ಸಾಮಾಜಿಕವಾಗಿ ಆಗುತ್ತಿರುವ ಬದಲಾವಣೆಗಳನ್ನು ಗ್ರಹಿಸಿ ಇರುವ ಸಂಪತ್ತನ್ನು ಸಕ್ರಮವಾಗಿ ಉಪಯೋಗಿಸಿಕೊಂಡು ಎಲ್ಲರಿಗೂ ಅನ್ನ, ವಸತಿ ನೀಡಿದಾಗಲೇ ಅರ್ಧ ರಾತ್ರಿಯ ಸ್ವಾತಂತ್ರ್ಯ ಮೂರ್ತಗೊಳ್ಳುವುದು. ಇಲ್ಲದಿದ್ದರೆ ಅರ್ಧರಾತ್ರಿಯ ಕತ್ತಲಲ್ಲೆ ಉಳಿದು ಬೆಳಕು ಕನಸಾಗಿ ಉಳಿದೀತು. ೫,೭೬,೦೦೦ ಹಳ್ಳಿಗಳು ನಗುವಾಗಲೇ ಸ್ವಾತಂತ್ರ್ಯಕ್ಕೆ ನಿಜವಾದ ಅರ್ಥ ಬರುವುದು. ●

ಪ್ರತಿಭಾವಂತ ಪ್ರೊಫೆಸರ್

ಡಾ. ಎಸ್.ಟಿ. ನಂದಿಬೇವೂರ

ವಿಶ್ವದಾದ್ಯಂತ ಪ್ರಸಾರಗೊಳ್ಳುವ ಅಮೇರಿಕೆಯ "ಹೂ ಈಜ್ ಹೂ ಇನ್ ದಿ ವರ್ಲ್ಡ್" ನಿಯತಕಾಲಿಕದಲ್ಲಿ ಕರ್ನಾಟಕ ವಿಶ್ವವಿದ್ಯಾಲಯದ ರಸಾಯನಶಾಸ್ತ್ರ ವಿಭಾಗದ ಪ್ರಾಧ್ಯಾಪಕ ಶರಣಪ್ಪ ಟಿ. ನಂದಿಬೇವೂರ ಅವರ ಹೆಸರನ್ನು ಸೇರಿಸಲಾಗಿದೆ. ವಿಶ್ವದ ಅತ್ಯಂತ ಪ್ರತಿಭಾಶಾಲಿಗಳನ್ನು ಜನತೆಗೆ ಪರಿಚಯ ಮಾಡಿಕೊಡುವ ಕಾರ್ಯದಲ್ಲಿ ನಿರತವಾದ ಪತ್ರಿಕೆಯಲ್ಲಿ ಡಾ. ನಂದಿಬೇವೂರರ ಹೆಸರು ಸೇರಿರುವುದು ಗಮನಾರ್ಹ.



ಡಾ. ಶರಣಪ್ಪ ನಂದಿಬೇವೂರವರು ಬಳ್ಳಾರಿ ಜಿಲ್ಲೆಯ ಹಿರೇಹಡಗಲಿ ಗ್ರಾಮದ ರೈತ ಕುಟುಂಬದಲ್ಲಿ ಜನಿಸಿದರು. ಪ್ರಾಥಮಿಕ ಅಭ್ಯಾಸವನ್ನು ಹಿರೇಹಡಗಲಿಯಲ್ಲಿಯೇ ಮುಗಿಸಿ, ನರೇಗಲ್ ಕಾಲೇಜಿನಲ್ಲಿ ಬಿ.ಎಸ್.ಸಿ. ಪದವಿಯನ್ನು ಪ್ರಥಮ ವರ್ಗದಲ್ಲಿ ಪಾಸಾಗಿ, ಮುಂದೆ ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಫಿಜಿಕಲ್ ಕೆಮಿಸ್ಟ್ರಿ ವಿಷಯ ತೆಗೆದುಕೊಂಡು ಪ್ರಥಮ ರ್‍ಯಾಂಕ್ ಸಹಿತ ಸ್ನಾತಕೋತ್ತರ ಪದವಿ ಗಿಟ್ಟಿಸಿದ್ದಾರೆ.

ಬಾಲ್ಯದಿಂದಲೇ ಪ್ರತಿಭಾವಂತ ವಿದ್ಯಾರ್ಥಿಯಾಗಿದ್ದ ಇವರು ಕುಟುಂಬದ ಮಾರ್ಗದರ್ಶನ-ಪ್ರೋತ್ಸಾಹದಿಂದ ಹಂತ-ಹಂತವಾಗಿ ಬೆಳೆದು 'ಪ್ರತಿಭಾವಂತ ವಿದ್ಯಾರ್ಥಿ' ಎನಿಸಿಕೊಂಡು ಕೇಂದ್ರ ಸರಕಾರದ ವಿದ್ಯಾರ್ಥಿ ವೇತನದಿಂದ ಪಿ.ಎಚ್.ಡಿ. ಪದವಿಯನ್ನು ೧೯೭೭ರಲ್ಲಿ ಪಡೆದರು. ನಂತರ ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಅಧ್ಯಾಪಕರಾಗಿ, ರೀಡರ್ ಆದರು, ಇತ್ತೀಚೆಗೆ ೧೯೯೬ ರಲ್ಲಿ ಫಿಜಿಕಲ್ ಕೆಮಿಸ್ಟ್ರೀಯ ಪ್ರೊಫೆಸರ್ ಆಗಿ ಬಡ್ತಿ ಹೊಂದಿ ಸೇವೆಸಲ್ಲಿಸುತ್ತಿದ್ದಾರೆ. ಇವರು ಪಿ.ಎಚ್.ಡಿ. ಪದವಿಗಾಗಿ ಅಧ್ಯಯನ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ನೀಡುತ್ತಿದ್ದಾರೆ. ಈಗಾಗಲೇ ಇವರ ಮಾರ್ಗದರ್ಶನದಲ್ಲಿ ೭ ವಿದ್ಯಾರ್ಥಿಗಳು ಡಾಕ್ಟರೇಟ್ ಪದವಿ ಪಡೆದಿದ್ದು ಇನ್ನೂ ೪ ವಿದ್ಯಾರ್ಥಿಗಳು ಮಾರ್ಗದರ್ಶನ ಪಡೆಯುತ್ತಲಿದ್ದಾರೆ.

ಇವರ ೬೫ ಸಂಶೋಧನಾ ಪ್ರಬಂಧಗಳು ಅಮೇರಿಕಾ, ಇಂಗ್ಲಂಡ್, ಪೋಲಂಡ, ಹಂಗೇರಿ, ಜರ್ಮನಿ, ಮುಂತಾದ ದೇಶಗಳಲ್ಲಿ ಪ್ರಕಟವಾಗಿ ಮೆಚ್ಚುಗೆ ಪಡೆದಿವೆ. ಅಲ್ಲದೆ ಇವರು ೧೯೯೬ ರ ಏಪ್ರಿಲ್‌ದಲ್ಲಿ ನಡೆದ 'ಇಂಡಿಯನ್ ಕೌನ್ಸಿಲ್ ಆಫ್ ಕೆಮಿಸ್ಟ್' ಚುನಾವಣೆಯಲ್ಲಿ ದಕ್ಷಿಣ ವಲಯದ ಕಾರ್ಯದರ್ಶಿಯಾಗಿ ಆಯ್ಕೆಗೊಂಡಿದ್ದಾರೆ. ಪಿಜಿ ಟೀಚರ್ಸ್ ಅಸೋಸಿಯೇಶನ್ ಚುನಾವಣೆಯಲ್ಲಿ ಕಾರ್ಯಕಾರಿ ಸದಸ್ಯರಾಗಿ ಚುನಾಯಿತರಾಗಿದ್ದಾರೆ.

ಪ್ರತಿವರ್ಷ ನಡೆಯುವ ' ಇಂಡಿಯನ್ ಕೌನ್ಸಿಲ್ ಆಫ್ ಕೆಮಿಸ್ಟ್' ಮತ್ತು ಇಂಡಿಯನ್ ಕೆಮಿಕಲ್ ಸೊಸೈಟಿಗಳ ವಾರ್ಷಿಕ ಸಮ್ಮೇಳನದಲ್ಲಿ ಕರ್ನಾಟಕ ವಿಶ್ವವಿದ್ಯಾಲಯದ ರಸಾಯನ ಶಾಸ್ತ್ರ ವಿಭಾಗದ ಪ್ರತಿನಿಧಿಯಾಗಿ ಭಾಗವಹಿಸುತ್ತಲಿದ್ದಾರೆ, ಅಲ್ಲದೆ ಇತರ ವಿಶ್ವವಿದ್ಯಾಲಯಗಳಲ್ಲಿ ಪಿ.ಎಚ್.ಡಿ. ಮಾಡುತ್ತಿರುವ ವಿದ್ಯಾರ್ಥಿಗಳ ಶೋಧ-ಸಂದರ್ಶನ ಕೂಡಾ ಮಾಡುತ್ತ ಬಂದಿದ್ದಾರೆ. ಮೊನ್ನೆಯಷ್ಟೆ ಇವರಿಗೆ 'ಹಂಗೇರಿ'ಗೆ ಗೌರವ ಪ್ರೊಫೆಸರರಾಗಿ ಉಪನ್ಯಾಸ ನೀಡಲು ಕರೆಬಂದಿದ್ದು ವಿದೇಶ ಪ್ರಯಾಣ ಬೆಳೆಸಲಿದ್ದಾರೆ.

೪೪ರ ಹರೆಯದ ಇವರು ವೃತ್ತಿಯಿಂದ ಪ್ರೊಫೆಸರ್‌ರಾದರೂ ಪ್ರವೃತ್ತಿಯಿಂದ ಸಮಾಜ ಸೇವಕರಾಗಿದ್ದಾರೆ. ಸರಳ ಪರೋಪಕಾರಿ-ಸಂಘಜೀವಿ.

○ ಸಿದ್ಧರಾಜ್ ಎಂ. ಕೆಂಭೂಳಿ

ಬಳ್ಳಾರಿ ಶಿಕ್ಷಣ ಇಲಾಖೆ ತಿಪ್ಪೆಯಲ್ಲಿ ಎಂಜಲು ತಿನ್ನುವ ನಾಯಿಗಳು

ನೀವು ಓದು ಕಲಿತು ಉದ್ಯೋಗವಿಲ್ಲದೆ ಚಡಪಡಿಸುತ್ತಿದ್ದೀರಾ? ಹಾಗಾದರೆ ನಿಮ್ಮಂತಹ ಬುದ್ಧಿಗೇಡಿಗಳು ಇನ್ನೊಬ್ಬರಿಲ್ಲ!

ನೀವು ಮನಸ್ಸು ಮಾಡಿದರೆ ಒಂದಲ್ಲ, ಎರಡು-ಮೂರು ಉದ್ಯೋಗ ಗಿಟ್ಟಿಸಿ ಎಲ್ಲೆಡೆ ಸಂಬಳ ಬಾಚುತ್ತ ಹಾಯಾಗಿರಬಹುದು. ಈ ಸವಲತ್ತು ಪಡೆಯಲು ನಿಮಗಿರಬೇಕಾದ ಏಕೈಕ ಅರ್ಹತೆಯೆಂದರೆ ನಿಮ್ಮ ತಂದೆ ಶಿಕ್ಷಣ ಇಲಾಖೆಯಲ್ಲಿ ಅಧಿಕಾರಿಯಾಗಿರಬೇಕು. ನಿದರ್ಶನಕ್ಕೆ ಈ ಕೆಳಗಿನ ಪ್ರಕರಣವನ್ನು ತೆಗೆದುಕೊಳ್ಳಬಹುದು.



ಕೆ.ಗೀತ ಎಂಬಾಕೆ ಬಳ್ಳಾರಿಯ ಸಹಾಯಕ ಶಿಕ್ಷಣಾಧಿಕಾರಿ ಕೆ.ಪುರುಷೋತ್ತಮರೆಡ್ಡಿಯ ಮಗಳು. ಈಕೆ ಮೂರು ಕಡೆ ಶಿಕ್ಷಕಿಯಾಗಿ ನೇಮಕಗೊಂಡು ಎಲ್ಲೆಡೆ ಸಂಬಳ ಪಡೆದು, ಹಗರಣ ಬೆಳಕಿಗೆ ಬಂದ ನಂತರ ಈಗ ಒಂದು ಶಾಲೆಯಲ್ಲಿ ಹುದ್ದೆ ಉಳಿಸಿಕೊಂಡು ಆರಾಮಾಗಿ ಕಾಲ ತಳ್ಳುತ್ತಿದ್ದಾಳೆ.

ಪಾತ್ರ ಒಂದು

ಕೆ.ಗೀತಳ ತ್ರಿಪಾತ್ರಾಭಿನಯದ ಸೂತ್ರದಾರ ಬೇರಾರೂ ಅಲ್ಲ, ಬಳ್ಳಾರಿಯ ಶಿಕ್ಷಣ ಕ್ಷೇತ್ರದ ದುಷ್ಟ ಕುಳ ದಕ್ಷಿಣಾಮೂರ್ತಿ. ಈ ಉಪಾಧ್ಯಾಯನಿಯ ಮೊದಲ ನೇಮಕಾತಿ ಆದದ್ದು ಉಜ್ಜನಿಯ ಉ.ಜ.ಸಿ. ಬಾಲಕಿಯರ ಪ್ರೌಢಶಾಲೆಯಲ್ಲಿ, ದಿನಾಂಕ ೩೧.೧೨.೯೦ ರಂದು ಆಗಿನ ಬಳ್ಳಾರಿಯ ಡಿ.ಡಿ.ಪಿ.ಐ. ಮಹಾಶಯ ಎಂ.ವಾಸುದೇವ ಭಟ್ ಕೆ.ಗೀತಳ ನೇಮಕಾತಿಯನ್ನು ಅನುಮೋದಿಸಿದ್ದಾರೆ. ಈಕೆ ನೇಮಕಗೊಂಡ ಸ್ಥಾನ ಚನ್ನಬಸವಸ್ವಾಮಿ ಎಂಬ. ಶಿಕ್ಷಕರನ್ನು ೨೧.೮.೮೯ರಂದು ವಜಾ ಮಾಡಿದ್ದರಿಂದ ಖಾಲಿಯಾಗಿತ್ತು. ಸಂಯುಕ್ತ ಕರ್ನಾಟಕ ದಿನಪತ್ರಿಕೆಯಲ್ಲಿ ೨೧.೫.೮೯ರಂದು ಪ್ರಕಟವಾದ ಜಾಹೀರಾತಿನಂತೆ ಕೆ.ಗೀತಾ ಶಿಕ್ಷಕಿ

ಒಬ್ಬ ವ್ಯಕ್ತಿ ಮೂರು ನೌಕರಿ!

ಹುದ್ದೆಗೆ ಅರ್ಜಿ ಸಲ್ಲಿಸಿದ್ದಳೆಂದು ನೇಮಕಾತಿ ಪತ್ರದಲ್ಲಿ ತಿಳಿಸಲಾಗಿದೆ. ಅಂದರೆ ಚನ್ನಬಸವಸ್ವಾಮಿ ವಜಾ ಆಗುವ ಮುಂಚೆಯೇ ಹುದ್ದೆ ಖಾಲಿಯಾಗಿ ಅರ್ಜಿ ಕರೆದಿದ್ದಾರೆ. ದ.ಮೂ.ದೂರದೃಷ್ಟಿಗೆ ನಮೋ ಎನ್ನಬೇಕು!

ಬೆಂಗಳೂರಿನ ಸಾರ್ವಜನಿಕ ಶಿಕ್ಷಣ ಇಲಾಖೆ ಕಚೇರಿಯವರು ೬.೭.೯೧ರಂದು ಇದೇ. ಗೀತಳನ್ನು ಉಜ್ಜನಿಯಿಂದ ಜಗಳೂರಿಗೆ ವರ್ಗಾವಣೆ ಮಾಡಿದ್ದನ್ನು ಅನುಮೋದಿಸಿದ್ದಾರೆ. ಸದರಿ ಶಿಕ್ಷಕಿ ಜಗಳೂರು ಶಾಲೆಯಲ್ಲಿ ಹಾಜರಾದಳೆ? ರಾಜೀನಾಮೆ ಸಲ್ಲಿಸಿದಳೆ? ವರ್ಗಾವಣೆಯಾದಳೆ? ಅಥವಾ ಅಂತರ್ಧಾನವಾದಳೆ? ಈ ಬಗ್ಗೆ ಯಾರಿಗೂ ಗೊತ್ತಿಲ್ಲ!

ಹುಟ್ಟಿದರೆ ಹುಟ್ಟಬೇಕು ಶಿಕ್ಷಣಾಧಿಕಾರಿ ಮಕ್ಕಳಾಗಿ!

ಪಾತ್ರ ಎರಡು

ಬಳ್ಳಾರಿಯ ಶ್ರೀ ಉ.ಜ.ಸಿ. ವಿದ್ಯಾವರ್ಧಕ ಸಂಘದ ವ್ಯವಹಾರಾಧಿಕಾರಿ ದಕ್ಷಿಣಾಮೂರ್ತಿ. ೧೪.೧೦.೯೧ರಂದು ಹೊಳಗುಂದಿಯ ಉ.ಜ.ಸಿ. ಹಿರಿಯ ಪ್ರಾಥಮಿಕ ಶಾಲೆಗೆ ಶಿಕ್ಷಕಿಯೊಬ್ಬರನ್ನು ನೇಮಿಸಿದರು. ಆಕೆ ನೀಡಿದ ವಿಳಾಸ ದಾವಣಗೆರೆಯದು. ಪರಿಶಿಷ್ಟ ಜಾತಿಗೆ ಸೇರಿದ ಈ ವ್ಯಕ್ತಿಯ ವಿದ್ಯಾರ್ಹತೆ ಪಿ.ಯು.ಸಿ. ಇಂಟರ್‌ಶಿಪ್ ಎಂದೂ ಹುಟ್ಟಿದ ದಿನಾಂಕ ೧.೬.೬೮ ಎಂದೂ ದಾಖಲಿಸಲಾಗಿದೆ. ಈ ಬಗೆಗಿನ ಪ್ರಸ್ತಾವನೆಯನ್ನು ಅನುಮೋದಿಸಿದವರು ಹಡಗಲಿಯ ಆಗಿನ ಸಹಾಯಕ ಶಿಕ್ಷಣಾಧಿಕಾರಿ ಕೆ.ಪುರುಷೋತ್ತಮರೆಡ್ಡಿ! ವಾಸ್ತವವೆಂದರೆ ಈಕೆ ಪರಿಶಿಷ್ಟ ಜಾತಿಗೆ ಸೇರಿದವಳಲ್ಲ. ಹುಟ್ಟಿದ ದಿನಾಂಕ ಹಾಗೂ ವಿದ್ಯಾರ್ಹತೆ ಎರಡೂ ಸುಳ್ಳು. ಜೊತೆಗೆ ಈಕೆ ಇದೇ ಶಿಕ್ಷಣಾಧಿಕಾರಿ ಮಗಳು ಬೇರೆ!

ಪಾತ್ರ ಮೂರು

ಶ್ರೀ ಸಿದ್ದೇಶ್ವರ ವಿದ್ಯಾಸಂಸ್ಥೆ ಸಿದ್ಧಾಪುರ, ಬಂಡಿಮೋಟು, ಬಳ್ಳಾರಿ ಇದರ ವ್ಯವಹಾರಾಧಿಕಾರಿ ದಕ್ಷಿಣಾಮೂರ್ತಿ ಕೆ.ಗೀತ ಎಂಬುವವಳನ್ನು (ಜನ್ಮ ದಿನಾಂಕ ; ೧೪.೬.೬೩) ಬಳ್ಳಾರಿ ಹಿರೇಹಾಳ ಉಕ್ಕಡದ ಉ.ಜ.ಸಿ. ಪ್ರೌಢಶಾಲೆಗೆ ನೇಮಕಾತಿ ಮಾಡಿಕೊಂಡರು. ಇದನ್ನು ಅನುಮೋದಿಸಿದ್ದು ಅದೇ ವಾಸುದೇವ ಭಟ್ ಎಂಬ ಡಿ.ಡಿ.ಪಿ.ಐ. ಈ ನೇಮಕಾತಿಗೆ ಸಂಬಂಧಿಸಿದಂತೆ ೯.೭.೯೦ರಿಂದ ೩೧.೧೨.೯೨ರ ವರೆಗಿನ ಒಟ್ಟು ೩೦ ತಿಂಗಳ ಬಾಕಿ ವೇತನ ರೂ. ೬೯,೦೦೦-೦೦ ಮುಖ್ಯೋಪಾಧ್ಯಾಯರ ಖಾತೆಗೆ ಜಮಾ ಆಗಿದೆ. ತರುವಾಯ ಜನವರಿ ೯೩ರಿಂದ ಜೂನ್ ೯೩ರ ವರೆಗೆ ಕೆ.ಗೀತ ಬಿ.ಡಿ.ಸಿ.ಸಿ. ಬ್ಯಾಂಕಿನ ಉಳಿತಾಯ ಖಾತೆ ೧೫೮೦ರ ಮೂಲಕ ಮಾಸಿಕ ವೇತನ ಪಡೆದಿದ್ದಾಳೆ. ತದನಂತರ ಈಕೆಯನ್ನು

೨೯.೬.೯೩ರಂದು ಉಜ್ಜನಿಯ ಪ್ರೌಢಶಾಲೆಗೆ ವರ್ಗಾಯಿಸಲಾಗಿದೆ. ಈಕೆ ಈ ಶಾಲೆಗೆ ಹಾಜರಾಗಿ ಕೂಡ್ಲಿಗಿಯ ಬಿಡಿಸಿಸಿ ಬ್ಯಾಂಕ್ ಖಾತೆ ೬೨೯ಗಿರ ಮೂಲಕ ವೇತನ ಪಡೆದಿದ್ದಾಳೆ.

ಹೀಗೆ ಹಗರಣಗಳ ಸರಮಾಲೆಯನ್ನೇ ಸೃಷ್ಟಿಸಿದ ಕೆ.ಗೀತಳ ಪ್ರಕರಣವನ್ನು ಪರಿಶೀಲಿಸಿದ ಆಗಿನ ಬಳ್ಳಾರಿ ಜಿಲ್ಲಾ ಪಂಚಾಯತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಐ.ಎಂ.ವಿಠಲ ಮೂರ್ತಿ ೧೬.೩.೯೪ರಂದು ಬೆಂಗಳೂರಿನ ಸಾರ್ವಜನಿಕ ಶಿಕ್ಷಣ ಇಲಾಖೆ ಆಯುಕ್ತರಿಗೆ ಪತ್ರ ಬರೆದು ಗೀತಳ ತಂದೆ ಸಹಾಯಕ ಶಿಕ್ಷಣಾಧಿಕಾರಿ ಕೆ.ಪುರುಷೋತ್ತಮರೆಡ್ಡಿಯನ್ನು ಅಮಾನತ್ತಿನಲ್ಲಿಟ್ಟು ವಿಚಾರಣೆ ನಡೆಸಲು ಕೋರಿದರು. ಅವರನ್ನು ಅಮಾನತ್ತುಗೊಳಿಸುವ ತಾಕತ್ತು ತೋರದ ಇಲಾಖೆಯವರು ಕೊನೆಗೆ ವಿಚಾರಣಾಧಿಕಾರಿಯನ್ನು ನೇಮಿಸಿ ಕೈತೊಳೆದುಕೊಂಡರು. ವಿಚಾರಣಾ ವರದಿಯಂತೆ ಸರ್ಕಾರಿ ಅಧಿಕಾರಿಯಾದ ಆರೋಪಿ ಕೆ.ಪುರುಷೋತ್ತಮ ರೆಡ್ಡಿಯವರ ವರ್ತನೆಗಳು ಸ್ವಜನಪಕ್ಷಪಾತ, ಅಧಿಕಾರ ದುರುಪಯೋಗ ಹಾಗೂ ಸರ್ಕಾರಕ್ಕೆ ವಂಚನೆಯಂತಹ ಮಹತ್ತರ ದುರ್ನಡತೆಗಳಾಗಿದ್ದು ಕರ್ನಾಟಕ ನಾಗರಿಕ ಸೇವಾ ನಿಯಮಾವಳಿ ಉಲ್ಲಂಘಿಸಿದ್ದಾರೆ. ಇದಕ್ಕಾಗಿ ಕೆ.ಪುರುಷೋತ್ತಮರೆಡ್ಡಿಯವರಿಗೆ ವೇತನ ಹಿಂಬಡ್ತಿ ವಿಧಿಸಿದ್ದಲ್ಲದೆ ಅವರು ನಿವೃತ್ತರಾಗುವವರೆಗೂ ಯಾವ ರೀತಿಯ ಸೇವಾ ಮುಂಬಡ್ತಿ ಪಡೆಯದಂತೆ ಅನರ್ಹಗೊಳಿಸಲಾಗಿದೆ.

ಅನೇಕ ಸಿಕ್ಕುಗಳನ್ನು ಒಳಗೊಂಡ ಈ ಹಗರಣದಲ್ಲಿ ಕೆ.ಪುರುಷೋತ್ತಮರೆಡ್ಡಿಯದು ಒಂದು ಪಾಲಷ್ಟೆ. ಇನ್ನುಳಿದಂತೆ ಶಿಕ್ಷಕರನ್ನು ಶೋಷಿಸುತ್ತ; ಅಧಿಕಾರಿಗಳನ್ನು ಭ್ರಷ್ಟಗೊಳಿಸುತ್ತ ಹಣ ಸಂಗ್ರಹಣೆಯ ಕಾಯಕದಲ್ಲಿ ತಲ್ಲೀನವಾಗಿರುವ ಪರಿಶಿಷ್ಟ ಜಾತಿ ಪಂಗಡಗಳ ಹಲವಾರು ಶಿಕ್ಷಣ ಸಂಸ್ಥೆಗಳಿಗೆ ಒಡೆಯನಾದ ಜಂಗಮ ಜಾತಿಯ ಎಸ್.ಎಂ.ದಕ್ಷಿಣಾಮೂರ್ತಿ ಇಂಥ ಅನೇಕ ಹಗರಣಗಳ ಸೂತ್ರದಾರನೆಂಬುದು ಸುಸ್ಪಷ್ಟ. ಆದಾಗ್ಯೂ ಈ ದುಷ್ಟಕುಳದ ಮೇಲೆ ಏಕೆ ಕ್ರಮ ಕೈಗೊಂಡಿಲ್ಲ? ಈಗಲೂ ಬಳ್ಳಾರಿ ಶಾಲೆಯಲ್ಲಿ ಶಿಕ್ಷಕಿಯಾಗಿ ಮುಂದುವರಿದಿರುವ ಕೆ.ಗೀತಳನ್ನು ಸುಮ್ಮನೆ ಬಿಟ್ಟಿರುವುದೇಕೆ? ಇಂತಹ ಹಲವು ಅನುಮಾನಗಳಿಗೆ ಗುಡುಗು ಹಾಕುವ ಗೋವಿಂದೇಗೌಡರು ಉತ್ತರಿಸಬೇಕು!

ಸಿ.ಓ.ಡಿ. ತನಿಖೆ :

ಗುಡುಗುವ ಗೋವಿಂದೇಗೌಡರೇ ಕಪಟ ನಾಟಕ ಬೇಡ!

ತೆರಿಗೆ ರೂಪದಲ್ಲಿ ಹತ್ತಾರು ಮಾರ್ಗಗಳ ಮೂಲಕ ಜನರ ಜೇಬಿಗೆ ಕೈ ಹಾಕಿ ಹಣ ಕೀಳುವ ಸರ್ಕಾರ ಮುಂದೇನು ಮಾಡುತ್ತದೆ? ನಾಡಿನ ಅಭಿವೃದ್ಧಿಗೆ ಹಲವಾರು ಕಾರ್ಯಕ್ರಮ ರೂಪಿಸಿ ಹಣ ವಿನಿಯೋಗಿಸುತ್ತದೆ.



- ಇದು ಮಕ್ಕಳು ಓದುವ ಪಾಠ.

ಆದರೆ ವಾಸ್ತವ?

ತೆರಿಗೆಯ ಹಣದ ಬಹುಪಾಲು ಭ್ರಷ್ಟರ ಜೇಬು ತುಂಬುತ್ತದೆ. ಆಕಸ್ಮಾತ್ ಹಗರಣವೊಂದು ಬಯಲಿಗೆ ಬಂದರೆ ಅಲ್ಲೊಂದು ವಿಚಾರಣೆ ಎಂಬ ಕಪಟ ನಾಟಕ.... ವರ್ಷಗಟ್ಟಲೆ ವಿಚಾರಣೆ.... ವರದಿ ಸಲ್ಲಿಕೆ.... ಕಡತ ದೂಳು ತಿನ್ನುವಿಕೆ!

ಭ್ರಷ್ಟರು ಮತ್ತೆ ತಮ್ಮ ಜಾಡಿನಲ್ಲಿ ನಡೆಯತೊಡಗುತ್ತಾರೆ.

ಇದು ನಮ್ಮೆಲ್ಲರ ಅನುಭವ!

ಈಗ ದಕ್ಷಿಣಾಮೂರ್ತಿ ಪ್ರಕರಣವನ್ನು ಇಡೀಯಾಗಿ ತನಿಖೆ ಮಾಡಲು ಸಿ.ಓ.ಡಿ.ಗೆ. ಒಪ್ಪಿಸಲಾಗಿದೆ. ಸಿ.ಓ.ಡಿ. ಅಧಿಕಾರಿಗಳು ತನಿಖೆಯನ್ನು ಈಗಾಗಲೇ ಕೈಗೆತ್ತಿಕೊಂಡಿದ್ದಾರೆ.

ಮುಂದೆ?

ಪ್ರಾಮಾಣಿಕತೆ, ದಕ್ಷತೆ ಬಗ್ಗೆ ವೀರಾವೇಶದ ಮಾತನಾಡುವ ಶಿಕ್ಷಣ ಮಂತ್ರಿ ಗೋವಿಂದೇಗೌಡರೇ ಎಚ್ಚರದಿಂದ ಗಮನಿಸಿ : **ಈ ತನಿಖೆಯೂ ಒಂದು ಕಪಟ ನಾಟಕವಾಗದಿರಲಿ!**

ಕೋಡಂಗಿ ಪರಮೇಶ್ವರಪ್ಪ ನುಂಗಿದ್ದೆಷ್ಟು?

ಒಬ್ಬ ಶಿಕ್ಷಕನ ನೇಮಕಾತಿ ಆಗುತ್ತದೆ. ಆತ ಸರ್ಕಾರ ನೀಡುವ ಅನುದಾನದ ಹಣದಲ್ಲಿ ಮಾಸಿಕ ವೇತನವನ್ನು ಪಡೆಯುತ್ತಾನೆ. ಇವೆಲ್ಲಾ ದಾಖಲೆಯಲ್ಲಿ ಮಾತ್ರ! ವಾಸ್ತವದಲ್ಲಿ ಆ ಶಿಕ್ಷಕನಿಗೆ ಉದ್ಯೋಗ ಸಿಕ್ಕಿದ್ದೇ ಗೊತ್ತಿರುವುದಿಲ್ಲ. ಒಂದು ನಯಾ ಪೈಸೆ ವೇತನವೂ ಕೈಗೆ ಹತ್ತಿರುವುದಿಲ್ಲ! ಇದು ದಕ್ಷಿಣಾಮೂರ್ತಿ ಚಮತ್ಕಾರದ ಸಣ್ಣ ಸ್ಯಾಂಪಲ್ಲು!

ಬಳ್ಳಾರಿಯ ದಕ್ಷಿಣಾಮೂರ್ತಿ ಕೃಪಾ ಪೋಷಿತ ನಾಟಕದಲ್ಲಿ ಪರಮೇಶ್ವರಪ್ಪ ಎಂಬ ಕೋಡಂಗಿಯ ಪಾತ್ರ ಅತಿ ವಿಶಿಷ್ಟವಾದುದು. ಒಡೆಯನ ಕುತಂತ್ರಭರಿತ ವರಸೆಗಳನ್ನು ಸಲೀಸಾಗಿ ಅನುಸರಿಸುತ್ತಿರುವ ಪರಮೇಶ್ವರಪ್ಪ ಕೂಡ್ಲಿಗಿ ತಾಲೂಕಿನ ಹೊಸಹಳ್ಳಿ ಪ್ರೌಢಶಾಲೆಯ ಮುಖ್ಯೋಪಾಧ್ಯಾಯ. ಈತ ಪ್ರಮುಖ ಪಾತ್ರದಲ್ಲಿ ಅಭಿನಯಿಸಿದ 'ಲಂಚಾವತಾರ' ನಾಟಕದ ಒಂದು ಪ್ರಸಂಗ ಇಂತಿದೆ :

ಮರಿಯಮ್ಮನಹಳ್ಳಿಯ ಶ್ರೀ ಉ.ಜ.ಸಿ. ಪ್ರೌಢಶಾಲೆಗೆ ಮುಖ್ಯೋಪಾಧ್ಯಾಯರನ್ನಾಗಿ ನೇಮಿಸುವುದಾಗಿ ಆಸೆ ತೋರಿಸಿದ ದುಷ್ಟ ದಕ್ಷಿಣಾಮೂರ್ತಿ ಬಿ. ಹುಲುಗಪ್ಪ ಎಂಬ ವಾಲ್ಮೀಕಿ ಜನಾಂಗದ ಶಿಕ್ಷಕರಿಂದ ವಿದ್ಯಾರ್ಹತೆಯ ಪ್ರಮಾಣಪತ್ರ ಪಡೆದುಕೊಂಡ. ಕೊನೆಗೆ ಹುಲುಗಪ್ಪನ ನೇಮಕಾತಿ ಆದದ್ದು ಸಂಬಳವಿಲ್ಲದ! ಶಾಲೆಗೆ. ಬಡಪಾಯಿ ಶಿಕ್ಷಕ ದಕ್ಷಿಣಾಮೂರ್ತಿಯ ಆದೇಶದಂತೆ

೧.೬.೯೦ ರಿಂದ ೧೦.೪.೯೩ರ ತನಕ ವೇತನವಿಲ್ಲದೆ ದುಡಿದು ದುಃಖಿಸಿದ. ಈ ಶಿಕ್ಷಕ ಈ ಅವಧಿಯಲ್ಲಿ ಮರಿಯಮ್ಮನಹಳ್ಳಿ ಪ್ರೌಢಶಾಲೆಯಲ್ಲಿ ಕೆಲಸ ಮಾಡಿದ ಬಗ್ಗೆ ಸ್ವತಃ ದಕ್ಷಿಣಾಮೂರ್ತಿಯೇ ಸೇವಾ ಪ್ರಮಾಣ ಪತ್ರ ನೀಡಿದ್ದಾನೆ.

ಇತ್ತ ಇನ್ನೊಂದೆಡೆ ದುಷ್ಟ ದಕ್ಷಿಣಾಮೂರ್ತಿ ತನ್ನ ಕುತಂತ್ರ ಬಳಸಿ ಕೂಡ್ಲಿಗಿ ತಾಲ್ಲೂಕಿನ ಹೊಸಳ್ಳಿ ಪ್ರೌಢಶಾಲೆಯಲ್ಲಿ ಇದೇ ಹುಲುಗಪ್ಪನನ್ನು ಸಹಶಿಕ್ಷಕನನ್ನಾಗಿ ನೇಮಿಸಿದ. ಅನುದಾನ ಸಿಗುವ ಈ ಶಾಲೆಯಲ್ಲಿ ಈ ಹೆಸರಿನ ಶಿಕ್ಷಕರ ನೇಮಕಾತಿಗೆ ಅನುಮೋದನೆಯನ್ನೂ ಗಿಟ್ಟಿಸಿದ. ಮರಿಯಮ್ಮನಹಳ್ಳಿಯ ಶಾಲೆಯಲ್ಲಿ ವೇತನವಿಲ್ಲದೆ ದುಡಿಯುತ್ತಿದ್ದ ಹುಲುಗಪ್ಪನಿಗೆ ಈ ನೇಮಕಾತಿಯ ವಿಷಯವೇ ಗೊತ್ತಿಲ್ಲದಂತೆ ನೋಡಿಕೊಳ್ಳಲಾಯಿತು. ದುಷ್ಟ ಯೋಜನೆಯ ಮುಂದಿನ ಭಾಗವಾಗಿ ಹೊಸಳ್ಳಿ ಪ್ರೌಢ ಶಾಲೆಯ ಮುಖ್ಯೋಪಾಧ್ಯಾಯ ಪರಮೇಶ್ವರಪ್ಪನವರು ಹುಲುಗಪ್ಪನ ಹೆಸರಿನಲ್ಲಿ ಸುಳ್ಳು ರಶೀದಿ ಸೃಷ್ಟಿಸಿ ೧.೬.೯೦ ರಿಂದ ೧೦.೪.೯೩ರ ವರೆಗಿನ ಒಟ್ಟು ವೇತನ ೬೩,೪೬೧ ರೂ.ಗಳನ್ನು ಲಪಟಾಯಿಸಿದ್ದಾರೆ.

ಈ ಬಗ್ಗೆ ಬಳ್ಳಾರಿಯ ಡಿ.ಡಿ.ಪಿ.ಐ.ಯವರು ೬.೬.೯೭ರಂದು ಮುಖ್ಯೋಪಾಧ್ಯಾಯರಾದ ಪರಮೇಶ್ವರಪ್ಪಗೆ ಈ ಕೆಳಗಿನ ವಿಷಯಗಳ ಬಗ್ಗೆ ಕಾರಣ ಕೇಳಿ ನೋಟೀಸ್ ಜಾರಿ ಮಾಡಿದ್ದಾರೆ:

೧. ದಿನಾಂಕ: ೩೧.೧೨.೯೨ರಂದು ನಗದು ಪುಸ್ತಕದಲ್ಲಿ ಶ್ರೀ ಹುಲುಗಪ್ಪ ಸಹಾಯಕ ಶಿಕ್ಷಕರು ಇವರ ವೇತನ ರೂ. ೬೫,೦೩೯ ಗಳನ್ನು ಯಾವ ಆಧಾರದ ಮೇಲೆ ಡ್ರಾ ಮಾಡಲಾಗಿದೆ.

೨. ಸದರಿ ಶಿಕ್ಷಕರು ದಿನಾಂಕ : ೧.೬.೯೦ ರಿಂದ ೧೦.೪.೯೩ರ ವರೆಗೆ ಮರಿಯಮ್ಮನಹಳ್ಳಿಯ ಶ್ರೀ ಉ.ಜ. ಬಾಲಕೀಯರ ಪ್ರೌಢ ಶಾಲೆಯಲ್ಲಿ ಮುಖ್ಯ ಗುರುಗಳಾಗಿ ಸೇವೆ ಸಲ್ಲಿಸುತ್ತಿದ್ದುದು ಕಂಡು ಬಂದಿದೆ. ಆದರೆ ಈ ಅವಧಿಯಲ್ಲಿ ಸರ್ಕಾರಕ್ಕೆ ವಂಚಿಸಿ ಸದರಿಯವರ ವೇತನವನ್ನು ಡ್ರಾ ಮಾಡಿ ನಗದು ಪುಸ್ತಕಕ್ಕೆ ಜಮಾ ತೆಗೆದುಕೊಂಡಿರುವುದು ಕಂಡು ಬಂದಿದೆ.

೩. ಈ ಮೊತ್ತದಲ್ಲಿ ರೂ.೬೩,೪೬೧ ಗಳನ್ನು ಸದರಿ ಶಿಕ್ಷಕರಿಗೆ ಪಾವತಿ ಮಾಡಲಾಗಿದೆ ಎಂದು ತಿಳಿಸಿದ್ದೀರಿ. ಆದರೆ ಸದರಿ ಶಿಕ್ಷಕರು ನೀಡಿದ ಪಾವತಿ ರಸೀದಿಯ ಸಹಿಗೂ ಮತ್ತು ಅರ್ಜಿಯಲ್ಲಿ ಬರೆದ ಮಾದರಿ ಸಹಿಗೂ ತಾಳೆಯಾಗುವುದಿಲ್ಲ. ಇದರ ಆಧಾರದಿಂದ ನೀವು ಸದರಿಯವರ ಸಹಿಯಂತೆ ನಕಲು ಸಹಿ ಮಾಡಿ ದಾಖಲುಗಳನ್ನು ತಯಾರಿಸಿರುವುದು ಕಂಡು ಬರುತ್ತದೆ.

೪. ಸದರಿ ಶಿಕ್ಷಕರು ತಮ್ಮ ಶಾಲೆಯಲ್ಲಿ ಕಾರ್ಯನಿರ್ವಹಿಸಿರುವಂತೆ ಯಾವುದೇ ದಾಖಲೆಗಳು ಇರುವುದಿಲ್ಲವೆಂದು ಕ್ಷೇತ್ರ ಶಿಕ್ಷಣಾಧಿಕಾರಿಗಳು ವರದಿ ಮಾಡಿರುತ್ತಾರೆ. ಆದಾಗ್ಯೂ ನೀವು ಸದರಿ ಶಿಕ್ಷಕರ ವೇತನವನ್ನು ಪಡೆಯಲು ಯಾರು ತಮಗೆ ಅಧಿಕಾರ ನೀಡಿರುತ್ತಾರೆ? ಈ ಬಗ್ಗೆ ತಮ್ಮ ವಿವರಣೆ ನೀಡುವುದು.

೫. ಈ ಬಗ್ಗೆ ಇರುವ ಎಲ್ಲ ದಾಖಲೆಗಳನ್ನು ಆಡಳಿತ ಮಂಡಳಿಗೆ ಒಪ್ಪಿಸಲಾಗಿದೆ ಎಂದು ಹೇಳಿರುತ್ತೀರಿ. ಆದರೆ ಶಾಲೆಯ ದಾಖಲೆಗಳನ್ನು ಆಡಳಿತ ಮಂಡಳಿಗೆ ಒಪ್ಪಿಸಲು ಈ ಕಛೇರಿಯಿಂದಾಗಲೀ ಅಥವಾ ಸದರಿ ಮಂಡಳಿಯವರ ಆದೇಶವಾಗಲೀ ಇದೆಯೇ? ಇದ್ದಲ್ಲಿ ಸಲ್ಲಿಸಲು ಸೂಚಿಸಿದೆ ಮತ್ತು ಸದರಿ ವಹಿಗಳು ಹಾಗೂ ದಾಖಲೆಗಳು ಏಕೆ ಹಿಂದಕ್ಕೆ ಪಡೆದಿಲ್ಲವೆಂಬುದಕ್ಕೆ ನಿಮ್ಮ ಸಮಜಾಯಿಷಿ ಸಲ್ಲಿಸುವುದು.

೬. ತಾವು ಒಬ್ಬ ಮುಖ್ಯ ಗುರುಗಳಾಗಿ ಸಮಾಜದ ದೃಷ್ಟಿಯಲ್ಲಿ ಒಬ್ಬ ಗೌರವಾನ್ವಿತ ಪದವಿಯನ್ನು ಹೊಂದಿದ್ದು ತಾವು ಈ ರೀತಿ ಸರ್ಕಾರಕ್ಕೆ ವಂಚಿಸಿ ರೂ.೬೫,೦೩೯ಗಳನ್ನು ಡ್ರಾ ಮಾಡಿರುವುದಕ್ಕೆ ತಮ್ಮ ವಿವರಣೆ ನೀಡುವುದು.

ಒಂದು ವಾರದೊಳಗೆ ಸಮಜಾಯಿಷಿ ನೀಡುವಂತೆ ಕೇಳಿದ ಈ ನೋಟೀಸ್ 'ಡಮಾರ್' ಎನ್ನುವುದೋ 'ಟೆಸ್' ಎನ್ನುವುದೋ ಕಾದು ನೋಡಬೇಕು. ●

ದುಷ್ಟ ದಕ್ಷಿಣಾಮೂರ್ತಿ !

ಬಳ್ಳಾರಿ ಹೊರವಲಯದಲ್ಲಿ ಗುಗ್ಗರಹಟ್ಟಿ ಎಂಬ ಕುಗ್ರಾಮದಲ್ಲಿ ಬೃಹತ್ ಕಟ್ಟಡವೊಂದು ಕಣ್ಣಿಗೆ ರಾಚುತ್ತದೆ. ಇದರ ಒಡೆಯ ದಕ್ಷಿಣಾಮೂರ್ತಿ ಎಂಬ ಶರಣ. ಈತ ಈ ಕಟ್ಟಡದಲ್ಲಿ ವೈದ್ಯಕೀಯ ಕಾಲೇಜು ಸ್ಥಾಪಿಸಬೇಕೆಂದು ಹೊಂಚು ಹಾಕಿ ಕೂತಿದ್ದಾನೆ. ಈ ಕಟ್ಟಡದ ಪ್ರತಿಯೊಂದು ಇಟ್ಟಿಗೆಯೂ ಈತನ ಭ್ರಷ್ಟ ಚಟುವಟಿಕೆಗಳ, ವಂಚಕ ಪ್ರವೃತ್ತಿಯ ಕಥೆ ಹೇಳುತ್ತವೆ.



ವೀರಶೈವ ಜಂಗಮ ಜಾತಿಯ ಈ ಧುರುಳ ದಕ್ಷಿಣಾಮೂರ್ತಿ ಪಂಚಪೀಠಾಧಿಪತಿಗಳಲ್ಲಿ ಒಬ್ಬರಾದ ಉಜ್ಜಯಿನಿ ಜಗದ್ಗುರುವಿನ ಸಹೋದರನ ಮಗ. ಈತನ ಹಣೆಯಲ್ಲಿ ಶಿಕ್ಷಕರ ಸಂಸಾರಗಳನ್ನು ದಹಿಸಿದ ಭಸ್ಮ ಸದಾ ಪ್ರಜ್ವಲಿಸುತ್ತಿರುತ್ತದೆ. ಹಲವು ಒಳದಾರಿಗಳಿಂದ ತನ್ನತ್ತ ಹಣದ ಹೊಳೆ ಹರಿಸಿಕೊಂಡ ಈತ ಈಗ ವೀರಶೈವರ ಪೀಠಕ್ಕೆ ಉತ್ತರಾಧಿಕಾರಿ ನೇಮಿಸುವಷ್ಟು ಪ್ರಭಾವಶಾಲಿ!

ಪರಿಶಿಷ್ಟ ಜಾತಿ ಪಂಗಡದವರಿಗೆ ಸರಕಾರ ನೀಡಿದ ನೆರವನ್ನು ದುರುಪಯೋಗ ಪಡಿಸಿಕೊಳ್ಳುವ ಕಲೆಯನ್ನೂ ಕರಗತ ಮಾಡಿಕೊಂಡಿರುವ ಈತ ಪರಿಶಿಷ್ಟ ಜಾತಿ ಪಂಗಡಗಳ ಹೆಸರಿನ ಹಲವಾರು ಶಿಕ್ಷಣ ಸಂಸ್ಥೆಗಳ ಅಧಿಪತಿ. ಬಳ್ಳಾರಿ, ಚಿತ್ರದುರ್ಗ, ಧಾರವಾಡ, ಚಿಕ್ಕಮಗಳೂರು, ಬೆಂಗಳೂರು ಜಿಲ್ಲೆಗಳಲ್ಲಿ ಹಲವಾರು ಶಾಲೆ ಕಾಲೇಜುಗಳನ್ನು ಹಬ್ಬಿಸಿ ಸಾವಿರಕ್ಕೂ ಅಧಿಕ ನೌಕರರನ್ನು ನಿಯಂತ್ರಿಸುತ್ತಿದ್ದಾನೆ.

ದಕ್ಷಿಣಾಮೂರ್ತಿಯ ಹೆಂಡತಿ ಲಲಿತಾಕ್ಷಿ ಶಾಲೆಗೆ ಕಾಲಿಡದೆ ಸಂಬಳ ಪಡೆಯುವ ಶಿಕ್ಷಕಿ. ಈತನ ಅಕ್ರಮ ಗಳಿಕೆಯ ಬಹು ಭಾಗ ಹೆಂಡತಿ ಹಾಗೂ ಹಿರಿಯ ಮಗ ಎಸ್.ಎಂ.ಶಿವಕುಮಾರನ ಹೆಸರಿನಲ್ಲಿದೆ.

ಈತನ ಚಟುವಟಿಕೆಗಳ ಸಮಗ್ರ ತನಿಖೆಯಾಗಿ ಸತ್ಯ ಸಂಗತಿಗಳೆಲ್ಲ ಹೊರಗೆ ತೇಲಿದರೆ ಎಷ್ಟು ಅಧಿಕಾರಿಗಳು ಕಂಬಿ ಎಣಿಸುತ್ತಾರೋ! ಎಷ್ಟು ರಾಜಕಾರಣಿಗಳ ಬಣ್ಣ ಬಯಲಾಗುತ್ತದೋ!

ಸೀಟಿನ ರೇಟು

ಎಂ.ಎಸ್.ನರಸಿಂಹಮೂರ್ತಿ

ವಿಶ್ವ ದಿನಪತ್ರಿಕೆ ಹಿಡಿದು ಕುಳಿತಿದ್ದಾಗ ಪಕ್ಕದ ಬೀದಿಯ ಪರಂಧಾಮಯ್ಯ ತನ್ನ ಪಿ.ಯು.ಸಿ. ಮಗಳನ್ನು ಕರೆದುಕೊಂಡು ಬಂದು ಅವಳ ಕೈಲಿ ವಿಶ್ವನಿಗೆ ನಮಸ್ಕಾರ ಮಾಡಿಸಿದ.

''ಬನ್ನಿ ಧಾಮಯ್ಯ, ಈಕೆ ನಿಮ್ಮ ಮಗಳಲ್ವೆ?''

''ಹೌದು ಅಂಕಲ್, ನಾನು ಡಾಲಿ. ಒಂದ್ಸಲ ನಿಮ್ಮನ್ನ ಕಚ್ಚಿಬಿಟ್ಟಿದ್ದೆ, ನೆನಪಿದೆಯಾ?''

''ಯಾವಾಗ್ರಿ?'' ಎಂದಳು ವಿಶಾಲೂ.

''ನೆನಪಿಲ್ಲ ಕಣೆ'' ಎಂದ ವಿಶ್ವ ಡಾಲಿಯತ್ತ ನೋಡಿ ನಕ್ಕು, ''ಈಗ ಮತ್ತೆ ಅದೇ ಕೆಲಸಕ್ಕೆ ಬಂದಿಲ್ಲ ತಾನೇ?'' ಎಂದ!

''ವಿಶ್ವ, ನನ್ನ ಮಗಳು ಎಸ್ಸೆಸ್ಸೆಲ್ಸೀಲಿ ಸೆಂಟರ್‌ಗೇ ಫಸ್ಟು. ಶೇ.80 ತಗೊಂಡಿದ್ದಾಳೆ. ನಿನಗೆ ತುಂಬಾ ಕಾಲೇಜ್‌ಗಳು ಗೊತ್ತಿವೆ ಅಂತ ನನಗೆ ಗೊತ್ತು''

''ಹೌದು, ನಾನು ಭಾಷಣ ಮಾಡೋಕೆ ಹೋಗ್ತಾ ಇರ್ತೀನಿ'' ಎಂದ ವಿಶ್ವ ಹೆಮ್ಮೆಯಿಂದ.

''ನನ್ನ ಮಗಳಿಗೆ ಒಂದು ಸೀಟು ಕೊಡಿಸು ವಿಶ್ವ, ಮುಂದಿನ ಬೆಂಚೇ ಆಗಬೇಕು ಅಂತಿಲ್ಲ, ಮಧ್ಯೆ ಅಥವಾ ಕಡೇಲಿರೋ ಬೆಂಚ್ ಆದ್ರೂ ಸಾಕು''

''ಎಲ್ಲೆಲ್ಲಿ ಟ್ರೈ ಮಾಡಿದ್ದೀರ?''

''ಎ.ಎಂ.ಎಸ್. ಕಾಲೇಜಿಗೆ ಹೋಗಿದ್ವಿ, ಬಾಗಿಲಲ್ಲೇ ವಾಚ್‌ಮನ್ ಇದ್ದ. ಎಷ್ಟು ಪರ್ಸೆಂಟು ಅಂದ. ಹೆಮ್ಮೆಯಿಂದ 80 ಅಂದೆ. ಅದಕ್ಕವನು ನಡೀರಿ ಆಚೆ ಅಂತ ಕಳಿಸಿಬಿಟ್ಟ, ಒಳಗೆ ಬಿಡಲೇ ಇಲ್ಲ.''

''ಯಾಕಂತೆ?''

''ಅಲ್ಲ 100ಕ್ಕೆ 102, 103 ತಗೊಂಡ ಮಂದೀಗೆ ಮಾತ್ರ ಸೀಟಂತೆ''

''ಸೆಂಟರ್‌ಗೆ ಫಸ್ಟ್ ಅಂತ ಹೇಳಬೇಕಿತ್ತು''

''ಹೇಳ್ದೆ. ಎಲ್ಲರೂ ಫೈಲಾದ ಸೆಂಟರ್‌ನಲ್ಲಿ ಮೂವತ್ತನಾಲ್ಕು ಅಂಕ ತಗೊಂಡವರೇ ಸೆಂಟರ್‌ಗೆ ಫಸ್ಟ್ ಆಗ್ತಾರೆ ಅಂತ ವಾಚ್‌ಮನ್ ದಬಾಯಿಸಿದ''

''ಅಂಕಲ್, ನಿಮ್ಮನ್ನೇ ನಂಬಿದ್ದೀನಿ'' ಎಂದು ಡಾಲಿ ಹತ್ತಿರ ಬಂದಳು. ಅವಳು ಕಚ್ಚಿದರೆ ಕಷ್ಟ ಎಂದು ಬೆಚ್ಚಿದ ವಿಶ್ವ, ''ಆಗಲಿ, ಟ್ರೈ ಮಾಡ್ತೀನಿ'' ಎಂದ.

''ರೀ, ಅರಳೇಕೊಪ್ಪ ಅರ್ಜುನರಾವ್ ಪ್ರೊಫೆಸರ್ ಆಗಿದ್ದಾರಲ್ಲ ಅವರಿಗೆ ಹೇಳಿ'' ಎಂದಳು ವಿಶಾಲೂ. ''ರಟ್ಟಿಹಳ್ಳಿ ರೇವಣಯ್ಯ ಸಹ ಸಹಾಯ ಮಾಡ್ತಾರೆ'' ಎಂದು ಇನ್ನೊಂದು ಹೆಸರು ಸೂಚಿಸಿದಳು.

ಅಷ್ಟರಲ್ಲಿ ಪರಂಧಾಮಯ್ಯ ಮಾತಾಡಿದ.

''ಅಲ್ಲೆಲ್ಲ ಟ್ರೈ ಮಾಡಿದ್ದಾಯ್ತಮ್ಮ, ಸಿಗಲಿಲ್ಲ''

''ನಮ್ಮ ಯಜಮಾನರ ಹೆಸರು ಹೇಳಿದರೆ ಸಿಗುತ್ತ'' ಎಂದು ವಿಶಾಲೂ ವಿಶ್ವನನ್ನು ಉಬ್ಬಿಸಿದಳು.

''ಕ್ಷಮಿಸಬೇಕು ನೀವು. ನಿಮ್ಮ ಯಜಮಾನರಿಗೆ ಯಾವ ಯಾವ ಕಾಲೇಜಿನವರು ಗುರುತು ಅಂತ ನನಗೆ ಗೊತ್ತಿದೆ ವಿಶಾಲಾಕ್ಷಮ್ಮ. ಅಲ್ಲೆಲ್ಲ ಹೋಗಿ 'ವಿಶ್ವ' ಕಳಿಸಿದ್ದು ಅಂತಾನೇ ಹೇಳಿದೆ. ಆದರೂ ಪ್ರಯೋಜನ ಆಗಲಿಲ್ಲ''



ತನಗೇ ತಿಳಿಯದೆ ತನ್ನ ಹೆಸರು ಎಲ್ಲಾ ಕಡೆ ಹೇಳುತ್ತಿದ್ದಾನಲ್ಲ ಈ ಮನುಷ್ಯ ಎಂದು ವಿಶ್ವ ಸಿಟ್ಟಾದ. ಇದು ತಪ್ಪು ಎಂದು ಅವನಿಗೆ ಹೇಗೆ ತಿಳಿಸುವುದು?

''ಪರಂಧಾಮಯ್ಯ, ನನ್ನ ಒಂದು ಮಾತು ಕೇಳಿ ನೀವು ನನ್ನ ಹೆಸರು ಬಳಸಬೇಕಿತ್ತು'' ಎಂದ ಖಾರವಾಗಿ.

''ನಿನಗೆ ಇಪ್ಪತ್ತೆಂಟು ಕೆಲ್ಸ ಇರುತ್ತೆ, ಯಾಕೆ ತೊಂದರೆ ಕೊಡಬೇಕು ಅಂತ ನಾನೇ ಹೋಗಿದ್ದೆ''

ಫೋನು ಶಬ್ದವಾಯಿತು. ವಿಶ್ವ ಅತ್ತ ಸರಿದು ರಿಸೀವರ್ ಹಿಡಿದು ''ಹಲೋ'' ಎಂದ.

''ಎ.ಎಂ.ಎಸ್.ಕಾಲೇಜಿಂದ ಮಾತಾಡೋದು. ನಮ್ಮ ವಾಚ್‌ಮನ್ ನಿಮ್ಮ ಪಾರ್ಟೀ ಒಬ್ಬರನ್ನು ವಾಪಸ್ ಕಳಿಸಿದನಂತೆ. ವೆರ್ರಿಸ್ಸಾರಿ. ಅವರನ್ನು ಕಳಿಸಿ. ಸೀಟು ಕೊಡ್ತೀವಿ''

''ಆಯ್ತು, ಇವತ್ತೇ ಬರ್ತಾರೆ. ಡಾಲಿ ಅಂತ ಹೆಸರು 80 ಪರ್ಸೆಂಟ್ ಬಂದಿದೆ''

''100ಕ್ಕೆ ಎಷ್ಟು ಪರ್ಸೆಂಟ್ ಕಮ್ಮಿ ಬಂದ್ರೆ ಅಷ್ಟು ಸಾವಿರ ಡೊನೇಷನ್ ಕಟ್ಟಬೇಕು. ನಿಮ್ಮ ಡಾಲಿ 20 ಸಾವಿರ''

''ಆಗಬಹುದು. ಹೇಳ್ತೀನಿ''

''ಆದ್ರೆ ಒಂದು ಕಂಡೀಷನ್. ನನ್ನ ಮಗನಿಗೆ ನಿಮ್ಮ ಆಫೀಸಲ್ಲಿ ಒಂದು ಟೆಂಪೊರರಿ ಕೆಲ್ಸ ಕೊಡಿಸಬೇಕು''

ವಿಶ್ವ ಫೋನ್ ಇಟ್ಟ. ಡಾಲಿಗೆ ಆನಂದ, ಆಶ್ಚರ್ಯ.

''ಸಿಕ್ತಾ ಅಂಕಲ್?''

''ಆಗೊಲ್ಲ ಅಂದ್ರು. ಬೇರೆ ಕಡೆ ನೋಡೋಣ ಬಿಡಿ'' ಎಂದು ಸುಳ್ಳು ಹೊಡೆದ ವಿಶ್ವ ಸುಮ್ಮನಾದ.

●

ಗರ್ಭಿಣಿಯರಿಗೆ ಕಿವಿಮಾತು

ಸ್ತ್ರೀಯು ಗರ್ಭಿಣಿಯಾದಾಗ ಅವಳಿಗೆ ಹಲವಾರು ತೊಂದರೆಗಳು ಬರಬಹುದು. ಇರುವ ಸಾಮಾನ್ಯ ತೊಂದರೆಗಳು ತೀವ್ರವಾಗಿ ಅವೇ ಹೆಚ್ಚು ಕಾಡಿಸಬಹುದು. ಇನ್ನೊಂದು ಜೀವ ದೇಹದಲ್ಲಿ ಬೆಳೆಯುತ್ತಿರುವಾಗ ದೇಹದಲ್ಲಿ ಹಲವಾರು ಬದಲಾವಣೆಯಾಗುತ್ತವೆ. ದೇಹದ ತೂಕ ಹೆಚ್ಚುತ್ತದೆ. ಗರ್ಭಾಂಶಯ ಭಾರವಾಗುತ್ತದೆ. ಗರ್ಭಾಶಯ ಬೆಳೆಯುವದರಿಂದ ಜಠರದ ಮೇಲೆ ಒತ್ತಡ ಬೀಳುತ್ತದೆ. ಸದಾಕಾಲ ಭಾರ ಹೊರುವುದರಿಂದ ಬೆನ್ನಿಗೆ ಒತ್ತಡ ಆಗುತ್ತದೆ.

ಬೆನ್ನುನೋವು : ಬೆನ್ನುನೋವು ಗರ್ಭಿಣಿಯಲ್ಲದವರಲ್ಲಿಯೂ ಸಹಿತ ಸರ್ವೇಸಾಮಾನ್ಯವಾಗಿ ಕಾಣಿಸಿಕೊಳ್ಳುತ್ತದೆ. ಗರ್ಭಿಣಿಯರಂತೂ ಗರ್ಭದ ಹೆಚ್ಚಿನ ಭಾರ ಹೊರುವುದರಿಂದ ಬೆನ್ನು ನೋವು ಬಂದೇ ಬರುತ್ತದೆ. ಹೆರಿಗೆಯ ದಿನ ಹತ್ತಿರ ಬಂದಂತೆ ಭಾರ ಹೆಚ್ಚಾಗುತ್ತ

> ***ಇವು ಸಾಮಾನ್ಯ ಸಂದರ್ಭದಲ್ಲಿ ಸಹಜ ತೊಂದರೆಗಳು ನಿಜ. ಆದರೆ ಗರ್ಭಿಣಿಯರು ಇವುಗಳನ್ನು ನಿರ್ಲಕ್ಷಿಸಿದರೆ ಅಪಾಯ ಆಹ್ವಾನಿಸಿದಂತೆಯೇ!***



ಹೋಗುತ್ತದೆ. ಅವಳಿ ತ್ರಿವಳಿಗಳಲ್ಲಿ, ಮಗುವಿನ ಸುತ್ತಲಿರುವ ಗರ್ಭದ್ರವ ಹೆಚ್ಚಾದಾಗ, ಮಗುವೇ ೪ ಕೆ.ಜಿ.ಯಷ್ಟು ದೊಡ್ಡದಿದ್ದಾಗ ಭಾರ ಇನ್ನೂ ಹೆಚ್ಚಾಗುತ್ತದೆ. ಈ ಬೆನ್ನುನೋವು ನಡೆದಾಗ, ಬಾಗಿದಾಗ, ಭಾರ ಎತ್ತಿದಾಗ, ಆಯಾಸವಾದಾಗ ಹೆಚ್ಚಾಗುತ್ತದೆ.

ಬಸಿರು ಇರುವಾಗ ರಿಲ್ಯಾಕ್ಸಿನ್ ಎಂಬ ರಸದೂತವು ಉತ್ಪತ್ತಿಯಾಗುತ್ತದೆ ಈ ರಸದೂತದಿಂದ ಕೀಲುಗಳು (Relax) ಸಡಿಲವಾಗುತ್ತದೆ. ಇದರಿಂದ ಕಟಿ ಪ್ರದೇಶದ ಕೀಲುಗಳು, ಬೆನ್ನುಕೀಲುಗಳು, ಸಡಿಲುಗೊಂಡು, ಕೆಲವರಲ್ಲಿ ನಡೆಯುವಾಗ ಸಹ ಬದಲಾವಣೆ ಕಾಣಬಹುದು. ಇವೆಲ್ಲವುಗಳಿಂದ ಬೆನ್ನುನೋವು ಹೆಚ್ಚು - ಹೆಚ್ಚಾಗಿ ಕಾಣಿಸಬಹುದು. ವಿಶ್ರಾಂತಿ ತೆಗೆದುಕೊಂಡರೆ ಕಡಿಮೆಯಾಗುತ್ತದೆ.

ನರಉಬ್ಬುಗಳು : ಕಾಲಿನ ಮೇಲೆ ಬಹಳ ಹೊತ್ತು ನಿಲ್ಲುವವರಲ್ಲಿ ನರ ಉಬ್ಬುಗಳನ್ನು (Uaricosities) ಕಾಣುತ್ತೇವೆ. ಆದರೆ ಬಸಿರು ಇರುವಾಗ ಈ ಉಬ್ಬುಗಳ ಮೇಲೆ ಗರ್ಭಾಶಯದ ಭಾರಬಿದ್ದು ಹೆಚ್ಚು ದಪ್ಪಗೆ ಕಾಣುತ್ತವೆ. ಈ ಉಬ್ಬುಗಳು ಗರ್ಭದ ಭಾರ ಹೆಚ್ಚಿದಂತೆ, ದಿನ ಹೆಚ್ಚಾದಂತೆ, ನಿಲ್ಲುವ ವೇಳೆ ಜಾಸ್ತಿಯಾದಂತೆ ಹೆಚ್ಚು ಕಾಣುತ್ತವೆ. ಸಂಜೆಯ ಹೊತ್ತು ಬಂದಂತೆ ಗರ್ಭಸ್ಥ ಸ್ತ್ರೀಗೆ ಈ ತೊಂದರೆ ಬಹಳವೆನಿಸುತ್ತದೆ. ತೀರ ಕ್ವಚಿತ್ತಾಗಿ ಈ ನರಗಳಲ್ಲಿ ಕೆಲವು ಸಲ ನಂಜಾಗಬಹುದು. ಇಂಥ ತೊಂದರೆಯಿದ್ದಲ್ಲಿ ಅವರು ವಿಶ್ರಾಂತಿ ತೆಗೆದುಕೊಳ್ಳಬೇಕು. ಕಾಲಿಗೆ ಸ್ಥಿತಿಸ್ಥಾಪಕತ್ವದ (Elastic) ಬ್ಯಾಂಡೇಜು ಹಾಕಬೇಕು. ಆದಷ್ಟು ಈ ತರಹದ್ದಕ್ಕೆ ಹೆರಿಗೆಯಾದ ನಂತರವೇ ಶಸ್ತ್ರ ಚಿಕಿತ್ಸೆ ಮಾಡುವದು ಒಳಿತು.

ಮೂಲವ್ಯಾಧಿ : ಇದೇ ತರಹದ ಇನ್ನೊಂದು ತೊಂದರೆಯೆಂದರೆ, ನೆಟ್ಟಗರುಳಿನ ನರಗಳು (ನರಗಳು ಎಂದರೆ - ಅಪಧಮನಿಗಳು). ಬಸಿರಾದಾಗ ಗರ್ಭದ ಭಾರದಿಂದ ಈ ರಕ್ತನಾಳಗಳಲ್ಲಿ ರಕ್ತ ಸಂಚಾರಕ್ಕೆ ತೊಂದರೆಯಾಗಿ ಅವು ಉಬ್ಬಿಕೊಂಡು ತೊಂದರೆ ಕೊಡಬಹುದು. ಮಲವಿಸರ್ಜನೆ ಮಾಡುವಾಗ ರಕ್ತ ಸ್ರಾವವಾಗಬಹುದು. ನೋವು ಹಾಗು ಬಾವು ಗುದದ್ವಾರದ ಹತ್ತಿರ ಕಾಣಬಹುದು. ಕೆಲವು ಸಲ ವಿಪರೀತ ರಕ್ತಸ್ರಾವವಾಗಿ ಶಸ್ತ್ರಚಿಕಿತ್ಸೆಯೇ ಬೇಕಾಗಬಹುದು. ಆದರೆ ಹೆರಿಗೆಯಾದ ತಕ್ಷಣ ಭಾರ ಇಳಿದು ಹೋಗುವುದರಿಂದ ಶಸ್ತ್ರ ಚಿಕಿತ್ಸೆಯು ಬೇಕಾಗುವುದಿಲ್ಲ. ರಕ್ತಸ್ರಾವವಾಗಿ

ಸಾಮಾನ್ಯ ತೊಂದರೆಗಳು

೧. ವಾಂತಿ
೨. ಬೆನ್ನುನೋವು
೩. ನರಉಬ್ಬುಗಳು
೪. ಮೂಲವ್ಯಾಧಿ (Hemorrhids)
೫. ಎದೆಯುರಿತ
೬. ಕಾಕಸಿವು (Pica)
೭. ಜೊಲ್ಲುಸುರಿಕೆ (Ptyalism)
೮. ಆಯಾಸ
೯. ಕಾಲು ಜೋಮು
೧೦. ತಲೆ ನೋವು
೧೧. ಬಿಳಿ ಸೆರಗು
೧೨. ಕಾಲುಬಾವು
೧೩. ಮಲಬದ್ಧತೆ



ಡಾ. ಸುನಂದಾ ಕುಲಕರ್ಣಿ
೫೭೫, ೨೧ನೇ ಮೇನ್, ೩೫ನೇ ಕ್ರಾಸ್,
ಜಯನಗರ ೪ನೇ 'ಟಿ' ಬ್ಲಾಕ್,
ಬೆಂಗಳೂರು - ೫೬೦ ೦೪೧.

ಸ್ತ್ರೀಗೆ ಪಾಂಡುರೋಗ ಅಂದರೆ ರಕ್ತಹೀನತೆಯಾಗಬಹುದು. ಕಾರಣ ಆದಷ್ಟು ಅದು ವಿಪರೀತಕ್ಕಿಟ್ಟುಕೊಳ್ಳದಂತೆ ನೋಡಿಕೊಳ್ಳಲು ವೈದ್ಯರನ್ನು ನೋಡಬೇಕು.

ಎದೆಯುರಿತ : ಎದೆಯುರಿತವನ್ನು ಸಹ ನಾವು ಕೆಲವರಲ್ಲಿ ನೋಡಬಹುದು. ಗರ್ಭ ಬೆಳೆದಂತೆ ಜಠರ ಮೇಲೆ ಮೇಲೆ ಬರುತ್ತದೆ. ಜಠರದಲ್ಲಿಯ ಆಮ್ಲ ಮೇಲೆ ಬಂದು ಎದೆ ಉರಿಯಾದಂತೆ ಅನಿಸಬಹುದು. ಇದಕ್ಕೆ ಪೂರಕವೆಂಬಂತೆ ಪಚನ ಮಂಡಲವೂ ಸಹ ಸಾವಕಾಶವಾಗಿ ಕೆಲಸ ಮಾಡುವುದರಿಂದ ಬಸಿರಿರುವಾಗ ಸ್ವಲ್ಪ ತೊಂದರೆಯಾಗುತ್ತದೆ. ಜಠರದಲ್ಲಿ ತಯಾರಾದ ಆಮ್ಲ ಬೇಗ-ಬೇಗ ಸಂಚರಿಸುವುದಿಲ್ಲ. ಈ ತೊಂದರೆಗೆ ಒಮ್ಮೆಲೆ ಬಹಳಷ್ಟು ಊಟ ಮಾಡುವುದರ ಬದಲು ಸ್ವಲ್ಪ ಸ್ವಲ್ಪ ಆಹಾರ ತೆಗೆದುಕೊಳ್ಳಬೇಕು. ಅಂದರೆ ಅರ್ಧ ಊಟ ಒಮ್ಮೆ, ಇನ್ನರ್ಧ ನಂತರ ಹೀಗೆ ಮಾಡಬೇಕು. ಆಮ್ಲ ಕಡಿಮೆಯಾಗಲು ವೈದ್ಯರು ಹೇಳಿದ ಮಾತ್ರೆ ಸೇವಿಸಬೇಕು. ಎದೆಯುರಿತದ ತೊಂದರೆ ಹೆಚ್ಚಾದಾಗ ಮಾತ್ರ ಮಾತ್ರೆಗಳು ಬೇಕಾಗುತ್ತವೆ.

ಕಾಕಸಿವು : ಕಾಕಸಿವು (Pica) ಅಂದರೆ ಕೆಟ್ಟದಾದ ಹಸಿವು. ಹಳ್ಳಿಗಳಲ್ಲಿ ಇದನ್ನು ನಾವು ಇನ್ನೂ ನೋಡಬಹುದು. ಹೆಂಗಸು ಬಸಿರಾದಾಗ ತರತರದ ತಿನಿಸುಗಳನ್ನು ಬಯಸುವದು ಸರ್ವವಿಧಿತ. ದಿನವೂ ಮಾಡುವ ಅಡುಗೆ ಬೇಸರವಾಗಿ ಹೊಸ - ಹೊಸ ರುಚಿಗಳನ್ನು ಅವಳು ನೋಡ ಬಯಸುತ್ತಾಳೆ. ಮದುವೆ, ಮುಂಜಿಗಳಲ್ಲಿ ಮಾಡುವ ಅಪರೂಪದ ಭಕ್ಷ್ಯಗಳನ್ನು ಭೋಜಿಸಲು ಅವಳು ಬಯಸಬಹುದು. ಇದಕ್ಕೆ ವ್ಯತಿರಿಕ್ತವಾಗಿ ಮಣ್ಣು, ಖಡು (ಚಾಕಪೀಸ), ಅಗಸನ ಸ್ಟಾರ್ಚ್ ಮುಂತಾದವುಗಳನ್ನು ತಿನ್ನ ಬಯಸಿದಾಗ ಮಾತ್ರ ತೊಂದರೆಯಾಗುವದು. ಇದೂ ಅಲ್ಲದೆ ಕೆಲವರು ಅಡಿಗೆಯ ಸೋಡಾ, ಇಟ್ಟಿಗೆ, ಹೊಲಸು ಮುಂತಾದವುಗಳನ್ನು ತಿನ್ನಬೇಕೆನ್ನಬಹುದು. ಈ ತರಹ ತಿನ್ನಬಯಸುವವರು ಸಾಮಾನ್ಯವಾಗಿ ಹಣಕಾಸಿನಿಂದ ಹಿಂದುಳಿದವರು, ಅನಕ್ಷರಸ್ಥರು. ಸ್ತ್ರೀಯರ ಶಿಕ್ಷಣದಿಂದ ಈ ಹೊಲಸು ತಿನ್ನುವದು ಕಡಿಮೆಯಾಗಿದೆ. ಸ್ಟಾರ್ಚ ತಿಂದು ಕೆಲವರ ಕರುಳಿನಲ್ಲಿ ತೊಡಕಾಗಬಹುದು. ಸ್ಟಾರ್ಚ್‌ನಲ್ಲಿರುವ ಹುಳುಗಳೂ ಸಹ ತೊಂದರೆ ಮಾಡಬಹುದು. ಈ ತೊಂದರೆ ಕಬ್ಬಿಣದಂಶ ಕಡಿಮೆಯಾದಾಗ ಆಗಬಹುದೆನ್ನುತ್ತಾರೆ.

ಜೊಲ್ಲು ಸುರಿಸುವಿಕೆ : ಜೊಲ್ಲು ಸುರಿಸುವಿಕೆಯು ಇನ್ನೊಂದು ತೊಂದರೆ. ಈ ಜೊಲ್ಲು ಸುರಿಸುವಿಕೆಯು ಗ್ರಂಥಿಗಳ ಪ್ರಚೋದನೆಯಿಂದ ಆಗುತ್ತದೆಯಾದರೂ ಅದು ಏಕೆ ಪ್ರಚೋದನೆಯಾಗುತ್ತದೆಂಬುದು ಗೊತ್ತಿಲ್ಲ.

ಆಯಾಸ : ಬಹಳ ಜನರಿಗೆ ಆಯಾಸ ಆಗುವದು. ಕೆಲವರು ತೀರಾ ಆಯಾಸವಾಗಿ ಬರೀ ಮಲಗಲು ಶುರು ಮಾಡುತ್ತಾರೆ. ನಂತರ ಬರಬರುತ್ತ ಈ ಆಯಾಸ ಕಡಿಮೆಯಾಗುತ್ತದೆ. ಇದೇ ತರಹ ಎಳೆ ಬಸಿರಿನಲ್ಲಿ ಮೊದಲು ತಲೆನೋವು ಬರಬಹುದು. ಈ ತಲೆನೋವು ಹಸಿವಿಗೆ ಇರಬಹುದು. ನೆಗಡಿ-ಕೆಮ್ಮಿಗೆ ಇರಬಹುದು. ನಂತರ ವಿಪರೀತ ತಲೆನೋವು ರಕ್ತದ ಒತ್ತಡಕ್ಕೆ ಬರಬಹುದು.

ಕಾಲುಜೋಮು : ಇದು ಕೆಲವರಲ್ಲಿ ಬರಬಹುದು. ಜೋಮು ಕ್ಯಾಲ್ಸಿಯಂ ಲವಣ ಕಡಿಮೆಯಾದುದಕ್ಕೆ ಬರಬಹುದು. ಗರ್ಭಸ್ಥ ಶಿಶುವು ಸಂಪೂರ್ಣ ಪರಾವಲಂಬಿ ಜೀವಿಯಾಗಿದ್ದು ತಾಯಿಯಲ್ಲಿಯ ಕ್ಯಾಲ್ಸಿಯಂ ಲವಣವನ್ನು ನಿರ್ದಯದಿಂದ ಹೀರಿ ತೆಗೆದುಕೊಳ್ಳುತ್ತದೆ. ತಾಯಂದಿರು ಬಸಿರು ಇರುವಾಗ ಹಾಲನ್ನು ಹೆಚ್ಚಾಗಿ ಕುಡಿಯಬೇಕು. ಇ ಜೀವಸತ್ವದಿಂದಲೂ ಉಪಯೋಗವಾಗುತ್ತದೆ.

ಬಿಳಿ ಸೆರಗು : ಇದು ಹಲವಾರು ಜನರಲ್ಲಿದ್ದರೂ ತೋರಿಸಿಕೊಳ್ಳಲು ಸಂಕೋಚಪಡಬಹುದು. ಗರ್ಭಿಣಿಯಿರುವಾಗ ರಕ್ತ ಸಂಚಾರ ಜಾಸ್ತಿಯಾಗಿ ಯೋನಿಯಲ್ಲಿ ಬಿಳಿ ಸೆರಗು ಜಾಸ್ತಿಯಾಗಬಹುದು. ಸಾಮಾನ್ಯವಾಗಿ ಈ ಬಿಳಿ ಸೆರಗಿನ ಜೊತೆಗೆ ದುರ್ವಾಸನೆ, ಕೆರೆತ ಇದ್ದರೆ ಅವರು ಅದನ್ನು ತೋರಿಸಿಕೊಳ್ಳಲೇಬೇಕು. ಇಲ್ಲದಿದ್ದರೆ ಯೋನಿಯಲ್ಲಿಯ ನಂಜಿನಿಂದ ನೀರು ಸೋರಿಹೋಗಿ ಅಕಾಲ ಹೆರಿಗೆಯಾಗಬಹುದು. ಮಲಬದ್ಧತೆಯು ಸ್ತ್ರೀ ರಸದೂತಗಳಿಂದ ಆಗುತ್ತದೆ. ಅದಕ್ಕೆ ಸೊಪ್ಪು ಬಾಳೆಹಣ್ಣು ತಿಂದರೆ ಸಾಕು.

ಕಾಲುಬಾವು : ದಿನ ತುಂಬಿದ ಹೆಂಗಸರಲ್ಲಿ ಸ್ವಲ್ಪ ಕಾಲುಬಾವು ಬರಬಹುದು. ಆದರೆ ಮಲಗಿ ಎದ್ದುನಿಂತ ನಂತರ ಕಾಲುಬಾವು ಇದ್ದರೆ ಅದು ಒಳ್ಳೆಯ ಲಕ್ಷಣವಲ್ಲ. ರಕ್ತದೊತ್ತಡದ ನಂಜಿರಬಹುದು.

ಗರ್ಭಸ್ಥ ಸ್ತ್ರೀಯಲ್ಲಿ ಮೇಲೆ ಹೇಳಿದ ತೊಂದರೆ ಸಾಮಾನ್ಯವಾಗಿದ್ದರೂ ಅವು ಯಾವಾಗ ಅಸಾಮಾನ್ಯವಾಗುತ್ತವೆ ಆಗ ವೈದ್ಯರನ್ನು ಕಂಡರೆ ಮುಂದಾಗುವ ಅಪಾಯಗಳಿಂದ ತಪ್ಪಿಸಿಕೊಳ್ಳಬಹುದು. ●

ಇವು ಕಾಣಿಸಿದರೆ ವೈದ್ಯರನ್ನು ಸಂಪರ್ಕಿಸಿ

೧. ರಕ್ತವಾಂತಿ, ನೀರೂ ದಕ್ಕದ್ದಿದಾಗ
೨. ವಿಪರೀತ ಎದೆಯುರಿತ
೩. ಮೊಣಕಾಲು ಬಾವು
೪. ಬಿಳಿಸೆರಗು ಮತ್ತು ಕೆರೆತ
೫. ತಲೆ ತಿರುಗುವುದು
೬. ರಕ್ತಸ್ರಾವ - ಮೂಲವ್ಯಾಧಿಯಿಂದ
೭. ನರ ಉಬ್ಬಿನಿಂದ ನೋವು.
೮. ಕಾಲು ಜೋಮುನಿಂದ ಹೆಚ್ಚಿನ ನೋವು

ಉದುರುವ ಕೂದಲು ಉಳಿಸಿಕೊಳ್ಳುವ ಉಪಾಯ

ಇರುವ ಕೂದಲು ಕತ್ತರಿಸಿಕೊಳ್ಳುವವರು ಒಂದೆಡೆಯಾದರೆ, ಉದುರುವ ಕೂದಲು ಉಳಿಸಿಕೊಳ್ಳಲು ಪರದಾಡುವವರು ಇನ್ನೊಂದೆಡೆ. ಎರಡನೇ ಗುಂಪಿನವರಿಗೆ ಉಪಯುಕ್ತವಾದ ಕೆಲವು ವೈದ್ಯಕೀಯ ಮಾಹಿತಿ ಇಲ್ಲಿವೆ.

ಹಿಂದಿನ ಕಾಲದಲ್ಲಿ ಸ್ತ್ರೀಯರನ್ನು ನಾಗವೇಣಿ, ನೀಲವೇಣಿ ಎಂದೆಲ್ಲ ವರ್ಣಿಸುತ್ತಿದ್ದರು. ಈಗ ಮಾರುದ್ದ ಜಡೆ ಹೋಗಿ ಚೋಟುದ್ದ ಜಡೆ ಬಂದಿದೆ. ಇತ್ತಿತ್ತಲಾಗಿ ಚೋಟುದ್ದ ಜಡೆಗಳೂ ಮಾಯವಾಗಿ ಬಾಬ್‌ಕಟ್, ಬಾಯ್‌ಕಟ್‌ಗಳು ಲಗ್ಗೆಯಿಟ್ಟಿವೆ.

ಅದೇನೇ ಇರಲಿ ಸ್ತ್ರೀಯರಿಗೆ ಕೂದಲೇ ಭೂಷಣ ಎಂಬುದನ್ನು ಸಾಮಾನ್ಯವಾಗಿ ಎಲ್ಲರೂ ಒಪ್ಪುತ್ತಾರೆ.

ಈಗ ಆಹಾರ, ನೀರು, ಗಾಳಿ ಎಲ್ಲವೂ ಕಲುಷಿತವೇ. ಈ ಕಾರಣಗಳಲ್ಲದೇ ಮನೋವ್ಯಾಕುಲತೆ, ಚಿಂತೆ, ಹಲವು ದುಷ್ಪಚಟಗಳು, ಮಲಬದ್ಧತೆ, ವ್ಯಾಯಾಮ ಮಾಡದಿರುವುದು, ಕೇಶಶೃಂಗಾರಕ್ಕೆ ಬಳಸುವ ಹಲವು ದೋಷಪೂರಿತ ದ್ರವ್ಯಗಳು, ಅಜೀರ್ಣ ಕೂದಲುದುರುವದಕ್ಕೆ ಕಾರಣವಾಗುತ್ತವೆ. ಆದ್ದರಿಂದ ಇಂತಹ ದೋಷಗಳೇನಾದ್ರೂ ಇದ್ದಲ್ಲಿ ಅದನ್ನ ಸರಿಪಡಿಸಿಕೊಳ್ಳಬೇಕು. ಕೆಲವು ಬಾರಿ ಅನುವಂಶಿಕ ಕಾರಣಗಳಿಂದಲೂ ಕೂದಲುದುರುತ್ತದೆ.

ಚಿಕಿತ್ಸೆ

ಸಮತೋಲನ ಆಹಾರವನ್ನು ಸೇವಿಸಬೇಕು. ಸೊಪ್ಪು, ತರಕಾರಿ, ಮೊಳಕೆ ಬರಿಸಿದ ಕಾಳುಗಳ ಸೇವನೆ ಮಾಡಬೇಕು.

೧. ನಿಂಬೆಯ ರಸವನ್ನು ತಲೆಯ ಕೂದಲಿನ ಬೇರಿಗೆ ತಾಗುವಂತೆ ಮೃದುವಾಗಿ ಉಜ್ಜಿ ಎರಡು ಮೂರು ಗಂಟೆ ಬಿಟ್ಟು ಸ್ನಾನ ಮಾಡಬೇಕು.

೨. ಒಂದೆರಡು ತೊಲ ನೆಲ್ಲಿಕಾಯಿಯನ್ನು ಪುಡಿ ಮಾಡಿ ನಾಲ್ಕು ಲೋಟ ನೀರಿಗೆ ಹಾಕಿ ಕುದಿಸಿ ಮೂರು ಲೋಟಕ್ಕೆ ಇಳಿಸಬೇಕು. ಇದರಿಂದ ಪ್ರತಿ ದಿನ ತಲೆ ತೊಳೆಯುತ್ತಿದ್ದರೆ ಕೂದಲು ಕಪ್ಪಾಗುವದಲ್ಲದೇ, ದಪ್ಪವಾಗಿಯೂ ಬೆಳೆಯುತ್ತದೆ.

೩. ನಾಲ್ಕು ಭಾಗ ಭೃಂಗರಾಜ ಸೊಪ್ಪಿನ ರಸ (ಕಾಡಿಗ್ಗರುಗ ಅಥವಾ ಗುರುಗದ ಸೊಪ್ಪಿನ ರಸ) ಒಂದು ಭಾಗ ಎಳ್ಳೆಣ್ಣೆ ಹಾಕಿ ಕುದಿಸಿದ ತೈಲವನ್ನು ಉಪಯೋಗಿಸಬೇಕು.

೪. ಹೊನೆಗೊನ್ನೆ ಸೊಪ್ಪಿನ ರಸ ಒಂದು ಭಾಗ, ಗುರುಗದ ಸೊಪ್ಪಿನ ರಸ ಒಂದು ಭಾಗ, ನೆಲ್ಲಿಕಾಯಿಯ ರಸ ಒಂದು ಭಾಗ, ಹಸುವಿನ ಹಾಲು ಒಂದು ಭಾಗ, ಎಳ್ಳೆಣ್ಣೆ ಒಂದು ಭಾಗ ಇವೆಲ್ಲವನ್ನೂ ಸೇರಿಸಿ ಕಾಯಿಸಿ ತೈಲ ಮಾಡಿ ಪ್ರತಿದಿನ ತಲೆಗೆ ಉಪಯೋಗಿಸುತ್ತಿದ್ದರೆ ಕೂದಲು ಉದುರುವುದು ನಿಲ್ಲುವುದಲ್ಲದೇ ಉದ್ದವಾಗಿಯೂ ಬೆಳೆಯುತ್ತದೆ.

೫. ಅಂಟುವಾಳದ ಸೊಪ್ಪನ್ನು ನೀರಿನಲ್ಲಿ ಅರೆದು ತಲೆಗೆ ಲೇಪಿಸಿ ಒಂದೆರಡು ಗಂಟೆ ಬಿಟ್ಟು ಸ್ನಾನ ಮಾಡುವುದರಿಂದ ತಲೆ ಕೂದಲು ಉದುರುವದು ನಿಲ್ಲುತ್ತದೆ.

೬. ಬಿಳಿಯ ಗುಲಗಂಜಿ ಸೊಪ್ಪಿನ ರಸ ಒಂದು ಭಾಗ, ಗರುಗದ ರಸ (ಭೃಂಗರಾಜ) ಒಂದು ಭಾಗ, ಹೊನಗೊನೆ ಸೊಪ್ಪಿನ ರಸ ಒಂದು ಭಾಗ ಇವುಗಳ ಸಮಭಾಗ ಎಳ್ಳೆಣ್ಣೆ ಸೇರಿಸಿ ಕಾಯಿಸಿದ ಎಣ್ಣೆಯನ್ನು ಉಪಯೋಗಿಸಿದರೆ ಕೂದಲು ಕಪ್ಪಾಗುತ್ತದೆ.

೭. ಬಿಲ್ವದ ಸೊಪ್ಪಿನ ರಸವನ್ನು ನಿತ್ಯ ತಲೆಗೆ ಉಜ್ಜುತ್ತಿದ್ದು ಎರಡು-ಮೂರು ಗಂಟೆ ಬಿಟ್ಟು ಸ್ನಾನ ಮಾಡಬೇಕು.

ತಲೆ ಹೊಟ್ಟಿನ ತರಲೆ !

೧. ಸ್ನಾನಕ್ಕೆ ಒಂದೆರಡು ಗಂಟೆ ಮುಂಚೆ ನಿಂಬೆಯ ರಸವನ್ನು ತಲೆಗೆ ಚೆನ್ನಾಗಿ ಉಜ್ಜಿದರೆ ಹೊಟ್ಟು ಉದುರುವದು ನಿಲ್ಲುತ್ತದೆ.

೨. ಮೆಂತ್ಯೆ, ಕಚೋರ, ನೆಲ್ಲಿಕಾಯಿ ಸಮಪ್ರಮಾಣದಲ್ಲಿ ಪುಡಿ ಮಾಡಿ ಹಾಲಿನಲ್ಲಿ ಮಿಶ್ರಮಾಡಿ ಹಚ್ಚುತ್ತಿದ್ದಲ್ಲಿ ತಲೆಯ ಹೊಟ್ಟು ಕಡಿಮೆಯಾಗುತ್ತದೆ.

೩. ಗರುಗದ ಸೊಪ್ಪಿನ ರಸವನ್ನು, ಹಸುವಿನ ಹಾಲನ್ನು ಮಿಶ್ರಮಾಡಿ ತಲೆಗೆ ಮೃದುವಾಗಿ ಉಜ್ಜಿ ಒಂದೆರಡು ಗಂಟೆ ಬಿಟ್ಟು ಸ್ನಾನ ಮಾಡಬೇಕು.

೪. ಒಣಗಿದ ನಿಂಬೆಹಣ್ಣಿನ ಸಿಪ್ಪೆಯ ಪುಡಿಯನ್ನು ಹೊನೆಗೊನ್ನೆಯ ಸೊಪ್ಪಿನ ರಸದಲ್ಲಿ ಕಲೆಸಿ ಒಂದು ದಿನ ಬಿಟ್ಟು ತಲೆಗೆ ಹಚ್ಚಿ ಸ್ನಾನ ಮಾಡಬೇಕು.

○ ಡಾ. ವಸುಂಧರಾ ಭೂಪತಿ

ಅನಗತ್ಯ ರೋಮ ನಿವಾರಣೆ

ಹೆಣ್ಣುಮಕ್ಕಳಿಗೆ ಅದರಲ್ಲೂ ಹರೆಯದ ಯುವತಿಯರಲ್ಲಿ ಈ ಸಮಸ್ಯೆ ಬಹುವಾಗಿ ಕಾಡುತ್ತದೆ. ಮುಖದಲ್ಲಿನ ಬೇಡದ 'ರೋಮ'ದಿಂದ ಹುಡುಗಿಯರು ಕೀಳರಿಮೆಯಿಂದ ಕುಗ್ಗಿಹೋಗುತ್ತಾರೆ. ಯುವತಿಯರಲ್ಲಲ್ಲದೇ 'ಮುಟ್ಟು' ನಿಂತು ಹೋಗಿರುವ ಹಾಗೂ ನಿಲ್ಲುವ ಸಮಯ ಹತ್ತಿರ ಬಂದಾಗ ಹೆಂಗಸರಿಗೆ ಗದ್ದದಲ್ಲಿ, ಕೆನ್ನೆಯಲ್ಲಿಯೂ 'ರೋಮ'ಗಳು ಹುಟ್ಟಿಕೊಳ್ಳುತ್ತವೆ. ಹೊರಗಡೆ ನಾಲ್ಕು ಜನರಲ್ಲಿ ಓಡಾಡಲು ಎಂದಿನಂತೆ ಸಾಧ್ಯವಾಗದೇ ಈ ಸಮಸ್ಯೆಯಿಂದ ಮುಜುಗರ ಪಟ್ಟುಕೊಳ್ಳುತ್ತಾರೆ. ರೋಮ ನಿವಾರಣೆ ಮಾಡುವದಕ್ಕೆ ಮಾರುಕಟ್ಟೆಯಲ್ಲಿ ಅನೇಕ ಕ್ರೀಮುಗಳು ದೊರೆಯುತ್ತವೆ. ಅವೆಲ್ಲ ತಾತ್ಕಾಲಿಕ ಪರಿಹಾರಗಳು ಈ ಸಮಸ್ಯೆಯನ್ನು ನಿವಾರಿಸಿಕೊಳ್ಳುವದಕ್ಕೆ ಬ್ಯೂಟಿ ಪಾರ್ಲರುಗಳಿಗೆ ಭೇಟಿ ಕೊಡದವರೇ ವಿರಳ ಎನ್ನಬಹುದು. ಇಲ್ಲಿ ಕೆಲವು ಆಯುರ್ವೇದ ಚಿಕಿತ್ಸೆ ಹೇಳಲಾಗಿದೆ. ನಿಧಾನವಾಗಿ ತಾಳ್ಮೆಯಿಂದ ಈ ಚಿಕಿತ್ಸೆ ಕೈಗೊಳ್ಳಬೇಕು - ಬಹಳ ದೀರ್ಘಕಾಲ ಅಂದರೆ ಕನಿಷ್ಠ ಆರು ತಿಂಗಳ ಕಾಲವಾದರೂ ಚಿಕಿತ್ಸೆ ತೆಗೆದುಕೊಳ್ಳಬೇಕು.

ಪ್ರತಿದಿನ ಅರಿಶಿನದ ಬೇರನ್ನು ತೇಯ್ದು ಮುಖಕ್ಕೆ ಹಚ್ಚಿಕೊಂಡು ಒಂದು ಗಂಟೆ ಕಾಲ ಬಿಟ್ಟು ಮುಖ ತೊಳೆಯಬೇಕು.

ಅರಿಶಿನ ಪುಡಿಯ ಜೊತೆಗೆ ಕಾಸೀಸ ಭಸ್ಮವನ್ನು ಸಮಪ್ರಮಾಣದಲ್ಲಿ ಸೇರಿಸಿ ಸ್ವಲ್ಪ ನೀರಿನೊಡನೆ ಕಲೆಸಿಕೊಂಡು ಲೇಪಿಸಿಕೊಂಡುಸ್ವಲ್ಪ ಉಜ್ಜಿಕೊಳ್ಳಬೇಕು. ದಿನಕ್ಕೆರಡು ಸಲ ಹೀಗೆ ಮಾಡಿಕೊಳ್ಳಬೇಕು. ಇದರಿಂದ ರೋಮಗಳು ಉದುರಿ ಹೋಗುತ್ತವೆ.

ಬನ್ನಿ ಮರದ ಕಾಯಿಯನ್ನು ನೀರಿನಲ್ಲಿ ತೇಯ್ದು ಹಚ್ಚಿಕೊಳ್ಳುತ್ತಿದ್ದರೆ ರೋಮಗಳು ಉದುರಿಹೋಗುತ್ತವೆ.

ಅಡುಗೆ ಮನೆ

ಮಸಾಲಾ ಟೊಮೆಟೊ

ಅಗತ್ಯ ಸಾಮಗ್ರಿ : ದೊಡ್ಡ ಗಾತ್ರದ ಕೆಂಪು ಟೊಮೆಟೊ ೨೫೦ ಗ್ರಾಂ., ಆಲೂಗಡ್ಡೆ ೧೮೦ ಗ್ರಾಂ., ಈರುಳ್ಳಿ ೩, ನಿಂಬೆಹಣ್ಣು ಒಂದು, ಕೊತ್ತಂಬರಿ ಚಿಕ್ಕದು ಒಂದು ಕಟ್ಟು, ಕಡ್ಲೆಬೀಜ ೩೦ ಗ್ರಾಂ, ಎಳ್ಳು ೨೫ ಗ್ರಾಂ, ಖಾರದ ಪುಡಿ ಅರ್ಧ ಚಮಚ, ಅರಿಶಿಣಪುಡಿ ಚಿಟಿಕೆಯಷ್ಟು, ಕರಿಬೇವು ೩ ಗರಿ, ಸಾಸುವೆ ೫ ಗ್ರಾಂ, ರಿಫೈಂಡ್ ಆಯಿಲ್ ೫೦ ಗ್ರಾಂ, ಉಪ್ಪು ಸಾಕಷ್ಟು.

ಮಾಡುವ ವಿಧಾನ : ಟೊಮೆಟೊ ತೊಳೆದು, ಚಾಕುವಿನಿಂದ ಮುಂದಿನ ಭಾಗಕೊಯ್ದು ಅದರಲ್ಲಿರುವ ರಸವನ್ನು ಬೇರೆ ಬಟ್ಟಲಲ್ಲಿ ಹಿಂಡಿಕೊಳ್ಳಿ, ನಂತರ ಬೆಂದ ಆಲೂಗಡ್ಡೆಗೆ ನಿಂಬೆರಸ, ಉಪ್ಪು, ಕೊತ್ತಂಬರಿ ಕಲಿಸಿ, ರಸ ಹಿಂಡಿದ ಟೊಳ್ಳಾದ ಟೊಮೆಟೊದಲ್ಲಿ ನಿಧಾನವಾಗಿ ತುಂಬಿ ಈಗ ಒಂದು ಬಟ್ಟಲಲ್ಲಿ ಎಣ್ಣೆ ಹಾಕಿ ಕಾದ ನಂತರ ಹುರಿದ ಸಾಸಿವೆ ಕರಿಬೇವು, ಸಣ್ಣಗೆ ತರಿದ ಈರುಳ್ಳಿಯನ್ನೂ ಸಹ ಹಾಕಿ ಹುರಿದ ನಂತರ ಖಾರದ ಪುಡಿ, ಅರಿಶಿಣ ಕಲಿಸಿ, ನಂತರ ಹುರಿದು ಮುದ್ದೆಯಾಗಿ ರುಬ್ಬಿದ ಕಡ್ಲೆಬೀಜ, ಎಳ್ಳು ಮುದ್ದೆಯನ್ನೂ ಸಹ ಮಸಾಲೆಯಲ್ಲಿ ಹುರಿದು, ನಂತರ ಟೊಮೆಟೊ ರಸವನ್ನು ಟೊಮೆಟೊಗಳನ್ನು ನಿಧಾನವಾಗಿ ಹಾಕಿ ಐದು ನಿಮಿಷ ಬೇಯಿಸಿ, ಈಗ ಬಾಯಲ್ಲಿ ನೀರೂರಿಸುವ ಟೊಮೆಟೊ ಮಸಾಲಾ ಸಿದ್ಧ.

ಖರ್ಜೂರ ಹಲ್ವಾ

ಅಗತ್ಯ ಸಾಮಗ್ರಿ : ಖರ್ಜೂರ ಹಣ್ಣು ೨೦೦ ಗ್ರಾಂ, ಸಕ್ಕರೆ ೧೦೦ ಗ್ರಾಂ, ಖೋವಾ ೫೦ ಗ್ರಾಂ, ಬೆಣ್ಣೆ ೫೦ ಗ್ರಾಂ, ಚೆರ್ರಿ ೨೫ ಗ್ರಾಂ, ಕಲ್ಲಂಗಡಿ ಹಣ್ಣಿನ ಬೀಜ ೨೦ ಗ್ರಾಂ.

ಮಾಡುವ ವಿಧಾನ : ಖರ್ಜೂರ ಹಣ್ಣಿನ ಬೀಜ ತೆಗೆದು ನಂತರ ಚಾಕುವಿನಿಂದ ಸಣ್ಣಗೆ ಕೊಯ್ಯಬೇಕು. ನಂತರ ಎರಡು ಕಪ್ಪಿನ ನೀರಿನಲ್ಲಿ ಖರ್ಜೂರವನ್ನು ಬೇಯಿಸಬೇಕು. ನಂತರ ಒಂದು ಬಾಟಲಿಯಲ್ಲಿ ತುಪ್ಪ ಹಾಕಿ ಬಿಸಿಯಾದ ನಂತರ ಅದರಲ್ಲಿ ಸಕ್ಕರೆ, ಕೋವಾ ಕಲಿಸಿದ ಮಿಶ್ರಣವನ್ನು ಹಾಕಿ ಮತ್ತಷ್ಟು ಸಮಯ ಬೇಯಿಸಬೇಕು. ಹಲ್ವಾದ ತರಹ ಬೆಂದ ಮೇಲೆ ಇಳಿಸಿ ಅದನ್ನು ಬೇರೆ ಬಟ್ಟಲಲ್ಲಿ ಬೇರ್ಪಡಿಸಿ ಮೇಲೆ ಕಲ್ಲಂಗಡಿ ಬೀಜಗಳನ್ನು ಹಾಕಿ ನಂತರ ಚೆರ್ರಿಯನ್ನು ಅದರ ಮೇಲೆ ಚೆಲ್ಲಿ ಅತಿಥಿಗಳಿಗೆ ಬಡಿಸಿ.

ಆಲೂಗೋಬಿ ಕಿ ತಹಾರಿ

ಅಗತ್ಯ ಸಾಮಗ್ರಿ : ಬಾಸಮತಿ ಅಕ್ಕಿ ೫೦೦ ಗ್ರಾಂ. ಆಲೂಗಡ್ಡೆ ೨೨೫ ಗ್ರಾಂ, ಕಾಲಿ ಫ್ಲವರ್ ೨೨೫ ಗ್ರಾಂ, ರಿಫೈಂಡ್ ಆಯಿಲ್ ೮೫ ಗ್ರಾಂ, ಅರಿಶಿಣ ೨ ಚಮಚ, ಹಸಿ ಶುಂಠಿ ರಸ ಕಾಲು ಚಮಚ, ಖಾರದ ಪುಡಿ ೧ ಚಮಚ, ಗರಂ ಮಸಾಲಾ ಅರ್ಧ ಚಮಚ, ಪಲಾವು ಎಲೆ ನಾಲ್ಕು, ಲವಂಗ ಎಂಟು, ಯಾಲಕ್ಕಿ ನಾಲ್ಕು, ದಾಲ್ಚೀನಿ ಚೆಕ್ಕೆ ಚಿಕ್ಕತುಣುಕು, ಉಪ್ಪು ಬೇಕಾಗುವಷ್ಟು.

ಮಾಡುವ ವಿಧಾನ : ಮೊದಲು ಪಲಾವು ಅಕ್ಕಿಯನ್ನು ಶುಭ್ರಗೊಳಿಸಿ, ನೀರಿನಲ್ಲಿ ಅರ್ಧ ಗಂಟೆ ನೆನೆಸಬೇಕು. ಆಲೂಗಡ್ಡೆಯನ್ನು ಸಿಪ್ಪೆ ತೆಗೆದು ನಾಲ್ಕು ಹೋಳುಗಳನ್ನಾಗಿ ಮಾಡಿಕೊಳ್ಳಿ, ಕಾಲಿ ಫ್ಲವರನ್ನು ಚಿಕ್ಕಚಿಕ್ಕ ಹೂವುಗಳನ್ನಾಗಿ ಮಾಡಿಕೊಳ್ಳಿ.

ನಂತರ ಒಂದು ಪಾತ್ರೆಯಲ್ಲಿ ಎಣ್ಣೆ ಹಾಕಿ ಬಿಸಿ ಮಾಡಿ ಲವಂಗ, ದಾಲ್ಚೀನಿ ಚೆಕ್ಕೆ, ಪಲಾವು ಎಲೆ, ಯಾಲಕ್ಕಿ ಹುರಿದ ಮೇಲೆ ನೆನಸಿಟ್ಟ ಅಕ್ಕಿಯನ್ನೂ, ಕಾಲಿಫ್ಲವರ್, ಆಲೂಗಡ್ಡೆ ತುಣುಕುಗಳನ್ನು ಹಾಕಿ ಹುರಿಯಿರಿ. ನಂತರ ಅರಿಶಿಣ, ಶುಂಠಿ ರಸ ಹಾಕಿ ಕಲಿಸಿ. ನಂತರ ಅಕ್ಕಿಗೆ ಒಂದೂವರೆ ಅಂಗುಲದಷ್ಟು ಎತ್ತರ ನೀರು ಹಾಕಿ ಸಾಕಷ್ಟು ಉಪ್ಪು, ಖಾರದಪುಡಿ ಹಾಕಿ ಕಲಿಸಿ ಬೇಯಿಸಬೇಕು. ಅಕ್ಕಿ ಬೆಂದ ಮೇಲೆ ಗರಂ ಮಸಾಲಾ ಹಾಕಿ ಚೆನ್ನಾಗಿ ಕಲಿಸಿ ಸ್ವಲ್ಪ ಹೊತ್ತು ಇರಿಸಿ ನಂತರ ಬಿಸಿಬಿಸಿಯಾಗಿ ತಿಂದರೆ ತುಂಬಾ ರುಚಿಯಾಗಿರುತ್ತದೆ.

○ ಕೆ.ಎಸ್.

ದಾಳಿಂಬೆ ಕುಡಿ ತಂಬಳಿ

ದಾಳಿಂಬೆಯು ಒಗರಾಗಿದ್ದು ಅದನ್ನು ಆಹಾರ ಪದಾರ್ಥವಾಗಿ ಬಳಸುವ ಉಪಾಯವೇ ದಾಳಿಂಬೆ ಕುಡಿ ತಂಬಳಿ. ಅಪರೂಪಕ್ಕೆ ರುಚಿ ಬದಲಾವಣೆಗಾಗಿ ಹಾಗೂ ಅತಿಸಾರವಾದಾಗ 'ತಂಬಳಿ' ಊಟದಿಂದ ಅತಿಸಾರ ರೋಗವನ್ನು ತಡೆಗಟ್ಟಬಹುದು. ಔಷಧವಾಗಿ ಮಾಡಬೇಕಾದ ಪರಿಣಾಮವನ್ನು ಇದು ತಕ್ಕಮಟ್ಟಿಗೆ ಮಾಡುತ್ತದೆ.

ದಾಳಿಂಬೆ ಗಿಡದ ಸ್ವಲ್ಪ ಬೆಳೆದ ೫೦ ಚಿಗುರೆಲೆಗಳನ್ನು (ಕುಡಿಗಳು) ಹರಿದುತಂದು, ತೊಳೆದುಕೊಳ್ಳಬೇಕು. ಅರ್ಧ ಚಮಚ ಜೀರಿಗೆಯೊಂದಿಗೆ ಆ ೫೦ ಕುಡಿಗಳನ್ನು ಸ್ವಲ್ಪ ಬಾಡುವಷ್ಟು ಮಾತ್ರ ಹುರಿಯಬೇಕು. ತೆಂಗಿನಕಾಯಿಯ ಕಾಲುಭಾಗದಷ್ಟು ಹಸಿಯಾದ ತುರಿ, ಹತ್ತು ಕಾಳು ಮೆಣಸು, ಅರ್ಧ ಲೋಟ ನೀರಿನೊಂದಿಗೆ ತೆಳುವಾದ ಚಟ್ನಿಯಾಗುವಂತೆ ನುಣ್ಣಗೆ ರುಬ್ಬಬೇಕು. ನಂತರ ಸ್ವಲ್ಪ ನೀರಿನ ಸಹಾಯದೊಂದಿಗೆ, ಒಂದು ಪಾತ್ರೆಯಲ್ಲಿ ಹಾಕಿಕೊಂಡು ಒಂದು ಟೀ ಕಪ್ ಆಗುವಷ್ಟು ಮೊಸರನ್ನು ಸೇರಿಸಿ, ರುಚಿಗೆ ತಕ್ಕಂತೆ ಉಪ್ಪು ಮತ್ತು ಬೆಲ್ಲವನ್ನು ಅದಕ್ಕೆ ಹಾಕಬೇಕು. ಆಮೇಲೆ ಸಾಸಿವೆ, ಜೀರಿಗೆ, ಒಣಮೆಣಸಿನಕಾಯಿ, ಎಣ್ಣೆಯೊಂದಿಗೆ ಒಗ್ಗರಣೆ ಮಾಡಿ ಮಿಶ್ರಣ ಮಾಡಬೇಕು.

ಇದರಿಂದ ಸುಮಾರು ಐದು ಜನರಿಗೆ ಸಾಕಾಗುವಷ್ಟು ''ಪರಿಮಳಯುಕ್ತ ದಾಳಿಂಬೆ ಕುಡಿ ತಂಬಳಿ'' ತಯಾರಾಗಿ, ಅನ್ನದೊಂದಿಗೆ ಕಲಸಿ ಊಟ ಮಾಡಲು ಸಿದ್ಧವಾಗುತ್ತದೆ. ಸ್ವಲ್ಪ ಮಜ್ಜಿಗೆ ಸೇರಿಸಿ ತಿಳಿಯಾಗುವಂತೆ ಮಾರ್ಪಡಿಸಿದರೆ ರುಚಿಕಟ್ಟಾದ ತಂಬಳಿಯ ಪಾನೀಯವಾಗುತ್ತದೆ. ಅತಿಸಾರ ರೋಗಿಯು ಅನುಮಾನಿಸದೇ ಯಥೇಚ್ಛ ತೆಗೆದುಕೊಳ್ಳಬಹುದು. ಆದರೆ ರೋಗಿಯಲ್ಲದವರು ಮಿತಬದ್ಧವಾಗಿ ಸೇವಿಸಿದರೆ ಮಲಬದ್ಧತೆಯಾಗುವುದಿಲ್ಲ. ಒಗರಾದ ದಾಳಿಂಬೆಯನ್ನು ರುಚಿ ಯೋಗ್ಯ ಮಾಡಿ ಬಳಸುವ ಉಪಾಯವೇ ದಾಳಿಂಬೆ ಎಲೆ ತಂಬಳಿಯಾಗಿದ್ದು ಮಾಡಿ ನೋಡಿ ಸವಿಯಬಹುದಾಗಿದೆ.

○ ಲೀಲಾ ಚಂದ್ರಕಾಂತ ಭಟ್

ಸಂಬಂಧ ಸೇತುವೆ

ಕರ್ನಾಟಕದ ಉತ್ತರ ಹಾಗೂ ದಕ್ಷಿಣ ಭಾಗಗಳ ನಡುವೆ ಸಂಬಂಧ ಸೇತುವೆಯಾಗಿ ಪರಸ್ಪರ ಅರಿಯಲು ಅನುವು ಮಾಡಿಕೊಡಬೇಕೆಂಬ ''ಬಿಸಿಲ ಬದುಕು'' ಪತ್ರಿಕೆಯ ಆಶಯಕ್ಕನುಗುಣವಾಗಿ ಸಂಬಂಧ ಸೇತುವೆ ಅಂಕಣ ಪ್ರಾರಂಭಿಸುತ್ತಿದ್ದೇವೆ.

ವಿವಾಹಿತರಿಗೆ

ಉತ್ತರ ಹಾಗೂ ದಕ್ಷಿಣ ಕರ್ನಾಟಕದ ಜನರ ನಡುವಿನ ವೈವಾಹಿಕ ಸಂಬಂಧಗಳಿಗೆ ಕೊರತೆಯೇ ಇಲ್ಲ. ಇಂತಹ ಸಂಬಂಧ ಬೆಳೆಸಿ ಬದುಕಿನಲ್ಲಿ ಸಾಮರಸ್ಯ ಸಾಧಿಸಿದ ಗಂಡ-ಹೆಂಡತಿಯರು ತಮ್ಮ ಅನುಭವವನ್ನು ಈ ಅಂಕಣದಲ್ಲಿ ಹಂಚಿಕೊಳ್ಳಬಹುದು. ಭಾಷೆ, ಸಂಪ್ರದಾಯ, ಕೌಟುಂಬಿಕ ವಾತಾವರಣ ಇತ್ಯಾದಿ ಯಾವುದೇ ವಿಷಯದಲ್ಲಿ ತಮಗಾದ ಸ್ವಾರಸ್ಯಕರ ಅನುಭವವನ್ನು ಬರೆಯಲು ಗಂಡ-ಹೆಂಡತಿ ಇಬ್ಬರಿಗೂ ಇಲ್ಲಿ ಅವಕಾಶ. ಬರಹ ಹಸ್ತಪ್ರತಿಯಲ್ಲಿ ಒಂದು ಪುಟ ಮೀರದಿರಲಿ. ದಂಪತಿಯ ಭಾವಚಿತ್ರ ಅತ್ಯಗತ್ಯ.

ನೌಕರರಿಗೆ

ಕರ್ನಾಟಕದ ಉತ್ತರ ಭಾಗದವರು ದಕ್ಷಿಣ ಭಾಗದಲ್ಲೂ, ದಕ್ಷಿಣದವರು ಉತ್ತರದಲ್ಲೂ ನೌಕರಿ ಮಾಡಿದಾಗಿನ ಅನುಭವ ಹೇಗಿರುತ್ತದೆ? ನಿಮ್ಮ ಇಂಥ ವಲಸೆಯ ಸಂದರ್ಭದಲ್ಲಿ ಆದ ಅನುಭವವನ್ನು ಹಸ್ತ ಪ್ರತಿಯಲ್ಲಿ ಒಂದು ಪುಟ ಮೀರದಂತೆ ಬರೆದು ಕಳಿಸಿ. ಅನುಭವ ಸಿಹಿಯಾಗಿರಬಹುದು ಅಥವಾ ಕಹಿಯಾಗಿರಬಹುದು. ನಿಮ್ಮ ಭಾವಚಿತ್ರ ಜತೆಗಿರಲಿ.

ವಿದ್ಯಾರ್ಥಿಗಳಿಗೆ

ವಿದ್ಯೆಯನ್ನು ಅರಸಿ ರಾಜ್ಯದ ಒಂದು ಭಾಗದಿಂದ ಇನ್ನೊಂದು ಭಾಗಕ್ಕೆ ತೆರಳಿದ ವಿದ್ಯಾರ್ಥಿಗಳಿಗೆ ಈ ಅಂಕಣದಲ್ಲಿ ಅವಕಾಶವಿದೆ. ನೀವು ರಾಜ್ಯದ ಮತ್ತೊಂದು ಭಾಗದ ಕಾಲೇಜಿನಲ್ಲಿ ವಿದ್ಯಾಭ್ಯಾಸ ಮಾಡುವಾಗ ನಿಮಗೆ ಕಾಲೇಜಿನಲ್ಲಿ, ಹಾಸ್ಟೆಲ್‌ನಲ್ಲಿ, ಗೆಳೆಯರೊಂದಿಗೆ, ಸ್ಥಳೀಯರೊಂದಿಗೆ ಆದ ಸಿಹಿ-ಕಹಿ ಅನುಭವವನ್ನು ಹಸ್ತ ಪ್ರತಿಯಲ್ಲಿ ಒಂದು ಪುಟ ಮೀರದಂತೆ ಬರೆಯಿರಿ. ನಿಮ್ಮ ಫೋಟೋ ಕಳಿಸಿ.

ವಿಳಾಸ :

ಬಿಸಿಲ ಬದುಕು ಮಾಸ ಪತ್ರಿಕೆ

ಬಸವೇಶ್ವರನಗರ, ಬೆಂಗಳೂರು- 560 079 ಅಂಚೆ ಪೆಟ್ಟಿಗೆ : 7951

ನೀವೂ ಬರೆಯಿರಿ

ಏನಂತೀರಿ?

ಜನರ ದೂರುಗಳ ಬಗ್ಗೆ ಅಧಿಕಾರಿಗಳ, ಜನ ಪ್ರತಿನಿಧಿಗಳ ಗಮನ ಸೆಳೆಯಲು ಈ ಅಂಕಣದಲ್ಲಿ ಸದವಕಾಶ. ಓದುಗರ ದೂರು ದುಮ್ಮಾನಗಳನ್ನು ಪ್ರಕಟಿಸುವುದಷ್ಟೇ ಅಲ್ಲ ಸಂಬಂಧಿಸಿದವರನ್ನು ಸಂಪರ್ಕಿಸಿ ಅವರ ಉತ್ತರವನ್ನು ಪ್ರಕಟಿಸಲು ಪ್ರಯತ್ನಿಸಲಾಗುವುದು.

ಕ್ಲಾಸ್ ರೂಂ

ಶಾಲೆ ಕಾಲೇಜುಗಳ ತರಗತಿ ಕೋಣೆಗಳಲ್ಲಿ ತಮಾಷೆಗಳಿಗೆ ಬರವುಂಟೆ? ಇಂಥ ಪ್ರಸಂಗಗಳು ಹಲವೊಮ್ಮೆ ಗಂಭೀರ ತಿರುವು ಪಡೆಯುವುದು ಅಸಂಭವವಲ್ಲ. ಈ ಬಗ್ಗೆ ವಿದ್ಯಾರ್ಥಿಗಳು, ಶಿಕ್ಷಕ ವೃಂದದವರು ಬರೆಯಬಹುದು.

ಚೌ ಚೌ

''ಚೌ ಚೌ'' ಅಂಕಣದಲ್ಲಿ ಓದುಗರ ಬರಹಗಳಿಗೆ ವಿಪುಲ ಅವಕಾಶ. ನೀವು ನಿಮ್ಮ ಊರು, ಕೇರಿ, ಜಿಲ್ಲೆ; ಅಲ್ಲಿಯ ಜನ, ಊಟ, ತೊಡುಗೆ, ಕಲೆ, ಸಂಸ್ಕೃತಿ, ಭಾಷೆ ಹೀಗೆ ಯಾವುದರ ಕುರಿತಾದರೂ ಬರೆಯಬಹುದು. ಬರಹ ಚಿಕ್ಕದಿರಲಿ. ಮಾಹಿತಿ ತುಂಬಿರಲಿ.

ಕಲ್ಲಿನ ಕಥೆ

ನಿಮ್ಮ ಭಾಗದಲ್ಲಿ ಮಂತ್ರಿಮಹೋದಯರು ಹಾಕಿದ ಅತಿ ಹಳೆಯ ಅಡಿಗಲ್ಲುಗಳು ಬೇಕಾದಷ್ಟಿರಬಹುದು. ಇಂಥ ಒಂದು ಕಾರ್ಯಗತವಾಗದ ಯೋಜನೆಯ ಮಹತ್ವ, ಅಡಿಗಲ್ಲು ಹಾಕಿದ ಮಹಾಶಯರ ಪಾತ್ರ, ಅದರ ಪ್ರಸಕ್ತ ಸ್ಥಿತಿ ಬಗ್ಗೆ ಚುಟುಕಾಗಿ ಬರೆಯಿರಿ.

ನಮ್ಮ ಮನೆಯ ಬೆಳಕು

ಐದು ವರ್ಷದೊಳಗಿನ ಮಕ್ಕಳ ಹುಟ್ಟುಹಬ್ಬದ ಶುಭಾಶಯಗಳನ್ನು ಈ ಅಂಕಣದಲ್ಲಿ ಭಾವಚಿತ್ರದೊಂದಿಗೆ ಪ್ರಕಟಿಸಲಾಗುವುದು. ನಿಮ್ಮ ಮಗುವಿನ ಉತ್ತಮ ಗುಣಮಟ್ಟದ ಭಾವಚಿತ್ರ, ಹುಟ್ಟಿದ ದಿನಾಂಕ ಹಾಗೂ ತಂದೆ-ತಾಯಿಯರ ಹೆಸರು ಕಳಿಸಿಕೊಡಿ.

ಮಾಡಿದ್ದು - ಮಾಡದ್ದು

ವಿವಿಧ ಸಂಘ ಸಂಸ್ಥೆಗಳಿಗೆ, ಪಂಚಾಯ್ತಿಗಳಿಗೆ, ಲೋಕಸಭೆ, ವಿಧಾನ ಮಂಡಳಗಳಿಗೆ ಪ್ರತಿನಿಧಿಗಳನ್ನು ಆರಿಸಿ ಕಳಿಸುತ್ತೇವೆ. ಚುನಾವಣೆಗೆ ಸ್ಪರ್ಧಿಸಿದಾಗ ಅವರು ನೀಡಿದ ಆಶ್ವಾಸನೆಗಳು ಒಂದೆರಡಲ್ಲ! ಅವರು ಗೆದ್ದ ನಂತರ ಅವುಗಳನ್ನೆಲ್ಲಾ ಪಾಲಿಸುತ್ತಾರೆಯೇ? ಈ ಬಗ್ಗೆ ನಿಗಾ ಇಡುವುದಕ್ಕಾಗಿಯೇ ಈ ಅಂಕಣ. ನಿಮ್ಮ ಪ್ರತಿನಿಧಿ ಯಾವ ಸಮಯದಲ್ಲಿ ಯಾವ ಆಶ್ವಾಸನೆ ನೀಡಿದರು? ಅದನ್ನು ಈಡೇರಿಸಿದರೇ? ಇಲ್ಲವೇ? ಈ ಬಗ್ಗೆ ಚಿಕ್ಕದಾಗಿ ಬರೆಯಿರಿ.

ಅಡುಗೆ ಮನೆ

ಇದು ಮಹಿಳೆಯರ ಅಂಕಣ. ಮಹಿಳೆಯರು ತಮಗೆ ಗೊತ್ತಿರುವ ಅಡುಗೆಗಳ ಬಗ್ಗೆ ಅವುಗಳನ್ನು ತಯಾರಿಸುವ ವಿಧಾನದ ಬಗ್ಗೆ ಸಂಕ್ಷಿಪ್ತವಾಗಿ ಬರೆಯಬಹುದು. ಬರಹದ ಜತೆಗೆ ತಮ್ಮದೊಂದು ಭಾವಚಿತ್ರ ಕಳಿಸಿ.

ಬಿಸಿಲ ಬದುಕು ಮಾಸ ಪತ್ರಿಕೆ

ಅಂಕುರ ಪ್ರಕಾಶನ, ಅಂಚೆ ಪೆಟ್ಟಿಗೆ : 7951

ಬಸವೇಶ್ವರ ನಗರ, ಬೆಂಗಳೂರು- 560 079

ರಾಣೇಬೆನ್ನೂರು - ಹೈಬ್ರೀಡ್ ಬೀಜೋತ್ಪಾದನೆಯ ತವರು

ಇಲ್ಲಿನ ರೈತರು ಬೀಜ ಬಿತ್ತಿ ನೋಟು ಬೆಳೆದರು!

○ ಪ್ರೊ. ಕೆ.ಎಚ್.ಮುಕ್ಕಣ್ಣನವರ
ಮುಖ್ಯಸ್ಥರು, ಕನ್ನಡ ವಿಭಾಗ,
ಆರ್.ಟಿ.ಇ.ಎನ್.ಕಾಲೇಜು,
ರಾಣೇಬೆನ್ನೂರು.

○ ಶೇಖರ ಭೀಮಪ್ಪ ಮಲ್ಲೂರ
ಉಪನ್ಯಾಸಕರು, ಯಾಂತ್ರಿಕ ವಿಭಾಗ,
ಶ್ರೀ ತರಳಬಾಳು ತಾಂತ್ರಿಕ ಮಹಾವಿದ್ಯಾಲಯ
ರಾಣೇಬೆನ್ನೂರು.

ಧಾರವಾಡ ಜಿಲ್ಲೆಯ ರಾಣೇಬೆನ್ನೂರು ಪ್ರಪಂಚದ ಭೂಪಟದಲ್ಲಿ ದಾಖಲಾಗುವಷ್ಟು ದೇಶದ ಗಮನ ಸೆಳೆದಿದೆಯೆಂದರೆ ಆಶ್ಚರ್ಯವಾಗಬಹುದಲ್ಲವೇ? ಹೌದು, ಈ ನಗರದ ಯಾವುದೇ ಮೂಲೆಯಲ್ಲಿ ನಿಂತು ಕಲ್ಲೆಸೆದರೂ ಅದು ಒಂದಿಲ್ಲೊಂದು ಬೀಜ ಕಂಪನಿಯ ಕಚೇರಿಯೋ, ಪ್ಲಾಂಟಿಗೋ, ನರ್ಸರಿಗೋ ಇಲ್ಲವೇ ಬೀಜ ಮಾರಾಟ ಕೇಂದ್ರಗಳಿಗೋ ಹೋಗಿ ಬೀಳಬಹುದಾಗಿದೆ. ಈ ನಗರ ಬೀಜೋತ್ಪಾದನೆಗೆ ಅಷ್ಟು ಪ್ರಸಿದ್ಧಿಯಾಗಿದೆ.

ಬೆಂಗಳೂರಿನಿಂದ ಪುಣೆಗೆ ಸಾಗುವ ರಾಷ್ಟ್ರೀಯ ಹೆದ್ದಾರಿಗುಂಟ (ಎನ್.ಎಚ್.೪) ಸಾಗಿದರೆ ಹರಿಹರದ ಬಳಿ ತುಂಗಭದ್ರೆ, ಚಿತ್ರದುರ್ಗ-ಧಾರವಾಡ ಜಿಲ್ಲೆಗಳನ್ನು ಭೌಗೋಳಿಕವಾಗಿ ಬೇರ್ಪಡಿಸುವ ಸೀಮಾ ರೇಖೆಯಾಗಿ ಹರಿದಿದ್ದಾಳೆ. ನದಿಯನ್ನು ದಾಟಿ ಇಪ್ಪತ್ತು ಕಿ.ಮೀ. ಸಾಗಿದರೆ ಸಾಕು ಅಲ್ಲಿ ಮೊದಲು ಸಿಗುವ ದೊಡ್ಡ ನಗರವೇ ರಾಣೇಬೆನ್ನೂರು. ಧಾರವಾಡ ಜಿಲ್ಲೆಯ ಈ ಗಡಿ ತಾಲೂಕು ಉತ್ತರ ಕರ್ನಾಟಕಕ್ಕೆ ದಕ್ಷಿಣದ ಹೆಬ್ಬಾಗಿಲು.

ಅರಸಿಬಂದ ಅವಕಾಶ

ಹಲವಾರು ರಾಷ್ಟ್ರೀಯ ಹಾಗೂ ಬಹುರಾಷ್ಟ್ರೀಯ ಬೀಜೋತ್ಪಾದನ ಕಂಪನಿಗಳು ತಲೆಯೆತ್ತಿ ಭಾರತದಲ್ಲಿ ಬೀಜೋತ್ಪಾದನೆ ಮಾಡಲು ಸೂಕ್ತ ತಾಣಕ್ಕಾಗಿ ಹುಡುಕಾಟ ನಡೆಸಿದ್ದವು. ಅಂಥವುಗಳಲ್ಲಿ ಇಂಡೋ ಅಮೆರಿಕನ್ ಹೈಬ್ರೀಡ್ ಸೀಡ್ಸ್ ಕಂಪನಿಯು ಒಂದು. ಇಂತಹ ಬೀಜೋತ್ಪಾದನೆಯ ಕಂಪನಿಯೊಂದನ್ನು ಮೊಟ್ಟಮೊದಲು ಇಲ್ಲಿಗೆ ಪರಿಚಯಿಸಿದ ಕೀರ್ತಿ ಕೃತಜ್ಞತೆ ಪ್ರೊ. ಎಸ್.ಎಲ್.ಹಿರೇಗೌಡರ ಅವರಿಗೆ ಸಲ್ಲುತ್ತದೆ. ಅಮೇರಿಕೆಯಿಂದ ತಲೆತುಂಬ ಸಂಕರ ತಳಿ ಬೀಜಗಳ ಮಾಹಿತಿಯನ್ನು ಹೊತ್ತುತಂದ ರಾಷ್ಟ್ರೀಯ ಕಂಪನಿಯ ಒಡೆಯರಾದ ಮನಮೋಹನ ಅತ್ತಾವರ ಅವರೊಂದಿಗೆ ಸಂಪರ್ಕಿಸಿ ಹೈಬ್ರೀಡ್ ಟೊಮೆಟೋ ಬೀಜಗಳನ್ನು ಬೆಳೆದುಕೊಡುವ ಒಪ್ಪಂದ ಮಾಡಿಕೊಂಡರು. ಆ ವೇಳೆಗಾಗಲೇ ರಾಣೇಬೆನ್ನೂರು ಬೀಜೋತ್ಪತ್ತಿಯಲ್ಲಿ ಹೆಸರು ಮಾಡಿದೆ ಎಂಬುದನ್ನರಿತು ಅವರು ಇಲ್ಲಿಗೆ ಬಂದರು. ಹವಾಗುಣ, ಮಣ್ಣಿನ ಮಾದರಿ, ಉತ್ಸುಕ ರೈತರನ್ನು ಕಂಡು ಹಿರೇಗೌಡರಿಗೆ ಹುಡುಕುತ್ತಿದ್ದ ಬಳ್ಳಿ ಕಾಲಿಗೆ ತೊಡರಿದಂತಾಯಿತು.

ಪ್ರೊ. ಹಿರೇಗೌಡರು, ಹೈಬ್ರೀಡ್ ಹತ್ತಿ ಬೀಜ ಮಾಡಿದ ಅನುಭವವುಳ್ಳ ರೈತರನ್ನು ಕಲೆಹಾಕಿ ಹೈಬ್ರೀಡ್ ಟೊಮೆಟೋ ಬೀಜ



ಇಂಡೋ-ಅಮೆರಿಕನ್ ಸೀಡ್ಸ್ ಕಂಪನಿಯ ಗಾಜಿನಮನೆ (Green House)

ಬೆಳೆಯಲು ಆದಾಯದ ಆಸೆ ತೋರಿಸಿ ಮನವೊಲಿಸಿದರು. ಬೀಜೋತ್ಪಾದನೆಯ ಕೆಲಸ ಪ್ರಾರಂಭಿಸಿದರು. ಒಂದೆರಡು ಬೆಳೆ ತೆಗೆಯುವಷ್ಟರಲ್ಲಿ ರೈತರಿಂದ ಒಳ್ಳೆಯ ಪ್ರತಿಕ್ರಿಯೆ ಬರತೊಡಗಿತು. ಅತ್ತಾವರ ಅವರಲ್ಲಿ ಭವಿಷ್ಯದ ಉಜ್ವಲ ಬೆಳ್ಳಿ ಕಿರಣಗಳು ಕಂಡಿರಬೇಕು. ಆ ಕ್ಷಣದಲ್ಲಿ ಅವರಿಗೆ ಏನು ತೋಚಿತೋ ಏನೋ ೧೯೮೨ರಲ್ಲಿ ತಮ್ಮ ಕಂಪೆನಿಯ ನಜಾತನ ಕಚೇರಿಯೊಂದನ್ನು ಕೆ.ರಘು ಅವರ ಮೇಲ್ವಿಚಾರಣೆಯಲ್ಲಿ ಇಲ್ಲಿ ತೆರೆದರು. ಬೀಜ ಮಾಡಿ ರೊಕ್ಕ ಬಳೆದುಕೊಳ್ಳಬಹುದೆಂಬುದನ್ನು ಅರಿತ ರೈತರು ಈ ಕೃಷಿಯತ್ತ ಧಾವಿಸಿದರು. ನಂಬಲಾಗದಷ್ಟು ನೋಟುಗಳನ್ನು ಎಣಿಸಿ ಕೊಳ್ಳ ತೊಡಗಿದರು.

ಶಾಸಕ ಕರ್ಜಗಿ ಕೊಡುಗೆ


ರಾಣೇಬೆನ್ನೂರು ಭಾಗದಲ್ಲಿ ಈ ಸಂಕರ ತಳಿ ಬೀಜಗಳು ಕಾಣಿಸಿಕೊಂಡುದರ ಹಿಂದೆ, ಮೊದಲು ಕೃಷಿ ಅಧಿಕಾರಿಯಾಗಿದ್ದು ಈಗ ಶಾಸಕರಾಗಿರುವ ವಿ.ಎಸ್.ಕರ್ಜಗಿ ಅವರ ಪರಿಶ್ರಮವಿದೆಯೆಂಬುದು ಬಹುಶಃ ಬಹಳಷ್ಟು ಜನಕ್ಕೆ ಗೊತ್ತಿರಲಿಕ್ಕಿಲ್ಲ. ಮೂಲತಃ ಕೃಷಿಕರಾದ ಅವರು ಜೀವನೋಪಾಯಕ್ಕಾಗಿ ಆಶ್ರಯಿಸಿದ್ದು 'ಗ್ರಾಮಸೇವಕ' ಹುದ್ದೆ. ಶ್ರದ್ಧೆಯಿಂದ ಅದನ್ನು ನಿರ್ವಹಿಸಿದ ಕುರುಹಿಗಾಗಿ ೧೯೫೫ರಲ್ಲಿ ರಾಜ್ಯ ಸರಕಾರ ಹಾಗೂ ಕೇಂದ್ರ ಸರಕಾರಗಳಿಂದ 'ಅತ್ಯುತ್ತಮ ಗ್ರಾಮಸೇವಕ'ರೆಂದು ಸನ್ಮಾನಿತರಾದರು. ವೃತ್ತಿಯಿಂದ ಪಡೆದ ಅನುಭವ ಬೀಜೋತ್ಪಾದನೆಯತ್ತ ತಿರುವುಪಡೆದ ಸಂದರ್ಭವೊಂದನ್ನು ಅವರು ಬಲು ಸ್ವಾರಸ್ಯಕರವಾಗಿ ಮೆಲುಕುಹಾಕುತ್ತಾರೆ. ಹೈಬ್ರೀಡ್ ಜೋಳದ ಬೀಜಗಳಿಗೆ ಬಲು ಬೇಡಿಕೆಯಿದ್ದ ಆ ದಿನಗಳಲ್ಲಿ ಸ್ವತಃ ಬೀಜೋತ್ಪಾದನೆಗೆ ತೊಡಗಿದರು. ಪ್ರಾರಂಭದಲ್ಲಿ ಎಡವಿದರೂ ಎದೆಗುಂದದೇ ಹಟಬಿಡದ ತ್ರಿವಿಕ್ರಮನಂತೆ ಮತ್ತೆ ಮತ್ತೆ ಪ್ರಯತ್ನಿಸಿದರು. ಅದರಲ್ಲಿ ಅಪಾರ ಯಶಸ್ಸು ಗಳಿಸಿದರು. ಈ ಅನುಭವ ಕೇವಲ ಸ್ವಾರ್ಥಕ್ಕಾಗಿ ಉಪಯೋಗವಾಗಬಾರದು, ಸಮಾಜಕ್ಕೂ ಸಲ್ಲಬೇಕೆಂಬ ಸದಾಸೆಯಿಂದಾಗಿ ಹಲವಾರು ರೈತರಿಗೆ ಬೀಜದ ತಳಿಗಳ ಉತ್ಪಾದನಾ ಮಾಹಿತಿಯನ್ನು ವೈಜ್ಞಾನಿಕವಾಗಿ ತಿಳಿಸಿಕೊಡುತ್ತ ಅವರನ್ನೂ ಬೀಜೋತ್ಪಾದನೆಯಲ್ಲಿ ತೊಡಗಿಸಿದರು. ಬೀಜೋತ್ಪಾದನೆಯ ವ್ಯಾಪ್ತಿ ಹೆಚ್ಚುತ್ತ ಹೋದಂತೆ ನೌಕರಿಗೆ ರಾಜೀನಾಮೆಯಿತ್ತು ಪೂರ್ಣವಾಗಿ ವಿವಿಧ ಜಾತಿಯ ಸಂಕರ ತಳಿಗಳನ್ನು ಬೆಳೆಯತೊಡಗಿದರು. ಪರಿಣಾಮವಾಗಿ ಹೈಬ್ರಿಡ್ ಜೋಳ, ಮೆಕ್ಕೆಜೋಳ, ಸಜ್ಜೆ, ಸೂರ್ಯಕಾಂತಿ ಹಾಗೂ ಎಚ್-೪ ಹತ್ತಿ, ವರಲಕ್ಷ್ಮೀ, ಮುಂತಾದ ಸಂಕರ ಹತ್ತಿ ಬೆಳೆಯ ಬೀಜಗಳನ್ನು ಇಲ್ಲಿಯ ರೈತರು ಚೆನ್ನಾಗಿ ಬೆಳೆದು ತೋರಿಸುತ್ತ ರಾಜ್ಯಾದ್ಯಂತ ಹೆಸರು ಮಾಡಿದರು. ಈ ಪ್ರದೇಶದಲ್ಲಿ ಸಂಕರ ತಳಿ ಬೀಜೋತ್ಪತ್ತಿಯ ಪರಿಚಯವಾದುದು ಹೀಗೆ.

ಕರ್ನಾಟಕ ರಾಜ್ಯ ಬೀಜ ನಿಗಮಕ್ಕೆ ೧೯೮೧ರಿಂದ ಸತತವಾಗಿ ಐದು ಬಾರಿ ಆಯ್ಕೆಗೊಂಡ ಅವರ ನಿರ್ದೇಶಕರಾಗಿ, ಡೈರೆಕ್ಟರ್ ಆಗಿ ಈಗ ಶಾಸಕರಾಗಿ ಸಾರ್ವಜನಿಕ ಸೇವೆಯಲ್ಲಿ ತೊಡಗಿದ್ದಾರೆ. ಈಗಲೂ ಕೂಡ ತಮ್ಮ ಮೂಲ ವೃತ್ತಿಗೆ ಅಂಟಿಕೊಂಡೇ ಇರುವುದು ಅವರ ಕೃಷಿ ಪ್ರೀತಿಗೆ ಸಾಕ್ಷಿಯಾಗಿದೆ.

ಟೊಮೆಟೋ ಸಂಕರ ಕ್ರಿಯೆ

ಮಾನವರಲ್ಲಿರುವಂತೆ, ಬಹುತೇಕ ಸಸ್ಯಗಳಲ್ಲಿ ಹೆಣ್ಣು-ಗಂಡುಗಳ ಪ್ರಭೇಧವಿದೆ. ಟೊಮೆಟೋ ಸಸಿಗಳನ್ನು ಬೆಳೆಸುವುದೂ ಒಂದು ವೈಜ್ಞಾನಿಕ ಕಲೆ. ಕಂಪನಿಯು ೧.೫ ಅಥವಾ ೧ ಅಳತೆಯ ಕಟ್ಟಿಗೆಯ ಪೆಟ್ಟಿಗೆಗಳಲ್ಲಿ ಗಂಡು-ಹೆಣ್ಣು ಬೀಜಗಳನ್ನು ಬೇರೆ ಬೇರೆಯಾಗಿ ಬೆಳೆಸಿ ರೈತನಿಗೆ ನೀಡುತ್ತದೆ. ಈ ಸಸಿಗಳನ್ನು ಕಿತ್ತು ೪ ಇಂಚು ಎತ್ತರದ ಏರು ಮಡಿಗಳಲ್ಲಿ ಪುನಃ ನರ್ಸರಿ ಮಾದರಿಯಲ್ಲಿ ಬೆಳೆಸಿದ ೨೫ ದಿನಗಳಿಗೆ ಸಸಿ ನಾಟಿಗೆ ಸಿದ್ಧವಾಗುತ್ತದೆ. ಗಂಡು-ಹೆಣ್ಣು ಸಸಿಗಳನ್ನು ಬೇರೆ ಬೇರೆಯಾಗಿ ನಾಟಿ ಮಾಡಿದ ೫೦ ದಿನಗಳಲ್ಲಿ ಸಸಿ ಬೆಳೆದು ಹೂ ಬಿಡತೊಡಗುತ್ತದೆ. ಸಂಕರ ಕ್ರಿಯೆ (ಕ್ರಾಸಿಂಗ್) ಪ್ರಾರಂಭವಾಗುವುದು ಈ ಹಂತದಿಂದ.

ಇಳಿ ಹೊತ್ತಿನಲ್ಲಿ ಗಂಡು ಗಿಡದ ಹೂಗಳನ್ನು ಕಿತ್ತು ಬಟ್ಟಲಿನಲ್ಲಿ ಸಂಗ್ರಹಿಸಿ, ಬಿಸಿಲಿನಲ್ಲಿ ಒಣಗಿಸಿ, ಸೋಸಿ ಬಂದ ಪರಾಗದಿಂದ, ಮರುದಿನ ಮುಂಜಾನೆ ಬಿಸಿಲೇರುವ ಮುನ್ನ ಹೆಣ್ಣು ಹೂವಿನ ಕೇಸರಕ್ಕೆ



ರಾಷ್ಟ್ರೀಯ ಹೆದ್ದಾರಿಯಲ್ಲಿ ತಲೆಯೆತ್ತಿರುವ ಮಹಿಕೋ ಕಂಪನಿ

ಮಲಬದ್ಧತೆ

ಎಲ್ಲ ರೋಗಕ್ಕೆ ಇದೇ ಮೂಲ ವೆಂದರೂ ತಪ್ಪಲ್ಲ. ಪ್ರತಿದಿನ ಮಲವಿಸರ್ಜನೆ ಸರಿಯಾಗಿ ಆಗದೇ ಅದಕ್ಕೋಸ್ಕರ ಕೆಲವರು ಕಾಫಿ, ಚಹಾಸೇವನೆ, ಸಿಗರೇಟು ಸೇದುವುದನ್ನು ಅಭ್ಯಾಸ ಮಾಡಿಕೊಂಡಿರುತ್ತಾರೆ.

ಹಸಿರು ಸೊಪ್ಪು ತರಕಾರಿಗಳ ಅಧಿಕ ಸೇವನೆ, ಹಣ್ಣುಗಳ ಸೇವನೆ, ಯೋಗಾಭ್ಯಾಸ, ವ್ಯಾಯಾಮಗಳಿಂದ ಹಾಗೂ ಮೊಳಕೆ ಬಾರಿಸಿದ ಕಾಳುಗಳ ಸೇವನೆಯಿಂದ ಮಲಬದ್ಧತೆ ನಿವಾರಣೆ ಯಾಗುತ್ತದೆ.

ಊಟ ಮಾಡುವಾಗ ಪ್ರತಿಯೊಂದು ತುತ್ತನ್ನು ಚೆನ್ನಾಗಿ ಅಗಿದು ತಿನ್ನಬೇಕು. ವಾರಕ್ಕೊಂದು ಬಾರಿ ಹಗಲು ಊಟ ಮಾಡಿ ರಾತ್ರಿ ಬರಿಯ ತರಕಾರಿ ಸೇರಿಸಿ ಮಜ್ಜಿಗೆ ಕುಡಿಯಬೇಕು. ಇದರಿಂದ ಮಲಬದ್ಧತೆ ಯನ್ನು ನಿವಾರಿಸಿಕೊಳ್ಳಬಹುದು.

ಸಾಧ್ಯವಾದಷ್ಟು ಸೌತೆಕಾಯಿ, ಹೀರೆಕಾಯಿ, ಪಡುವಲಕಾಯಿ, ಮೂಲಂಗಿ, ಗಜ್ಜರಿ, ಬೀಟ್‌ರೂಟ್, ಬೆಂಡಕಾಯಿ, ಈರುಳ್ಳಿ ಮೊದಲಾದ ತರಕಾರಿಗಳನ್ನು ಊಟದಲ್ಲಿ ಹೆಚ್ಚಾಗಿ ಬಳಸಬೇಕು. ಹಸಿಯಾಗಿ ಉಪಯೋಗಿಸಿದರೆ ಇನ್ನೂ ಒಳ್ಳೆಯದು.

ಪ್ರತಿ ದಿನ ಪಪ್ಪಾಯಿ ಹಣ್ಣನ್ನು ಊಟದ ನಂತರ ಅಥವಾ ಊಟಕ್ಕಿಂತ ಮೊದಲು ತಿನ್ನುವುದು ಒಳ್ಳೆಯದು.

ಸೋನಾಮುಖಿ, ಜೇಷ್ಟಮಧು, ಉತ್ತುತ್ತಿ, ಒಣದ್ರಾಕ್ಷಿ ಇವುಗಳನ್ನು ಐದೈದು ಗ್ರಾಂನಷ್ಟು ಸೇರಿಸಿ ಕುಟ್ಟಿ ಎರಡು ಲೋಟ ನೀರಿನಲ್ಲಿ ಕಷಾಯಕ್ಕಿಟ್ಟು, ಕುದಿಸಿ ಅರ್ಧಲೋಟಕ್ಕಿಳಿಸಿ ನಿತ್ಯ ರಾತ್ರಿ ಮಲಗುವಾಗ ಕುಡಿಯಬೇಕು.

ಸೋನಾಮುಖಿ, ಬಿಡಾಲವಣ, ಬಡೇಸೋಪುಗಳ ಸಮಪ್ರಮಾಣ ಪುಡಿ ಅರ್ಧ ಲೋಟ (೫ ಗ್ರಾಂ) ದಷ್ಟು ರಾತ್ರಿ ಮಲಗುವ ಮೊದಲು ಬಿಸಿನೀರಿನಲ್ಲಿ ಸೇರಿಸಿ ಕುಡಿಯಬೇಕು

○ ಡಾ. ವಿ.ಬಿ.

ಗಂಡು ಹೂವಿನ ಪರಾಗವನ್ನು, ಈ ಕಾರ್ಯಕ್ಕೆಂದೇ ವಿಶೇಷವಾಗಿ ಸಿದ್ಧಪಡಿಸಿರುವ ಉಪಕರಣಗಳ ಮೂಲಕ ನವಿರಾಗಿ ಮುಟ್ಟಿಸಬೇಕು. ಈ ಉಪಕರಣಗಳನ್ನು ಕಂಡುಹಿಡಿದು ಅಭಿವೃದ್ಧಿಪಡಿಸಿದವರು ಇಲ್ಲಿಯ ಅನುಭವಿಕ ರೈತರೇ ಆಗಿರುವು ದೊಂದು ವಿಶೇಷ. ಕ್ರಾಸ್ ಮಾಡಿದ ಗುರುತಿಗಾಗಿ ಅದರ ಎರಡು ದಳಗಳನ್ನು ಕತ್ತರಿಸಬೇಕು, ಪರಾಗಸ್ಪರ್ಶ ಮಾಡದ ಹೂಗಳನ್ನು ಅಗಲೇ ಕಿತ್ತು ಹಾಕಬೇಕು. ಅದು ಅರ್ಧತಾಸಿನಲ್ಲಿ ಗರ್ಭಾಂಕುರಗೊಳ್ಳುತ್ತದೆ. ಅನಂತರದ ಐದಾರು ದಿನಗಳಲ್ಲಿ ಹೊಸ ತಳಿಯ ಕಾಯಿ ಗಿಡದಲ್ಲಿ ಕಾಣಿಸಿಕೊಳ್ಳುತ್ತದೆ. ಅದು ಹಣ್ಣಾಗಿ ಮಾಗುತ್ತಿದ್ದಂತೆ ದಳ ಕತ್ತರಿಸಿದ ಹಣ್ಣುಗಳನ್ನು ಮಾತ್ರ ಗಿಡದಿಂದ ಬಿಡಿಸಿ, ನೀರು ಮುಟ್ಟಿಸದಂತೆ, ಅದಕ್ಕೆಂದೇ ವಿಶೇಷವಾಗಿ ಮಾಡಿದ ಕಲ್ಲಿನ ಬಾನಿಯಲ್ಲಿ ಹಾಕಿ, ತುಳಿದು ಒಂದ ದಿನ ಕಳೆಯಲು ಬಿಡಬೇಕು. ಮರುದಿನ ಮುಂಜಾನೆ ರಸದಿಂದ ಬೀಜಗಳನ್ನು ಬೇರ್ಪಡಿಸಿ ಒಣಗಿಸಿದ ಬಳಿಕ ಕಂಪನಿಗೆ ನೀಡಬೇಕು. ಇದಕ್ಕೆಲ್ಲ ಅಪಾರ ಪರಿಣತಿಬೇಕು. ಈ ಸೂಕ್ಷ್ಮ ಕಲೆಯ ವೈಜ್ಞಾನಿಕ ಮಾಹಿತಿಯನ್ನು ರೈತರಿಗೆ ತಿಳಿಸಿಕೊಟ್ಟು ಬೀಜೋತ್ಪಾದನೆಗೆ ತೊಡಗಿಸಿದ ಕೀರ್ತಿ ಪ್ರೊ. ಎಸ್.ಎಲ್. ಹಿರೇಗೌಡರ ಮತ್ತು ಇಂಡೋ ಅಮೇರಿಕನ್ ಕಂಪನಿಯ ಕೃಷಿ ತಜ್ಞರಿಗೆ ಸಲ್ಲುತ್ತದೆ. ಒಮ್ಮೆ ಈ ಕಂಪನಿಯ ಟೊಮೆಟೋ ಸಂಕರ ತಳಿ ಸಿದ್ಧವಾಗಿ ಮಾರುಕಟ್ಟೆಯಲ್ಲಿ ಜನಪ್ರಿಯವಾಗು ತ್ತಿದ್ದಂತೆ, ಮಹಿಕೋ, ಸ್ಯಾಂಡೋಜಿನಂಥ ಕಂಪನಿಗಳೂ ಇಲ್ಲಿಗೆ ಬಂದು ಬೀಜೋತ್ಪತ್ತಿಗೆ ತೊಡಗಿ ಅವೂ ಯಶಸ್ವಿಯಾದವು.

ಸಂಕರ ಬೆಳೆಗಳು

ಒಮ್ಮೆ ಟೊಮೆಟೋ ಸಂಕರ ತಳಿ ಇಲ್ಲಿ ಯಶಸ್ವಿಯಾಗುತ್ತಿದ್ದಂತೆ ಹತ್ತು ಹಲವು ಬಗೆಯ ತರಕಾರಿ ಸಂಕರ ಬೀಜಗಳನ್ನು ಕಂಪನಿಗಳು ಬೆಳೆಯಲಿಕ್ಕೆ ಆರಂಭಿಸಿದವು.

ಹೈಬ್ರಿಡ್ ಜೋಳ ಬಿಟ್ಟರೆ ಇಲ್ಲಿ ಬೆಳೆಯಲಾರದ ಬೀಜವೇ ಇಲ್ಲ. ಟೊಮೆಟೋ, ಮೆಣಸಿನಕಾಯಿ (ಚಿಲ್ಲೀ), ಹೀರೇ, ಹಾಗಲ, ಬೆಂಡೆ, ಬದನೆ, ಕಲ್ಲಂಗಡಿ, ಕುಂಬಳ, ಕರಬೂಜ, ಈರುಳ್ಳಿ ಮುಂತಾದ ಬೆಳೆಗಳು ಸೂಕ್ಷ್ಮಾತಿ ಸೂಕ್ಷ್ಮವಾಗಿ ಬೆಳೆವ ಸಂಕರ ಬೀಜಗಳಾದರೆ ಸಂಕರೇತರ (ಓ.ಪಿ.) ಬೀಜಗಳಲ್ಲಿ ಟೊಮೆಟೋ, ಬೆಂಡೆ, ಬದನೆ, ಚವಳಿ, ತಿಂಗಳ ಹುರುಳಿ, ಅಲಸಂದಿ, ಕಡಲೆ, ಗೋಧಿ, ಹೆಸರು, ತೊಗರಿ, ಸೂರ್ಯಕಾಂತಿ, ಮೆಕ್ಕೆಜೋಳ, ಸಜ್ಜೆ ಇತ್ಯಾದಿಗಳನ್ನು ಹೆಸರಿಸ ಬಹುದು. ಈ ಬೀಜಗಳನ್ನು ಈಗ ಸಾಮಾನ್ಯ ವಾಗಿ ಎಲ್ಲ ಕಂಪನಿಗಳೂ ಕೊಡುತ್ತವೆ.

ಸೌತೆ ಮಿಡಿಗಳನ್ನು ಮಾತ್ರ ಟ್ರೇನ್ ಆಟ್ರೋ ಪ್ಯಾಕ್ ಮತ್ತು ಯುನಿಕಾರ್ನ್ ಕಂಪನಿಗಳು ಬೆಳೆದರೆ ಅಸ್ಲೆ ಕಂಪನಿಯು ಸೌತೆ ಮಿಡಿಯ ಜೊತೆಗೆ ಮೆಣಸಿನ ಕಾಯಿ ಮಿಡಿಗಳನ್ನು ಬೆಳೆಸುತ್ತದೆ.

ಈ ಜೀವನಾವಶ್ಯಕ ಬೆಳೆಗಳಲ್ಲದೆ ಹೂದೋಟಗಳ ಅಂದವನ್ನು ಹೆಚ್ಚಿಸುವ ಬಣ್ಣ ಬಣ್ಣದ ನಾನಾ ಜಾತಿಯ ಹೂವಿನ ಬೀಜಗಳೂ ಇವೆ. ಗೈಲಾರ್ಡಿಯ, ಶಾಲ್ವಿಯ, ತನಿವರ್ಜಿಯಾ, ರಿಂಕಾ, ಮೆರಿಗೋಲ್ಡ್, ಜಲಪಂ, ಹೆವನ್ಲಿಬ್ಲೂ, ಕಾಸ್‌ಮನ್, ಪೆಟೋನಿಯಾ, ಜೀನಿಯಾ, ಕೋರಿಯಾ, ಆಷ್ಟಿಸ್ ಮುಂತಾದ ನೂರಾರು ಜಾತಿಯ ಹೂ ಬೀಜಗಳನ್ನು ಸಟನ್ಸ್, ನಾಮಧಾರಿ, ಯುನಿಕಾರ್ನ್ ಇಂಡೋ ಅಮೇರಿಕನ್, ಇ.ಸಿ.ಎಲ್.ಎಗ್ಗಿಂ ಕಂಪನಿಗಳು ನೀಡುತ್ತವೆ.

ಸಾಮಾನ್ಯವಾಗಿ ಎಲ್ಲ ಕಂಪನಿಗಳೂ ರೈತರಿಗೆ ಬೀಜ ಬೆಳೆದ ಗುತ್ತಿಗೆಯನ್ನು ಒಂದು ಕ್ಷೇತ್ರಕ್ಕೆ (ಪ್ಲಾಟ್) ಇಂತಿಷ್ಟು ಕಿ.ಲೋ. ಬೀಜ ಉತ್ಪಾದಿಸಬೇಕು, ಆ ಬೀಜದ ಬೆಲೆ ಇಷ್ಟು ಎಂಬುದನ್ನು ಮೊದಲೇ ನಿಗದಿ ಮಾಡಿರುತ್ತವೆ. ಅದಕ್ಕೆ ಸಾಕಾಗುವಷ್ಟು ಹೆಣ್ಣು-ಗಂಡು ಬೀಜಗಳು ಅಥವಾ ಸಸಿಗಳು, ವೈಜ್ಞಾನಿಕ ಸಲಹೆ, ಬೆಳೆಯ ಮೇಲ್ವಿಚಾರಣೆ ಇತ್ಯಾದಿ ಎಲ್ಲ ಹೊಣೆಯನ್ನು ಕಂಪನಿಯ ಪ್ರತಿನಿಧಿಗಳೇ ನೋಡಿಕೊಳ್ಳುತ್ತಾರೆ.

ಸಂಕರ ತಳಿಯ ಬೀಜವಿರಲಿ, ಸೌತೆ, ಮೆಣಸಿನ ಮಿಡಿಯಿರಲಿ, ಹೂವಿನ ಬೀಜವಿರಲಿ, ಅದನ್ನು ನಿಷ್ಠೆ, ಪ್ರಾಮಾಣಿಕತೆಯಿಂದ 'ಕುಲಗೆಡ'ದಂತೆ ಬೆಳೆಯ ಎಲ್ಲ ಕ್ಷಮತೆ ಇಲ್ಲಿಯ ರೈತನಿಗಿದೆ. ಯಾವ ಬೆಳೆಯನ್ನು ಯಾವ ಕಾಲದಲ್ಲಿ ಇಡಬೇಕು ಅದಕ್ಕೆ ತಗಲುವ ರೋಗಗಳಾವುವು, ಅದನ್ನು ನಿಯಂತ್ರಿಸಲು ಸಿಂಪಡಿಸಬೇಕಾದ ಕ್ರಿಮಿನಾಶಕಗಳಾವುವು, ಯಾವ ಹದಕ್ಕೆ ನೀರು ಗೊಬ್ಬರ ಕೊಡಬೇಕು, ಯಾವ ಬೆಳೆಗೆ ಯಾವ ಪರಾಗಸ್ಪರ್ಶ ಯಾವ ಕಾಲದಲ್ಲಿ ಆಗಬೇಕು,

ಯಾವ ಬೆಳೆಯ ಕೊಯ್ಲು ಯಾವ ಕಾಲದಲ್ಲಿ ಆಗಬೇಕು ಎಂಬೆಲ್ಲಾ ಮಾಹಿತಿಗಳು ಅವರ ನಾಲಿಗೆಯ ಮೇಲೆಯೇ ಇವೆ. ರಾಣೇಬೆನ್ನೂರಿನ ಸುತ್ತಮುತ್ತ ವಿಶೇಷವಾಗಿ ಪಶ್ಚಿಮ ಭಾಗದ ಯಾವುದೇ ಊರಿನ ಯಾವುದೇ ರೈತನನ್ನು ಕೇಳಿದರೂ ವೈಜ್ಞಾನಿಕ ಬೀಜೋತ್ಪಾದನೆಯ ವಿಧಿ-ವಿಧಾನಗಳನ್ನು ಅರಳು ಹುರಿದಂತೆ ಪಟಪಟನೆ ಹೇಳಿಬಿಡುತ್ತಾನೆ. ಅಷ್ಟು ಪರಿಣಿತ ಇಲ್ಲಿಯ ರೈತ. ಆಲಸಿಗಳು, ಸೋಮಾರಿಗಳು, ಮೈಗಳ್ಳರಿಂದ ಆಗದ ಕೆಲಸವಿದು.

ರೈತರಿಗೆ ಆಕರ್ಷಣೆ

ಒಂದು ಟೊಮೆಟೋ ಪ್ಲಾಟ್ ಮಾಡಿದರೆ ೬೦ ರಿಂದ ೮೦ ಸಾವಿರ, ಕುಂಬಳ ಪ್ಲಾಟ್ ಮಾಡಿದರೆ, ೮೦ ಸಾವಿರದಿಂದ ಒಂದು ಲಕ್ಷ. ಕಲ್ಲಂಗಡಿ, ಕರಬೂಜ, ಹೀರೆ, ಹಾಗಲ, ಬೆಂಡೆ, ಬದನೆ ಮುಂತಾದ ಯಾವುದೇ ತರಕಾರಿ ಸಂಕರ ತಳಿಯ ಬೀಜೋತ್ಪಾದನೆ ಕೈಗೊಂಡರೂ ೪೦ ರಿಂದ ೬೦ ಸಾವಿರ ರೂ. ಸಿಗುವುದು ಗ್ಯಾರಂಟಿ. ಅಂದ ಮೇಲೆ ಯಾವ ರೈತನಿಗೆ ತಾನೇ ಈ ಉದ್ಯಮದತ್ತ ಆಕರ್ಷಣೆ ಆಗದು?

ಎಕರೆಗಟ್ಟಲೆ ಹೊಲವಿರುವ ರೈತ ತನ್ನ ಅರ್ಧ ಎಕರೆಯಷ್ಟು ಹೊಲದಲ್ಲಿ ಸಿಕ್ಕಷ್ಟೇ ನೀರನ್ನು ಮಿತವ್ಯಯವಾಗಿ ಬಳಸಿ ಸಾವಿರಾರು ರೂ.ಗಳನ್ನು ತರುವ ಸಂಕರ ಬೀಜೋದ್ಯಮದತ್ತ ಆಕರ್ಷಿತನಾದುದು ಹೀಗೆ. ಅಂತರ್ಜಲ ಮಟ್ಟ ಗಣನೀಯ ಪ್ರಮಾಣದಲ್ಲಿ ಕುಸಿದಿರುವ ಈ ಭಾಗದಲ್ಲಿ ಅಲ್ಪ ನೀರನ್ನು ರೈತರಿಗೆ ಪ್ರೋತ್ಸಾಹದಾಯಕವಾಗಿ ಹನಿ ನೀರಾವರಿ ಯೋಜನೆ ಅಳವಡಿಸಿಕೊಡುವಲ್ಲಿ ಮುಂದಾಗತೊಡಗಿವೆ.

ಲಾಭದಾಯಕ ಉದ್ದಿಮೆ

ಎಲ್ಲ ತರಹದ ಬೀಜಗಳೂ ರೈತರಿಗೆ ಒಂದೇ ರೀತಿಯ ಲಾಭ ತರಲಾರವು. ಸಂಕರ ಬೀಜಗಳ ಪೈಕಿ ಟೊಮೆಟೋ, ಮೆಣಸಿನಕಾಯಿ, ಕುಂಬಳ, ಕಲ್ಲಂಗಡಿ, ಬದನೆ, ಬೆಂಡೆ ಬೀಜಗಳಿಗೆ ಬೆಲೆ ಹೆಚ್ಚು. ಅದರಲ್ಲೂ ತಳಿ ಆಧಾರದ ಮೇಲೆ ಬೆಲೆಗಳೂ ಉಂಟು. ಬಾಯಲ್ಲಿ ನಿರೂರಿಸುವಂತಹ ಬೆಲೆ ಇರುವ ಈ ಬೀಜಗಳಲ್ಲಿ ಹೆಚ್ಚು ಶ್ರಮವಿರದ ಆದರೆ ಹೆಚ್ಚು ಬೆಲೆ ತರುವ ಬೆಳೆಯೆಂದರೆ ಕುಂಬಳ. ಈ ಬೀಜಕೊಡುವ ಕಂಪನಿಯೆಂದರೆ ರೈತರಿಗೆ ಕಲ್ಪವೃಕ್ಷವಿದ್ದಂತೆ. ಈ ಬೀಜದ ಬೆಳೆ ಬೆಳೆಯಲು ರೈತರ ನೂಕುನುಗ್ಗಲು. ಮೆಣಸಿನ ಬೀಜದ ಬೆಲೆ ಕಣ್ಣುಕುಕ್ಕಿಸುವಂತಿದ್ದರೂ ಅದರಲ್ಲಿ 'ರಿಸ್ಕ್' ಜಾಸ್ತಿ. ಆದುದರಿಂದ ಅದರ ಕಡೆಗೆ ರೈತರ ಒಲವು ಕಮ್ಮಿ. ಸೂರ್ಯಕಾಂತಿ ಒಂದು ಕಾಲಕ್ಕೆ "ಬ್ಲ್ಯಾಕ್ ಗೋಲ್ಡ್" ಬ್ಲ್ಯಾಕ್ ಡೈಮಂಡ್ ಎಂಬ ಪ್ರಖ್ಯಾತಿಯನ್ನು ಹೊಂದಿದ್ದು, ಕ್ವಿಂಟಾಲಿಗೆ ೧೦ ರಿಂದ ೧೨ ಸಾವಿರಗಳ ವರೆಗೂ ಮಾರುಕಟ್ಟೆಯಲ್ಲಿ ಬೆಲೆ ತಂದಿತು. ಆಗ ಇದರ ಲಾಭವಾದುದು ರೈತನಿಗಿಂತ ಮಧ್ಯವರ್ತಿಗಳಿಗೇ ಹೆಚ್ಚು. ಅದೇನೇ ಇದ್ದರೂ ಬೀಜೋತ್ಪಾದನೆ ಈ ಪರಿಸರದ ರೈತರ ಬದುಕಿಗೆ ಬೆಲೆ, ಚಾಲನೆ, ಚೈತನ್ಯ ನೀಡಿದುದು ಮಾತ್ರ ದಿಟ.

ಒಂದು ಕಾಲಕ್ಕೆ ಇದೇ ರೈತ ರಾಣೇಬೆನ್ನೂರಿನ ದಲಾಲಿ ಅಂಗಡಿಗಳಿಗೆ ಸಾಲಕ್ಕಾಗಿ ಅಲೆದಲೆದು ಸುಸ್ತಾದವನು. ಒಂದು ಸೈಕಲ್ಲು ಕೂಡ ಕೊಳ್ಳಲಾಗದ ಸ್ಥಿತಿಯಲ್ಲಿದ್ದವನು. ಬೀಜೋತ್ಪಾದನೆಗೆ ತೊಡಗಿ ಇಂದು ಮೋಟಾರ್ ಸೈಕಲ್, ಜೀಪು, ಟ್ರ್ಯಾಕ್ಟರ್‌ಗಳ ಮಾಲೀಕನಾಗಿದ್ದಾನೆ. ಅನಿಶ್ಚಿತವಾದ ವಿದ್ಯುತ್ತನ್ನು ನೆಚ್ಚದೆ, ಬೋರಿನಿಂದ ನೀರೆತ್ತಲು ಕೆಲವು ರೈತರು ಜನರೇಟರುಗಳನ್ನೂ ಕೊಂಡಿದ್ದಾರೆ. ವಾಸಕ್ಕೆ ಒಂದು ಹುಲ್ಲು ಜೋಪಡಿ ಮಾಡಿಕೊಳ್ಳಲೂ ಆಗದ ಸ್ಥಿತಿಯಿದ್ದವರೂ ಆರ್.ಸಿ.ಸಿ. ಮನೆಯ ಮಾಲೀಕರಾಗಿದ್ದಾರೆ. ವೃತ್ತಪತ್ರಿಕೆ, ಟಿ.ವಿ., ರೇಡಿಯೋ, ಫ್ರಿಜ್ಜುಗಳಂತಹ ಆಧುನಿಕ ಸೌಲಭ್ಯಗಳ ಸೌಕರ್ಯ ಹೊಂದಿದ್ದಾರೆ. ಒಂದೆರಡು ಎಕರೆ ಜಮೀನಿನಿಂದ ೩೦-೪೦ ಎಕರೆ ಆಸ್ತಿಗಳ ಒಡೆಯರಾಗಿದ್ದಾರೆ. ಆರ್ಥಿಕವಾಗಿ ಭದ್ರವಾಗಿದ್ದಾರೆ.

ವಿದೇಶಗಳಲ್ಲೂ ವಿಖ್ಯಾತ

ದೇಶ ವಿದೇಶಗಳಲ್ಲಿ 'ರಾಣೇಬೆನ್ನೂರು ಸೀಡ್ಸ್' ಎಂದರೇನೇ 'ಶುದ್ಧತಳಿ ಸೀಡ್ಸ್' ಎಂಬ ಬ್ರ್ಯಾಂಡ್ ಬಿದ್ದಿದೆ. ಇಲ್ಲಿ ಬೆಳೆದ ಬೀಜಗಳ ಬಗೆಗೆ ಅವರು ಸಂಶಯಿಸುವುದೇ ಇಲ್ಲ.

ಪ್ರಪಂಚದಲ್ಲಿ ಬೀಜೋದ್ಯಮಕ್ಕೆ ತೊಡಗಿದ ಯಾವುದೇ ಕಂಪನಿಯಿರಲಿ ಅದರ ಶಾಖೆ ರಾಣೇಬೆನ್ನೂರಿನಲ್ಲಿ ಇರಲೇಬೇಕು. ತರಕಾರಿ ಬೀಜೋತ್ಪಾದನೆಯ ಗುರಿಯಿಟ್ಟುಕೊಂಡು ಮೊದಲು ಇಲ್ಲಿಗೆ ಬಂದದ್ದು

ಹುಡುಗಿಯರು

ಹುಡುಗಿಯರೇ ಹೀಗೆ
ಕುಲು ಕುಲು ನಗು ತುಳುಕಿಸುತ್ತಾರೆ
ಕಣ್ಣ ಹೊಳಪು ಝುಳಪಿಸುತ್ತಾರೆ
ಕೊನೆಗೆ ಕಟ್ಟಿಕೊಂಡವನೊಡನೆ
ಕಣ್ಮರೆಯಾಗುತ್ತಾರೆ

– ಮುಕುಂದರಾಜ ಅರ್ಕಚಾರ್

ದಿಂಬು

ನಿನ್ನನ್ನಪ್ಪಿ ಹೇಳಿದೆ
'ನನ್ನ ನೀ ನಂಬು'
ಬೆಳಗೆದ್ದು ನೋಡಿದೆ
ಕೈಯಲಿ ತಲೆದಿಂಬು!

– ಪಂಪಾ ತೋರಣಗಲ್ಲು

ಜಾಯಮಾನ

ಈಗೀಗ
ಸಿನೆಮಾಗಳಲ್ಲಿ
ಅಂಗವಸ್ತ್ರಗಳ
ಕಳಚಿದರೆ
ಅಲ್ಲವಂತೆ
ಅದು ಸ್ತ್ರೀಯರಿಗೆ ಅಪಮಾನ
ದೊರೆಯುವುದಂತೆ
ಶ್ರೇಷ್ಠ ನಟಿಯರ
ಸ್ಥಾನ-ಮಾನ

– ಲಕ್ಷ್ಮಣ ಬಾರಿಕೇರ್

ತಾರೆ!

ಕಣ್ಣಲ್ಲಿ
ಹಲವರು
ಮಿನುಗುತಾರೆ
ಮನದಲ್ಲಿ
ಮಾತ್ರ ಒಬ್ಬಳೇ
ಮಿನುಗು-ತಾರೆ!

– ವೀರೇಂದ್ರ ರಾವಿಹಾಳ್

ಒಬ್ಬೊಬ್ಬ ರೈತರದೂ ಒಂದೊಂದು ಕಥೆ

ಮಹಿಕೋ ಕಂಪನಿಯ ಸಹಾಯದಿಂದ ಬೀಜ ಬೆಳೆದು ಉದ್ಧಾರವಾದ ಗುಡ್ಡದ ಬೇವಿನಹಳ್ಳಿಯ ಜಿ.ಬಿ.ನಂದಿಗಾವಿ, ಆರ್.ಬಿ. ಕುರುಬರ, ಚಳಗೇರಿಯ ರಾಯಪ್ಪ ತೆಂಬದ, ಹಿರೇಕೆರೂರ ತಾಲೂಕ ಧೂಪದಹಳ್ಳಿಯ ಚಂದ್ರಪ್ಪ ಹೆಗ್ಗೇರಿ, ಇಂಡೋ ಅಮೇರಿಕನ್ ಕಂಪನಿಯಿಂದ ಕದರಮಂಡಲಗಿಯ ಬಿ.ಎನ್.ನಾಯ್ಕರ, ಹೊಲೀಹಳ್ಳಿಯ ಬಿ.ಬಿ.ಬಿಳವಿಗಿ, ಚಿಕ್ಕ ಎಡಚಿಯ ಬಿ.ಎನ್.ಸುಣಗಾರ, ಬೆಜೂಶೀತಲ್ ಕಂಪನಿಯಿಂದ ಬುಡನಹಳ್ಳಿಯ ವಿ.ಸಿ. ಪಾಟೀಲ, ಉಕ್ಕುಂದದ ಬಿ.ಬಿ.ದೇಸಾಯಿ, ಜೋಯಿಸರ ಹರಳಹಳ್ಳಿಯ ಬಿ.ಎಚ್.ಮುದ್ದಪ್ಪಳವರ, ತಿಮ್ಲಾಪುರದ ಆರ್.ಬಿ. ಪಾಟೀಲ, ಮಹೇಂದ್ರ, ಕಂಪನಿಯಿಂದ ಗುಡ್ಡದ ಬೇವಿನಹಳ್ಳಿಯ ಶಿವಾನಂದಪ್ಪ, ಅಸುಂಡಿಯ ದೇಶಗತ್ತಿ, ನಾಮಧಾರಿ ಕಂಪನಿಯಿಂದ ಚಳಗೇರಿಯ ಎಂ.ಡಿ. ಧೂಳೇಹೊಳಿ, ಆಲದಗೇರಿಯ ಸಿ.ಸಿ. ಕರೇಗೌಡರ, ಮಕರಿಯ ವಿ.ಬಿ.ಗಂಗೋಳ, ಸೆಂಚುರಿ ಕಂಪನಿಯಿಂದ ಹಿರೇಕೆರೂರ ತಾಲೂಕು ಜೋಗಿಹಳ್ಳಿಯ ಹನುಮಂತಪ್ಪ ದೀವಿಗೀಹಳ್ಳಿ, ಎಂ.ಡಿ.ತಳವಾರ, ಎಸ್.ಡಿ.ತಳವಾರ, ಸ್ಯಾಂಡೋಜ ಕಂಪನಿಯಂದ ಜೋಯಿಸರ ಹರಳಹಳ್ಳಿಯ ಮುತ್ಸದ್ಧಿ ರೈತ ಶೇಖರಗೌಡ ಚೌಡಪ್ಪಳವರ, ಉಕ್ಕುಂದಪ್ಪ ಮುದ್ದಪ್ಪಳವರ, ಗುರುಶಾಂತಯ್ಯಾ ಹಿರೇಮಠ ಶಂಕರಗೌಡ ಸಾರದ, ವೀರನಗೌಡ ಹೊಟ್ಟಿಗೌಡರ ಮುಂತಾದವರು ಬೀಜೋದ್ಯಮದಲ್ಲಿ ತೊಡಗಿ, 'ಶ್ರೀಮಂತ' ರಾದುದರ ಹಿಂದೆ ಒಂದೊಂದು ಕತೆಗಳೇ ಇವೆ. ಶೇಖರಗೌಡ ಚೌಡಪ್ಪಳವರ ತಮ್ಮ ಕಂಪನಿಗೆ ಸ್ವತಃ ಟೊಮೊಟೋ ಸಸಿಗಳನ್ನು ವೈಜ್ಞಾನಿಕವಾಗಿ ಬೆಳೆಸಿ ಪೂರೈಸುವಷ್ಟು ಮುಂದುವರಿದ್ದಾರೆ. ಅಷ್ಟೇ ಅಲ್ಲ ಅದರಲ್ಲಿ ವಿಶೇಷ ಮಾಹಿತಿ ಪಡೆಯಲು ಅಮೇರಿಕಾ, ಹಾಲಂಡ್ ದೇಶಗಳಿಗೂ ಹೋಗಿಬಂದಿದ್ದಾರೆ.

ಹಿರೇಕೆರೂರು ತಾಲೂಕು ಧೂಪದಹಳ್ಳಿಯ ಚಂದ್ರಪ್ಪ ಹೆಗ್ಗೇರಿ ಅವರ ಕತೆಯೇ ಬೇರೆ. ಅವರು ಪಿ.ಯು.ಸಿ. ಓದಿ ಜೀವನೋಪಾಯಕ್ಕೆ ಹುಬ್ಬಳ್ಳಿಯಲ್ಲಿ ತಳ್ಳುಗಾಡಿಯಲ್ಲಿ ಸೀಮೆಎಣ್ಣೆ ಮಾರುತ್ತಿದ್ದರು, ಬದುಕು ಕಷ್ಟವಾಗಲು ಬಿಟ್ಟುಬಂದು ರಾಣೇಬೆನ್ನೂರಿನ ಗೊಬ್ಬರದ ಅಂಗಡಿಯೊಂದರಲ್ಲಿ ಕೆಲಸಕ್ಕೆ ನಿಂತರು. ರೈತರು ಲಕ್ಷ ಲಕ್ಷ ಸಂಖ್ಯೆಯಲ್ಲಿ ಎಣಿಸುವ ರೊಕ್ಕ ನೋಡಿ ಬೀಜೋದ್ಯಮಕ್ಕೆ ಬಂದು ತಮ್ಮ ಹೊಲದಲ್ಲಿಯೇ ಮಹಿಕೋ ಕಂಪನಿಯ ಬೀಜ ಬೆಳೆಯಲು ಪ್ರಾರಂಭಿಸಿದರು. ಮೂರೆಕರೆ ಹೊಲ ಆರೆಕರೆಯಾಯಿತು. ಬೋರು ಹಾಕಿದರು. ಜನರೇಟರ್ ತಂದರು. ಸೈಕಲ್ ಮೋಟಾರೂ ಬಂತು. ನೌಕರಿ ಮಾಡುವ ತಮ್ಮನನ್ನು ಬಿಡಿಸಿಕೊಡು ಬಂದು ಆತನ ಹೆಸರಿನಲ್ಲಿ ಒಂದು ಲಕ್ಷ ಫಿಕ್ಸ್‌ಡ್ ಡಿಪಾಜಿಟ್ ಮಾಡಿ ಕೃಷಿ ಕೆಲಸಕ್ಕೆ ತೊಡಗಿಸಿದರು. ಧೂಪದಹಳ್ಳಿಯ ಹೆಗ್ಗೇರಿ ಚಂದ್ರ, ಚಂದ್ರಪ್ಪ ಸಾಹುಕಾರನಾದುದು ಹೀಗೆ.

ಬೀಜೋದ್ಯಮಕ್ಕೆ ತೊಡಗಿ 'ಧಣಿ' ಗಳಾದ ರೈತರ ಇಂತಹ ಕಥೆಗಳೆಷ್ಟೋ. ಈ ಬೀಜೋತ್ಪಾದಕರು ಕೂಡ ತಮ್ಮನ್ನು ಬೆಳಕಿಗೆ ತಂದ ಕಂಪನಿಗೆ ನಿಷ್ಠೆ ತೋರಲು ಕಟ್ಟಿಸಿದ ಮನೆಗಳಿಗೆ ಆಯಾ ಕಂಪನಿಗಳ 'ಕೃಪ', 'ಆಶೀರ್ವಾದ', 'ನಿಲಯ' ಮುಂತಾಗಿ ಹೆಸರು ಬರೆಯಿಸಿಕೊಂಡು ತಮ್ಮನ್ನು ಬೆಳಕಿಗೆ ತಂದ ಕಂಪನಿಗಳಿಗೆ ನಿಷ್ಠೆ ತೋರಿದ್ದಾರೆ!

'ಇಂಡೋ-ಅಮೇರಿಕನ್ ಸೀಡ್ಸ್ ಕಂಪನಿ'. ಆನಂತರ ಮಹಿಕೊ ಮತ್ತು ಸ್ಯಾಂಡೋಜ ಕಂಪನಿಗಳು. ಈ ಕಂಪನಿಗಳು ಜನಾಕರ್ಷಣೆ ಗಳಿಸುತ್ತಿದ್ದಂತೆ ಹಲವಾರು ಕಂಪನಿಗಳು ನಾ ಮುಂದು, ತಾ ಮುಂದು ಎನ್ನುವಂತೆ ಇಲ್ಲಿ ತಳವೂರಿದವು. ಮಹೇಂದ್ರ, ನಾಥಳ, ಇಆಯ್‌ಡಿ, ಪ್ಯಾರಿ, ಆಯ್‌ಟಿಸಿ, ಬಿನೇಕಾ, ಪಯೋನಿಯರ್, ಪ್ರೊ ಆಗ್ರೊ, ನಾಮಧಾರಿ, ಯುನಿಕಾರ್ನ್, ಆಗ್ರೋಟೆಕ್, ಬಯೋಸೀಡ್ಸ್, ಸೆಂಚುರಿ, ಕಾರ್ಗಿಲ್ ಇಂಡಿಯಾ, ಸನ್‌ಗ್ರೋ, ಬಿಜೋಶೀತಲ್, ಎಗ್ಗಿಂಮೇಷಾ, ಕಾಂಚನ್, ಗೋಲ್ಡನ್, ಗ್ರೊವೆಲ್, ಅಂಕುರ, ಇ.ಸಿ.ಎಲ್.-ಆಗ್ರೋಟೆಕ್, ಅಸ್ಲೆ, ಗ್ರೀನ್ ಆಗ್ರೋ ಪ್ಯಾಕ್, ಸಟನ್, ಟ್ರಾಫಿಕ್, ಯು.ಸಿ.ಎಲ್. ಒರಿಯಂಟಲ್, ಸೋಸಿಲ್, ಜೆ.ಕೆ.ಸೀಡ್ಸ್, ಸನ್ ಸೀಡ್ಸ್ ಮುಂತಾಗಿ ಸುಮಾರು ೫೦-೬೦ ಕಂಪನಿಗಳು ಇಲ್ಲಿವೆ.

ಕೆಲವು ಕಂಪನಿಗಳು ಮಾರುಕಟ್ಟೆಗೆ ಮಾತ್ರ ಸೀಮಿತವಾಗಿವೆ. ಇಂಡೋ ಅಮೇರಿಕನ್, ನಾಮಧಾರಿ, ಬೀಜೋಶೀತಲ್ ನಂಥಾ ಕಂಪನಿಗಳು ರೈತರಿಂದ ಬೀಜೋತ್ಪಾದನೆ ಮಾಡಿಸುವುದರ ಜೊತೆಗೆ ಸ್ವತಃ ತಾವೇ ಸ್ವಂತ ಇಲ್ಲವೇ ಗುತ್ತಿಗೆ ಆಧಾರದ ಮೇಲೆ ಜಮೀನು ಪಡೆದು ಬೀಜೋತ್ಪಾದನೆಗೆ ತೊಡಗಿರುವುದೂ ಉಂಟು. ಇದಲ್ಲದೇ ಅಮೇರಿಕಾ, ಆಸ್ಟ್ರೇಲಿಯಾ, ಸ್ವಿಡ್ಜರ್‌ಲ್ಯಾಂಡ್, ಜಪಾನ್, ನೆದರಲ್ಯಾಂಡ್ (ಹಾಲಂಡ್), ಇಂಗ್ಲೇಂಡ್ ಮುಂತಾದ ಹಲವಾರು ದೇಶಗಳ ಕೃಷಿ ತಜ್ಞರು ಸಂಕರ ಕ್ರಿಯೆ ನಡೆದ ಸಮಯದಲ್ಲಿ ಇಲ್ಲಿಗೆ ಆಗಮಿಸುತ್ತಾರೆ. ೩-೪ ತಿಂಗಳುಗಳ ಕಾಲ ಇಲ್ಲಿಯೇ ಇದ್ದು ಪ್ರತಿಯೊಂದು ಪ್ಲಾಟಿಗೂ ಭೇಟಿಕೊಟ್ಟು ತಳಿಶುದ್ಧತೆಯ ಬಗ್ಗೆ ರೈತರಿಗೆ ಮಾಹಿತಿ ನೀಡುತ್ತಾರೆ. ಇಲ್ಲಿಯ ನೆಲ, ಜಲ, ಜನರೊಡನೆ ಬೆರೆಯುತ್ತಾರೆ. ಭಾವೈಕ್ಯದ ಸೇತುವಾಗುತ್ತಾರೆ. ಈಗೀಗ ಇಲ್ಲಿಯ ರೈತರ ಪರಿಣತಿಯನ್ನು ಕಂಡು ತಳಿಶುದ್ಧತೆಯ ಬಗೆಗೆ ವಿಶ್ವಾಸಹೊಂದಿ ಬರುವುದನ್ನು ಕಡಿಮೆ ಮಾಡಿದ್ದಾರೆ. ಇಲ್ಲಿಯ ರೈತರ ಮೇಲೆ ಅವರಿಗೆ ಅಷ್ಟು ನಂಬಿಕೆ.

ರಾಣೇಬೆನ್ನೂರಿನ ಆಸುಪಾಸಿಗೂ ಈ ಉದ್ಯಮದ ಹರಿಗಳು ಹರಡತೊಡಗಿವೆ. ಬಿಜಾಪುರ, ಬಾಗಲಕೋಟೆ, ಗಜೇಂದ್ರಗಡ, ಬಾದಾಮಿ, ಗದಗ, ಕೊಪ್ಪಳ, ಬಳ್ಳಾರಿ, ನಂದ್ಯಾಲ, ಹಡಗಲಿ, ಹಗರಿಬೊಮ್ಮನಹಳ್ಳಿ, ಹರಪನಹಳ್ಳಿ, ಸವಣೂರು, ಹಾವೇರಿ, ಹಾನಗಲ್ಲ, ಹಿರೇಕೇರೂರು, ಶಿಕಾರಿಪುರ, ಆನವಟ್ಟಿ, ಬ್ಯಾಡಗಿ ಮುಂತಾದೆಡೆ ಹಲವಾರು ಕಂಪನಿಗಳು ತಮ್ಮ ಶಾಖಾ ಕಚೇರಿಗಳನ್ನು ತೆರೆದಿವೆ. ಬೇರೆ ಬೇರೆ ಪ್ರದೇಶಗಳತ್ತ ಈ ಕಂಪನಿಗಳು ಕಣ್ಣುಹಾಕುತ್ತಿರುವುದಕ್ಕೆ ಕಾರಣಗಳೂ ಇವೆ. ಇಲ್ಲಿಯ ರೈತರು ಇತ್ತಿತ್ತಲಾಗಿ ಕಡಿಮೆ ಲಾಭ ತರುವ ಬೆಳೆಗಳನ್ನು ಇಡಲು ಹಿಂಜರಿಯುತ್ತಿದ್ದಾರೆ. ದಿಢೀರ್ ಶ್ರೀಮಂತರಾಗಬೇಕೆಂಬ ಹಂಬಲಕ್ಕೆ ಬಿದ್ದಿದ್ದಾರೆ. ಜೊತೆಗೆ ವಿದ್ಯುತ್ ಪೂರೈಕೆಯ ಅಭಾವ, ಅಂತರ್ಜಲ ಮಟ್ಟದ ಇಳಿತ, ಒಂದೇ ಭೂಮಿಯಲ್ಲಿ ಬಿಡುವಿಲ್ಲದೆ ಬೆಳೆ ಇಡುವುದರಿಂದ ರೋಗ ನಿಯಂತ್ರಣ ತಪ್ಪಿ ಬೆಳೆನಾಶ, ನಿಪುಣ ಕೃಷಿ ಕಾರ್ಮಿಕರು ಸ್ವಾವಲಂಭಿಗಳಾಗುತ್ತಿರುವುದು, ಕೂಲಿಯಲ್ಲಿ ಹೆಚ್ಚಳ ಮುಂತಾದ ಕಾರಣಗಳಿಂದಾಗಿ, ಈ ಕಂಪನಿಗಳು ಸಾಧ್ಯತೆಯ ದಾರಿಯನ್ನು ಬೇರೆ ಕಡೆ ಕಂಡುಕೊಳ್ಳುತ್ತಲಿವೆ.

ಕೃಷಿ ಕಾರ್ಮಿಕರ ಕೈವಾಡ

ಬೀಜೋತ್ಪಾದನೆ ಒಂದು ಸೂಕ್ಷ್ಮ ಕೃಷಿ. ಒಬ್ಬಿಬ್ಬರು ಮಾಡುವ ಕೆಲಸ ಅಲ್ಲ. ಬೆಳೆ ಕ್ರಾಸಿಂಗ್ ಹಂತಕ್ಕೆ ಬಂತೆಂದರೆ ಸಾಕು, ಹತ್ತಿಪ್ಪತ್ತು ಜನರು ಮುಂಜಾನೆಯಿಂದ ಸಂಜೆಯವರೆಗೂ ಬಿಡುವಿಲ್ಲದೇ ಕೆಲಸ ಮಾಡಬೇಕಾಗುತ್ತದೆ. ಇದಕ್ಕೆ ಸಂಕರ ಕ್ರಿಯೆಯಲ್ಲಿ ನುರಿತ, ಪರಿಣಿತ, ಚುರುಕಾದ ಕೆಲಸಗಾರರು ಬೇಕು. ಅಂತಹ ಕಾರ್ಮಿಕರು ಪ್ರತಿ ಹಳ್ಳಿಯಲ್ಲಿಯೂ ಇಲ್ಲಿ ಉಂಟು. ತಮ್ಮ ಒಡೆಯ ತಮ್ಮ ಮೇಲಿಟ್ಟ ನಂಬಿಕೆಗೆ ಚೂರು ಕುಂದು ಬಾರದಂತೆ, ವಹಿಸಿಕೊಟ್ಟ ಕಾರ್ಯವನ್ನು ಅಷ್ಟೇ ನಿಷ್ಠೆಯಿಂದ ಅವರು ಮಾಡಬಲ್ಲರು. ಅವರಿಗೆ ಹುರುಪು ತುಂಬಲು ಸ್ಟೀಲ್ ಸಾಮಾನು, ಬಟ್ಟೆ-ಬರೆಗಳಂತಹ ವಸ್ತುಗಳನ್ನು ಮಾಲೀಕರು ಉಡುಗೊರೆ ಕೊಡುವುದೂ ಉಂಟು. ರಾಣೇಬೆನ್ನೂರಿಗೆ ಕರೆತಂದು ಸಿನಮಾ, ನಾಟಕಗಳನ್ನು ತೋರಿಸಿಕೊಂಡು ಹೋಗುವುದೂ ಉಂಟು. ಪಕ್ಕದ ಹಳ್ಳಿಯ ಜಾತ್ರೆಯನ್ನು ತೋರಿಸಿಕೊಂಡು ಬರುವುದೂ ಉಂಟು. ಬೀಜೋತ್ಪಾದನಾ ಕಂಪನಿಗಳು ಇಲ್ಲಿಗೆ ಕಾಲಿಡುವ ಮುನ್ನ ೩-೪ ರೂ.ಗಳ ಕೂಲಿ ಪಡೆಯುತ್ತಿದ್ದ ಇವರು, ಇಂದು ೩೦-೪೦ ರೂ.ಗಳನ್ನು ಸಂಪಾದಿಸುತ್ತಿದ್ದಾರೆ. ಗಳಿಸಿದ ಹಣದಲ್ಲಿ ಮಡದಿ-ಮಕ್ಕಳೊಂದಿಗೆ ಉಂಡುಟ್ಟು ಸುಖವಾಗಿದ್ದಾರೆ.

ಈ ಕೆಲಸದಲ್ಲಿ ಪರಿಣತಿ ಪಡೆದಿರುವ ಕೆಲವು ಭೂರಹಿತ ಕೃಷಿ ಕಾರ್ಮಿಕರು ಒಡೆಯನ ಹೊಲದಲ್ಲಿಯೇ ದುಡಿದು, ಉತ್ಪಾದನೆಯಲ್ಲಿ ಪಾಲುದಾರರಾಗುವ ಹಂತಕ್ಕೆ ತಲುಪಿದರೆ, ಇನ್ನು ಕೆಲವರು 'ಕೋರು' ಆಧಾರದ ಮೇಲೆ ಜಮೀನು ಪಡೆದು ಬೀಜೋತ್ಪಾದನೆ ಮಾಡುತ್ತ ಗಳಿಸಿದ ಸಂಪತ್ತಿನಿಂದ ಸ್ವಂತ ಭೂಮಿಯನ್ನೂ ಹೊಂದುವ ಮಟ್ಟಕ್ಕೆ ತಲುಪಿದ್ದಾರೆ. ಈ ದಿಸೆಯಲ್ಲಿ ತಾಲೂಕಿನ ಜೋಯಿಸರ ಹರಳಹಳ್ಳಿ, ಗುಡ್ಡದ ಬೇವಿನಹಳ್ಳಿ ಮುಂತಾದ ಗ್ರಾಮಗಳನ್ನು ಹೆಸರಿಸಬಹುದು.

ನಿಮಗೆ ಗೊತ್ತೇ?

ನಮ್ಮ ದೇಹದಲ್ಲಿನ ಒಂದು ಪೌಂಡ್‌ನಷ್ಟು ಕೊಬ್ಬನ್ನು ಕರಗಿಸಲು, ೩೪ ಮೈಲಿಗಳಷ್ಟು ದೂರ ನಡೆಯಬೇಕು.

ನಮ್ಮ ಮಧ್ಯದ ಬೆರಳಿನ ಉಗುರು ಅತಿ ವೇಗವಾಗಿ ಬೆಳೆದರೆ, ಹೆಬ್ಬೆರಳಿನ ಉಗುರು ಅತಿ ನಿಧಾನವಾಗಿ ಬೆಳೆಯುತ್ತಿರುತ್ತದೆ.

ಮನುಷ್ಯ ದೇಹದಲ್ಲಿ ೨೦೬ ಮೂಳೆಗಳಿವೆ

ಪ್ರತಿದಿನ ನಮ್ಮ ಬಾಯಿ ೨ ರಿಂದ ೩ ಪಿಂಟ್‌ಗಳಷ್ಟು ಲಾಲಾರಸವನ್ನು (ಜೊಲ್ಲು, ಉಗುಳು, ಬಾಯಿನೀರು) ತಯಾರಿಸುತ್ತಿರುತ್ತದೆ.

ಪೂರ್ತಿ ವರ್ಷ ಸಾಮಾನ್ಯ ಮನುಷ್ಯ ಸುಮಾರು ಒಂದು ಟನ್ನಿನಷ್ಟು ಆಹಾರ ಪಾನೀಯ ಬಳಸುತ್ತಾನೆ.

(ಸಂಗ್ರಹ)

○ ಡಾ. ವಿ.ಬಿ.

ರೈತ ಪ್ರಶಸ್ತಿ

ಆಸ್‌ಪಿ ಗುಂಪಿನ ಕಂಪೆನಿಗಳು ಹಾಗೂ ಹಂಚಿಕೆದಾರರ ಅಸೋಶಿಯೇಷನ್, ಕೃಷಿ ಬೆಳೆಗಳಾದ ಏಕದಳ, ದ್ವಿದಳ, ಎಣ್ಣೆಕಾಳು ಹಾಗೂ ತೋಟಗಾರಿಕೆ ಬೆಳೆಗಳಾದ ತರಕಾರಿ, ಹಣ್ಣು ಬೆಳೆಯುವಂಥ ರೈತರಿಗೆ 'ಆಸ್‌ಪಿ ಎಲ್.ಎಂ.ಪಟೇಲ್ ರೈತ ಪ್ರಶಸ್ತಿಯನ್ನು ನೀಡಲಿದೆ. ಪ್ರಶಸ್ತಿ ಫತ್ರ ಹಾಗೂ ಟ್ರೋಫಿಯನ್ನೊಳಗೊಂಡಿರುತ್ತದೆ. ಮಾನ್ಯತೆ ಪಡೆದ ಸಂಸ್ಥೆಗಳ ಮುಖ್ಯಸ್ಥರು ಹಾಗೂ ಇತರ ಸಂಘ ಸಂಸ್ಥೆಗಳು ಈ ಪ್ರಶಸ್ತಿಗೆ ರೈತರ ಹೆಸರನ್ನು ಸೂಚಿಸಬಹುದು. ವಿವರಗಳಿಗೆ, ಆಸ್‌ಪಿ ಹೌಸ್, ಬಿ.ಜೆ.ಪಟೇಲ್ ರಸ್ತೆ, ಅಂಚೆ ಪೆಟ್ಟಿಗೆ ಸಂಖ್ಯೆ-೩೬೦೨, ಮಲಾಡ್ ಪಶ್ಚಿಮ, ಮುಂಬೈ-೬೪ ಇವರನ್ನು ಸಂಪರ್ಕಿಸಬಹುದು.

ಸೌತೆ ಮಿಡಿಯ ವಿದೇಶ ಪ್ರಯಾಣ

ಬೀಜೋದ್ಯಮದಲ್ಲಿ ರಾಣೆಬೆನ್ನೂರು ಜಗತ್ತಿನ ಗಮನ ಸೆಳೆಯುತ್ತಿರುವಂತೆ ಸೌತೆಮಿಡಿ, ಮೆಣಸಿನ ಮಿಡಿಗಳನ್ನು ಬೆಳೆಯುವಲ್ಲಿಯೂ ಮುಂದಾಗಿದೆ. ಎರಡಂಗುಲ ಉದ್ದ, ಒಂದು ಅಂಗುಲ ವ್ಯಾಸವುಳ್ಳ ಸೌತೆ ಮಿಡಿಗಳನ್ನು ಪಶ್ಚಿಮ ದೇಶಗಳಲ್ಲಿ ಉಪ್ಪಿನಕಾಯಿ, ಕೆಮಿಕಲ್ಸ್ ತಯಾರಿಸಲು ಉಪಯೋಗಿಸುತ್ತಾರೆ. ಇವುಗಳ ಬೆಳೆ ಅಲ್ಲಿ ದುಬಾರಿ. ಹಾಗಾಗಿ ಇಲ್ಲಿಂದ ಹೊರ ದೇಶಗಳಿಗೆ ರಫ್ತು ಮಾಡುತ್ತಾರೆ.

ಗ್ರೀನ್ ಆಗ್ರೋ ಪ್ಯಾಕ್ ಕಂಪನಿಯ ಜಿ.ಎಂ.ಜಯದೇವಯ್ಯ ಈ ಸೌತೆಮಿಡಿಗಳ ಪಿತಾಮಹ. ಬೆಂಗಳೂರಿನಲ್ಲಿ ಮೊದಲು ಪ್ರಯೋಗ ಮಾಡಿ ನೋಡಿದರು. ಇಳುವರಿ ಹೆಚ್ಚಿದಂತೆ ಖರ್ಚು ಹೆಚ್ಚುತ್ತ ಹೋದಾಗ ರಾಣೆಬೆನ್ನೂರು ಕೈಮಾಡಿ ಕರೆಯಿತು.

ಮಿಡಿ ಬೆಳೆದು ಹಣ ಮಾಡಿ

ಸೌತೆ ಬೆಳೆ ಸುಧಾರಿತ ತಳಿಯಾಗಿದ್ದು, ಅತ್ಯಂತ ಕಡಿಮೆ ಅವಧಿಯಲ್ಲಿ ಫಸಲು ನೀಡುವ ಬೆಳೆ. ಬಿತ್ತಿದ ೩೦-೩೨ ದಿನಕ್ಕೆ ಕೊಯ್ಲಿಗೆ ಸಿದ್ಧ. ೪೫-೬೦ ದಿನಗಳ ವರೆಗೆ ಮಾತ್ರ ಕೊಯ್ಲು. ಅಲ್ಲಿಗೆ ಬಳ್ಳಿಯು ನಿಶಃಕ್ತವಾಗುತ್ತದೆ. ಈ ಮಿಡಿಗಳನ್ನು ಕೊಳ್ಳುವಲ್ಲಿ ನಾಲ್ಕು ದರ್ಜೆಗಳನ್ನು ಮಾಡಲಾಗಿದ್ದು, ಅತ್ಯಂತ ಸಣ್ಣ ಮಿಡಿಗೆ ಕೆ.ಜಿ.ಗೆ ೭ ರಿಂದ ೮ ರೂ.ಗಳು. ಕಾಯಿಗಳ ಗಾತ್ರ ದೊಡ್ಡದಾದಂತೆ ಬೆಲೆಯೂ ಕಮ್ಮಿ. ಸದಾ ತೇವಾಂಶವನ್ನು ಕಾಯ್ದುಕೊಳ್ಳುವುದು ಈ ಬೆಳೆಯ ವೈಶಿಷ್ಟ್ಯ. ಬೆಳೆಗೆ ಬೇಕಾದ ತಂತಿ, ಗೊಬ್ಬರ, ಕ್ರಿಮಿನಾಶಕ ಹಾಗೂ ಬೆಳೆಯ ಉಸ್ತುವಾರಿ ನೋಡಿಕೊಳ್ಳುವವರು ಕಂಪನಿಯ ಪ್ರತಿನಿಧಿಗಳೇ. ಅರ್ಧ ಎಕರೆ ಬೆಳೆಗೆ ಬರುವ ಆದಾಯ ೨೦ರಿಂದ ೨೩ ಸಾವಿರ. ಬೆಳೆಯ ಕೊಯ್ಲು ಮುಗಿದ ೨೦-೨೫ ದಿನಕ್ಕೆ ರೈತನಿಗೆ ಚೆಕ್ ಮೂಲಕ ಹಣ. ಇಷ್ಟು ಬೇಗ ಯಾವ ಬೀಜೋತ್ಪಾದನ ಕಂಪನಿಗಳೂ ರೈತನಿಗೆ ಹಣ ನೀಡುವುದಿಲ್ಲ. ಹಾಗಾಗಿ ಈ ಮಿಡಿಗಳನ್ನು ಬೆಳೆಯುವ ರೈತರ ಸಂಖ್ಯೆ ಹೆಚ್ಚುತ್ತಲಿದೆ.

ಸೌತೆ ಮಿಡಿಗಳ ಕೃಷಿ ಆರಂಭವಾಗಿ ೪-೫ ವರ್ಷ ಕಳೆದಿದ್ದರೂ ಸಾಗಾಣಿಕೆಯ ತೊಂದರೆ ಇನ್ನೂ ಬಗೆಹರಿದಿಲ್ಲ. ಗ್ರೀನ್ ಆಗ್ರೋ ಪ್ಯಾಕ್ ಕಂಪನಿ ಮಾತ್ರ ದಾವಣಗೆರೆ ಬಳಿ ಹೆಬ್ಬಾಳದಲ್ಲಿ ಸಂಸ್ಕರಣ ಘಟಕವನ್ನು ಸ್ಥಾಪಿಸಿ, ದಿನನಿತ್ಯ ಅಲ್ಲಿಗೆ ಸಾಗಿಸುತ್ತಿರುವುದರಿಂದ ರೈತರಿಗೆ ತೊಂದರೆಯೆನ್ನಿಸಿಲ್ಲ. ಕಡಿಮೆ ಅವಧಿಯಲ್ಲಿ ಕೈಗೆ ಹಣ ಸಿಗುತ್ತಿರುವುದರಿಂದ ಈಗೀಗ ಇದನ್ನು ಬೆಳೆಯುವ ರೈತರ ಸಂಖ್ಯೆ ಹೆಚ್ಚುತ್ತಲಿದೆ. ಆದರೂ ಬೇಡಿಕೆಯ ಅರ್ಧಭಾಗವನ್ನೂ ಪೂರೈಸಲು ನಮಗೆ ಸಾಧ್ಯವಾಗುತ್ತಿಲ್ಲವೆಂಬುದು ಈ ಕಂಪನಿಗಳ ಸೀಜನ್ ಕೊರಗು. ಅವು ರೈತರನ್ನು ಆಕರ್ಷಿಸಲು 'ಗ್ರೇಡ್ ಬೋನಸ್' 'ಸೀಜನ್ ಬೋನಸ್'ಗಳನ್ನು ನೀಡುವುದರ ಮೂಲಕ ಹೆಚ್ಚು ಬೆಳೆ ತೆಗೆಯಲು ಪ್ರೋತ್ಸಾಹಿಸುತ್ತಲಿವೆ. ಕಲ್ಲೇದೇವರ ಹನುಮಂತಪ್ಪ ತಿರಕಣ್ಣನವರ, ನಿಂಗಪ್ಪ ಮಡಿವಾಳರ, ಗುಡಗೂರಿನ ಬಸಪ್ಪ ಬಾಳ್ಯಾನಾಯ್ಕ, ಕುದ್ರಿಹಾಳದ ಶಿವಪುತ್ರಪ್ಪ ಈ ಬೆಳೆಯ ಯಶಸ್ವೀ ರೈತರಾಗಿದ್ದಾರೆ. ಹೆಚ್ಚು ಶ್ರಮವಿಲ್ಲದೆ ಹಣ ಗಳಿಸಬೇಕೆನ್ನುವವರು ಈ 'ಮಿಡಿ' ಕೃಷಿ ಮಾಡಲಡ್ಡಿಯಿಲ್ಲ.

ಪ್ರಮುಖ ಕಂಪನಿಗಳು :

೧೯೭೨ರಲ್ಲಿ ಮೊದಲು ಇಲ್ಲಿಗೆ ಕಾಲಿಟ್ಟ ತರಕಾರಿ ಬೀಜೋತ್ಪಾದನೆಯೇ ಮುಖ್ಯ ಗುರಿಯಾಗಿದ್ದ, ಇಂಡೋ ಅಮೇರಿಕನ್ ಸೀಡ್ಸ್ ಕಂಪನಿ ಇಂದು ಬೃಹತ್ತಾಗಿ ಬೆಳೆದಿದೆ ಎಂಬುದಕ್ಕೆ ಅದು ಗಂಗಾಜಲ ತಾಂಡೆಯ ಬಳಿ ಕಟ್ಟಿರುವ ದೊಡ್ಡ ಗಾತ್ರದ 'ಗ್ರೀನ್‌ಹೌಸ್' ಗಾಜಿನ ಮನೆಯೇ ಸಾಕ್ಷಿ. ಈಗ ಅದು ವರ್ಷಕ್ಕೆ ಸುಮಾರು ೫-೬ ಕೋಟಿ ರೂಪಾಯಿಗಳನ್ನು ರೈತರಿಗೆ ಪಾವತಿಸುವ ಮಟ್ಟಕ್ಕೆ ಬೆಳೆದಿದೆ. ಇದರ ಶ್ರೇಯಸ್ಸು ಇಲ್ಲಿ ನಿಷ್ಠೆಯಿಂದ ಕಂಪನಿಯ ಮೇಲ್ವಿಚಾರಕರಾಗಿ ಕೆಲಸ ಮಾಡುತ್ತಿರುವ ಕೆ.ರಘು ಮತ್ತು ಅವರ ಸಿಬ್ಬಂದಿಯವರಿಗೆ ಸಲ್ಲುತ್ತದೆ.

ಇದರ ಬೆನ್ನಲ್ಲೇ ವಿ.ಎನ್.ಕರ್ಜಗಿಯವರ ಮುಖಾಂತರ ಇಲ್ಲಿ ಬೀಜೋತ್ಪಾದನೆಗೆ ತೊಡಗಿದ ಮಹಿಕೋ ಕಂಪನಿ ೧೯೭೩ರಲ್ಲಿ ತನ್ನ ಶಾಖೆಯನ್ನು ತೆರೆಯಿತು. ಇದು ಸೂರ್ಯಕಾಂತಿ ಬೀಜದಲ್ಲಿ ಕೋಟಿ ಕೋಟಿಗಳ ಲೆಕ್ಕದಲ್ಲಿ ವಹಿವಾಟು ನಡೆಸಿತು. ಏಶಿಯಾ ಖಂಡದಲ್ಲಿಯೇ ದೊಡ್ಡ ಹಾಗೂ ಅತ್ಯಾಧುನಿಕವಾದುದೆಂದು ಹೇಳಲಾಗುವ ಹವಾನಿಯಂತ್ರಿತ ಧಾನ್ಯ ಸಂಗ್ರಹಾಲಯವನ್ನು ಸುಮಾರು ೨೮ ಕೋಟಿ ರೂಪಾಯಿಗಳ ವೆಚ್ಚದಲ್ಲಿ ಪೂನಾ-ಬೆಂಗಳೂರು ರಾಷ್ಟ್ರೀಯ ಹೆದ್ದಾರಿಯಲ್ಲಿ ಕಮದೊಡದ ಬಳಿ ನೋಡುಗರ ಕಣ್ಣುಕುಕ್ಕುವಂತೆ ಕಟ್ಟಿತು. ಈಗ ಈ ಕಂಪನಿ ವರ್ಷಕ್ಕೆ ಸುಮಾರು ಹತ್ತೆಂಟುಕೋಟಿ ರೂಪಾಯಿಗಳಿಗೂ ಮಿಕ್ಕಿ ವ್ಯವಹಾರ ನಡೆಯಿಸುತ್ತಿದೆ.

೧೯೮೬ರಲ್ಲಿ ಇಲ್ಲಿಗೆ ಬಂದು ತರಕಾರಿ ಬೀಜೋತ್ಪಾದನೆಗೆ ತೊಡಗಿದ ದೇಶೀಯ ನಾಮಧಾರಿ ಸೀಡ್ಸ್ ಕಂಪನಿ ೧೦ ವರ್ಷಗಳಲ್ಲಿ ವಿದೇಶೀ ಬೀಜೋತ್ಪಾದನೆಗೆ ಸವಾಲೆಸೆಯುವ ರೀತಿಯಲ್ಲಿ ದಿಟ್ಟಹೆಜ್ಜೆ ಇಟ್ಟು ಸಾಗಿದೆ. ಹಾಗೆಯೇ ಬಹುಜನಪ್ರಿಯವಾಗಿದೆ. ಇದಕ್ಕೆ ಕಾರಣ ಕಂಪನಿಯ ಒಡೆಯರಾದ ಠಾಕೂರ ಉದಯಸಿಂಗ್ ಅವರ ಧಾರ್ಮಿಕ ಮನೋಭಾವ ಹಾಗೂ ಮಾನವೀಯ ಗುಣ. ಸಾಮುದಾಯಿಕ ಅಭಿವೃದ್ಧಿಯೇ (ಕಮ್ಯೂನಿಟಿ ಡೆವಲಪ್‌ಮೆಂಟ್) ಈ ಕಂಪನಿಯ ಗುರಿ. ಬೆಳೆಗಾರರೊಂದಿಗೆ ಸಹಕಾರ, ಆಪತ್ತಿನಲ್ಲಿ ಸಹಾಯ, ಬೀಜಗಳಿಗೆ ಬೆಲೆ ನಿಗಧಿಸುವಲ್ಲಿ ಧಾರಾಳತನ, ದೇವಸ್ಥಾನ ಹಾಗೂ ಶಾಲಾ ಕಟ್ಟಡಗಳಿಗೆ ಉದಾರ ದೇಣಿಗೆ ನೀಡುವುದು ಮುಂತಾಗಿ ಬೆಳೆಗಾರರನ್ನು ಒಂದು ಕುಟುಂಬದಂತೆ ಕಾಣುವ ಪ್ರವೃತ್ತಿಯಿಂದಾಗಿ ಈ ಕಂಪನಿ ಹೆಚ್ಚು ಜನಪ್ರಿಯವಾಗಿದೆ-ಎಂಬುದು ಈ ಕಂಪನಿಯ ಬೀಜದ ಬೆಳೆಗಾರ ಚಳಗೇರಿಯ ಎಂ.ಡಿ.ಧೂಳೇಹೊಳಿ ಅವರ ಅಭಿಪ್ರಾಯ. ಈಗ ಇದರ ವಾರ್ಷಿಕ ವಹಿವಾಟು ೭-೮

ಕೋಟಿಗಳೆಂದು ಹೇಳಲಾಗುತ್ತದೆ.

ಇವುಗಳ ಪಾಲಿಗೆ ಸ್ಯಾಂಡೋಜ್ ಮತ್ತು ಬೀಜೋ ಶೀತಲ್ ಕಂಪನಿಗಳೂ ಸೇರುತ್ತವೆ.

ಹೇಳುತ್ತಾ ಹೋದಂತೆ ಈ ಕಂಪನಿಗಳ ಅಭಿವೃದ್ಧಿಯ ಪಟ್ಟಿ ಬೆಳೆಯುತ್ತಾ ಹೋಗಬಹುದು. ಇಲ್ಲಿ ಅಳುಕುತ್ತ ಅಡಿಯಿಟ್ಟ ಈ ಕಂಪನಿಗಳು ಈಗ ಬಂಗಾರ ಬಾಚಿಕೊಳ್ಳ ತೊಡಗಿರುವುದು ಮಾತ್ರ ಸತ್ಯ. ಯಾವ ಕಂಪನಿಗಳವರೂ ಇಲ್ಲಿ ಹಾನಿ ಅನುಭವಿಸಿದ ಉದಾಹರಣೆಗಳಿಲ್ಲ.

ಇಂದು ತಾಲೂಕಿನ ಯಾವುದೇ ಹಳ್ಳಿಗೆ ನೀವು ಅಕಸ್ಮಾತ್ ಭೇಟಿ ನೀಡಿ,ಅಲ್ಲಿ ಒಂದಿಲ್ಲೊಂದು ಕಂಪನಿಯ ಮೋಟಾರ್ ಸೈಕಲ್ಲು, ಇಲ್ಲವೇ ಜೀಪು ರಣಗುಟ್ಟುವ ಬಿಸಿಲಲ್ಲಿ, ತಗ್ಗುದಿನ್ನೆಗಳ ರಸ್ತೆಗಳಲ್ಲಿ ಧೂಳೆಬ್ಬಿಸಿ ಓಡುವುದನ್ನು ಕಾಣುವಿರಿ. ಇವರಾರೂ ಇಲ್ಲಿಗೆ ಬಂದಾಗ ಇಂತಹ ವಾಹನಗಳನ್ನು ತಂದವರಲ್ಲ. ಇಲ್ಲಿ ಬಂದು ಬೀಜೋತ್ಪಾದನೆಗೆ ರೈತರನ್ನು ತೊಡಗಿಸಿ. ತಾವೂ ತೊಡಗಿ ತಾವು ಉದ್ಧಾರವಾಗುವುದರ ಜೊತೆಗೆ ರೈತರನ್ನೂ ಉದ್ಧಾರಮಾಡಿದವರು. ನಿಷ್ಠೆ, ಪ್ರಾಮಾಣಿಕತೆಯಿಂದ ದುಡಿದವರಿಗೆ ಈ ಕಂಪನಿಗಳು ಕಲ್ಪವೃಕ್ಷವಿದ್ದಂತೆ ಎಂಬುದನ್ನು ಸಾಬೀತುಪಡಿಸಿದವರು. ಇಲ್ಲಿ ಬೀಡುಬಿಟ್ಟಿರುವ ಎಲ್ಲಾ ಕಂಪನಿಗಳ ಅಂದಾಜು ವಹಿವಾಟು ಸುಮಾರು ನೂರು ಕೋಟಿಗೂ ಮಿಕ್ಕುತ್ತದೆ ಎಂದು ಹೇಳಲಾಗುತ್ತದೆ.

ಯಾಕೆ ಈ ಎಲ್ಲ ಕಂಪನಿಗಳು ರಾಣೇಬೆನ್ನೂರನ್ನೇ ತಮ್ಮ ಕಾರ್ಯಕ್ಷೇತ್ರವನ್ನಾಗಿ ಮಾಡಿಕೊಂಡವು? ಏನು ಇಲ್ಲಿಯ ವಿಶೇಷ?

ಬೀಜೋತ್ಪಾದನೆ ಒಂದು ಸೂಕ್ಷ್ಮ ಕೃಷಿ. ಬಯಸಿದಷ್ಟು ಇಳುವರಿ ನೀಡುವ ಹೈಬ್ರೀಡ್ ಬೀಜಗಳನ್ನು ಎಲ್ಲೆಂದರಲ್ಲಿ ಉತ್ಪಾದಿಸಲು ಆಗುವುದಿಲ್ಲ. ಸಂಕರ ತಳಿಗೆ ರೋಗಗಳು ಜಾಸ್ತಿ. ವಾತಾವರಣದಲ್ಲಿ ತೇವಾಂಶ ಇದ್ದರಂತೂ ರೋಗಗಳು ಬಹುಬೇಗ ಸೋಂಕಿ ಬಿಡುತ್ತವೆ. ಇಲ್ಲಿ ಹವಾಮಾನದ ವ್ಯತ್ಯಾಸ ಬಹು ಕಡಿಮೆ. ೩೬೫ ದಿನವೂ ಒಂದೇ ವಿದವಾದ ಒಣ ಹವಾಮಾನ, ಜೊತೆಗೆ ಬೆಳೆಗಳಿಗೆ ಅನುಕೂಲವಾಗುವಂಥ ಮಳೆಗಾಲ ಒಂದು ಕಾರಣವಾದರೆ ಸಂಕರ ಕ್ರಿಯೆಯಲ್ಲಿ ನುರಿತ ಕೆಲಸಗಾರರು (ಸ್ಕಿಲ್ಡ್ ಲೇಬರ್ಸ್) ಇನ್ನೂ ಒಂದು ಪ್ರಬಲ ಕಾರಣ. ಪಳಗಿದ ಕೆಲಸಗಾರರು ಇಲ್ಲಿ ಹೆಚ್ಚು, ತಳಿ ಭ್ರಷ್ಟವಾಗದಂತೆ ನೋಡಿಕೊಳ್ಳುವ ಕಲಾತ್ಮಕತೆ ಇವರಿಗೆ ಕರಗತ. ಕಡಿಮೆ ಭೂಮಿ, ಕಡಿಮೆ ನೀರಿನಲ್ಲಿ ಹೆಚ್ಚು ಲಾಭಗಳಿಸಬೇಕೆಂಬ ಇಲ್ಲಿಯ ರೈತರ ಮಹಾತ್ವಾಕಾಂಕ್ಷೆ, ಸತತ ಪರಿಶ್ರಮ, ಶ್ರದ್ಧೆಗಳು ಒಂದುಗೂಡಿ ಶುದ್ಧ ಸಂಕರ ತಳಿಯ ಬೀಜೋತ್ಪತ್ತಿ ಇಲ್ಲಿ ಸಾಧ್ಯ. ಕುಲಗೇಡಿ ಬೀಜಗಳನ್ನು ಕಂಪನಿಗೆ ನೀಡುವ ಭ್ರಷ್ಟ ಬೆಳೆಗಾರ ಸಿಗುವುದೇ ಅಪರೂಪ. ಕಂಪನಿಗಳು ಬೀಜದ ಗುಣಮಟ್ಟ ಕುರಿತು ತಲೆಕೆಡಿಸಿಕೊಳ್ಳುವ ಪ್ರಮೇಯವೇ ಇಲ್ಲ. ಬೆಳೆದ ಬೀಜಗಳಿಗೆ ರೈತ ಕೇಳುವ ಬೆಲೆಯೂ ಕಡಿಮೆ. ಕಂಪನಿಯವರು ಕೊಟ್ಟಿದ್ದೇ ದರ. ಅಷ್ಟಕ್ಕೇ ಈತ ತೃಪ್ತ. ಇದಕ್ಕೆ ಬೀಜ ಬೆಳೆವ ರೈತರಲ್ಲಿ ಇರುವ ಪೈಪೋಟಿಯೂ ಒಂದು ಕಾರಣ. ಇದರ ಲಾಭ ಸಂಪೂರ್ಣ ಕಂಪನಿಗೇ! ಈ ಅವಕಾಶವನ್ನು ಸದುಪಯೋಗಪಡಿಸಿಕೊಳ್ಳಲೆಂದೇ ನೂರಾರು ಕಂಪನಿಗಳು ಇಲ್ಲಿಗೆ ಧಾಳಿ ಇಟ್ಟಿವೆ. ಅದರಲ್ಲಿ ಸಫಲವೂ ಆಗಿವೆ.

ನಿರುದ್ಯೋಗ ನಿವಾರಣೆ

ಬೀಜದ ಕಂಪನಿಗಳು ಈ ಭಾಗದ ಜನರಿಗೆ ಮಾಡಿರುವ ದೊಡ್ಡ ಉಪಕಾರವೆಂದರೆ, ಅವರ ಆರ್ಥಿಕ ಸ್ಥಿತಿ-ಗತಿಯನ್ನು ಸುಧಾರಿಸಿರುವದು. ವರುಷವಿಡೀ ರೈತ ಕಾರ್ಮಿಕರಿಗೆ ಕೆಲಸ ದೊರೆಯುವಂತೆ ಮಾಡಿರುವುದು. ತಮ್ಮ ಕಂಪನಿಗಳಲ್ಲಿ ಸ್ಥಳೀಯ ಪಧವೀಧರರನ್ನು ಹೆಚ್ಚಾಗಿ ನೇಮಿಸಿಕೊಂಡು ನಿರುದ್ಯೋಗ ಸಮಸ್ಯೆಯನ್ನು ತುಸುಮಟ್ಟಿಗಾದರೂ ಹೋಗಲಾಡಿಸಿರುವುದು. ಇಲ್ಲಿ ಸುಮಾರು ಐದಾರು ನೂರು ಜನ ಸ್ಥಳೀಯರು ಬದುಕಿನ ದಾರಿ ಕಂಡುಕೊಂಡಿದ್ದಾರೆ.

ಕಂಪನಿಗಳು ನೀಡುವ ಹೆಚ್ಚಿನ ಸಂಬಳ, ಸೌಕರ್ಯ ಸೌಲಭ್ಯಗಳು, ತಾಂತ್ರಿಕ ಪದವೀಧರರನ್ನು ಆಕರ್ಷಿಸಿವೆ. ಸರಕಾರಿ ಸೇವೆಯಲ್ಲಿರುವ ಎಲ್ಲ ಸೌಲಭ್ಯಗಳು ಇಲ್ಲಿ ಉಂಟು. ಹೀಗಾಗಿ ಸರಕಾರಿ ಸೇವೆಗೆ ಸೇರಿದವರು ರಾಜೀನಾಮೆ ನೀಡಿ ಕಂಪನಿಗೆ ಸೇರಿಕೊಂಡ ಉದಾಹರಣೆಗಳೂ ಉಂಟು. ಒಮ್ಮೆ ಇಲ್ಲಿ ಸೇರಿದ ಮೇಲೆ ಬಿಟ್ಟುಹೋಗಲು ಮನಸ್ಸೇ ಆಗುವುದಿಲ್ಲವೆಂಬುದು ಇಲ್ಲಿಯ ಬಹುಪಾಲು ಕಂಪನಿಗಳ ನೌಕರರ ಅಭಿಮತವಾಗಿದೆ.

ಇಲ್ಲಿ ಸ್ಥಾಪಿತವಾಗಿರುವ ಬೀಜದ ಕಂಪನಿಗಳನ್ನು ಗಮನಿಸಿ, ಸ್ಥಳೀಯ ಆರ್.ಟಿ.ಇ.ಎಸ್. ಸಂಸ್ಥೆಯ ಮಹಾವಿದ್ಯಾಲಯವು ಬಿ.ಎಸ್.ಸಿ.ಪದವಿಗೆ 'ಸೀಡ್ಸ್ ಟೆಕ್ನಾಲಜಿ' ಎಂಬ ಹೊಸ ವಿಷಯವನ್ನು ಕಳೆದ ವರುಷದಿಂದ ಪ್ರಾರಂಭಿಸಿದೆ. ಪದವಿ ಪಡೆದು ಹೊರಬೀಳುತ್ತಿದ್ದಂತೆಯೇ ಈ ಕಂಪನಿಗಳಲ್ಲಿ ನೌಕರಿ ಸಿಗುವುದು ಗ್ಯಾರಂಟಿ ಎಂಬುದನ್ನರಿತ ವಿದ್ಯಾರ್ಥಿಗಳು ಈ ಹೊಸ ವಿಷಯದತ್ತ ಆಕರ್ಷಿತರಾಗಿದ್ದಾರೆ.

ಗೊಬ್ಬರ, ಬೀಜ, ಕ್ರಿಮಿನಾಶಕ ಅಂಗಡಿಗಳು

ಸುಮಾರು ಒಂದು ಲಕ್ಷಕ್ಕೂ ಮಿಕ್ಕಿದ ಜನಸಂಖ್ಯೆ ಇರುವ ರಾಣೇಬೆನ್ನೂರಿನ ಪೇಟೆಯ ಯಾವುದೇ ಬೀದಿಯಲ್ಲಿ ತಿರುಗಾಡಿದರೂ ಮೊದಲಿಗೆ ನಿಮ್ಮ ಗಮನ ಸೆಳೆಯುವುದು ಇಲ್ಲಿಯ ಹೈಬ್ರೀಡ್ ಬೀಜಗಳ, ರಸಗೊಬ್ಬರಗಳ, ಕೀಟನಾಶಕಗಳ ಮತ್ತಿತರ ಕೃಷಿ ಸಲಕರಣೆಗಳ ಅಂಗಡಿಗಳು.

ಡಂಕಲ್ ಪ್ರಸ್ತಾವನೆಗೆ ಭಾರತ ಸಹಿ ಹಾಕಿದ ಬಳಿಕ ಬೀಜೋದ್ಯಮದ ಅವಕಾಶಗಳು ದ್ವಿಗುಣಗೊಂಡಿದ್ದು, ಈ ವ್ಯವಹಾರಕ್ಕೆ ದೇಶೀಯ ಹಾಗೂ ವಿದೇಶಿಯ ಕಂಪನಿಗಳು ಪೈಪೋಟಿಯಲ್ಲಿ ಇಲ್ಲಿ ಲಗ್ಗೆ ಹಾಕಿವೆ. ವರುಷದ ಹನ್ನೆರಡೂ ತಿಂಗಳೂ ಒಂದಿಲ್ಲೊಂದು ಬೀಜದ ಬೆಳೆ ಇಡುತ್ತಿರುವುದರಿಂದ ಬೆಳೆಗಳಿಗೆ ಕೀಟದ ಬಾಧೆ ಮೊದಲಿಗಿಂತ ಈಗ ಹೆಚ್ಚು. ಕಂಡು-ಕೇಳದಿರುವಂಥ ಕೀಟಗಳು ಈ ಬೆಳೆಗೆ ಆವರಿಸಿ ಎಂತೆಂಥದೋ ರೋಗಗಳನ್ನು ಹಬ್ಬಿಸಿ ಬಿಡುತ್ತವೆ. ಇವುಗಳ ಹತೋಟಿಗಾಗಿ ಕೀಟ ನಾಶಕಗಳ ಬೇಡಿಕೆಗಳೂ ಹೆಚ್ಚುತ್ತಿದ್ದು ವರುಷವಿಡೀ ಈ ಅಂಗಡಿಗಳತ್ತ ರೈತರ ದಾಪುಗಾಲು ಸಹಜ. ಕೀಟ ನಾಶಕಗಳನ್ನು ತಯಾರಿಸುವ ಕಂಪನಿಗಳಿಗೂ ಇಲ್ಲಿ ವರ್ಷವಿಡೀ ಸುಗ್ಗಿ. ರಾಜ್ಯದ ನಕ್ಷೆಯಲ್ಲಿ ರಾಣೇಬೆನ್ನೂರು ಕೇವಲ ಒಂದು ತಾಲೂಕಾಗಿ ಗುರುತಿಸಲ್ಪಡಬಹುದು. ಆದರೆ ಭಾರತದ ಬೀಜೋತ್ಪಾದನ ನಕ್ಷೆಯಲ್ಲಿ ಈ ತಾಲೂಕು ಅಗ್ರಗಣ್ಯ. ಅಷ್ಟೇ ಅಲ್ಲ, ಇಡೀ ಏಷ್ಯಾ ಖಂಡದಲ್ಲಿಯೇ ಸಂಕರ ಬೀಜಗಳ ಉತ್ಪಾದನೆಯಲ್ಲಿ ಈ ತಾಲೂಕಿನದು ಅಗ್ರಸ್ಥಾನ. ●

ಭ್ರಷ್ಟರ ರಕ್ಷಣೆಗಾಗಿ ಈ ಲೋಕಪಾಲ ಮಸೂದೆ!



ಕೋಚೆ ಚಿಂತನ

ಕೋ. ಚೆನ್ನಬಸಪ್ಪ
ನಿವೃತ್ತ ನ್ಯಾಯಾಧೀಶರು
೧೨೭, ಪಶ್ಚಿಮ ಕಾರ್ಡ್ ರಸ್ತೆ, ಮಹಾಲಕ್ಷ್ಮೀಪುರ,
ಬೆಂಗಳೂರು - ೫೬೦ ೦೮೬

ದಿನ ಬೆಳಗಾದರೆ ಒಂದಲ್ಲ ಒಂದು ಬೃಹತ್ ಪ್ರಮಾಣದ ಭ್ರಷ್ಟಾಚಾರ ಉನ್ನತ ಮಟ್ಟದಲ್ಲಿ- ಮುಖ್ಯಮಂತ್ರಿಗಳು, ಮಂತ್ರಿಗಳು ಸೇರಿದಂತೆ - ದೇಶದಾದ್ಯಂತ ಬಯಲಿಗೆ ಬೀಳುತ್ತಿವೆ. ಆಗಲೆ ಜನರ ಮನದಿಂದ ಮಾಸಿ ಹೋಗುತ್ತಿರುವ ಬೊಫಾರ್ಸ್ ಭ್ರಷ್ಟಾಚಾರ, ೨೦ ರಿಂದ ೬೦ ಸಹಸ್ರ ಕೋಟಿ ರೂ.ಗಳನ್ನೊಳಗೊಂಡ ಬ್ಯಾಂಕ್ ಸೆಕ್ಯುರಿಟಿ ಭ್ರಷ್ಟಾಚಾರ, ವೈದ್ಯಕೀಯ ಉಪಕರಣಗಳ ಸುಂಕವಿನಾಯಿತಿ ಆಮದು, ಸಕ್ಕರೆ ಹಗರಣ ಭ್ರಷ್ಟಾಚಾರದಿಂದ ಹಿಡಿದು ಇತ್ತೀಚೆಗೆ ಬಯಲಿಗೆ ಬಿದ್ದ ೧೩೩ ಕೋಟಿ ರೂ.ಗಳ ಯೂರಿಯಾ ಹಗರಣ, ಈಗ ಎಲ್ಲರ ಮನದಲ್ಲೂ ಹಚ್ಚ ಹಸುರಾಗಿ ಕಾಣುವ ಬಿಹಾರದ ೯೫೦ ಕೋಟಿ ರೂ.ಗಳ ಪಶುಆಹಾರ ಮೇರು ಸದೃಶ ಭ್ರಷ್ಟಾಚಾರದವರೆಗೆ ದಿನದಿನವೂ ಬೆಳಗಾದರೆ ಬಯಲಿಗೆ ಬರುತ್ತಲೆಯಿವೆ. ಈ ಭ್ರಷ್ಟಾಚಾರದ ಸರಮಾಲೆಯಲ್ಲಿ ಭಾಗಿಯಾದವರಲ್ಲಿ ಎಲ್ಲ ರಾಜಕೀಯ ಪಕ್ಷದ ಮುಖಂಡರು, ಮಂತ್ರಿಗಳು, ಶಾಸಕರು, ಪದಾಧಿಕಾರಿಗಳೂ ಇದ್ದಾರೆ. ಈ ವಿಚಾರದಲ್ಲಿ ಪಕ್ಷ ಭೇದ ವೆಂಬುದೇ ಇಲ್ಲ, ಜಾತಿ ಭೇದವೂ ಇಲ್ಲ. ಇದು ಒಂದು ಕ್ಷೇತ್ರಕ್ಕೇ ಸೀಮಿತವಾಗಿಲ್ಲ. ಒಂದು ಆಡಳಿತೆಯ ಶಾಖೆಗೆ ಸೀಮಿತವಾಗಿಲ್ಲ. ನೀವು ಹೆಸರು ಹೇಳಿ. ಅದರಲ್ಲಿ ಭ್ರಷ್ಟಾಚಾರ ಎಷ್ಟಾಗಿದೆ ಹೇಗಾಗಿದೆ ಎಂಬುದನ್ನು ತಕ್ಷಣವೆ ಹೇಳಿ ಬಡಬಹುದು!! ಅಂತೂ ಭ್ರಷ್ಟಾಚಾರ ಎಂಬುದು ಮಹಾಮಾರಿಯಂತೆ, ಮಾರಕ ಪಿಡುಗಿನಂತೆ, ಮದ್ದಿಲ್ಲದ ವ್ಯಾಧಿ ಕ್ಯಾನ್ಸರಿನಂತೆ...ಇನ್ನೇನೇನು ಉಪಮೆಗಳನ್ನು ಕೊಡಬಹುದೊ ಅವೆಲ್ಲವುಗಳನ್ನೂ ಮೀರಿ ಭ್ರಷ್ಟಾಚಾರ ಭಾರತೀಯರ ಜೀವನವನ್ನೂ ವ್ಯಾಪಿಸಿದೆ.

ಇತ್ತೀಚೆಗೆ ಒಂದು ಬೆಳವಣಿಗೆ ಕಂಡು ಬಂದಿದೆ. ಈ ಭ್ರಷ್ಟಾಚಾರ ಇದೆ ಎಂಬುದನ್ನು ಒಪ್ಪಿಕೊಂಡಿರುವುದೊಂದೇ ಅಲ್ಲದೆ, ಅದನ್ನು ನಿರ್ಮೂಲನೆ ಮಾಡಬೇಕೆಂದೂ ಹೇಳುತ್ತಿದ್ದಾರೆ. ಹಿಂದೆ ಶ್ರೀಮತಿ ಇಂದಿರಾಗಾಂಧಿ- ಭ್ರಷ್ಟಾಚಾರ ಜಾಗತಿಕ ಪರಿಸ್ಥಿತಿ; ಅದು ಭಾರತಕ್ಕೇ ಮೀಸಲಲ್ಲ, ಊರಿದ್ದಲ್ಲಿ ಹೊಲಿಗೇರಿ ಎಂಬಂಥ ಧೋರಣೆ ತಳೆದಿದ್ದರು! ಈ ಉದಾರ ಕೃಪಾದೃಷ್ಟಿಯ ಆಶ್ರಯದಲ್ಲಿ ರಾಜಕೀಯ ಪುಢಾರಿಗಳು ಧನ್ಯರಾಗಿ ಹೋದರು. ಭ್ರಷ್ಟಾಚಾರದಲ್ಲಿ ತೊಡಗುವುದು ನ್ಯಾಯಬಾಹಿರವೆಂದಾಗಲಿ ನಾಚಿಕೆಪಡುವ ಹೇಸಿ ನಡತೆಯೆಂದಾಗಲಿ. ಅವರ ಶಿಷ್ಯ ಪರಂಪರೆ ಬಗೆಯಲಿಲ್ಲ. ಆದರೆ ಇತ್ತೀಚೆಗೆ ನಮ್ಮ ರಾಷ್ಟ್ರಪತಿಗಳಿಂದ ಹಿಡಿದು ಪ್ರಧಾನಿ ಇಂದ್ರಕುಮಾರ್ ಗುಜ್ರಾಲ್, ಹಿಂದಿನ ಲೋಕಸಭಾಧ್ಯಕ್ಷ ರಬಿರಾಯ್ ಮುಂತಾದ ಮಹನೀಯರು ಈ ಭ್ರಷ್ಟಾಚಾರವನ್ನು ಹತ್ತಿಕ್ಕಲೇಬೇಕೆಂದು ದೃಢವಾಗಿ ಹೇಳುತ್ತಿದ್ದಾರೆ. ದೇಶದ ಸಾರ್ವಜನಿಕ ಮುಂದಾಳುಗಳು, ಸ್ವಚ್ಛ ಆಡಳಿತೆಯನ್ನು ಬಯಸುವ ಮುಖಂಡರು ಭ್ರಷ್ಟಾಚಾರವನ್ನು ನಿರ್ಮೂಲನೆ ಮಾಡಲೆ ಬೇಕೆಂದು ಆಂದೋಲನದಲ್ಲಿ ತೊಡಗಿದ್ದಾರೆ.

ಈ ವಿಚಾರ ಜನರಿಗೆ ಗೊತ್ತಾಗದಂತೆ ಈ ಮಸೂದೆ ಮಂಜೂರು ಮಾಡಿ ಭ್ರಷ್ಟರನ್ನು ರಕ್ಷಿಸುವ ಧೂರ್ತ ಪ್ರಯತ್ನ ಇದಾಗಿದೆ.

ಇದಕ್ಕಿಂತ ಭದ್ರವಾದ ರಕ್ಷಣೆಯನ್ನು ರಾಜಕಾರಣಿಗಳು ಬಯಸಿರಲಿಲ್ಲ!!

ದೇಶದಲ್ಲಿ ಎದ್ದಿರುವ ಈ ಜನಾಭಿಪ್ರಾಯಕ್ಕೆ ಮಣಿದು ಈಗ ಕೇಂದ್ರ ಸರ್ಕಾರ ಭ್ರಷ್ಟಾಚಾರ ನಿರ್ಮೂಲನೆಗಾಗಿ ಲೋಕಸಭೆಯಲ್ಲಿ ಲೋಕಪಾಲ ಮಸೂದೆಯನ್ನು ಮಂಡಿಸಿದೆ. ಆ ಲೋಕಪಾಲ ಮಸೂದೆಯ ವ್ಯಾಪ್ತಿಗೆ ಪ್ರಧಾನಿಯನ್ನೂ ಒಳಗೊಂಡು ಎಲ್ಲ ಹಂತದ ರಾಜಕೀಯ ಪುಢಾರಿಗಳು ಬರುವಂತೆ ರೂಪಿಸಲಾಗಿದೆ. ಈ ಮಸೂದೆ ಲೋಕಸಭೆಯಲ್ಲಿ ಮಂಡನೆ ಆದ ಮೇಲೆ, ಅದು ಭ್ರಷ್ಟ ರಾಜಕಾರಣಿಗಳನ್ನು ಬಲಿಹಾಕಲು ಸಾಧ್ಯವಾಗುವುದೆಂದು ವ್ಯಾಪಕವಾಗಿ ಪ್ರಚಾರ ಮಾಡಲಾಗುತ್ತಿದೆ. ಇದರಿಂದ ಭ್ರಷ್ಟರನ್ನು ನಿಗ್ರಹಿಸಲಾಗುವುದೆಂದು ಜನರನ್ನೂ ಮರಳು ಮಾಡುವ ಪ್ರಯತ್ನ ನಡೆದಿದೆ. ಪತ್ರಿಕೆಗಳೂ ಅದನ್ನೇ ಕುಟ್ಟಿ ಎಳೆಯುತ್ತಿವೆ!

ಈಗ ಲೋಕಸಭೆಯಲ್ಲಿ ಮಂಡಿಸಿರುವ ೧೯೯೬ರ ಲೋಕಪಾಲ ಮಸೂದೆಯನ್ನು ಕೂಲಂಕಷವಾಗಿ ವಿಮರ್ಶಿಸಿದರೆ ಇದು ಭ್ರಷ್ಟರ ನಿಗ್ರಹಕ್ಕಿಂತ ಭ್ರಷ್ಟರ ಪರಿಪಾಲನೆಗಾಗಿಯೆ ರೂಪಿಸಿದ ಒಂದು ನಯವಂಚನೆಯ ಶಾಸನ ಎಂಬುದು ಸ್ಪಷ್ಟವಾಗುತ್ತದೆ. ಈ ವಿಚಾರ ಜನರಿಗೆ ಗೊತ್ತಾಗದಂತೆ ಈ ಮಸೂದೆಯನ್ನು ಮಂಜೂರು ಮಾಡಿ, ಭ್ರಷ್ಟಾಚಾರದಲ್ಲಿ ಈಗ ಸಿಕ್ಕಿಬಿದ್ದಿರುವ ರಾಜಕಾರಣಿಗಳನ್ನು, ಅಧಿಕಾರಿಗಳನ್ನು ಮುಂದೆ ಸಿಕ್ಕಿ ಬೀಳುವ ಭ್ರಷ್ಟರನ್ನು ರಕ್ಷಣೆ ಮಾಡುವ ಧೂರ್ತ ಪ್ರಯತ್ನ

ಇದಾಗಿದೆ! ಈ ಮಸೂದೆಯ ಮರ್ಮವನ್ನು ಒಂದಿಷ್ಟು ಭೇದಿಸಬೇಕಾಗಿದೆ.

ಈಗ ಲೋಕಸಭೆಯಲ್ಲಿ ಮಂಡಿಸಿರುವ ಲೋಕಪಾಲ ಮಸೂದೆ ಐದನೆಯದು. ೧೯೬೮, ೧೯೭೧, ೧೯೭೭, ೧೯೮೫ರಲ್ಲಿ ಇದೆ ಹೆಸರಿನ ಮಸೂದೆಗಳನ್ನು ಮಂಡಿಸಲಾಗಿತ್ತು. ಲೋಕಸಭೆಯ ವಿಸರ್ಜನೆಯಿಂದಲೋ, ಸರ್ಕಾರಗಳು ಬಿದ್ದುಹೋದ ಕಾರಣದಿಂದಲೊ ಆ ನಾಲ್ಕೂ ಸಲ ಆ ಮಸೂದೆಗಳು ಲುಪ್ತ (Lapse)ಆಗಿ ಹೋದವು. ೧೯೯೬ರಲ್ಲಿ ಮಂಡಿಸಿದ ಈ ಮಸೂದೆ ಮಂಜೂರಾದೀತೋ ಇಲ್ಲವೊ ಹೇಳಲಾಗದು. ಮಂಜೂರಾಗ ಬಹುದೆಂಬ ಹೆದರಿಕೆಯನ್ನಿಟ್ಟುಕೊಂಡು ಇದರ ಅಂತರಾರ್ಥವನ್ನು ಪರೀಕ್ಷಿಸಬೇಕು.

ಈ ಮಸೂದೆಯ ಒಂದು 'ಸ್ವಾಗತಾರ್ಹ' ಅಂಶ-ಇದರ ವ್ಯಾಪ್ತಿಯಲ್ಲಿ ಸಂಸತ್‌ಸದಸ್ಯರು, ಕೇಂದ್ರ ಮಂತ್ರಿಗಳು ಮತ್ತು ಪ್ರಧಾನ ಮಂತ್ರಿಗಳೂ ಬರುತ್ತಾರೆ. ೧೯೮೮ರ ಲಂಚ ನಿರೋಧ ಕಾಯಿದೆಯ ಕೆಳಗೆ ಬರುವ ಎಲ್ಲ ಅಪರಾಧಿಗಳನ್ನೂ ಈ ಲೋಕಪಾಲರು ವಿಚಾರಿಸುವ ವಿಶಾಲ ಅಧಿಕಾರ ವ್ಯಾಪ್ತಿಯನ್ನು ಕೊಡಲಾಗಿದೆ. ಇದರಿಂದ ಜನ "ಓ! ಪ್ರಧಾನಿಯ ಭ್ರಷ್ಟಾಚಾರಗಳನ್ನೂ ವಿಚಾರಿಸಿಕೊಳ್ಳುವಂಥ ಒಂದು ಸಂಸ್ಥೆ ಅಸ್ತಿತ್ವದಲ್ಲಿ ಬಂತು" ಎಂದು ಉಬ್ಬಿಹೋಗಬಹುದು! ವಿಚಾರಣೆ ಮಾಡುವ ಅಧಿಕಾರ ಲೋಕಪಾಲರಿಗೆ ಇದ್ದಾಕ್ಷಣ, ಪ್ರಧಾನಿ ಆದಿಯಾಗಿ ರಾಜಕಾರಣಿಗಳ ಭ್ರಷ್ಟಾಚಾರಗಳನ್ನು 'ತನಿಖೆ' (Investigate) ಮಾಡುವ ಉಪಕರಣ ಯಾವುದು? ಉದಾ: ಒಬ್ಬ ಮಂತ್ರಿ ಲಂಚದ ಹಣವನ್ನು ವಿದೇಶಗಳಲ್ಲಿ ಬ್ಯಾಂಕಿನಲ್ಲೋ, ಹೋಟೆಲ್ ಉದ್ಯಮಗಳಲ್ಲೊ ಹೂಡಿದ್ದಾನೆಂದು ಫಿರ್ಯಾದಿ ಕೊಟ್ಟರೆ, ಇದು ದಿಟವೊ ಸಟೆಯೊ ಎಂದು ತಪಾಸಣೆ ಮಾಡುವ ವ್ಯಕ್ತಿ/ಸಂಸ್ಥೆ ಯಾರು? ಯಾವುದು? ಕೇಂದ್ರ ತನಿಖಾ ದಳ (ಸಿ.ಬಿ.ಐ.) ಇದೆಯಲ್ಲ ಎಂದು ಕೇಳಬಹುದು. ಸಿ.ಬಿ.ಐ., ಲೋಕಪಾಲರ ಆಜ್ಞೆಯನ್ನು ಪಾಲಿಸಲೇಬೇಕಾದ ಅಧೀನ ಸಂಸ್ಥೆಯಲ್ಲ. ಅದು ಪ್ರಧಾನಿಗಳು ಅಪ್ಪಣೆ ಕೊಟ್ಟರೆ ಸಂಬಂಧಪಟ್ಟ ರಾಜ್ಯ ಸರ್ಕಾರಗಳು ಸಮ್ಮತಿಸಿದರೆ ಮಾತ್ರ ತಪಾಸಣೆ ಮಾಡಬಹುದು. ಅಂದರೆ ಎಲ್ಲಿಗೆ ಬಂತು? ಪ್ರಧಾನಿಯ ಮರ್ಜಿಯನ್ನು ಕಾಯ್ದು ಲೋಕಪಾಲ ಕೂತು ತೂಕಡಿಸಬೇಕು. ಅರ್ಥ ಇಷ್ಟೆ: ಲೋಕಪಾಲ ಹಲ್ಲಿಲ್ಲದ ಹಾವು.

ಇದಕ್ಕಿಂತ ಇನ್ನೊಂದು ಕರಾಮತ್ತು ಈ ಮಸೂದೆಯಲ್ಲಿದೆ. ಲೋಕಪಾಲರು ತಮಗೆ ಗೊತ್ತಾದ ಮಾಹಿತಿಯ ಪ್ರಕಾರ ತಾವಾಗಿಯೆ ಯಾವ ಭ್ರಷ್ಟಾಚಾರವನ್ನೂ ವಿಚಾರಣೆ ಮಾಡುವಂತೆಯಿಲ್ಲ. ಉದಾ: ಪತ್ರಿಕೆಗಳ ಮೂಲಕ ಹವಾಲಾ ಭ್ರಷ್ಟಾಚಾರ, ಯೂರಿಯಾ ಭ್ರಷ್ಟಾಚಾರ, ಬ್ಯಾಂಕ್ ಸೆಕ್ಯುರಿಟಿ ಭಾನಗಡಿ ಬಯಲಿಗೆ ಬಿತ್ತೆಂದು ಇಟ್ಟುಕೊಳ್ಳಿ. ಹೀಗೆ ಲೋಕವಿಖ್ಯಾತ ಭ್ರಷ್ಟಾಚಾರಗಳು ಲೋಕಾಯುಕ್ತಕ್ಕೆ ಗೊತ್ತಾದಾಗ ತಾವಾಗಿಯೆ ಸ್ವಯಂ ಪ್ರೇರಣೆಯಿಂದ (suomoto) ತಪಾಸಣೆ ಮಾಡಕೂಡದೆಂದು ಸೆಕ್ಷನ್ ೩೩(b) ಪ್ರಕಾರ ವಿಧಿಸಲಾಗಿದೆ. ಯಾರಾದರೂ ಲಿಖಿತಮೂಲಕ ಫಿರ್ಯಾದಿ ಸಲ್ಲಿಸಿದರೆ ಮಾತ್ರ ತಪಾಸಣೆ ಮಾಡಿಸಬಹುದು. ಹಾಗಾದರೆ ಯಾರಾದರೂ ಫಿರ್ಯಾದಿ ಕೊಡಬಹುದಲ್ಲ? ಕೊಡಬಹುದು. ಆದರೆ ಆತ ರೂ. ೫೦,೦೦೦ಗಳ ಠೇವಣಿ ಇಡಬೇಕು. ವಿಚಾರಣೆ ಮಾಡಿದ ನಂತರ ಆರೋಪ ಸಾಬೀತಾಗದಿದ್ದರೆ ಆ ೫೦ ಸಾವಿರ ರೂ.ಗಳು ಸರ್ಕಾರಕ್ಕೆ ಸೇರಿ ಹೋಗುತ್ತದೆ. ಹಾಗೂ ಒಂದು ವರ್ಷಕ್ಕಿಂತ ಕಡಮೆಯಿಲ್ಲದ ಸೆರೆಮನೆ ಶಿಕ್ಷೆಯನ್ನೂ ಅನುಭವಿಸಬೇಕೆಂದು ಸೆಕ್ಷನ್ ೨೪(೨)ರಲ್ಲಿ ವಿಧಿಸಲಾಗಿದೆ. ಅಂದ ಮೇಲೆ ೫೦ ಸಾವಿರ ರೂ. ಠೇವಣಿ ಇಟ್ಟು ಒಂದು ವರ್ಷ ಜೈಲಿಗೆ ಹೋಗಲು ಸಿದ್ಧರಾಗುವಂಥ ಸಾರ್ವಜನಿಕ ಹಿತಾಸಕ್ತಿವುಳ್ಳ ಶ್ರೀಮಂತರು ಧೈರ್ಯಶಾಲಿಗಳು ಯಾರಿದ್ದಾರೆ? ಈ ಮಸೂದೆ ಕೇವಲ ಹಲ್ಲಿಲ್ಲದ ಹಾವು ಮಾತ್ರವೆ ಅಲ್ಲ. ಫಿರ್ಯಾದಿ ಕೊಡುವವರ ಕುತ್ತಿಗೆಗೆ ಉರುಲಿನ ಭಯ ಒಡ್ಡಿದ ಯಮ ಪಾಶ!! ಹಾಗಾದರೆ ಇದು ಭ್ರಷ್ಟಾಚಾರ ಶಿಕ್ಷೆಗಾಗಿರುವ ಶಾಸನವೆ? ಅಥವಾ ಅವರ ರಕ್ಷಣೆಗಾಗಿ ರೂಪಿಸಿದ ಗುರಾಣಿಯೆ?

ಒಂದು ವೇಳೆ ಯಾವುದಾದರೂ ಸಾರ್ವಜನಿಕ ಹಿತಾಸಕ್ತ ಸಂಸ್ಥೆ ನಿಧಿ ಸಂಗ್ರಹಮಾಡಿ ಠೇವಣಿ ಇಟ್ಟು ಯಾರಾದರೂ ಧೈರ್ಯಶಾಲಿಗಳ ಮೂಲಕ ಫಿರ್ಯಾದಿ ಕೊಟ್ಟು ತಪಾಸಣೆ ಮಾಡಿಸಿದರೆಂದು ಇಟ್ಟುಕೊಳ್ಳೋಣ. ಲೋಕಪಾಲರು ವಿಚಾರಣೆ ಮಾಡಿ ಮೇಲ್ನೋಟಕ್ಕೆ ಆರೋಪ ಸಾಬೀತಾಗಿದೆ ಎಂದು ತೀರ್ಮಾನಕ್ಕೆ ಬಂದರೆಂದೂ ಇಟ್ಟುಕೊಳ್ಳೋಣ. ಮುಂದೇನು? ಆ ವರದಿಯನ್ನು ಲೋಕಪಾಲರು ಪ್ರಧಾನಿಗಳಿಗೆ ಕಳಿಸಿಕೊಡಬೇಕು. ಆ ವರದಿಯನ್ನು ಕಾರ್ಯಗತ ಮಾಡುವುದು ಬಿಡುವುದು ಪ್ರಧಾನಿಗಳ ಇಷ್ಟ! ಈಗ ವಿಚಾರಣಾ ಆಯೋಗಗಳು ಸಲ್ಲಿಸುವ ವರದಿಗಳು ಆಯಾ ಸರ್ಕಾರದ ಕಪಾಟುಗಳಲ್ಲಿ ಧೂಳು ಹಿಡಿದು, ಹುಳುತಿಂದು ಹೋಗುವಂತೆಯೆ ಈ ವರದಿಯೂ ಮಣ್ಣು ಪಾಲಾಗುವುದರಲ್ಲಿ ಯಾರಿಗಾದರೂ ಸಂಶಯವಿದೆಯೆ? ಅಂದರೆ ಈ ಲೋಕಪಾಲ ಮಸೂದೆಯ ನಾಟಕ ಅಡಿ ಭ್ರಷ್ಟರ ರಕ್ಷಣೆಯನ್ನು ಬಹು ನಾಜೂಕಾಗಿ ಮಾಡಬಹುದು.

ಈ ಮಸೂದೆ ಭ್ರಷ್ಟ ರಾಜಕಾರಣಿಗಳನ್ನು ರಕ್ಷಿಸುವ ಇನ್ನೊಂದು ನಿಬಂಧನೆ ರೂಪಿಸಿದೆ. ಸೆಕ್ಷನ್ ೧೩(೨) ಪ್ರಕಾರ ಲೋಕಪಾಲರು ನಡೆಸುವ ವಿಚಾರಣಾ ನಡವಳಿಕೆಗಳು ಗುಟ್ಟಾಗಿ ಮುಚ್ಚಿದ ಬಾಗಿಲ ಹಿಂದೆ (Incamera) ನಡೆಯತಕ್ಕದ್ದು. ಯಾವ ಪತ್ರಿಕೆಗಳೂ ಆ ನಡವಳಿಕೆಯನ್ನು ಪ್ರಕಟಿಸತಕ್ಕದ್ದಲ್ಲ. ಪ್ರಕಟಿಸಿದ್ದಾದರೆ ಅವರಿಗೆ ಸೆರೆಮನೆ ಶಿಕ್ಷೆ ವಿಧಿಸಬಹುದು!! ಈಗ ಭ್ರಷ್ಟ ರಾಜಕಾರಣಿಗಳ ಭ್ರಷ್ಟಾಚಾರವನ್ನು ಪತ್ರಿಕೆಗಳು ಲೋಕಕ್ಕೆಲ್ಲ ಜಾಹೀರ ಮಾಡಿ ಅವರ ನಿಜ ಬಣ್ಣ ಬಯಲಿಗಿಡಬಹುದು. ಈ ಲೋಕಪಾಲ ಮಸೂದೆ ಕಾಯಿದೆ ಆದಾಗ, ವಿಚಾರಣೆ ನಡೆದಾಗ ಯಾವ ಪತ್ರಿಕೆಯೂ ಬಾಯಿಬಿಡುವಂತಿಲ್ಲ. ಇದಕ್ಕಿಂತ ಭದ್ರವಾದ ರಕ್ಷಣೆ ಭ್ರಷ್ಟರಿಗೆ ಇನ್ನೇನುಬೇಕು?

ಇನ್ನೊಂದು ಆತಂಕಕಾರಿಯಾದ ಅಂಶ ಇದರಲ್ಲಿದೆ. ಸೆಕ್ಷನ್ ೨೬ರ ಪ್ರಕಾರ ಲೋಕಪಾಲರು ವಿಚಾರಣೆ ಮಾಡಿ, ಫಿರ್ಯಾದಿಯಲ್ಲಿ ಹುರುಳಿಲ್ಲವೆಂದು ವರದಿ ಮಾಡಿದರೆ ಅದೇ ಫಿರ್ಯಾದಿಯ ವಿಚಾರವಾಗಿ ಯಾವ ನ್ಯಾಯಾಲಯವು ಆ ವಿಚಾರಣೆ ನಡೆಸುವಂತೆಯೆ ಇಲ್ಲ! ಅಂದರೆ ಲೋಕಪಾಲರೇ ಅಖೈರ್ ಅಧಿಕಾರಿ. ಅವರು ನಿರ್ದೋಷಿಯೆಂದ ಮೇಲೆ ಕತೆ ಮುಗಿಯಿತು. ಸರ್ವೋಚ್ಚ ನ್ಯಾಯಾಲಯದಲ್ಲಿ ಆ ಬಗ್ಗೆ ತಪಾಸಣೆ ಮಾಡುವಂತೆ ಈಗಿನಂತೆ ಯಾವ ತಪಾಸಣಾಧಿಕಾರಿಗೂ ಆಜ್ಞೆ ಮಾಡುವಂತಿಲ್ಲ!! ಇದಕ್ಕಿಂತ ಭದ್ರವಾದ ರಕ್ಷಣೆಯನ್ನು ಭ್ರಷ್ಟರಾಜಕಾರಣಿಗಳು ಬಯಸಿರಲಿಲ್ಲ!!

ಈ ಬಗ್ಗೆ ವ್ಯಾಪಕವಾದ ಚರ್ಚೆ ಆಗಬೇಕು. ಜನಾಭಿಪ್ರಾಯ ಮೂಡಬೇಕು. ಹೀಗೆಯೇ ಬಿಟ್ಟರೆ ಭ್ರಷ್ಟಾಚಾರ ಹೀಗೆಯೇ ಬೆಳೆಯುತ್ತದೆ.

ವ್ಯಕ್ತಿತ್ವ ವಿಕಾಸ

ಹೆಜ್ಜೆ - ೧

ಜೀವನದ ಅಗ್ನಿಪರೀಕ್ಷೆಯಲ್ಲಿ 'ಬೆಂದರೆ ಬೇಂದ್ರೆ, ಆಗಬಹುದು' ಅಥವಾ ಬೂದಿಯಾಗಿ ಹೋಗಿ ಬಿಡಬಹುದು.

ಜೀವನವನ್ನು ಪ್ರಯಾಣಕ್ಕೆ ಹೋಲಿಸಬಹುದು. ಪ್ರಯಾಣಕ್ಕೆ ಒಂದು ಗುರಿ ಬೇಕೇ ಬೇಕು. ಕ್ರಮಿಸಬೇಕಾದ ದಾರಿ ಎಷ್ಟೇ ದೂರದ್ದಾದರೂ ಅದು ಛಲದ, ಬಲದ ಮೊದಲ ಹೆಜ್ಜೆಯಿಂದಲೇ ಪ್ರಾರಂಭವಾಗಬೇಕು. ಬನ್ನಿ, ಮೊದಲ ಹೆಜ್ಜೆಯಿರಿಸಲು ಸಿದ್ಧರಾಗೋಣ.

ಜನಿಸಿದ ಪ್ರತಿಯೊಬ್ಬ ವ್ಯಕ್ತಿಗೆ ವಿಶಿಷ್ಟವಾದ ವ್ಯಕ್ತಿತ್ವವಿದೆ. ಅದು ಆ ವ್ಯಕ್ತಿಗೇ ತಿಳಿಯದಿರಬಹುದು. ಕೆಲವರಂತೂ, ಕರ್ಣನ ಕವಚ-ಕುಂಡಲಗಳಂತೆ, ಭಾಗ್ಯಶಾಲಿಗಳು ಮಾತ್ರ ವ್ಯಕ್ತಿತ್ವ ಪಡೆದಿರುತ್ತಾರೆಂಬ ತಪ್ಪುಗ್ರಹಿಕೆ ಮಾಡಿಕೊಂಡಿರುತ್ತಾರೆ.

ಮನುಷ್ಯನಿಗೆ ತನ್ನದೇ ಆದ ದೇಹ, ಮನಸ್ಸು, ಭಾವನೆಗಳಿವೆ. ಪ್ರತಿ ವ್ಯಕ್ತಿಯಲ್ಲಿ ಇವು ಬೇರೆ ಬೇರೆ ಪ್ರಮಾಣದಲ್ಲಿ ಸಂಯೋಜಿತವಾಗಿವೆ. ಎಡಗೈಯ ಹೆಬ್ಬೆರಳ ಗುರುತು ಹೇಗೆ ವ್ಯಕ್ತಿಯಿಂದ ವ್ಯಕ್ತಿಗೆ ಭಿನ್ನವೋ ಹಾಗೆಯೇ ಈ ಸಂಯೋಜನೆ ಸಹ. ಆದುದರಿಂದ ಒಬ್ಬರ ವ್ಯಕ್ತಿತ್ವದಂತೆ ಇನ್ನೊಬ್ಬರದಿಲ್ಲ. ಯಾವದೋ ಸಂದರ್ಭದಲ್ಲಿ ನಿಮಗೆ ಅದು ಹಾಗೆ ಕಂಡಿದ್ದರೆ ಅದು ಬರಿ ಭ್ರಮೆ ಅಷ್ಟೇ!

ನಮ್ಮ ಜೀವನ ಬಹುಮುಖಿ ಚಟುವಟಿಕೆಗಳಿಂದ ಕೂಡಿದೆ. ರಾಜಕೀಯವಾಗಿ ಶಾಸಕಿ, ವೃತ್ತಿಯಿಂದ ವೈದ್ಯೆ, ಪ್ರವೃತ್ತಿಯಿಂದ ಸಾಹಿತಿ ನೀವಾಗಿರಬಹುದು. ಉದರ ನಿರ್ವಹಣೆಗಾಗಿ ನಾವು ಅನೇಕ ವೇಷಗಳನ್ನು ಧರಿಸಬೇಕಾಗುತ್ತದೆ. ಆದರೆ ಇದಾವದೂ ನಾವಿರುವ ಸಮಾಜದಿಂದ ಹೊರತಾದುದಲ್ಲ. ಸಮಾಜದಿಂದ ದೂರವಾಗಿ ನಾವು ಇರಲಾರೆವು.

ಜನಿಸಿದ ಮೇಲೆ ಬದುಕುವದು ಅನಿವಾರ್ಯ; ಆದರೆ ಬಾಳಲು ಪ್ರಯತ್ನಿಸಬೇಕು. ''ನಾಲ್ಕು ಜನ 'ಹೌದು' ಎನ್ನುವಂತೆ ಇದ್ದ ನೋಡ್ರಿ!'' ಎಂದು ಉದ್ಗಾರ ತೆಗೆಯುವದನ್ನು ಕೇಳಿದ್ದೇವೆ. ಕನಿಷ್ಠ ನಾಲ್ಕು ಜನ ಆದರೂ ನಮಗೆ ಬೇಕೇ ಬೇಕು! ಹಾಗಾದರೆ ದೇಹ, ಮನಸ್ಸು, ಭಾವನೆಗಳೊಡನೆ ಸುತ್ತಲಿನ ಸಮಾಜವೂ ನಮ್ಮ ವ್ಯಕ್ತಿತ್ವಕ್ಕೆ ಪ್ರಮುಖ ಕಾರಣವೆಂದಾಯಿತು. ''ಇತರರಿಗೆ ನಾವು ಹೇಗೆ ಕಾಣುತ್ತೇವೆ, ಎಂಬುದೇ ನಮ್ಮ ವ್ಯಕ್ತಿತ್ವ'' (ನಾವು ಹೇಗೆ ಇದ್ದೇವೆ ಎಂಬುದಲ್ಲ) ಎಂದು ಹೇಳಬಹುದು.

ನಮ್ಮಲ್ಲಿ ಅನೇಕರು ಶಿಕ್ಷಣ ಪಡೆಯುತ್ತಾರೆ. ಹೊಟ್ಟೆ ಪಾಡಿಗಾಗಿ ಏನೇನೋ ಮಾಡುತ್ತಾರೆ. ಅತೃಪ್ತ ಸಿರಿವಂತರಿದ್ದಾರೆ; ಸಂತೃಪ್ತ ಬಡವರಿದ್ದಾರೆ. ಮೂಲದಲ್ಲಿ ಎಲ್ಲರ ಗುರಿಯೂ ಒಂದೇ-ನಾವು ಸುಖಿಗಳಾಗಬೇಕು! ಆದರೆ ಎಲ್ಲರೂ ಸುಖಿಗಳಾಗುವದಿಲ್ಲವಲ್ಲ? ಇದಕ್ಕೆ ಕಾರಣ ಹುಡುಕುವ ಬದಲು ಹಿರಿಯರನ್ನೋ, ಸಮಾಜವನ್ನೋ ಕಡೆಗೆ ದೈವವನ್ನೋ ದೂಷಿಸುವದು, ಶಪಿಸುವದು ಎಷ್ಟು ಸರಿ?

ನನಗೆ ಉತ್ತಮ ಸ್ನೇಹಿತೆಯರ ಸಂಗ ಬೇಕು; ನಾನು ಜನಪ್ರಿಯಳಾಗಬೇಕು; ಎಲ್ಲರೊಡನೆ ಸಮರಸವಾಗಿ ಜೀವಿಸಬೇಕು; ನನ್ನ ಪ್ರಭಾವ ಎಲ್ಲೆಡೆ ಬೀರಬೇಕು; ಬೇರೆಯವರ ವ್ಯಕ್ತಿತ್ವವನ್ನು ಸರಿಯಾಗಿ ಗುರುತಿಸಬೇಕು; ಒಟ್ಟನಲ್ಲಿ ಜೀವನದಲ್ಲಿ ಯಶಸ್ವಿಯಾಗಿ ತನ್ಮೂಲಕ ಸುಖಿಯಾಗಬೇಕು ಎಂಬಿತ್ಯಾದಿ ಬಯಕೆಗಳು ಯಾರಿಗಿಲ್ಲ?



ಆದರೆ ಕನಸು ಕಾಣುವದರಿಂದ ಈ ಗುರಿ ತಲುಪಲು ಸಾಧ್ಯವಿಲ್ಲ. ಅನೇಕರ ದುಃಖ, ಅಪಯಶಸ್ಸು, ನಿರಾಸೆಯೇ ಇದಕ್ಕೆ ಉತ್ತರ. ಆದುದರಿಂದ 'ಜೀವನದ ಯಶಸ್ಸು-ಅಪಯಶಸ್ಸುಗಳನ್ನು ನಿರ್ಧರಿಸುವ ವ್ಯಾವಹಾರಿಕ ಶಕ್ತಿ'ಯಾಗಿ ವ್ಯಕ್ತಿತ್ವವನ್ನು ಪರಿಗಣಿಸಲಾಗುತ್ತದೆ. ಜೀವನ ನೀಡುವ ಅನುಭವಗಳಿಂದ ಪಾಠ ಕಲಿಯದಿದ್ದರೆ ಅದಕ್ಕೆ ದುಃಖ, ಅಪಯಶಗಳೇ ಗತಿ.

ಪುರಾತನ ಗ್ರೀಕ್ ನಾಗರಿಕತೆಯ ದಿನಗಳಿಂದಲೇ ವ್ಯಕ್ತಿತ್ವ ವಿಶ್ಲೇಷಣೆ, ವ್ಯಕ್ತಿತ್ವ ವಿಕಸನದ ಬಗೆಗೆ ಚಿಂತನೆಗಳು ನಡೆದು ಬಂದಿವೆ. ಮನಃಶಾಸ್ತ್ರದ ಒಂದು ವಿಶಿಷ್ಟ, ಜನೋಪಯೋಗಿ ಹಾಗೂ ರಚನಾತ್ಮಕ ಭಾಗವಾಗಿ ವ್ಯಕ್ತಿತ್ವಶಾಸ್ತ್ರ (Personology) ಬೆಳೆದು ಬರುತ್ತಲಿದೆ. ವೈದ್ಯಕೀಯ ಶಾಸ್ತ್ರ ಸಮಾಜ ಶಾಸ್ತ್ರ ಮತ್ತು ಮನಃಶಾಸ್ತ್ರಗಳು ಇದರ ಸೋದರ ಸಂಬಂಧಿಗಳು. ವ್ಯಕ್ತಿತ್ವ ಶಾಸ್ತ್ರದಲ್ಲಿ ವ್ಯಕ್ತಿತ್ವದ ಎಲ್ಲ ಕೋನಗಳನ್ನು ಶಾಸ್ತ್ರ ಶುದ್ಧವಾಗಿ, ಶಿಸ್ತುಬದ್ಧವಾಗಿ ಅಭ್ಯಸಿಸಲಾಗುತ್ತದೆ.

ವ್ಯಕ್ತಿತ್ವದ ಉಪಯೋಗದ ಬಗೆಗೆ ತಿಳಿದುಕೊಳ್ಳಲು ನಾವು ತೊಡಗಿರುವದರಿಂದ ಆದರ ವ್ಯಾಖ್ಯೆಯ ಜಟಿಲತೆಯಂಥ ತಾತ್ವಿಕ ವಿಷಯಗಳ ಬಗೆಗೆ ತಲೆಕೆಡಿಸಿಕೊಳ್ಳುವದು ಬೇಡ. ಏಕೆಂದರೆ ವ್ಯಾಖ್ಯೆಗಳು ಬಹಳಷ್ಟಿವೆ. ಸರಳವಾಗಿ ಹೇಳಬಹುದಾದರೆ, ''ಯಾವಳೊಬ್ಬಳ ವ್ಯಕ್ತಿತ್ವ ಆಕೆ ಸಮಾಜಿಕ ಪರಿಸರದ ಮೇಲೆ ಬೀರಬಹುದಾದ ಪ್ರಭಾವವೇ ಆಗಿದೆ''.

ಸರ್ವಗ್ರಾಹ್ಯ ವ್ಯಕ್ತಿತ್ವ ರೂಪಿಸಿಕೊಳ್ಳುವದು ನಮ್ಮ ಗುರಿಯೆಂದಾಯಿತು. ಹಾಗಾದರೆ ಸುಂದರ, ಪರಿಪೂರ್ಣ ವ್ಯಕ್ತಿತ್ವವನ್ನು ಗುರುತಿಸುವದು ಹೇಗೆ? ಉತ್ತಮ, ಅನುಕರಣೀಯ ವ್ಯಕ್ತಿತ್ವದ ಅಳತೆಗೋಲು ಯಾವದು? ಈ ಪ್ರಶ್ನೆಗಳತ್ತ ಈಗ ದೃಷ್ಟಿ ಹರಿಸೋಣ.

ನಮ್ಮ ಜೀವನದಲ್ಲಿ ಅನೇಕರೊಡನೆ ಬೆರೆಯುವ ಅವಕಾಶವು ನಮಗೆ ಒದಗುತ್ತದೆ. ಬೋಧಕರು ಕೆಲವೇ ಶಿಷ್ಯರನ್ನೂ, ಹುಡುಗರು ಕೆಲವೇ ಸಹಪಾಠಿಗಳನ್ನೂ ಬಹಳ ವರ್ಷ ನೆನಪಿನಲ್ಲಿರಿಸುವರು. ಇದಕ್ಕೆ ಅವರವರ

ವ್ಯಕ್ತಿತ್ವವೇ ಕಾರಣ. ಜನ ಉತ್ತಮ ವ್ಯಕ್ತಿತ್ವವುಳ್ಳವರ ಸಹವಾಸ ಬಯಸುತ್ತಾರೆ; ಅವರನ್ನು ಪ್ರೀತಿಸುತ್ತಾರೆ; ಅವರೊಡನೆ ಸ್ವಯಂಸ್ಫೂರ್ತಿಯಿಂದ, ಸಂತೋಷದಿಂದ ಸಹಕರಿಸುತ್ತಾರೆ. ಅನಪೇಕ್ಷಣೀಯ ವ್ಯಕ್ತಿತ್ವದವರೂ ನಮ್ಮ ಮಧ್ಯದಲ್ಲಿರುತ್ತಾರೆ. ಜನ ಅವರಿಂದ ದೂರವಿರಬಯಸುತ್ತಾರೆ. ಮೂರನೆಯದು ಕಳಪೆ ವ್ಯಕ್ತಿತ್ವ. ಇಂಥವರನ್ನು ಸ್ವಾಗತಿಸುವದೂ ಇಲ್ಲ; ಹಿಮ್ಮೆಟ್ಟುವದೂ ಇಲ್ಲ. ಪ್ರೀತಿಸುವದೂ ಇಲ್ಲ; ದ್ವೇಷಿಸುವದೂ ಇಲ್ಲ. ಇಂಥವರ ಪಾಡು ಯಾರಿಗೂ ಬೇಡ!

ವ್ಯಕ್ತಿತ್ವದಳತೆಗೋಲು :

1. ಆ ವ್ಯಕ್ತಿ ಬೇರೆಯವರನ್ನು ಎಷ್ಟರ ಮಟ್ಟಿಗೆ ನಿಯಂತ್ರಿಸಬಲ್ಲ?
2. ಇತರರಲ್ಲಿ ಯಾವ ಪ್ರಮಾಣದ ಸಂತೋಷಗಳನ್ನು ಬಿತ್ತಬಲ್ಲ?
3. ಹೆರವರೊಡನೆ ಎಷ್ಟು ಸುಗಮವಾಗಿ ಆತ ಬೆರೆಯಬಲ್ಲ?

ಬೇರೆಯವರನ್ನು ನಿಯಂತ್ರಿಸಲು ಅನೇಕ ಸಾಧನಗಳುಂಟು. ನಿಮ್ಮ ಶ್ರೀಮಂತಿಕೆ, ಅಧಿಕಾರ, ಆಮಿಷ ಅಥವಾ ಕ್ರೌರ್ಯಗಳೂ ಕಾರಣವಾಗಬಹುದು. ಸಂಗೀತ ಸಭೆಯಲ್ಲಿ ತಲೆದೂಗಕೂಡದೆಂಬ ಆಜ್ಞೆಯನ್ನು ಅಕ್ಬರ್-ಬೀರಬಲ್‌ರ ಕಥೆಗಳಲ್ಲಿ ಓದಿರುವೆವು. ಅಂತೆಯೇ, ರಾತ್ರಿ ಒಬ್ಬರೇ ಹೋಗುತ್ತಿರುವಾಗ ಒಬ್ಬ ಎಲ್ಲಿಂದಲೋ ಧುತ್ತೆಂದು ನಿಮ್ಮ ಮೇಲೆರಗಿದಾಗ ಆತ ತೋರಿಸಿದ ದೊಣ್ಣೆ ನೋಡಿ ಕೈ ಎತ್ತಿದ ಉದಾಹರಣೆಗಳಿಲ್ಲವೇ? ಸೇನಾಧಿಕಾರಿ, ರಾಜಕಾರಣಿ, ಉದ್ಯಮಿ ಈ ರೀತಿ ನಿಯಂತ್ರಣ ಸಾಧಿಸಬಹುದು. ಇಲ್ಲಿ ಪ್ರಭಾವ ವ್ಯಕ್ತಿತ್ವದ್ದಲ್ಲ!

ಸಫಲ ವ್ಯಕ್ತಿತ್ವ ಪಡೆಯುವ ಬಗೆ ಹೇಗೆ? ಈ ವಿಷಯ ತಪ್ಪು ಗ್ರಹಿಕೆಗಳು, ಮೂಢನಂಬಿಕೆಗಳಿಂದ ತುಂಬಿಹೋಗಿದೆ. ಕೆಲವನ್ನು ತಿಳಿದುಕೊಳ್ಳೋಣ.

ನಿಸರ್ಗ ಎಲ್ಲರನ್ನೂ ಸರಾಸರಿ ವ್ಯಕ್ತಿತ್ವಧಾರಿಗಳಾಗಿ ಮಾಡುತ್ತದೆ. ವ್ಯಕ್ತಿಯ ಸದ್ಗುಣಗಳೊಡನೆ ಅಡೆತಡೆಗಳನ್ನು ಸೇರಿಸಿ ಆತನ ವ್ಯಕ್ತಿತ್ವ ಸರಾಸರಿಯದಾಗುವಂತೆ ಮಾಡುತ್ತದೆ. ಉದಾಹರಣೆ : ಅವಳೊಬ್ಬ ಕ್ರೀಡಾಪಟು; ಆದುದರಿಂದ ದಡ್ಡಳು. ಆತ ಸುರಸುಂದರ; ಹಾಗಾಗಿ ಆತ ಮೂಕ. ನಿಸರ್ಗದ ಈ ಯುಕ್ತಿಯನ್ನು ಬದಲಾಯಿಸಲು ಸಾಧ್ಯವಿಲ್ಲ.

ಬಾಲ್ಯದಿಂದ ಪ್ರೌಢದೆಶೆಗೆ ಕಾಲಿರಿಸಿದಾಗ, ತಾರುಣ್ಯದಿಂದ ವೃದ್ಧಾಪ್ಯ ಆವರಿಸತೊಡಗಿದಾಗ ದೈಹಿಕ ಬದಲಾವಣೆಗಳು ಸಹಜ. ಆಗ ವ್ಯಕ್ತಿತ್ವದ ಬದಲಾವಣೆಯೂ ಅನಿವಾರ್ಯ; ಇದರ ಮೇಲೆ ಯಾರ ನಿಯಂತ್ರಣವೂ ಇಲ್ಲವೆಂದು ಗ್ರಹಿಸಲಾಗಿತ್ತು.

"He is a chip of the old block" ಎನ್ನುವ ಗಾದೆಯನ್ನು ಪೂರ್ಣ ನಂಬಿ ವ್ಯಕ್ತಿತ್ವವೂ ಆನುವಂಶಿಕ ಎಂಬ ಮೂಢನಂಬಿಕೆ ಮನೆ ಮಾಡಿತ್ತು. ಅನಪೇಕ್ಷಣೀಯವಾದ ವ್ಯಕ್ತಿತ್ವದಂಶಗಳು ಈ ಕಾರಣ ಬದಲಾಯಿಸಲಾರದಂಥವು ಎಂದು ನಂಬಲಾಗಿತ್ತು. ಅದರಂತೆ ಕೆಂಪು ಕೂದಲಿನ ಎಲ್ಲರೂ ಶೀಘ್ರಕೋಪಿಗಳು; ಉಬ್ಬುಹಣೆಯವರೆಲ್ಲ ಜಾಣರು ಎಂದು ತಿಳಿಯಲಾಗಿತ್ತು.

ಕೇವಲ ಬುದ್ಧಿಶಕ್ತಿಯ ಭಾಗಲಬ್ಧ (Intelligence Quotient) ಜೀವನದ ಯಶಸ್ಸಿಗೆ ಕಾರಣವೆಂದು ತಿಳಿದು ಅದನ್ನೇ ಮಾನದಂಡವಾಗಿ ಅಂಗೀಕರಿಸಲಾಗಿದ್ದಿತು. ಯಾರೊಬ್ಬರ ಮನಸ್ಸಿನ ವಯೋಮಾನವನ್ನು ದೇಹದ ವಯೋಮಾನದಿಂದ ಭಾಗಿಸಿ ಇದನ್ನು ಕಂಡುಹಿಡಿಯಲಾಗುತ್ತದೆ.

ಪುರಾತನ ಗ್ರೀಸ್ ದೇಶದ ಹಿಪೋಕ್ರೇಟಿಸ್‌ನ ಕಾಲದಲ್ಲಿಯೇ ಇಂಥ ವಿಚಾರಗಳನ್ನು ಖಂಡಿಸುತ್ತ ಬರಲಾಗಿದೆ. ಫ್ರಾಯ್ಡ್ ಎಂಬ ಪ್ರಖ್ಯಾತ ಮನಃಶಾಸ್ತ್ರಜ್ಞ ಈ ನಂಬುಗೆಗಳಿಂದ ನಿರ್ಣಾಯಕವಾಗಿ ದೂರಸರಿದುದು, ವ್ಯಕ್ತಿತ್ವ ಬದಲಾವಣೆ ಸಾಧ್ಯ ಎಂಬುದನ್ನು ಖಚಿತಗೊಳಿಸಿತು.


ನಮ್ಮ ವ್ಯಕ್ತಿತ್ವವನ್ನು ಪೂರ್ಣವಾಗಿ ಬದಲಾವಣೆಪಡಿಸುವದು ಸಾಧ್ಯವಿಲ್ಲ. ಏಕೆಂದರೆ ಅದರಲ್ಲಿ ಬದಲಾಯಿಸಲಾರದ ಕೆಲ ಅಂಶಗಳಿವೆ. ಆದರೆ ಅಡೆತಡೆಗಳಿಗೆ ಅಂಜಬೇಕಿಲ್ಲ. ಅಲ್ಲದೆ ನಮ್ಮ ವ್ಯಕ್ತಿತ್ವಗಳನ್ನು ಬಲಪಡಿಸುವದು ನಮ್ಮ ಗುರಿಯಾಗಬೇಕು.

ವ್ಯಕ್ತಿತ್ವ ಬಲಪಡಿಸುವದು ಹೇಗೆ? ಮೊದಲ ಹೆಜ್ಜೆ ಅದು ಸಾಧ್ಯವೆಂಬುದರ ಬಗೆಗೆ ವಿಶ್ವಾಸ ತಾಳುವದು. ಅಡೆತಡೆಗಳಿರುವದನ್ನು ಅರಿತು ನಿರಾಶೆಯಾಗದೆ ಅವನ್ನಳಿಸಲು ಪ್ರಯತ್ನಿಸುವದು. ನನ್ನ ಬೆಳವಣಿಗೆಗೆ ನಾನೇ ಮುಖ್ಯ ಕಾರಣ ಎಂದು ಖಚಿತವಾಗಿ ತಿಳಿಯುವದು.

'ನಿನ್ನರಿವೇ ನಿನಗೆ ಗುರು' ಎಂದು ಹೇಳಿದೆ. ಆದುದರಿಂದ ಅಂತರ್‌ಮುಖಿಯಾಗಿ ತನ್ನ ಅವಗುಣ, ಲೋಪಗಳನ್ನು ಕಂಡುಹಿಡಿಯುವದು. ಅವುಗಳನ್ನು ಪ್ರಯತ್ನ ಪೂರ್ವಕವಾಗಿ ಗಾಳಿಯಲ್ಲಿ ತೇಲಿಬಿಟ್ಟು, ಬೇರೆಯವರ ಉತ್ತಮ ಗುಣಗಳನ್ನು ತನ್ನಲ್ಲಿ ಅಳವಡಿಸಿಕೊಳ್ಳುವದು. 'ಜೀವನ ಶಾಲೆ'ಯಲ್ಲಿ ಪಡೆದ ಎಲ್ಲ ಅನುಭವಗಳೂ ಸ್ಮರಣೀಯವಾಗಿರಬೇಕಿಲ್ಲ. ಆದರೆ ಪ್ರತಿಯೊಂದು ಅನುಭವವೂ ನಮಗೆ ಪಾಠ ಕಲಿಸಬೇಕು. ಜೀವನದ ಅಗ್ನಿಪರೀಕ್ಷೆಯಲ್ಲಿ 'ಬೆಂದರೆ ಬೇಂದ್ರೆ ಆಗಬಹುದು' ಅಥವಾ ಬೂದಿಯಾಗಿ ಹೋಗಿಬಿಡಬಹುದು. ನಮಗೊದಗಿದ ಅಪಯಶಸ್ಸು, ನಿರಾಸೆ ನಮ್ಮನ್ನು ಸದಾವಕ್ರಿಗಳನ್ನಾಗಿ ಮಾರ್ಪಡಿಸಿ ಸಮಾಜಕ್ಕೊಂದು ಹೊರೆಯಾಗಿಸಬಹುದು. ಆದರೆ ಈ ಮನಃಸ್ಥಿತಿಯನ್ನು ಜಯಿಸುವದು ಅಸಾಧ್ಯವಲ್ಲ ಎಂಬುದು ಮಹತ್ವದ್ದು. ಹೀಗೆ ರಚನಾತ್ಮಕವಾಗಿ ಚಿಂತಿಸುವದನ್ನು ರೂಢಿಸಿಕೊಂಡರೆ ವ್ಯಕ್ತಿತ್ವವನ್ನು ಬಲಪಡಿಸಿಕೊಳ್ಳುವದು ಸಾಧ್ಯ ಎಂದು ಸಿದ್ಧವಾಗುತ್ತದೆ.

ಮುಂದಿನ ಹೆಜ್ಜೆಗಳಲ್ಲಿ ಈ ವಿಷಯಗಳನ್ನು ಮುಂದುವರೆಸೋಣ.

○ 'ಕೃಶಾಂಗ'



ಕ್ಲಾಸ್ ರೂಂ

ಯಾರ ಮೀಸೆ?

ನಮ್ಮ ಕ್ಲಾಸ್‌ಮೇಷ್ಟ್ರು ಒಂದು ದಿನ ಮೀಸೆ ಬೋಳಿಸಿಕೊಂಡು ತರಗತಿಗೆ ಬಂದರು. ನನ್ನ ಗೆಳೆಯನೊಬ್ಬ ತರಗತಿಯಲ್ಲಿ ಮುಸಿ ಮುಸಿ ನಗಲು ಶುರು ಮಾಡಿದ. ಕೋಪಗೊಂಡ ಗುರುಗಳು ಅವನನ್ನು ಏಕೆ ನಗುತ್ತಿರುವಿ ಎಂದು ಕೇಳಿದರು. ಅಂದೇ ಇನ್ನೊಬ್ಬ ಗೆಳೆಯನೊಬ್ಬ ಮೀಸೆ ಬೋಳಿಸಿಕೊಂಡು ಬಂದಿದ್ದನು. ಆದರಿಂದ ಅವನು ಚೆನ್ನಾಗಿ ಕಾಣಿಸುತ್ತಿರಲಿಲ್ಲ. ಆದಕ್ಕವನು ನನ್ನ ಪಕ್ಕ ಕುಳಿತ ಗೆಳೆಯ ತೋರಿಸಿ 'ಅವನು ಮೀಸೆ ಬೋಳಿಸಿಕೊಂಡು ಬಂದಿದ್ದಾನೆ ಸಾರ್' ಎಂದನು. ಆಗ ಕ್ಲಾಸಿನಲ್ಲಿ ಎಲ್ಲರು ಗೊಳ್ಳನೆ ನಕ್ಕರು. ನಮ್ಮ ಮೇಷ್ಟ್ರು ಮಾತ್ರ ನಗಲಿಲ್ಲ!

○ ಕೆ. ಗುರುಮೂರ್ತಿ
ಕುರುಗೋಡು

ವರದಕ್ಷಿಣೆ ಸುತ್ತ

ನಾನು ಪಿ.ಯು.ಸಿ. ಓದುತ್ತಿದ್ದಾಗ "ಇತ್ತೀಚಿನ ದಿನಗಳಲ್ಲಿ ವರದಕ್ಷಿಣೆ ಹಾವಳಿ ಜಾಸ್ತಿಯಾಗಿದೆ, ವರದಕ್ಷಿಣೆ ತಗೊಳ್ಳದೇ ನಿರಾಡಂಬರ ಮದುವೆ ಆಗುವವರು ಇಲ್ಲವೇ ಇಲ್ಲ" ಎಂದು ಉಪನ್ಯಾಸಕರು ಹೇಳಿದರು.

ವಿದ್ಯಾರ್ಥಿಗಳು, "ಎಲ್ಲೋ ನೂರಕ್ಕೊಬ್ಬರಂತೆ ಸಿಕ್ಕೇ ಸಿಗ್ತಾರೆ" ಎಂದು ಹೇಳಿದರು. "ಹಾಗಾದರೆ ನಿಮ್ಮಲ್ಲಿ ಎಷ್ಟು ಜನ ನಿರಾಡಂಬರ ಮದುವೆಗೆ ಸಿದ್ಧರಿದ್ದೀರಿ? ಎಂದು ಮರು ಪ್ರಶ್ನೆ ಕೇಳಿದಾಗ ಎಲ್ಲ ವಿದ್ಯಾರ್ಥಿಗಳು ಕೈ ಎತ್ತಿದ್ದರು.

"ಹೀಗೆ ಎಲ್ಲರೂ ಹೂಂಗುಟ್ಟಿದರೆ ಆಗಲಿಲ್ಲ. ಪ್ರಮಾಣ ಮಾಡಿ ಹೇಳಿ" ಎಂದು ಉಪನ್ಯಾಸಕರು ಹೇಳಿದರು.

ಎಲ್ಲರೂ ಸುಮ್ಮನೇ ಕುಳಿತರು. ನಾನು ಹಿಂದಿನ ಬೆಂಚಿನಿಂದ ಎದ್ದು ನಿಂತೆ.

"ನಾನು ವರದಕ್ಷಿಣೆ ತೆಗೆದುಕೊಳ್ಳುವುದಿಲ್ಲ ಸಾರ್..." ಕೈ ಎತ್ತಿ ಹೇಳಿದೆ.

"ಅಲ್ಲೇ ನಿಂತು ಹೇಳಿದರಾಗದು...ಇಲ್ಲಿ ಬಂದು ನನ್ನ ತಲೆಯ ಮೇಲೆ ಕೈಯಿಟ್ಟು ಪ್ರಮಾಣ ಮಾಡಿ ಹೇಳು" ಎಂದು ಉಪನ್ಯಾಸಕರು ಹೇಳಿದರು.

ತಕ್ಷಣ ಉಪನ್ಯಾಸಕರ ತಲೆಯ ಮೇಲೆ ಕೈಯಿಟ್ಟು "ನಾನು ವರದಕ್ಷಿಣೆ ತೆಗೆದುಕೊಳ್ಳುವದಿಲ್ಲ" ಎಂದು ಪ್ರಮಾಣ ಮಾಡಿದೆ.

ಇದು ಒಂಭತ್ತು ವರ್ಷಗಳ ಹಿಂದಿನ ಮಾತು. ಈಗ ಶಿಕ್ಷಣ ಉಪನ್ಯಾಸಕರು ವಿದ್ಯಾವಂತ ಹೆಣ್ಣೊಬ್ಬಳನ್ನು ಮದುವೆಯಾಗಿದ್ದಾರೆ. ಅವರು ವರದಕ್ಷಿಣೆ ತೆಗೆದುಕೊಂಡಿದ್ದಾರೋ ಇಲ್ಲೋ ನನಗೊತ್ತಿಲ್ಲ. ಆದರೆ ನಾನೀಗ ನಿರುದ್ಯೋಗಿ ಪದವೀಧರ, ಮದುವೆ ಇನ್ನೂ ಆಗಿಲ್ಲ!

○ ಸೋಮಶೇಖರ ಕಿತ್ತೂರ
ಸುರೇಬಾನ

ಹಿಂದಿನ ಬೆಂಚೇ ಗತಿ!

ನಾನು ಪ್ರಾಥಮಿಕ ಶಾಲೆಯಲ್ಲಿದ್ದಾಗ ಎಲ್ಲ ಹುಡುಗರಂತೆ ಮುಂದಿನ ಸಾಲಿನಲ್ಲೇ ಕುಳಿತುಕೊಳ್ಳುವ ಬಯಕೆಯಿಂದ ಪ್ರಯಾಸಪಟ್ಟು ಸ್ಥಾನವನ್ನು ಗಿಟ್ಟಿಸಿಕೊಳ್ಳುತ್ತಿದ್ದೆ. ಆ ವೇಳೆಯಲ್ಲಿ ನನ್ನ ಕಿವಿಯಿಂದ ಕೀವು ಸೋರಿ ಕೆಟ್ಟ ವಾಸನೆ ಬರುತ್ತಿತ್ತು. ಗುರುಗಳಿಗೆ ವಾಸನೆ ಬಡಿದಾಗ ನನ್ನನ್ನು ಎಬ್ಬಿಸಿ ಮನಸ್ಸಿಗೆ ಬಂದಂತೆ ಬೈದು ಹಿಂದೆ ಕುಳ್ಳಿರಿಸುತ್ತಿದ್ದರು. ಮರುದಿನ ಶಾಲೆಗೆ ಬಂದು ಮುಂದೆ ಕುಳಿತುಕೊಳ್ಳುವ ಕಾತರದಿಂದಲೋ, ಮರೆತೋ ಮುಂದಿನ ಸಾಲಿನಲ್ಲಿ ಕುಳಿತರೆ ಗುರುಗಳಿಂದ ಬೈಗುಳಗಳ ಮಾಲೆ. ಒಮ್ಮೊಮ್ಮೆ ಬಡಿಗೆಯ ಆಶೀರ್ವಾದ ಆದದ್ದುಂಟು. ಅನಾಥನಂತೆ ಕಣ್ಣೀರು ಸುರಿಸುತ್ತಾ ಹಿಂದೆ ಹೋಗಿ ಕುಳಿತುಕೊಳ್ಳುತ್ತಿದ್ದೆ. ಗುರುಗಳು ಒಮ್ಮೆಯೂ ಕಿವಿ ಸೋರಿಕೆ ಬಗ್ಗೆ ತಿಳಿಸಿ ಹೇಳಲು ಪ್ರಯತ್ನಪಡಲಿಲ್ಲ.

ಮುಂದೆ ಪ್ರಾಥಮಿಕ ಶಾಲೆಯಿಂದ ಹೈಸ್ಕೂಲಿಗೆ ಬರುವುದರೊಳಗೆ ವೈದ್ಯ ಚಿಕಿತ್ಸೆಯಿಂದ ಕಿವಿ ಸೋರುವಿಕೆ ಕಡಿಮೆಯಾಯಿತೆನೋ ನಿಜ. ಈಗ ನಾನು ಬಿ.ಕಾಮ್‌ನಲ್ಲಿ ಓದುತ್ತಿದ್ದರೂ ಹಿಂದೆ ಕುಳಿತುಕೊಳ್ಳುವುದೇ ರೂಢಿ! ಆಗಿನ ಕಹಿ ಘಟನೆ ಮೆದುಳಿಗೆ ಬಡಿಯದೇ ಹೋಗುವುದಿಲ್ಲ.

○ ಸಿದ್ದು ಕಾಡಪ್ಪ ಕಳ್ಳೆನ್ನವರ
ಮುಗಳಖೋಡ

ಇಬ್ಬರಿಗೂ ಗೊತ್ತು

"ಕರ್ನಾಟಕದ ರಾಜಧಾನಿ ಯಾವುದು" ವಿಜಯಾ ಮೇಡಮ್ ಪುಟ್ಟಿ ಶ್ರುತಿಯನ್ನು ಕೇಳಿದರು.

"ನಿಮಗೆ ಗೊತ್ತಿಲ್ಲವಾ ಮಿಸ್" ಶ್ರುತಿ ಕೇಳಿದಳು.

"ನನಗೆ ಗೊತ್ತು, ಆದರೆ ನಿನಗೆ ಗೊತ್ತೋ ಇಲ್ಲವೋಂತ ತಿಳಿದುಕೊಳ್ಳಬೇಕು"

"ನನಗೆ ಗೊತ್ತು"

"ಗೊತ್ತೆ? ಹಾಗಾದರೆ ಹೇಳು" ಮೇಡಮ್...
ಕೇಳಿದರು.

"ನನಗೂ ಗೊತ್ತು ನಿಮಗೂ ಗೊ...
ಇಬ್ಬರಿಗೂ ಗೊತ್ತಿರುವ ವಿಷಯ ಕೇಳಿ ಯ...
ಸಮಯ ಹಾಳು ಮಾಡಬೇಕು?"

○ ರಿಗ್ರೆಟ್ ಅಯ್ಯ...
ಬೆಂಗಳೂ...

ಮಾಧುರಿ – ಜೂಹಿ !

ನಾನು ಬಿ.ಎಸ್ಸಿ ಪ್ರಥಮ ವ...
ಓದುತ್ತಿದ್ದೆ. ತತ್ಸಮಾನ ಪರೀಕ್ಷೆಯಲ್ಲಿ ನಾಟಕ...
ಒಂದು ಹೆಣ್ಣು ಪಾತ್ರ ವಿವರಿಸಿರಿ ಎಂ...
ಕೇಳಲಾಗಿತ್ತು. ಆ ಕ್ಲಾಸ್‌ರೂಂನ ಒ...
ವಿದ್ಯಾರ್ಥಿ ಆಕೆಯ ಅಂಗಾಂಗಳನ್ನೆಲ್ಲ ಮಾಧು...
ಜೂಹಿಗೆ ಹೋಲಿಸುವುದೆ!? ಶಿಕ್ಷಕರು ...
ಉತ್ತರವನ್ನು ಒಬ್ಬ ವಿದ್ಯಾರ್ಥಿಯಿಂ...
ಓದಿಸಿದಾಗ ಕ್ಲಾಸ್‌ರೂಂನಲ್ಲಿ ನಗೆಂ...
ಹೊಳೆಯೇ ಹರಿಯಿತು.

○ ಆನಂದಕುಮಾರ್ ಬೆಡಸೂ...
ಬಸವಕಲ್ಯಾ...

ಜೂನ್ ತಿಂಗಳ ಮಧ್ಯಭಾಗ. ನಾ...
ಹಾಗೂ ನಮ್ಮ ಪ್ರಿನ್ಸಿಪಾಲ ಸತೀಶ್ ಬಿರಾದಾ...
ಅವರು ಕಾಲೇಜಿನ ಆಫೀಸ್ ರೂಮಿನ...
ಎಸ್.ಎಸ್.ಎಲ್.ಸಿ. – ಪಿ.ಯು.ಸಿ. ಫ...
ತಾಂಶದ ಬಗ್ಗೆ ಚರ್ಚಿಸುತ್ತ ಕುಳಿತಿದ್ದೆವು. ನಮ...
ಚರ್ಚೆಗೆ ರಸಭಂಗವಾಗುವಂತೆ ಎಸ್.ಎಸ...
ಎಲ್.ಸಿ. ಫೇಲಾದ ಒಬ್ಬ ವಿದ್ಯಾರ್ಥಿ ಒಳಬಂದ...
ಒಂದು ಪೋಸ್ಟ್‌ಕಾರ್ಡನ್ನು ಮುಂದಿಟ್ಟು ತಾನ...
೯ನೇ ತರಗತಿ ಪಾಸಾಗಿರುವೆನು ಎಂದು ಲೆಟ...
ಬರೆದುಕೊಡಿಯೆಂದನು. ಪ್ರಿನ್ಸಿಪಾಲ...
ಆಶ್ಚರ್ಯಚಕಿತರಾಗಿ ಯಾಕೆ? ನಿನ...
ಬರೆಯಲು ಬರುವದಿಲ್ಲವೆ? ಯಾರಿಗಾದ...
ಇಂಗ್ಲಿಷ್‌ನಲ್ಲಿ ಬರೆಯಬೇಕೆ? ಎಂ...
ಹಲವಾರು ಪ್ರಶ್ನೆಗಳನ್ನು ಕೇಳಿದರು. ಅವನ...
ಅತಿ ವಿನಯದಿಂದ, "ಇಲ್ಲ ಸಾರ್ ನಾನ...
ಆಯ್.ಟಿ.ಆಯ್.ದಲ್ಲಿ ವೆಲ್ಡರ್ ಟ್ರೇ...
ಮಾಡಬೇಕೆಂದಿರುವೆ. ಅಲ್ಲಿಯ ಪ್ರಿನ್ಸಿಪಾಲ...
ನಿಮ್ಮಿಂದ ನಾನು ೯ನೇ ತರಗತಿ ಪಾಸಾಗಿರು...
ಎಂದು ಒಂದು ಲೆಟರ್ ಬರೆಸಿಕೊಂಡು ಬ...
ಎಂಧಿರುವರು" ಎಂದ. ಆಗ ನಮಗೆ-ಅವ...
ಲೆಟರಿನ ಅರ್ಥ ಹೊಳೆದು ನಗೆಗಡಲಿನ...
ಮುಳುಗಿದೆವು.

○ ಸುಭಾಸ ಗೌಡ ಎಸ್.ಪಾಟೀ...
ಮೋರಟ...

ಪೋಲಿಯೋ ರೋಗದಿಂದ ಎರಡೂ ಕಾಲುಗಳ ನಿಯಂತ್ರಣ ಕಳೆದುಕೊಂಡ ಪ್ರಕಾಶ್ ಈಗ ಕಾಲೇಜು ಉದ್ಯೋಗಿ. ಕಲೆ, ಸಾಹಿತ್ಯ ಮತ್ತು ಸಂಸ್ಕೃತಿಯಲ್ಲಿ ವಿಶೇಷ ಆಸಕ್ತಿ ಇರುವ ಇವರು ಇತರರಿಗಿಂತ ನಾನೇನೂ ಕಡಿಮೆ ಇಲ್ಲ ಎಂದು ಬದುಕಿ ತೋರಿಸಿದ್ದಾರೆ.

ಹೆಚ್. ಎನ್. ಪ್ರಕಾಶ್ ಅವರು ಹಾಸನದ ಇಂಜಿನಿಯರಿಂಗ್ ಕಾಲೇಜಿನಲ್ಲಿ ಗ್ರಂಥಪಾಲಕ. ಬಹಳ ವಿನಯಶೀಲರು. ಬದುಕುವ ಕಲೆ, ಬದುಕಿನ ಸಾರ್ಥಕತೆಯನ್ನು ಇವರಿಂದ ತಿಳಿಯಬೇಕು. ಆರು ವರ್ಷ ಇರುವಾಗಲೇ ಪೋಲಿಯೋ ರೋಗಕ್ಕೆ ತುತ್ತಾಗಿ ಕಾಲುಗಳ ಪೂರ್ಣ ಹಿಡಿತವನ್ನು ಕಳೆದುಕೊಂಡು ಅಂಗವಿಕಲರಾದ ಈ ವ್ಯಕ್ತಿ ಸಾಮಾನ್ಯ ಮನುಷ್ಯನಿಗಿಂತ ಎಲ್ಲದರಲ್ಲೂ ಮುಂದಿದ್ದಾರೆ.


ತಂದೆ ರೈಲ್ವೆ ಉದ್ಯೋಗಿ, ಕಲಾವಿದ. ಆದರೆ ಅಂತಹ ಸ್ಥಿತಿವಂತರಲ್ಲ, ಸಾಮಾನ್ಯ ಮನೆತನ. ಮಗ ಪ್ರಕಾಶ್ ನಿರಾಶನಾಗದೇ ಜೀವನದಲ್ಲಿ ಇತರರಂತೆ ಉತ್ತಮ ಪ್ರಜೆಯಾಗಬೇಕು ಎಂಬ ಉತ್ಕಟ ಆಕಾಂಕ್ಷೆಯಿಂದ ಬೆಳೆಸಿದರು. ಎರಡು ಕಾಲುಗಳೂ ಸಂಪೂರ್ಣ ಹತೋಟಿ

ಇತರರಿಗಿಂತ ನಾನೇನು ಕಡಿಮೆ?

ಆರು ವರ್ಷ ಇರುವಾಗಲೇ ಪೋಲಿಯೋ ರೋಗಕ್ಕೆ ತುತ್ತಾಗಿ ಕಾಲುಗಳ ಪೂರ್ಣ ಹಿಡಿತವನ್ನು ಕಳೆದುಕೊಂಡು ಅಂಗವಿಕಲರಾದ ಹಾಸನದ ಈ ವ್ಯಕ್ತಿ ಸಾಮಾನ್ಯ ಮನುಷ್ಯನಿಗಿಂತ ಎಲ್ಲದರಲ್ಲೂ ಮುಂದಿದ್ದಾರೆ.

ಕಳೆದುಕೊಂಡಿದ್ದರೂ ಬಾಲಕ ಪ್ರಕಾಶ್ ಎದೆಗುಂದದೇ ಏನೆಲ್ಲಾ ಕಷ್ಟ ಅನುಭವಿಸಿ ಯಶಸ್ವಿಯಾಗಿ ವಿದ್ಯಾಭ್ಯಾಸ ಮುಗಿಸಿದರು. ''ಎಂದೂ ಧೈರ್ಯಗುಂದಬೇಡ, ಕಹಿಯಾಗಿದ್ದನ್ನು ಸಿಹಿಯಾಗಿ ಪರಿವರ್ತಿಸಿಕೊ, ಜಗತ್ತನ್ನು ಸದಾ ಒಳ್ಳೆಯ ದೃಷ್ಟಿಯಲ್ಲಿ ನೋಡು....'' ಎಂಬ ತಂದೆಯ ಮಾತುಗಳು ಪ್ರಕಾಶರನ್ನು ಒಬ್ಬ ಪ್ರಬುದ್ಧ ವ್ಯಕ್ತಿಯನ್ನಾಗಿ ಮಾಡಲು ನೆರವಾದವು. ೧೯೭೬ರಲ್ಲಿ ಪ್ರಕಾಶ್ ಅವರು ಸಿಂಡಿಕೇಟ್ ಬ್ಯಾಂಕ್‌ನಲ್ಲಿ ನೌಕರಿ ಗಿಟ್ಟಿಸಿಕೊಂಡರೂ ವರ್ಗಾವಣೆಯ ತೊಂದರೆಯಿಂದ ಹಾಸನದ ಮಲ್ನಾಡ್ ಇಂಜಿನಿಯರಿಂಗ್ ಕಾಲೇಜ್‌ನ್ನು ಸೇರಿದರು.

ಸೋದರ ಮಾವನ ಮಗಳಾದ ಶಾರದಾ ಪ್ರಕಾಶರ ಪತ್ನಿ. ಇಬ್ಬರೂ ಪರಸ್ಪರ ಪ್ರೀತಿಸಿ ಮದುವೆಯಾದಾಗ ಹೆಣ್ಣಿನ ಕಡೆಯವರಿಗೆ ಗೊಂದಲ-ಜಗಳ ಉಂಟಾಯಿತು. ಈಗ ಈ ದಂಪತಿಗೆ ಎರಡು ಗಂಡು ಮಕ್ಕಳಿದ್ದಾರೆ. ತೃಪ್ತಿಯ ಜೀವನ ಸಾಗಿಸುತ್ತಿರುವ ಪ್ರಕಾಶ್ ಜೀವನದಲ್ಲಿ ಒಂದು ಗುರಿ ಇಟ್ಟುಕೊಂಡಿರುವ ವ್ಯಕ್ತಿ. 'ಸ್ನೇಹಿತರ ಬಳಗದಿಂದಲೇ ನಾನು ಜೀವನದಲ್ಲಿ ಮುಂದೆ ಬಂದೆ' ಎಂದು ಸ್ಮರಿಸುತ್ತಾರೆ. ತಮ್ಮದೇ ಆದ ಕಡಿಮೆ ಖರ್ಚಿನ ತಂತ್ರಜ್ಞಾನದಲ್ಲಿ ವ್ಯವಸ್ಥಿತವಾದ ಮನೆಯನ್ನು ಕಟ್ಟಿಸಿದ್ದಾರೆ.



ಪ್ರಕಾಶರ ಪುಟ್ಟ ಪರಿವಾರ

ಮಿತ ಖರ್ಚಿನ ಮನೆ

ಪ್ರಕಾಶ್‌ರವರಿಗೆ ಓದುವ ಗೀಳು ಬಹಳ. ಮನೆಕಟ್ಟುವ ಮುನ್ನ, ಸಿಗುವ ಎಲ್ಲಾ ಕಟ್ಟಡ ತಂತ್ರಗಳ ಬಗ್ಗೆ ತಿಳಿದುಕೊಂಡು ಕಡಿಮೆ ಖರ್ಚಿನ ಸುಂದರ ಮನೆಯನ್ನು ನಿರ್ಮಿಸಲು ಹೊರಟರು. ೧೯೯೧ರಲ್ಲಿ ೫೪x೩೫ ಅಡಿ ನಿವೇಶನದಲ್ಲಿ ಹತ್ತು ಚದರದ ಮನೆ ಕಟ್ಟಿಸಿದ್ದಾರೆ. ಓದಲಿಕ್ಕಾಗಿಯೇ ಒಂದು ಕೋಣೆ, ಅತಿಥಿಗಳು ಕೂಡುವ ಕೋಣೆ, ಎರಡು ಮಲಗುವ ಕೋಣೆ, ಅಡಿಗೆ ಮತ್ತು ಊಟದ ಕೋಣೆಗಳು ಹಾಗೂ ಹೊರಾಂಡ - ಹೀಗೆ ಮನೆಯನ್ನು ವಿಭಾಗಿಸಿದ್ದಾರೆ. ಕಾಂಪೌಂಡ್, ಬೋರ್‌ವೆಲ್ ಹಾಗೂ ಮನೆಯನ್ನು ಕಟ್ಟಿ ಗೃಹಪ್ರವೇಶ ಮಾಡಲಿಕ್ಕೆ ಒಟ್ಟು ೨,೧೮,೦೦೦ ರೂಪಾಯಿ ಖರ್ಚು ಮಾಡಿದ್ದಾರೆ! ಇದೆಲ್ಲಾ ಹೆಚ್ಚಾಗಿ ಸ್ನೇಹಿತರಿಂದ

ಬಂದದ್ದು. ಒಂಬತ್ತು ಇಂಚಿನ ಟೊಳ್ಳು ಗೋಡೆಯನ್ನು ಕಟ್ಟಿ ಮೇಲೆ ಸಿಮೆಂಟು ಮಾಡಿಸಿದ್ದಾರೆ. ಹೆಂಚುಗಳನ್ನು ಬಳಸಿ ಶೇ ೫೦ ಕಬ್ಬಿಣ ಉಳಿಸಿದ್ದಾರೆ. ಕಿಟಕಿಗಳನ್ನು ಅರ್ಧ ವೃತ್ತಾಕಾರದಲ್ಲಿ ರಚಿಸಿ, ಕಟ್ಟಿಗೆಯನ್ನು ಮಿತವಾಗಿ ಬಳಸಿದ್ದಾರೆ. ಕಟ್ಟಿ ಐದು ವರ್ಷವಾದರೂ ಮನೆ ಹೊಚ್ಚ ಹೊಸದಾಗಿ ಕಾಣಿಸುತ್ತದೆ. ಎಲ್ಲಿಯೂ ಬೂಜು ಬಂದಿಲ್ಲ, ನೀರು ಹನಿದಿಲ್ಲ-ಹೀಗಿರುವುದರಿಂದ ಬೇಸಿಗೆ ಮತ್ತು ಚಳಿಗಾದಲ್ಲಿ ಮನೆ ಒಳಗ ಉಷ್ಣಾಂಶ ಅಷ್ಟೊಂದು ಏರುಪೇರು ಆಗದೇ ಹಿತಕರವಾಗಿರುತ್ತದೆ ಎನ್ನುತ್ತಾರೆ. ಅವರ ಪುಸ್ತಕ ಕೋಣೆಯಲ್ಲಿ ಸುಮಾರು ೨೦೦೦ ಪುಸ್ತಕಗಳಿವೆ ಪ್ರತಿ ತಿಂಗಳು ಕನಿಷ್ಟವಾದರೂ ನಾಲ್ಕೈದು ಪುಸ್ತಕಗಳನ್ನು ತಮ್ಮ ಗ್ರಂಥಾಲಯಕ್ಕೆ ಸೇರಿಸುವ ಅಭ್ಯಾಸ ಇವರದು ಒಟ್ಟು ೧೦,೦೦೦ ಪುಸ್ತಕಗಳನ್ನು ಕಲೆ ಹಾಕುವ ಆಸೆ ಇವರಿಗಿದೆ.




ಕಡಿಮೆ ಖರ್ಚಿನಲ್ಲಿ ಅರಳಿನಿಂತ ಮನೆ

ಕಲೆ-ಬರಹ

ಕಲೆಯು ಪ್ರಕಾಶ್ ಅವರಿಗೆ ಕರಗತವಾಗಿದೆ. ತಂದೆಯೂ ಕಲಾವಿದರಾಗಿದ್ದರಿಂದ ಅದು ಅವರಿಂದ ಬಳುವಳಿಯಾಗಿ ಬಂದಿದೆ. ಜಲವರ್ಣ ಮತ್ತು ತೈಲವರ್ಣದ ಕೆಲಸದಲ್ಲಿ ಬಿಡುವಿದ್ದಾಗಲೆಲ್ಲಾ ತೊಡಗುತ್ತಾರೆ. 'ಕಲೆ ಇರಬೇಕು, ಆದರೆ ಅದನ್ನೇ ಜೀವನಾಧಾರವಾಗಿ ಇಟ್ಟೊಕೊಬೇಡ' ಎಂದು ತಂದೆ ಹೇಳಿದ ಕಿವಿ ಮಾತನ್ನು ಅರ್ಥ ಮಾಡಿಕೊಂಡು ಅದರಂತೆ ನಡೆದುಕೊಂಡಿದ್ದಾರೆ. ಪ್ರಕೃತಿ ಚಿತ್ರಗಳು ದೇವರ ಚಿತ್ರಗಳು ಇವರ ಕುಂಚದಲ್ಲಿ ಅರಳಿವೆ. ಗಿಟುಕು ಕೊಬ್ಬರಿಯ ಮೇಲೆ ಸೂಕ್ಷ್ಮ ಕೆತ್ತನೆ ಹಾಗೂ ಚಿತ್ರಗಳನ್ನು ಬಿಡಿಸುವ ಹವ್ಯಾಸವೂ ಇವರಿಗಿದೆ. ಸುಮಾರು ಎರಡ್ಮೂರು ಸಾವಿರ ಕೊಬ್ಬರಿ ಗಿಟಕುಗಳ ಮೇಲೆ ಅಲಂಕಾರಿಕವಾಗಿ ದೇವರು ಹಾಗೂ ಪುಷ್ಪಗಳ ನೈಜ ರೂಪ ಮೂಡಿಸಿ ಆಪ್ತರಿಗೆಲ್ಲಾ ಕೊಟ್ಟಿದ್ದಾರೆ. ಈ ಕೆಲಸದಲ್ಲಿ ಪತ್ನಿಯೂ ತೊಡಗುತ್ತಾರೆ.

ಜೀವನದಲ್ಲಿ ಸಾಧ್ಯವಿರುವ ಅನೇಕ ವಿಚಾರಗಳನ್ನು ಕಲಿಯಬೇಕು ಮೈಗೂಡಿಸಿಕೊಳ್ಳಬೇಕು ಎಂಬ ವಿಶೇಷ ಆಸಕ್ತಿ ಅವರಿಗಿದೆ. ಕಾಲು ಗಳಿಗೆ ನಿಯಂತ್ರಣವಿಲ್ಲದಿದ್ದರೂ ಈಜಾಡುವುದನ್ನು ಕಲಿತಿದ್ದಾರೆ. ಕಂಪ್ಯೂಟರ್ ಜ್ಞಾನವು ಇವರಿಗಿದೆ.

ಭಾಷಾಂತರ ಕೆಲಸಕ್ಕೂ ಪ್ರಕಾಶ್ ಅವರು ಕೈ ಹಾಕಿದ್ದಾರೆ.



ಸಾವಿರ ಪುಸ್ತಕ ಸಂಗ್ರಹಿಸುವ ಗುರಿ

ಚಿತ್ರಲೇಖನ

○ ವಿಜಯ್ ಅಂಗಡಿ

ಪ್ರಸಾರ ನಿರ್ವಾಹಕರು (ಕೃಷಿ)
ಕೃಷಿರಂಗ ವಿಭಾಗ
ಆಕಾಶವಾಣಿ, ಹಾಸನ



ಉಷಾ ನವರತ್ನರಾಮ್
ಉಮಾ ಚಿತ್ರಮಂದಿರದ ಪಕ್ಕ
ಚಾಮರಾಜಪೇಟೆ
ಬೆಂಗಳೂರು

ಎಡವಬಹುದೆಂಬ ಹೆದರಿಕೆ

ನಾನೋರ್ವ ಇಪ್ಪತ್ತು ವರ್ಷದ ಯುವತಿ. ಇದೇ ತಾನೇ ಓದು ಮುಗಿಸಿ ಯಾವುದಾದರೂ ಕೆಲಸ ಹಿಡಿಯಬೇಕೆಂದುಕೊಂಡಿದ್ದೇನೆ. ಇತ್ತೀಚೆಗೆ ನಾನು ಒಂದು ಶಾಲೆಯಲ್ಲಿ ಎರಡು ತಿಂಗಳು ಲೀವ್ ವೇಕೆನ್ಸಿಯಲ್ಲಿ ಕೆಲಸ ಮಾಡಿದೆ. ಆಗ ಆ ಶಾಲೆಯಲ್ಲಿ ಮಕ್ಕಳ ಬಗ್ಗೆ ವಿಚಾರಿಸಿಕೊಳ್ಳಲು, ಮಕ್ಕಳನ್ನು ಶಾಲೆಗೆ ಬಿಡಲು, ಕರೆದೊಯ್ಯಲು ತಂದೆ, ತಾಯಿ, ಪೋಷಕರು ಬರುತ್ತಿದ್ದರು. ಒಂದು ನರ್ಸರಿ ವಿದ್ಯಾರ್ಥಿನಿಯ ತಂದೆ ಬಂದಾಗಲೆಲ್ಲಾ ತುಂಬಾ ಗೌರವದಿಂದ, ಆದರಿಂದ ಮಾತಾಡಿಸುತ್ತಿದ್ದರು. ತಮ್ಮ ಮಗಳ ಬಗ್ಗೆ ಹೆಚ್ಚಿನ ಕಾಳಜಿ ವಹಿಸಲು ಹೇಳುತ್ತಿದ್ದರು. ಪ್ರತಿ ದಿನ ಆ ಮಗು ನನಗೆ ಚಾಕಲೇಟು, ಹೂವು, ಗ್ರೀಟಿಂಗ್ ಏನಾದರೊಂದು ಕೊಡುತ್ತಿತ್ತು. ''ನನ್ನ ಮಗಳಿಗೆ ನಿಮ್ಮನ್ನು ಕಂಡರೆ ತುಂಬಾ ಇಷ್ಟ'' ತಂದೆ ಆಗಾಗ ಹೇಳುತ್ತಿದ್ದರು. ಬಿಡುವಿನ ವೇಳೆಯಲ್ಲಿ ಮನೆಗೆ ಬಂದು ಮಗಳಿಗೆ ಪಾಠ ಹೇಳಿಕೊಡಲು ಸಾಧ್ಯವೇ ಎಂದು ಕೇಳಿದರು. ನಾನು ಒಪ್ಪಲಿಲ್ಲ. ನನ್ನ ಕೆಲಸ ಕೇವಲ ಎರಡು ತಿಂಗಳೆಂದೂ, ನನಗೆ ಟೀಚಿಂಗ್ ಕೆಲಸ ಇಷ್ಟವಿಲ್ಲವೆಂದೂ, ಬೇರೆ ಯಾವುದಾದರೂ ಕೆಲಸ ಸಿಕ್ಕರೆ ಸೇರಬೇಕೆಂದಿರುವೆನೆಂದೂ ಹೇಳಿದೆ. ಈಗ ಆತನೇ ನನಗೆ ಅವರ ಸಂಸ್ಥೆಯಲ್ಲಿ ಕೆಲಸ ಕೊಡಲು ಮುಂದೆ ಬಂದಿದ್ದಾರೆ. ಸಂಬಳ ಭತ್ಯಗಳೂ ಆಕರ್ಷಕವಾಗಿವೆ. ಆದರೆ ನನಗೆ ಒಂದು ಅನುಮಾನ - ಆತ, ನನ್ನೊಂದಿಗೆ ಅಷ್ಟು ಸ್ನೇಹ, ಸಂಪರ್ಕಬೆಳೆಸಿಕೊಳ್ಳಲು ಏನಾದರೂ ಕೆಟ್ಟ ಭಾವನೆ ಇರಬೇಕು. ನನಗೆ ಕೆಲಸ ಕೊಡಲು ಮುಂದೆ ಬಂದಿರುವುದು ಯಾವುದೋ ದುರಾಲೋಚನೆಯಿಂದ ಎಂಬ ಅನುಮಾನ. ಆತನಿಕೆ ಪತ್ನಿ, ಎರಡು ಚಿಕ್ಕಮಕ್ಕಳಿದ್ದಾರೆ. ನಾನು ಎಡವಿಬಿಟ್ಟೇನೆಂಬ ಹೆದರಿಕೆ. ಯಾವ ಪತಿ, ಪತ್ನಿಯರ ನಡುವೆ ಬರಲು ನನಗಿಷ್ಟವಿಲ್ಲ . ದಯವಿಟ್ಟು ನನಗೆ ದಾರಿತೋರಿ.

ಮೀರಾ, ಬೆಂಗಳೂರು

ಸಲಹೆ

ನಿಮ್ಮ ಕಾಗದ ಓದಿದರೆ ಯಾವುದೂ ಸ್ಪಷ್ಟವಾಗಿ ವ್ಯಕ್ತವಾಗುವುದಿಲ್ಲ. ನೀವು ಆತನೊಂದಿಗೆ ತಪ್ಪಾಗಿ ನಡೆದುಕೊಂಡಿಲ್ಲ. ಆತನೂ ನಿಮ್ಮೊಂದಿಗೆ ಎಲ್ಲೆ ಮೀರಿ ನಡೆದುಕೊಂಡಿಲ್ಲ. ಒಳ್ಳೆಯ ಮನಸ್ಸಿನಿಂದಲೇ ಆತನು ನಿಮ್ಮ ಬಗ್ಗೆ ಗೌರವ, ಆಸಕ್ತಿ ತೋರಿರಬಹುದು. ಕೆಲಸವನ್ನು ಕೊಡಲು ತಯಾರಿರಬಹುದು. ಆದರೆ ನೀವು ಹೇಳಿದಂತೆ ಇದರಲ್ಲಿ ಮುನ್ನೆಚ್ಚರಿಕೆ ವಹಿಸುವುದು ಉತ್ತಮ. ಶ್ರೀಮಂತರು ಪತ್ನಿಯಿದ್ದರೂ ಬೇರೆ ಹೆಣ್ಣಿನ ಸಹವಾಸ ಮಾಡುವುದು ಒಂದು ಫ್ಯಾಷನ್ ಆಗಿದೆ. ನಿಮಗೆ ಯೌವನವಿದೆ, ಭವಿಷ್ಯ ರೂಪಿಸಿಕೊಳ್ಳುವ ಆತಂಕವಿದೆ. ನೀವು ನೋಡಲು ಅಂದವಾಗಿಯೂ ಇರಬಹುದು. ಈ ಆಕರ್ಷಣೆಗೆ ಆತ ಒಳಗಾಗಿ ನಿಮಗಾಗಿ ಬಲೆ ಬೀಸಿರಬಹುದು. ನಿಮ್ಮ ನಿಲುವು ಒಪ್ಪತಕ್ಕವು. ಮುಂದಾಲೋಚನೆಯೂ ಸರಿಯಾದುದೇ. ಆದಷ್ಟು ಆತನಿಂದ ದೂರವಿರಲು ಯತ್ನಿಸಿ. ಬೇರೆ ಕಡೆ ಉದ್ಯೋಗಕ್ಕಾಗಿ ಪ್ರಯತ್ನಪಡಿ. ನೀವು ಧೈರ್ಯವಂತೆಯಾದರೆ ಆತನಿಗೆ ನಿಮ್ಮ ನಿಲುವನ್ನು ಸ್ಪಷ್ಟವಾಗಿ ತಿಳಿಸಿ. ಬದುಕಿನ ಹಾದಿಯಲ್ಲಿ ಎಡವದಂತೆ ಎಚ್ಚರ ವಹಿಸುವುದು ಬಹಳ ಮುಖ್ಯ.

ಅತ್ತ ಅಕ್ಕ ಇತ್ತ ಭಾವ ನಡುವೆ ನಾನು!

ನನ್ನ ಅಕ್ಕನಿಗೆ ಮದುವೆಯಾಗಿ ಎರಡು ಮಕ್ಕಳಿವೆ. ನನ್ನ ಭಾವ, ಅಕ್ಕನವರ ದಾಂಪತ್ಯ ವಿರಸ ದಾಂಪತ್ಯವೆಂದೇ ಹೇಳಬೇಕು. ನಮ್ಮ ಭಾವನಿಗೆ ಮಡದಿ, ಮಕ್ಕಳು ಮನೆ ಎಂದರೆ ಬಹಳ ಅಕ್ಕರೆ. ಆದರೆ ಅಕ್ಕನಿಗೆ ಹೊರಗಿನ ಬಣ್ಣದ ಬದುಕು ಇಷ್ಟ. ಮನರಂಜನೆ, ಪಾರ್ಟಿ, ಕ್ಲಬ್ಬು, ಮೀಟಿಂಗ್ ಏನಾದರೊಂದು ನೆವದಿಂದ ಹೆಚ್ಚಿನ ವೇಳೆ ಹೊರಗೇ ಕಳೆಯುತ್ತಾಳೆ. ಎಷ್ಟೋ ವೇಳೆ ನಾನೇ ಮನೆ ಕೆಲಸ, ಮಕ್ಕಳ ಜವಾಬ್ದಾರಿ, ಭಾವನವರ ಹಿತ ನೋಡಿಕೊಳ್ಳಬೇಕಾಗಿ ಬರುತ್ತದೆ. ನನಗಿನ್ನು ಮದುವೆಯಾಗಿಲ್ಲ. ನನ್ನ ತಂದೆ, ತಾಯಿ ಹಳ್ಳಿಯಲ್ಲಿದ್ದಾರೆ. ಅಕ್ಕನ ಮನೆಯಲ್ಲಿದ್ದರೆ ಸಿಟಿಯಲ್ಲಿ ಒಳ್ಳೆ ಗಂಡು ಸಿಗಬಹುದೆಂಬ ಆಸೆ, ನನ್ನ ತಂದೆ, ತಾಯಿಗೆ. ನನ್ನ ಅಕ್ಕ ಯಾವ ಗಂಡು ಬಂದರೂ ಆಸಕ್ತಿ ತೋರುವುದಿಲ್ಲ. ಸಧ್ಯಕ್ಕೆ ಮದುವೆ ಮಾಡುವ ಆಸೆಯಿಲ್ಲ. ಇನ್ನು ಒಂದೆರಡು ವರ್ಷ ಅವಳು ಹಾಯಾಗಿರಲಿ ಎನ್ನುತ್ತಾಳೆ. ನನಗೆ ಇಬ್ಬಂದಿಯಾಗಿದೆ. ಏನಾದರೂ ಸಲಹೆ ನೀಡಿ.

ಗಾಯತ್ರಿ, ಧಾರವಾಡ.

ಸಲಹೆ

ನಿಮ್ಮ ಪತ್ರ ಓದಿದರೆ ನಿಮ್ಮಕ್ಕ ನಿಮ್ಮನ್ನು ಸುಲಭವಾಗಿ ನಿಶ್ಚಿಂತೆಯಿಂದ ತನ್ನ ಜವಾಬ್ದಾರಿಗಳಿಗೆ ಉಪಯೋಗಿಸಿಕೊಳ್ಳುತ್ತಿದ್ದಾರೆ ಎನಿಸುತ್ತದೆ. ಅವರ ಐಷಾರಾಮ ಜೀವನ ರೀತಿಗೆ ಅದು ಸುಲಭ ಸೂತ್ರವಾಗಿದೆ. ಹೇಗಿದ್ದರೂ ನೀವು ಅಕ್ಕನಿಗೆ ದ್ರೋಹ ಬಗೆಯುವುದಿಲ್ಲ, ಮಕ್ಕಳನ್ನು, ಮನೆ ಕೆಲಸಗಳನ್ನು ನಿರ್ಲಕ್ಷಿಸುವುದಿಲ್ಲವೆಂದು ಅವರಿಗೆ ನಂಬಿಕೆಯಿದೆ. ನಿಮ್ಮ ತಂದೆ, ತಾಯಿಗಳ ಆಲೋಚನೆ ಸರಿಯಿದ್ದರೂ ನಿಮ್ಮಕ್ಕನ ಬಗ್ಗೆ ಅವರಿಗೆ ಸಾಕಷ್ಟು ತಿಳಿದಿಲ್ಲವೆಂದೆನಿಸುತ್ತದೆ. ನಿಮ್ಮ ಭಾವನವರಿಗೆ ಇದು ನುಂಗಲಾರದ ತುತ್ತಾಗಿರಬಹುದು. ಇದಕ್ಕೆ ಒಂದೇ ಮಾರ್ಗವೆಂದರೆ ನೀವು ಆ ಮನೆ, ಜವಾಬ್ದಾರಿಗಳಿಂದ ದೂರವಾಗಬೇಕು. ನಿಮ್ಮ ಆರ್ಥಿಕ ಸ್ಥಿತಿಯ ಬಗ್ಗೆ ನೀವು ಏನೂ ತಿಳಿಸಿಲ್ಲ. ನಿಮ್ಮ ಆರ್ಥಿಕ ಸ್ಥಿತಿ ಚೆನ್ನಾಗಿದ್ದರೆ ಬೇರೆ ಎಲ್ಲಾದರೂ ಪೇಯಿಂಗ್ ಗೆಸ್ಟ್ ಆಗಿಯೋ, ವಿಮೆನ್ಸ್ ಹಾಸ್ಟೆಲ್‌ನಲ್ಲಿಯೋ ನೆಲೆಸಿ. ಇಲ್ಲವೇ ಯಾವುದಾದರೊಂದು ಕಾರಣ ಹೇಳಿ ಹಳ್ಳಿಗೆ ಹಿಂತಿರುಗಿ ನಿಮ್ಮ ತಂದೆ-ತಾಯಿಗೆ ನಿಜಾಂಶ ತಿಳಿಸಿ. ಅವರು ನಿಮ್ಮಕ್ಕನ ಸಂಸಾರ ಸರಿಪಡಿಸಬಹುದು. ನಿಮ್ಮ ಅಕ್ಕನಿಗೆ ಬುದ್ಧಿ ಹೇಳಬಹುದು. ಯಾವುದೇ ದಾಂಪತ್ಯ ಸಮಸ್ಯೆಯಿದ್ದರೂ ಮೊದಲು ಸತಿ-ಪತಿ ತಮ್ಮ ಅಭಿಪ್ರಾಯಗಳನ್ನು ವಿನಿಮಯ ಮಾಡಿಕೊಂಡು ತಮ್ಮ ತಮ್ಮಲ್ಲೇ ಬಗೆಹರಿಸಿಕೊಳ್ಳುವುದು

ಉತ್ತಮ. ಮೂರನೆಯವರಿದ್ದರೆ ಅದು ಫಲಿಸುವುದು ಕಷ್ಟ. ನೀವು ಅಕ್ಕನ ಮನೆಯಲ್ಲಿ ಇಲ್ಲದಿರುವುದಾದರೆ ನಿಮ್ಮಕ್ಕನ ಹೊರಗಿನ ಆಡಂಬರ ಜೀವನ ಕಷ್ಟವಾಗುವುದು. ಅವರಷ್ಟಕ್ಕೆ ಅವರೇ ಮನೆ, ಮಕ್ಕಳು ಪತಿಯ ಜವಾಬ್ದಾರಿ ಹೊರಬೇಕಾಗಿ ಬರುವುದು.

ಒಲ್ಲೆ ಎನ್ನುವ ಗಂಡುಗಳು

ಹೆಸರು ಬೇಡ. ನಾನು ಇಪ್ಪತ್ತಾರು ವಯಸ್ಸಿನ ಯುವತಿ. ನನ್ನ ವಯಸ್ಸಿನವರಿಗೆಲ್ಲಾ ಮದುವೆಯಾಗಿದೆ. ನಾನು ನೋಡಲು ಕುರೂಪಿಯೇನೂ ಅಲ್ಲ. ಲಕ್ಷಣವಾಗಿಯೇ ಇದ್ದೇನೆ. ಕೈತುಂಬಾ ಸಂಬಳ ಬರುವ ಉದ್ಯೋಗವಿದೆ. ನನ್ನನ್ನು ನೋಡಲು ಬಂದ ಗಂಡುಗಳೆಲ್ಲಾ ಮೊದಲ ನೋಟಕ್ಕೆ ಒಪ್ಪಿದ್ದರೂ ಆನಂತರ ಒಲ್ಲೆನೆಂದು ಹೇಳುವುದರಿಂದ ನಾನಿನ್ನೂ ಕನ್ಯೆಯಾಗಿಯೇ ಉಳಿದಿದ್ದೇನೆ. ನನ್ನ ಗೆಳತಿಯರು, ಸಹೋದ್ಯೋಗಿಗಳು ಹೇಳುವುದೇನೆಂದರೆ, ನನ್ನ ಚರ್ಮ ತುಂಬಾ ಶುಷ್ಕ ಹಾಗೂ ನಾನು ತುಂಬಾ ತೆಳ್ಳಗಿದ್ದೇನೆ. ಕೂದಲು ಕಾಂತಿಹೀನವಾಗಿದೆ. ನಾನು ತುಂಬಾ ಸರಳಜೀವಿ, ಫ್ಯಾಶನ್ ಮಾಡಲು ಬರುವುದಿಲ್ಲ. ನಾನು ನನ್ನ ಸಮಸ್ಯೆಗಳಿಂದ ಹೇಗೆ ಪಾರಾಗಲಿ?

ಹೆಸರು ಬೇಡ, ಹಾಸನ.

ಸಲಹೆ

ವಯಸ್ಸಿದೆ, ರೂಪ ಇದೆ ಕೈ ತುಂಬಾ ಸಂಪಾದಿಸುವ ಕೆಲಸ ಇದೆ. ಬಹಳ ಸಂತೋಷ. ನೀವು ಸರಳಜೀವಿಯೆಂಬುದೂ ಒಂದು ಸಂತಸದ ವಿಷಯವೇ. ನೀವು ಫ್ಯಾಶನ್ ಹಾಗೂ ಅಂದ-ಚೆಂದಗಳನ್ನು ಒಂದೇ ಎಂದು ಭಾವಿಸಿ ತಪ್ಪುಮಾಡುತ್ತಿದ್ದೀರಿ. ಆ ಭಗವಂತ ನೀಡಿರುವ ಜೀವ, ದೇಹ, ಅದರ ಆಂತರಿಕ ಹಾಗೂ ಬಾಹ್ಯ ಸೌಂದರ್ಯವನ್ನು ಕಾಪಾಡಿಕೊಂಡು ಬರುವುದು ಅಗತ್ಯ. ಅಂದವಾಗಿ ಅಲಂಕರಿಸಿಕೊಳ್ಳುವುದು, ನಿಮ್ಮ ಬಾಹ್ಯ ಸೌಂದರ್ಯವನ್ನು ಕಾಪಾಡಿಕೊಳ್ಳುವುದು ಫ್ಯಾಶನ್ ಅಲ್ಲ. ಅದು ನೀವು ಊಟ, ತಿಂಡಿ, ನಿದ್ರೆ ಮಾಡುವಷ್ಟೇ ಮುಖ್ಯ. ಹೊರಗೆ ಹೋಗಿ ದುಡಿಯುವ ಹೆಣ್ಣು ಗಾಳಿ, ಬಿಸಿಲು, ಮಳೆಗೆ, ತನ್ನ ಮುಖ, ಕೂದಲು, ಚರ್ಮ ಒಡ್ಡಬೇಕಾಗುತ್ತದೆ. ಕೆಲಸದ ಒತ್ತಡ ಜಾಸ್ತಿಯಿರುತ್ತದೆ. ಊಟ, ತಿಂಡಿ, ನಿದ್ರೆ ಸಮರ್ಪಕವಾಗಿರುವುದಿಲ್ಲ. ಅವುಗಳ ಪ್ರತಿಕ್ರಿಯೆ ನಿಮ್ಮ ಅಂದ, ಚೆಂದಗಳ ಮೇಲೆ ಹೆಚ್ಚಾಗಿರುತ್ತದೆ. ನಿಮ್ಮ ಚರ್ಮ ಶುಷ್ಕವಾಗಿರುವುದಕ್ಕೆ ಕಾರಣ, ಅದಕ್ಕೆ ಸರಿಯಾದ ಆರೈಕೆಯಿಲ್ಲದಿರುವುದು. ಮುಖಕ್ಕೆ ಮೇಕಪ್ ಬಳಿದುಕೊಂಡರೆ ಅದು ತಾತ್ಕಾಲಿಕ ಪರಿಹಾರವಷ್ಟೆ. ನಿಮ್ಮ ಚರ್ಮಕ್ಕೆ ಸರಿಯಾದ ಆರೈಕೆ ಬೇಕು. ಪ್ರತಿ ದಿನ ಕೆಲಸದಿಂದ ಬಂದ ಮೇಲೆ ಮುಖವನ್ನು ಸ್ವಚ್ಛವಾಗಿ ತೊಳೆದು ಯಾವುದಾದರೂ ಮೊಯಿಶ್ಚರೈಸಿಂಗ್ ಕ್ರೀಮ್ ಹಚ್ಚಿ. ಮನೆಯ ಚಿಕಿತ್ಸೆಯಾದರೆ ಹಾಲಿನ ಕೆನೆ ಹಚ್ಚಿಕೊಳ್ಳಿ, ಒಂದರ್ಧ ಗಂಟೆ ಬಿಟ್ಟು ತಣ್ಣೀರಿನಲ್ಲಿ ಮುಖ ತೊಳೆಯಿರಿ. ಮುಖ ಒರೆಸದೇ ಹಾಗೇ ಆರಲು ಬಿಡಿ. ಮತ್ತೆ ಮಲಗುವ ಮುನ್ನ ಹಾಲಿನ ಕೆನೆಗೆ ಒಂದು ತೊಟ್ಟು ನಿಂಬೆಹುಳಿ ಬೆರೆಸಿ ಮುಖ, ಕತ್ತು, ಕೈಗಳಿಗೆ ಹಚ್ಚಿಕೊಳ್ಳಿ ಅಥವಾ ಯಾವುದಾದರೂ ಮೊಯಿಶ್ಚರೈಸಿಂಗ್ ಕ್ರೀಂ ಬಳಸಿ. ಬೆಳಿಗ್ಗೆ ಮುಖವನ್ನು ತಣ್ಣೀರಿನಲ್ಲಿ ಸ್ವಚ್ಛವಾಗಿ ತೊಳೆದುಕೊಳ್ಳಿ, ಸ್ನಾನಮಾಡಲು ಅತಿ ಬಿಸಿಯಾದ ನೀರು ಬಳಸಬೇಡಿ. ಆಫೀಸಿಗೆ ಹೊರಡುವಾಗ ಮುಖಕ್ಕೆ ಯಾವುದಾದರೂ ಫೌಂಡೇಶನ್ ಕ್ರೀಂ ಹಚ್ಚಿ ಅಥವಾ ಲೋಷನ್ ಹಚ್ಚಿ. ಇದು ಸನ್‌ಟ್ಯಾನ್ ತಡೆಯುತ್ತದೆ. ಮಿಕ್ಕ ಅಲಂಕಾರ ನಿಮಗೆ ಬಿಟ್ಟದ್ದು.

ಕೂದಲಿನ ಸೌಂದರ್ಯ ಕಾಪಾಡಲು ಪ್ರತಿವಾರ ಅಭ್ಯಂಜನ ತಪ್ಪಿಸಬೇಡಿ. ಎಣ್ಣೆ ಸ್ನಾನ ದೇಹಕ್ಕೆ ಕೂದಲಿಗೆ ಒಳ್ಳೆಯದು. ಮಲಗುವ ಮುನ್ನ ಕೂದಲನ್ನು ಚೆನ್ನಾಗಿ ಬಾಚಿಕೊಳ್ಳಿ, ಒಳ್ಳೆಯ ಪೌಷ್ಟಿಕ ಆಹಾರವನ್ನು ಕ್ಲುಪ್ತ ಸಮಯಕ್ಕನುಸಾರವಾಗಿ ತೆಗೆದುಕೊಳ್ಳಿ, ಹಸಿ ತರಕಾರಿ, ಹಣ್ಣು ಹಾಲು ಹೆಚ್ಚಾಗಿ ಸೇವಿಸಿ. ಸೊಪ್ಪು, ಮೊಳಕೆ ಕಾಳುಗಳನ್ನು ತಪ್ಪದೇ ಸೇವಿಸಿ - ಕಡೆಯ ಪಕ್ಷ ದಿನಕ್ಕೆ ಎಂಟು ಲೋಟ ನೀರು ಕುಡಿಯಿರಿ. ಪ್ರತಿದಿನ ಗಾಳಿ ಸೇವನೆ, ಸಾಕಷ್ಟು ವ್ಯಾಯಾಮ ಮಾಡಿ. ಚಿಂತೆ ದೂರ ಮಾಡಿ, ಇತರರೊಡನೆ ನಗುನಗುತ್ತಾ ಬೆರೆಯಿರಿ. ರಾತ್ರಿ ಕಣ್ತುಂಬಾ ಮೈ ಮರೆತು ನಿದ್ರೆ ಮಾಡಿ. ಯಾವುದಾದರೊಂದು ಹವ್ಯಾಸ ಬೆಳೆಸಿಕೊಳ್ಳಿ, ಒಂದಲ್ಲಾ ಒಂದು ದಿನ ನಿಮ್ಮನ್ನು ಮೆಚ್ಚಿ ಕೈ ಹಿಡಿಯುವವನು ಬಂದೇ ಬರುತ್ತಾನೆ.

ಉಷಾ ನವರತ್ನರಾಮ್ ಅವರೊಡನೆ

ಆಪ್ತ ಸಮಾಲೋಚನೆ

ಬದುಕಿನ ಹಾದಿಯಲ್ಲಿ ಎದುರಾಗುವ ಸಮಸ್ಯೆಗಳು ಒಂದೆರಡಲ್ಲ. ಸಮಸ್ಯೆ ಎದುರು ನಿಂತು ಘರ್ಜಿಸಿದಾಗ ಹಣೆಗೆ ಕೈಹೊತ್ತು ಕೂತರೆ ಪರಿಹಾರ ತಂತಾನೇ ಹೊಳೆಯಲಾರದು. ಸಮಸ್ಯೆ ಖಾಸಗಿ ಬದುಕಿಗೆ ಸಂಬಂಧಿಸಿದ್ದರಂತೂ ನುಂಗಲೂ ಆಗದೆ ಉಗುಳಲೂ ಆಗದೆ ತೊಳಲಾಡುವವರೇ ಹೆಚ್ಚು. ಇಂತಹ ಸಂದರ್ಭದಲ್ಲಿ ಒಳಗಿನ ಗೋಳನ್ನೆಲ್ಲ ತೋಡಿಕೊಳ್ಳಲು ಒಬ್ಬ ಆಪ್ತ ವ್ಯಕ್ತಿ ಸಿಕ್ಕರೆ ಅರ್ಧ ದುಃಖ ಶಮನಗೊಳ್ಳುತ್ತದೆ. ನಿಮ್ಮ ತೀರಾ ಖಾಸಗಿ ಸಮಸ್ಯೆಗಳಿಗೆ ಪರಿಹಾರ ಸೂಚಿಸಲು ಈ ಅಂಕಣ ಪ್ರಾರಂಭಿಸುತ್ತಿದ್ದೇವೆ.

ನಿಮ್ಮ ಯಾವುದೇ ವೈಯಕ್ತಿಕ ಸಮಸ್ಯೆ, ಸಾಮಾಜಿಕ-ಕೌಟುಂಬಿಕ ಬಿಕ್ಕಟ್ಟು ಕುರಿತು ಚುಟುಕಾಗಿ, ನಿರ್ದಿಷ್ಟವಾಗಿ ಬರೆದು ಕಳಿಸಿ. ಇದು ಕೇವಲ ಹೆಂಗಸರಿಗೇ ಮೀಸಲಾದ ಅಂಕಣವಲ್ಲ. ಈ ವಿಭಾಗಕ್ಕೆ ಗಂಡಸರೂ ತಮ್ಮ ಸಮಸ್ಯೆಗಳನ್ನು ಬರೆದು ಕಳಿಸಬಹುದು. ಅನುಭವೀ ಬರಹಗಾರ್ತಿ ಉಷಾ ನವರತ್ನರಾಮ್ ಅವರು ನಿಮ್ಮ ಪ್ರಶ್ನೆಗಳಿಗೆ, ಸಮಸ್ಯೆಗಳಿಗೆ ಪರಿಹಾರ ಸೂಚಿಸುತ್ತಾರೆ. ಪತ್ರದಲ್ಲಿ ನಿಮ್ಮ ಹೆಸರು, ವಿಳಾಸ ನಮೂದಿಸುವ ಅಗತ್ಯವಿಲ್ಲ.

ವಿಳಾಸ:

ಬಿಸಿಲ ಬದುಕು ಮಾಸ ಪತ್ರಿಕೆ
ಆಪ್ತ ಸಮಾಲೋಚನೆ ವಿಭಾಗ, ಅಂಚೆ ಪೆಟ್ಟಿಗೆ ೭೯೫೧
ಬಸವೇಶ್ವರನಗರ, ಬೆಂಗಳೂರು - ೫೬೦ ೦೭೯

ಈ ಪ್ರೀತಿಯೊಳಗೆ

(ಕವನ ಸಂಕಲನ)

ಲೇ: **ಕೆ.ಆರ್. ಸಂಧ್ಯಾರೆಡ್ಡಿ**
ಪ್ರ: ಅಲ್ಲಮ ಪ್ರಕಾಶನ, ನಂ.೫೪೬/೧೨, ೧ನೇ ಮೇನ್ ರೋಡ್, ನಾಗೇಂದ್ರ ಬ್ಲಾಕ್, ಬನಶಂಕರಿ ೧ನೇ ಸ್ಟೇಜ್, ಬೆಂಗಳೂರು-೫೬೦ ೦೫೦. ಮುದ್ರಣ : ೧೯೯೬, ಪುಟ : ೬೪, ಬೆಲೆ: ರೂ.೩೦/-

ಸಂಧ್ಯಾ ರೆಡ್ಡಿಯವರು ತಮ್ಮ ಮೂವತ್ತೈದರ ಹೊಸ್ತಿಲು ನಂತರ ಸ್ತ್ರೀ ಸಂವೇದನೆಗಳನ್ನು ಮನುಷ್ಯನ ಮೂಲ ಸಂವೇದನೆಗಳೊಂದಿಗೆ ಪ್ರತಿನಿಧಿಸುವ ರೀತಿಯಲ್ಲಿ ತಮ್ಮ ಈ ಕವಿತೆಗಳ ಮೂಲಕ ಕಾವ್ಯಲೋಕಕ್ಕೆ ತೆರೆದುಕೊಳ್ಳುತ್ತಾರೆ.

ಮಧ್ಯಮ ವರ್ಗದ ಹೆಣ್ಣು ತನ್ನ ಯೌವನದ ನಂತರದ ತುಮುಲಗಳ ತೀವ್ರತೆಗೆ ಒಳಗಾಗಿ ಧ್ವನಿಸುವ ಬಯಕೆಗಳು ಮತ್ತು ದ್ವಂದ್ವಗಳು ಇವರ ಕಾವ್ಯದ ಮುಖ್ಯ ವಸ್ತು. ಹೀಗೆ ಸರಳ ಕಾವ್ಯ ರಚನೆಯ ಮೂಲಕ 'ಮೌನ'ಕ್ಕೆ 'ದನಿ'ಗೂಡಿಸುತ್ತಾ ಕಾವ್ಯಪ್ರಿಯರ ಗಮನ ಸೆಳೆಯುತ್ತಾರೆ.

ಸ್ನೇಹ

(ಕವನ ಸಂಕಲನ)

ಸಂಪಾದಕರು:
ಅನಿಲರಾಜ್ ಸ. ಶಿರಹಟ್ಟಿ
ಪ್ರ: ಸ್ನೇಹಕುಂಜ ವಿಚಾರ ವೇದಿಕೆ, ಹಾರೂಗೇರಿ-೫೯೧ ೨೨೦ ಬೆಳಗಾವಿ ಜಿಲ್ಲೆ
ಮುದ್ರಣ: ೧೯೯೬
ಪುಟ: ೯೬ ಬೆಲೆ ರೂ.೩೦

'ಸ್ನೇಹ' ಇದು ಯುವ ಕವಿಗಳೇ ಅಧಿಕವಾಗಿರುವ ಒಂದು ಕವನ ಸಂಕಲನ, 'ಸತ್ಯಶಾನಾನಂದನ' ಕಾವ್ಯನಾಮದ ಶ್ರೀ ಅನಿಲರಾಜ್ ಸ. ಶಿರಹಟ್ಟಿ ಅವರು ಸಂಪಾದಿಸಿ ಸಂಕಲಿಸಿದ್ದಾರೆ. ಇಲ್ಲಿ ಬಹಳಷ್ಟು ಜನ ಕವಿಗಳು ತಮ್ಮ ಮೊದಲ ಕವಿತೆಯಿಂದಲೇ ಕಾವ್ಯ ಸೃಷ್ಟಿಗೆ ಕಾಲಿಟ್ಟಂತಿದೆ. ಹಲವರು ಶಿಕ್ಷಕರು ಇನ್ನಿತರರು ವಿದ್ಯಾರ್ಥಿಗಳು, ಇತರರೂ ಇದ್ದಾರೆ. ಈಗಾಗಲೇ ಕವಿತೆ ರಚಿಸಿ, ಕಾವ್ಯಾಸ್ವಾದನೆ ಮಾಡಿದವರೂ ಇದ್ದಾರೆ.

ಬಹಳಷ್ಟು ಜನ ಇಲ್ಲಿ ತರುಣ ಕವಿಗಳು ಕಾವ್ಯದ ಅಧ್ಯಯನದ ಜತೆ ಭಾಷೆಯ ಬಗೆಗೂ ಗಮನ ಕೊಡಬೇಕಾಗಿದೆ. ಕವಿತೆ ರಚಿಸಲು ಕೇವಲ ಉತ್ಸಾಹವಷ್ಟೇ ಸಾಲದು, ಅದಕ್ಕೆ ಪೂರ್ವ ತಯಾರಿಯಾಗಿ ಭಾಷೆ, ವ್ಯಾಕರಣಗಳ ತಿಳಿವಳಿಕೆಯೂ ಬೇಕು. ಇಲ್ಲಿ ಕೆಲವು ಜನ ಕಾವ್ಯವನ್ನು ಅರ್ಥೈಸಿಕೊಂಡು ಕವಿತೆ ರಚಿಸಿದ್ದು ಸಂತೋಷ. ಬಹಳಷ್ಟು ಜನ ಯುವ ಕವಿಗಳು ಕಾವ್ಯವನ್ನು ಇನ್ನೂ ಚೆನ್ನಾಗಿ ಅಭ್ಯಾಸ ಮಾಡಿ ಬರೆದರೆ, ಒಳ್ಳೆಯ ಕವಿಗಳಾಗುವ ಭರವಸೆ ಹೊಂದಿದ್ದಾರೆ.

- ದು.ನಿಂ. ಬೆಳಗಲಿ

ಭಾವ ಸ್ಪಂದನ

(ಭಾವ ಗೀತೆಗಳು)

ಲೇ: **ಚಿತ್ರಶೇಖರ ಕಂಠಿ**
ಪ್ರ: ಗೆಳೆಯರ ಬಳಗ ಪ್ರಕಾಶನ, ನಂ.೧೪೫/೨, ಮಾಕಾ ಲೇ ಔಟ್, ಜೇವರ್ಗಿ ರಸ್ತೆ, ಕುಲಬುರ್ಗಿ-೫೮೫ ೧೦೨, ಮುದ್ರಣ : ೧೯೯೬, ಪುಟ: ೪೪ ಬೆಲೆ: ರೂ.೨೫/-

ವಿರಹದ ನೋವನ್ನು ತೋಡಿಕೊಳ್ಳುವ ಇಲ್ಲಿಯ ಕವಿತೆಗಳನ್ನು ಓದುವಾಗ ಗಜ್ಜಲ್‌ಗಳ ನೆನಪಾಗುತ್ತದೆ. ಜೊತೆಗೆ ದಿ. ಮುಕೇಶ್ ಹಾಡಿನ ನೋವಿನ ಧ್ವನಿ ಕೇಳಿದಂತೆನಿಸುತ್ತದೆ. ಇಷ್ಟೊಂದು ಇಂತಹ ಗೀತೆಗಳ ಸಂಕಲನ ಕನ್ನಡದಲ್ಲಿ ಇಲ್ಲವೇನೋ. ಈ ಹಾಡುಗಳ ಧ್ವನಿ ಸುರುಳಿಗಳು ಹೊರಬಂದರೆ, ಕನ್ನಡದಲ್ಲಿ ವಿಶಿಷ್ಟವೆನಿಸಬಹುದಾದ ಭಾವಗೀತೆಗಳಿವು ಎನಿಸುತ್ತದೆ. ಹೀಗಾಗಿ ಕಾವ್ಯ ಗುಣದಂತೆ ತಕ್ಕಮಟ್ಟಿನ ವ್ಯಾಪಾರಿ ಗುಣವೂ ಇವುಗಳಿಗಿದೆ.

- ಡಾ. ವೀರಣ್ಣ ದಂಡೆ


ಪಿರುತಿ ಹನಿಗಳು

(ಹನಿಗವನಗಳು)

ಲೇ: **ನೀ. ಶ್ರೀಶೈಲ**
ಪ್ರ: ಶ್ರೀಮತಿ ಅನಲಾ ಶ್ರೀಶೈಲ, ಹುಲ್ಲೂರು, ತಾ: ರೋಣ ಧಾರವಾಡ ಜಿಲ್ಲೆ ಮುದ್ರಣ: ೧೯೯೬, ಪುಟ: ೫೦ ಬೆಲೆ: ರೂ. ೧೫/-

'ಪಿರುತಿ ಹನಿಗಳು' ಶ್ರೀಶೈಲರ ಮೊದಲ ಕೃತಿ. ಈ ಸಂಕಲನದಲ್ಲಿ ಅವರು ಅನೇಕ ಧ್ವನಿಗವನಗಳನ್ನು ನೀಡಿದ್ದಾರೆ. ಪ್ರೀತಿ, ಪ್ರಣಯಕ್ಕೆ ಒತ್ತು ನೀಡುವ ರಚನೆಗಳೇ ಇಲ್ಲಿ ಹೆಚ್ಚಾಗಿವೆ. ಅವು ತಮ್ಮ ಲಾಲಿತ್ಯ, ವ್ಯಂಗ್ಯ ಗುಣಗಳಿಂದಾಗಿ ಗಮನ ಸೆಳೆಯುತ್ತವೆ, ಕಚಗುಳಿಯಿಡುತ್ತವೆ. ಆದರೆ ಪ್ರೀತಿ, ಪ್ರಣಯವಷ್ಟೇ ಹನಿಗವನಕ್ಕೆ ವಸ್ತುವಲ್ಲ. ಯಾವುದೇ ವಸ್ತುವನ್ನು ಸಮರ್ಥವಾಗಿ ಈ ಪ್ರಕಾರದಲ್ಲಿ ಅಳವಡಿಸಲು ಸಾಧ್ಯ, ಎನ್ನುವುದನ್ನು ಶ್ರೀಶೈಲ ಅವರು ಗಮನಿಸಬೇಕು. ಭಾಷೆಯನ್ನು ಅರ್ಥಪೂರ್ಣವಾಗಿ ದುಡಿಸಿಕೊಳ್ಳುವ ಕಲೆ ಹನಿಗವನ ರಚನೆಯಲ್ಲಿ ತೊಡಗಿದವರಿಗೆ ಅತ್ಯವಶ್ಯ. ಈ ನಿಟ್ಟಿನಲ್ಲಿ ನೀ. ಶ್ರೀಶೈಲ ಅವರು ಪ್ರಯತ್ನಶೀಲರಾಗಲೆಂದು ಹಾರೈಸುತ್ತೇನೆ.

- ಡಿ.ವಿ. ಬಡಿಗೇರ



ಗುಮ್ಮಟ ನಾಡಿನ ಕೀರ್ತನಕಾರ

(ಶ್ರೀ ದಾನಪ್ಪ ಜತ್ತಿಶಾಸ್ತ್ರಿಯವರ ಬದುಕು-ಕಲೆ-ಸಾಧನೆ)

ಲೇ: **ಕಲ್ಲೇಶ ಕುಂಬಾರ್**
ಪ್ರ: ಸ್ನೇಹ ತಂತು ಪ್ರಕಾಶನ, ಚಡಚಣ-೫೮೬ ೨೦೫ ತಾ: ಇಂಡಿ
ಮುದ್ರಣ: ೧೯೯೭, ಪುಟ: ೪೮,
ಬೆಲೆ: ರೂ ೨೫/-

ದಾನಪ್ಪ ಜತ್ತಿಯವರು ಒಬ್ಬ 'ಗೊಮ್ಮಟ'ನಾಗಿ ಉಳಿದು-ಬೆಳೆದು ಬಂದ ಬಗೆಯನ್ನು ಇಲ್ಲಿಯ ಲೇಖಕರು ಸ್ವಾರಸ್ಯಪೂರ್ಣ ಮಾತಿನಲ್ಲಿ ಹಿಡಿದಿಟ್ಟಿದ್ದಾರೆ. ಗೊಮ್ಮಟ-ಭವ್ಯ-ದಿವ್ಯ ಏಕ ಶಿಲಾ ಶಿಲ್ಪವಾದ ಬಾಹುಬಲಿ (ಶ್ರವಣ ಬೆಳಗೊಳ)ಯನ್ನು ನೆನಪಿಸುವ ಪದವಾಗಿರುವಂತೆ, ಯಾವ ಆಧಾರ ಕಂಬವೂ ಇಲ್ಲದ ವಿಶಾಲ ಗೋಳವಾಗಿ, ಅತಿ ಎತ್ತರದ ಗಾರೆ

ಲೇಖಕರ ಗಮನಕ್ಕೆ

ಈ ಅಂಕಣದಲ್ಲಿ ಹೊಸ ಪ್ರಕಟಣೆಗಳ ವಿವರ ಪ್ರಕಟಿಸಲಾಗುವುದು. ಮಹತ್ವದ ಕೃತಿಗಳ ವಿಮರ್ಶೆಗೂ ಆಸ್ಪದವಿದೆ. ಇದಕ್ಕಾಗಿ ತಮ್ಮ ಇತ್ತೀಚಿನ ಪ್ರಕಟಣೆಗಳ ಎರಡು ಪ್ರತಿ ಕಳಿಸಿ.

ಕಟ್ಟಡವಾದ ವಿಜಾಪುರದ ವಾಸ್ತು ಶಿಲ್ಪವನ್ನೂ ನೆನಪಿಸುತ್ತದೆ. ದಾನಪ್ಪನವರು ವಿಜಾಪುರ ನಾಡಿನವರು. ಬಯಲು, ಬಿಸಿಲು, ಬರಗಾಲಗಳ ಈ ನಾಡಿನ ನೆಲ ವಿಚಿತ್ರ ಕಸುವಿನಿಂದಾದದ್ದು. ನೆಲದ ಗುಣ ಇಲ್ಲಿಯ ಮಂದಿಯ ಮೈಯನ್ನೂ ಹೊಕ್ಕಂತಿದೆ. ಜಿಗುಟು ಮನಸ್ಸು, ಚಲನಶೀಲ ಕ್ರಿಯೆ ಇವರ ಗುಣ. ದಾನಪ್ಪನವರ ಚರಿತ್ರೆ ಓದಿದರೆ ಈ ನೆಲದ ಗುಣ ಅವರ ಮೈ-ಮನಗಳಲ್ಲಿ ಹಾಸುಹೊಕ್ಕಿದೆ. ಅವಿಶ್ರಾಂತವಾಗಿ ಕೀರ್ತನ-ಪ್ರವಚನ ಮಾಡುತ್ತ ದಾನಪ್ಪನವರು ಈ ೨೫ ವರ್ಷಗಳಲ್ಲಿ ಗೊಮ್ಮಟ ನಾಡನ್ನು ಸಾಂಸ್ಕೃತಿಕವಾಗಿ ಜೀವಂತವಿಟ್ಟಿದ್ದಾರೆ. ವಿಜಾಪುರದಲ್ಲಿ ಆಧುನಿಕ ಸಾಹಿತ್ಯದ ಪ್ರಸಕ್ತಿ ತೀರ ಕಡಿಮೆ. ಅಲ್ಲಿ ಹುಟ್ಟಿ, ಕಲಿತು ಬೆಳೆದವರು ನಾಡಿನ ಬೇರೆ ಕಡೆ ನೆಲೆಸಿ ಸಾಹಿತ್ಯ ಕೃಷಿ ಮಾಡಿ ಸೊಗಸಾದ ಫಲ ಕೊಟ್ಟಿದ್ದಾರೆ. ಆದರೆ ಅಲ್ಲೇ ಇದ್ದು ಸಫಲತೆ ಗಳಿಸಿದವರು ತೀರ ಕಡಿಮೆ. ದಾನಪ್ಪನವರು ಮಾತ್ರ ಅಲ್ಲಿ ಉಳಿದು ಬೆಳೆದದ್ದು-ತೋಂಡಿರೂಪದ ಸಾಹಿತ್ಯಕ್ಕೆ ಸಮೃದ್ಧಿ ತಂದುಕೊಟ್ಟದ್ದು ಶ್ಲಾಘನೀಯ.

- ಶ್ಯಾಮಸುಂದರ ಬಿದರಕುಂದಿ

ನುಡಿರತ್ನ ನಿಧಿ

ಲೇ: **ಡಾ. ಬಿ.ಎಸ್.ರಾಮಣ್ಣವರ**
ಪ್ರ: ಶ್ರೀ ಮಹಾಂತ ದುರದುಂಡೀಶ್ವರ ಸಂಸ್ಥಾನಮಠ, ಮುರಗೋಡ ಬೆಳಗಾವಿ ಜಿಲ್ಲೆ
ಮುದ್ರಣ: ೧೯೯೭, ಪುಟ: ೫೬,
ಬೆಲೆ: ರೂ ೧೦/-

ಪ್ರಸ್ತುತ "ನುಡಿ ರತ್ನ ನಿಧಿ" ಎಂಬ ಪುಟ್ಟ ಗ್ರಂಥವನ್ನು ಶ್ರೀಯುತರು ರಚಿಸಿದರೂ ಗಟ್ಟಿ ಮಾತುಗಳ ಸಂಪತ್ತನ್ನು ಕಟ್ಟಿಕೊಟ್ಟಿದ್ದಾರೆ.

ವರ್ಷದ ३६५ ದಿನಗಳನ್ನೂ ಸಂಕೇತಿಸುವಂತೆ ३६५ ರತ್ನ ಪ್ರಾಯವಾದ ನುಡಿಗಳು ಈ ಗ್ರಂಥ ಭಂಡಾರದಲ್ಲಿ 'ನಿಧಿ'ಯಾಗಿ ಭಗವಂತನ ಸನ್ನಿಧಿಯ ಅರಸುವ ವಿಧಿಯಾಗಿ ಹೊರಹೊಮ್ಮಿವೆ. ಲೌಕಿಕ ವ್ಯವಹಾರದ ಸಾಗರದ ತಳದಲ್ಲಿರುವ ಆಧ್ಯಾತ್ಮಿಕ ಮುತ್ತುಗಳನ್ನೇ ಹೊತ್ತಂದು ನಮ್ಮೆದುರು ಎರಚಿದ್ದಾರೆ ಶ್ರೀ ಡಾ. ಬಸವಣ್ಣೆಪ್ಪನವರು.

- ಉಳುವೀಶ ಸ್ವಾಮಿ

ಮಕ್ಕಳ ಸಾಹಿತ್ಯ ನಾನು ಕಂಡಂತೆ

(ಉಪನ್ಯಾಸ ಹಾಗೂ ಪ್ರಬಂಧಗಳ ಸಂಗ್ರಹ)
ಲೇ: **'ಸಿಸು' ಸಂಗಮೇಶ**
ಪ್ರ: ಭಾರತೀ ಸಾಹಿತ್ಯ ಭಂಡಾರ,
ಕಾಬ್ರಾಜಿ ಬಜಾರ, ವಿಜಾಪುರ-೫೮೬ ೧೦೧
ಮುದ್ರಣ: ೧೯೯೬, ಪುಟ: ೨೧೯,
ಬೆಲೆ: ರೂ ೬೫/-

ಸುಮಾರು ನಾಲ್ಕು ದಶಕಗಳಿಂದಲೂ ಮಕ್ಕಳ ಸಾಹಿತ್ಯದ ಬಗೆಗೆ ಚಿಂತನ-ಮಂಥನ ಮಾಡುತ್ತ, ಲೇಖಕನಾಗಿ ಸಂಪಾದಕನಾಗಿ, ಮುದ್ರಕನಾಗಿ, ಪ್ರಕಾಶಕನಾಗಿ, ಹೊತ್ತು ಮಾರಾಟ ಮಾಡಿ ಕಂಡ, ಅನುಭವಿಸಿದ ವಿಚಾರಗಳನ್ನು ಇಲ್ಲಿ ಸಂಗ್ರಹಿಸಿದ್ದೇನೆ. ಸಭೆ ಸಮ್ಮೇಳನಗಳಲ್ಲಿ ಭಾಗವಹಿಸಿ ಮಂಡಿಸಿದ ಭಾಷಣ-ಉಪನ್ಯಾಸಗಳನ್ನು ಸಂಕ್ಷಿಪ್ತಗೊಳಿಸಿ ಪ್ರಸ್ತುತಪಡಿಸಿದ್ದೇನೆ. ಜೊತೆಗೆ ಕರ್ನಾಟಕದಲ್ಲಿ ಮಕ್ಕಳ ಸಾಹಿತ್ಯದ ಬಗೆಗೆ ಆಗಾಗ ನಡೆದ ಘಟನೆ, ವ್ಯಕ್ತವಾದ ವಿಚಾರಗಳಿಗೆ ಸ್ಪಂದಿಸಿ ಪತ್ರಿಕೆಗಳಲ್ಲಿ ಪ್ರಕಟಿಸಿದ ಪ್ರಮುಖವಾದ ಅನಿಸಿಕೆಗಳನ್ನು, ಮಕ್ಕಳ ಸಾಹಿತ್ಯದ ಏಳ್ಗೆಯ ಬಗೆಗೆ ಚಿಂತಿಸುವ ಸಾಹಿತಿಗಳಿಗೆ ಅರಿಕೆಯಾಗಲೆಂದು ಕೊನೆಗೆ ಕೊಡಲಾಗಿದೆ.

- 'ಸಿಸು' ಸಂಗಮೇಶ

ಪುಸ್ತಕ ಖರೀದಿಗೆ ಅರ್ಜಿ ಸಲ್ಲಿಸಿ

ಉನ್ನತ ಮಟ್ಟದ ಆಯ್ಕೆ ಸಮಿತಿಯಿಂದ ಆಯ್ಕೆ ಮಾಡುವ ಗ್ರಂಥಗಳನ್ನು ಸಾರ್ವಜನಿಕ ಗ್ರಂಥಾಲಯಗಳಿಗೆ ಖರೀದಿಸಲು ಪ್ರಪ್ರಥಮ ಬಾರಿಗೆ ಜುಲೈ ೧೯೯೭ರವರೆಗೆ ಪ್ರಕಟಿಸಿದ ಕನ್ನಡ, ಆಂಗ್ಲ ಹಾಗೂ ಇತರ ಭಾಷೆಯ ಗ್ರಂಥಗಳನ್ನು ಲೇಖಕ, ಪ್ರಕಾಶಕ ಹಾಗೂ ಅಂಗೀಕೃತ ಪುಸ್ತಕ ವಿತರಣದಾರರಿಂದ ಅರ್ಜಿ ಆಹ್ವಾನಿಸಲಾಗಿದೆ.

ಗ್ರಂಥದ ವಿವರ ಪ್ರಕಾಶಕ ಹಾಗೂ ಅರ್ಜಿದಾರರ ವಿಳಾಸ ಹೊಂದಿದ ಸ್ವ-ಲಿಖಿತ ಅರ್ಜಿಯೊಂದಿಗೆ ಪುಸ್ತಕದ ಒಂದು ಪ್ರತಿಯನ್ನು ನಿರ್ದೇಶಕರು, ಸಾರ್ವಜನಿಕ ಗ್ರಂಥಾಲಯ ಇಲಾಖೆ, ೪ನೇ ಮಹಡಿ, ವಿಶ್ವೇಶ್ವರಯ್ಯ ಮುಖ್ಯ ಗೋಪುರ, ಅಂಬೇಡ್ಕರ ವೀದಿ, ಬೆಂಗಳೂರು-೧ ಇವರಿಗೆ ದಿನಾಂಕ ३೧-೭-೧೯೯೭ರ ಒಳಗೆ ಸಲ್ಲಿಸುವುದು.

ಅರ್ಜಿಯೊಂದಿಗೆ ರಾಜ್ಯ · ಕೇಂದ್ರ ಗ್ರಂಥಾಲಯ, ಕಬ್ಬನ್ ಉದ್ಯಾನವನ, ಬೆಂಗಳೂರು-೧ ಇಲ್ಲಿರುವ ಗ್ರಂಥ ಸ್ವಾಮ್ಯ (ಕಾಪಿ ರೈಟ್) ವಿಭಾಗಕ್ಕೆ ಗ್ರಂಥದ ३ ಪ್ರತಿಗಳನ್ನು ಸಲ್ಲಿಸಿರುವ ಬಗ್ಗೆ ದೃಢೀಕರಣ ಪತ್ರದ ನಕಲು ಪ್ರತಿಯನ್ನು ಲಗತ್ತಿಸಿರಬೇಕು.

ಕವನಗಳಿಗೆ ಆಹ್ವಾನ

ಭಾರತ ಸ್ವಾತಂತ್ರ್ಯದ ಸುವರ್ಣ ಮಹೋತ್ಸವದ ಸಂದರ್ಭದಲ್ಲಿ 'ಕನ್ನಡತಾಯಿ' ಪ್ರಕಾಶನ 'ಸುವರ್ಣ ಭಾರತಿ' ಎಂಬ ಪ್ರಾತಿನಿಧಿಕ ಕವನ ಸಂಕಲನ ಪ್ರಕಟಿಸಲು ಯೋಜನೆ ರೂಪಿಸಿದೆ.
ಸ್ವಾತಂತ್ರ್ಯ ಸಂಗ್ರಾಮದ ಹೋರಾಟ, ಬ್ರಿಟಿಷರ ದಬ್ಬಾಳಿಕೆ, ದೇಶಭಕ್ತರ ಬಲಿದಾನ, ರಾಷ್ಟ್ರೀಯ ಭಾವೈಕ್ಯ ಮುಂತಾದ ವಿಷಯಗಳನ್ನು ಆಯ್ದುಕೊಂಡು ಕವನ ಬರೆದಿರಬೇಕು.
ತಮ್ಮ ಎರಡು ಕವನಗಳನ್ನು ಕೆಳಗಿನ ವಿಳಾಸಕ್ಕೆ ದಿ. ३೧-೮-೧೯೯೭ರೊಳಗಾಗಿ ಕಳಿಸಬೇಕು.
ವಿವರಗಳಿಗೆ:


ಸಂಪಾದಕರು

"ಕನ್ನಡತಾಯಿ" ಪ್ರಕಾಶನ, ೧೭೪३, ೮ನೇ ಸೆಕ್ಟರ್ ಆಂಜನೇಯನಗರ, ಬೆಳಗಾವಿ - ೫೯೦ ೦೧೬.

ಮುದ್ದಣ ಸ್ಮಾರಕ ಕಾವ್ಯ ಸ್ಪರ್ಧೆ

ಕಾಂತಾವರ ಕನ್ನಡ ಸಂಘ ಮುದ್ದಣ ಸ್ಮಾರಕ ಕಾವ್ಯ ಸ್ಪರ್ಧೆಗಾಗಿ (೧೯೯೭) ಕೃತಿಗಳನ್ನು ಆಹ್ವಾನಿಸಿದೆ. ಬಹುಮಾನ ರೂಪಾಯಿ ३,೦೦೦ ಮತ್ತು ಪ್ರಶಸ್ತಿ ಪತ್ರ. ಆಸಕ್ತರು ಸ್ಪರ್ಧೆಯ ನಿಯಮಾವಳಿಗಳನ್ನು ತಿಳಿಯಲು ಸ್ವವಿಳಾಸದ ಅಂಚೆ ಕವರ್‌ನೊಂದಿಗೆ ಕೆಳಗಿನ ವಿಳಾಸವನ್ನು ಸಂಪರ್ಕಿಸಬಹುದು.

◆ **ಡಾ॥ ನಾ. ಮೊಗಸಾಲೆ, ಕಾಂತಾವರ ಕನ್ನಡ ಸಂಘ, ಕಾಂತಾವರ - 574 129 (ದ.ಕ.)**



ಬಿಸಿಲ

ಬಿಡುಗಡೆ

ದಿನಾಂಕ :


ಅಧ್ಯಕ್ಷತೆ : ಶ್ರೀ

ಬಿಡುಗಡೆ : ಶ್ರೀ


ಅತಿಥಿಗಳು : ಶ್ರೀ


ಶ್ರೀ











ದುಕು


ಮಾರಂಭ


-೧೯೯೭
ಾಮರಾವ್
ಪಿ. ಪ್ರಕಾಶ್
.ಕೆ. ಪಾಟೀಲ
ಗೂರು ರಾಮಚಂದ್ರಪ್ಪ











'ಹೆಣ್ಣುಮಕ್ಕಳಿಗೆ ಬಿನ್ನವಿಸಿ ಪೇಳುವೆ
ಪುಣ್ಯರೂಪಿಯಾಗಿ ನಡೆಯಿರವ್ವ
ಸನ್ಮಾರ್ಗದಲಿ ಮುಂದೆ ತಿಳಿದು ನಡೀರವ್ವ
ಘನ ಮುಕ್ತಿಯ ಸುಖ ಪಡೀರವ್ವ''

''ಭೇದ ಭಾವವಿಲ್ಲ ಉನ್ಮನಿ ಮಾರ್ಗ ತಿಳಿದವಗ
ಸುಳ್ಳ ಜಾತಿ ಜಗಳದಿಂದ ನೀತಿಗೆಟ್ಟು ಹೋಗಿ
ರಾಷ್ಟ್ರಕಾಗುವುದು ಘಾತ
ಸುಳ್ಳ ವಾದಿಸ ಬ್ಯಾಡ್ರಿ ವ್ಯರ್ಥ''

-ನೆಲದ ನೋವನ್ನೆಲ್ಲಾ ಎದೆಯಲ್ಲಿ ತುಂಬಿಕೊಂಡು ದಲಿತ ಹೆಣ್ಣು ಮಗಳೊಬ್ಬಳು ಗ್ರಾಮೀಣ ಜನ ಸಮುದಾಯದೆದುರು ನಿಂತು



ದನಿ ಏರಿಸಿ ಹಾಡುವಾಗ ಕೇಳುಗರೆದೆಯಲ್ಲಿ ಚೇಳು ಕುಟುಕಿದ ಅನುಭವ. ಯಾರು ಈ ಅಶಿಕ್ಷಿತ, ದಲಿತ ಮಹಿಳೆ?

ಫಕೀರವ್ವ ಗುಡಿಸಾಗರ. ಗೀಗೀ ಪದಗಳ ಆಗರ. ಎಪ್ಪತ್ತರ ಗಡಿದಾಟಿದ ಜಾನಪದ ಭಂಡಾರ.

ಗೀಗೀ ಪದಗಳ ಇಂಪು, ಗತ್ತು, ತಾಕತ್ತು, ಸವಾಲ್-ಜವಾಬ್, ಕಲಗಿ-ತುರ್ರೆ, ಹೆಣ್ಣು-ಗಂಡು ಗ್ರಾಮೀಣ ಜನತೆಗೆ ಬಲು ಅಚ್ಚುಮೆಚ್ಚು. ಈ ಹುಚ್ಚನ್ನು ಬಾಲ್ಯದಲ್ಲೇ ತಲೆಯಲ್ಲಿ ತುಂಬಿಕೊಂಡು, ವಿವಿಧ ಕಲಾವಿದರೊಂದಿಗೆ ಹಾಡಿ, ಊರಿಂದೂರಿಗೆ ತಿರುಗಾಡಿ, ಉತ್ತರ ಕರ್ನಾಟಕದಲ್ಲಿ ಮನೆ ಮಾತಾಗಿರುವ ಫಕೀರವ್ವ ಈ ನೆಲದ ಅಪ್ಪಟ ಪ್ರತಿಭೆ.

ಹುಟ್ಟೂರು ನವಲಗುಂದ ತಾಲೂಕಿನ ಗುಡಿಸಾಗರ. ಹಡೆದ ತಾಯಿ ನೀಲವ್ವ, ಬದುಕು ರೂಪಿಸಿದ ತಂದೆ. ಮರಿಯಪ್ಪ; ಸ್ಫೂರ್ತಿ ತುಂಬಿದ ಕಲಾವಿದೆ ಮಣಿಕಟ್ಟಿ ಗಂಗೂಬಾಯಿ; ಪದ ಕಲಿಸಿದ ಗುರು ಚಳ್ಳಪ್ಪ ಚಲವಾದಿ. ಮಾದರ ಜನಾಂಗದಲ್ಲಿ ಜನಿಸಿ, ದೇವದಾಸಿಯಾಗಿದ್ದೂ ಆ ಬದುಕನ್ನು ಬಹಿಷ್ಕರಿಸಿ, ಬಸವಿ ಬಿಡುವ ಪದ್ಧತಿಯ ವಿರುದ್ಧ ಹೋರಾಡಿ ಜಯಿಸಿ, ಗದುಗಿನ ಶ್ರೀ ಶಿವಾನಂದ ಮಠದಲ್ಲಿ ಶ್ರೀನಂದೀಶ್ವರ ಸ್ವಾಮಿಗಳಿಂದ ದೀಕ್ಷೆ ಪಡೆದ ಫಕೀರವ್ವನ ಬದುಕಿನ ಹಾದಿ ಬಲು ವಿಶಿಷ್ಟ; ಬಲು ವಿಚಿತ್ರ.

ದಪ್ಪು ಬಾರಿಸುತ್ತಾ ಹಾಡುವ, ಹಾಡುತ್ತಾ ಕುಣಿಯುವ ಈ ಹೆಣ್ಣುಮಗಳನ್ನು ನೋಡಲು, ಕೇಳಲು ಸಾವಿರ ಸಾವಿರ ಸಂಖ್ಯೆಯಲ್ಲಿ ಮಣ್ಣಿನ ಮಕ್ಕಳು ಸೇರುವುದನ್ನು ಬೆರಗಿನಿಂದಲೇ ಗಮನಿಸಬಹುದಾಗಿದೆ. ಇವರ ಕಂಚಿನ ಕಂಠದ ಲಾವಣಿ ಹಾಡುಗಳು, ಗೀಗೀ ಪದಗಳು ಹಬ್ಬ-ಹರಿದಿನಗಳಲ್ಲಿ, ಜಾತ್ರೆ-ಉರುಸುಗಳ ಸಂದರ್ಭದಲ್ಲಿ, ಕುಟುಂಬ ಕಲ್ಯಾಣ ಕಾರ್ಯಕ್ರಮಗಳಲ್ಲಿ, ಸಾಕ್ಷರತಾ ಆಂದೋಲನದಲ್ಲಿ, ಜಾನಪದ ಉತ್ಸವಗಳಲ್ಲಿ ಬೊಗಸೆ ಬೊಗಸೆಯಾಗಿ ಜನಪ್ರೀತಿ ಗಳಿಸಿವೆ.

'ಜೈಹಿಂದ್ ಗೀತ ಮೇಳ' ಕಟ್ಟಿರುವ ಫಕೀರವ್ವಳನ್ನು ವೃದ್ಧಾಪ್ಯ ಕವಿಯುವಾಗ, ಕೆಲವು ಪ್ರಶಸ್ತಿಗಳು ಬೆಂಬತ್ತಿ ಬಂದಿವೆ. 'ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಪ್ರಶಸ್ತಿ' (೧೯೮೪), ರಾಜ್ಯೋತ್ಸವ ಪ್ರಶಸ್ತಿ (೧೯೯೩), ತಿಂಗಳಿಗೆ ೨೫೦ ರೂ.ಗಳ ಗೌರವ ಮಾಸಾಶನ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ 'ಗುರುಶಿಷ್ಯ ಪರಂಪರೆ' ಕಾರ್ಯಕ್ರಮದ 'ಗುರು'ಪಟ್ಟ, ವೀರೇಂದ್ರ ಹೆಗ್ಗಡೆ, ಎಚ್.ಎಲ್. ನಾಗೇಗೌಡ, ಕು.ಶಿ.ಹರಿದಾಸ ಭಟ್ಟ, ತೋಂಟದಾರ್ಯಮಠದ ಸಿದ್ಧಲಿಂಗ ಶ್ರೀಗಳು.... ಮುಂತಾದ ಸಾಧಕರ ಒಲವಿನ ದುಪ್ಪಟ್ಟ ಇವರಿಗೆ ಲಭಿಸಿದೆ.

ಎಪ್ಪತ್ತೆರಡರ ಫಕೀರವ್ವ (ಜನನ ೧೦-೩-೧೯೨೫) ಇಪ್ಪತ್ತೆರಡರ ಯುವತಿಯ ಉತ್ಸಾಹದಿಂದ ಹಾಡುವಾಗ ಶ್ರೋತೃಗಳ ಎದೆ ತುಂಬ ರೋಮಾಂಚನ. ಮುಂದಿನ ಪೀಳಿಗೆಯಲ್ಲಿ ಗೀಗೀ ಪದಗಳ ಗುಂಗು ನಶಿಸದಂತೆ ಶಿಷ್ಯರನ್ನು ಸಿದ್ಧಪಡಿಸುತ್ತಿರುವ ಇವರಿಗೆ ಇತ್ತೀಚೆಗೆ ಲಕ್ವಾ ಹೊಡೆದು, ಇದೀಗ ಚೇತರಿಸಿರುತ್ತಾರೆ. ಬೆಳವಟಗೆ, ನವಲಗುಂದ, ಹುಬ್ಬಳ್ಳಿ, ಧಾರವಾಡಗಳ ತುಂಬ ಓಡಾಡುತ್ತಾ ಜಾನಪದ ಸಿರಿಗಂಧ ಪಸರಿಸುವ ಈಕೆ ನೆಲೆಸಿರುವುದು ಕಲಾಪ್ರೇಮಿಗಳ ಮನದಲ್ಲಿ; ಹೃದಯದಲ್ಲಿ.

ಗೀಗೀ ಪದ ಕೋಗಿಲೆ

ಫಕೀರವ್ವ ಗುಡಿಸಾಗರ


○ ಆರೂರು ಲಕ್ಷ್ಮಣ್ ಶೇಟ್



ಜಾನಪದ ಉಳಿವಿಗಾಗಿ ದುಡಿಯುತ್ತಿರುವ

ಶರಣಪ್ಪ ವಡಿಗೇರಿ

ನೋಡು ನೋಡುತ್ತಿದ್ದಂತೆ ಜನ ಸಾಮಾನ್ಯರಲ್ಲಿ ಬೆರತುಕೊಂಡು ಅವರ



ಭಾವನೆಗಳೇ ತಾನಾಗಿ ಬಿಡುವ ಶರಣಪ್ಪ ವಡಿಗೇರಿ ಸರಳ ಜೀವಿ. ರಾಯಚೂರು ಜಿಲ್ಲೆ ಕುಷ್ಟಗಿಯ ಈ ವ್ಯಕ್ತಿ ಹೈದ್ರಾಬಾದ್ ಕರ್ನಾಟಕ ಪ್ರದೇಶಕ್ಕೆ ಜಾನಪದ ಗಾರುಡಿಗನೆಂದು ಚಿರಪರಿಚಿತ.

ಉತ್ತರ ಕರ್ನಾಟಕದಲ್ಲಿನ ಶತಮಾನಕ್ಕೂ ಹಳೆಯದಾದ ನಾಲ್ಕೈದು ಸಾವಿರ ಜಾನಪದ ಗೀತೆಗಳ ಸಂಗ್ರಹ ಮಾಡಿ ಮೂಲಧಾಟಿಯಲ್ಲಿ ಹಾಡುವುದರೊಂದಿಗೆ ನಶಿಸಿ ಹೋಗುತ್ತಿರುವ ಜಾನಪದ ಸಂಪ್ರದಾಯದ ಹಾಡುಗಳಿಗೆ ಜೀವಕಳೆ ತುಂಬಿ ಕಲೆಯನ್ನು ಉಳಿಸಿ, ಬೆಳೆಸುತ್ತಿರುವ ಶರಣಪ್ಪ ವಡಿಗೇರಿಯ ಕಾರ್ಯ ಮೆಚ್ಚುವಂತಹದ್ದು.


ಕವಿಯಾಗಿ, ನಟನಾಗಿ, ಜಾನಪದ ಹಾಡುಗಾರನಾಗಿ, ಪತ್ರಕರ್ತನಾಗಿ, ಯುವ ಮುಂದಾಳಾಗಿ, ಸಮಾಜ ಸೇವಕನಾಗಿ, ವಿವಿಧ ರಂಗಗಳಲ್ಲಿ ಗಣನಿಯ ಸೇವೆ ಸಲ್ಲಿಸಿ ರಾಜ್ಯ ಪ್ರಶಸ್ತಿಯನ್ನು ತನ್ನ ಕೊರಳಿಗೆ ಹಾಕಿಸಿಕೊಂಡ ಸಾಧನೆ ಈತನದಾಗಿದೆ.

ಕೇಂದ್ರ ಸರಕಾರದ ಯೋಜನೆಯಡಿಯಲ್ಲಿ ರಾಜ್ಯದಿಂದ ಆಯ್ಕೆಯಾಗಿ 'ಲಕ್ಷದ್ವೀಪ' ಸಾಹಸಯಾತ್ರೆ ಕೈಗೊಂಡು, ಯಶಸ್ವಿಯಾಗಿ ದ್ದಾರೆ. ಬಂಡಾಯ-ದಲಿತ-ಧೋರಣೆಯಲ್ಲಿ ರಚಿಸುವ ವಡಿಗೇರಿ ತಮ್ಮ ಕಾವ್ಯಕ್ಕೆ ತಾವೇ ಧಾಟಿ ಹಾಕಿ ಅನೇಕ ಸಾಹಿತ್ಯ ಸಮ್ಮೇಳನದ ವೇದಿಕೆ ಮೇಲೆ ಹಾಡಿ ಲಕ್ಷಾಂತರ ಜನರಿಗೆ ಗುಂಗು ಹಿಡಿಸಿದ್ದಾರೆ.

ಉತ್ತರ ಪ್ರದೇಶದ ಲಕ್ನೋದಲ್ಲಿ ಏರ್ಪಡಿಸಿದ್ದ ರಾಷ್ಟ್ರೀಯ ಭಾವೈಕ್ಯ ಮೇಳದಲ್ಲಿ ವಡಿಗೇರಿ ರಾಜ್ಯದಿಂದ ಭಾಗವಹಿಸಿ ಕನ್ನಡ ನಾಡಿನ ಮೂಲ ಜಾನಪದ ಹಾಡಿನ ಮೂಲಕ ಮೇಳವನ್ನೆ ಬೆರಗುಗೊಳಿಸಿ ಕನ್ನಡದ ಸುಗಂಧವನ್ನು ಪಸರಿಸಿದ್ದಾರೆ.

ಜಿಲ್ಲೆಯ ಸುಮಾರು ೩೦ಕ್ಕೂ ಹೆಚ್ಚು ಸಂಘ-ಸಂಸ್ಥೆಗಳು ಇವರನ್ನು ಗೌರವಿಸಿ ಸನ್ಮಾನಿಸಿವೆ. ಜಾನಪದ ಹಾಡಿನ ಪ್ರಚಾರವಾಗಿ ಜೀವನವಿಡೀ ದುಡಿಯುತ್ತೇನೆಂದು ಹೇಳುವ ಶರಣಪ್ಪನ ಸಾಹಸಕ್ಕೆ ಜನರ ಪ್ರೋತ್ಸಾಹವೇ ಸ್ಫೂರ್ತಿ.

○ ಕನಕಗಿರಿ ಅಲ್ಲಾಗಿರಿರಾಜ



ಪತ್ರಕರ್ತರ್ಾ ಆಗುವುದು ಹೇಗೆ?

ವಿದ್ಯಾವಕಾಶ ಹಾಗೂ ಉದ್ಯೋಗ ಮಾರ್ಗ ಕುರಿತ ಮಾಹಿತಿಯ ಅಗತ್ಯ ಯಾವುದೊಂದು ಪ್ರದೇಶಕ್ಕೆ ಸೀಮಿತವಾಗುವಂತಹದಲ್ಲ. ಇಂತಹ ಅಮೂಲ್ಯ ಮಾಹಿತಿಗಾಗಿ ನಾಡಿನಾದ್ಯಂತ ಕಾತರಿಸಿ ಕೂತ ಆಕಾಂಕ್ಷಿಗಳ ಸಂಖ್ಯೆ ಸಣ್ಣದೂ ಅಲ್ಲ. ಕನಸು, ಪರಿಶ್ರಮಗಳಿಗೆ ನೆರವು ನೀಡಿ ಗೊತ್ತು ಗುರಿ ಕಲ್ಪಿಸುವ ಪ್ರಯತ್ನವೇ ಈ ಅಂಕಣ. ಪ್ರತಿ ತಿಂಗಳು ಪ್ರಕಟವಾಗುವ ಈ ವಿಭಾಗ ಮಾಹಿತಿಯ ಕಣಜ. ಗೊಂದಲದಲ್ಲಿ ಸಿಲುಕಿದ ಯುವಕರ ಮನಸ್ಸನ್ನು ಇಂಥ ಮಾಹಿತಿಯೆಡೆಗೆ ಸೆಳೆಯುವುದು ಮನೆಯ ಹಿರಿಯರ ಕರ್ತವ್ಯ.

○ ಜಿ.ಎಚ್. ಸುಧಾರಾಣಿ

ಮೊದಲೇ ಈ ಬಗ್ಗೆ ತಿಳಿಸಿಬಿಡುವುದು ವಾಸಿ. ಯಾರು ಬೇಕಾದರೂ ಪತ್ರಕರ್ತರಾಗ ಬಹುದು.

ಹಾಗೆ ನೋಡಿದರೆ ಪತ್ರಕರ್ತರಾಗಲು ಯಾವುದೇ ಅರ್ಹತೆ (Qualification) ಮತ್ತು ಡಿಗ್ರಿ ಬೇಕಾಗಿಲ್ಲ.

ಈ ದೇಶದಲ್ಲಿ ಎರಡು ವೃತ್ತಿಯನ್ನು ಅರಸಬಯಸುವವರಿಗೆ ಯಾವುದೇ ಅರ್ಹತೆ ಹಾಗೂ ಡಿಗ್ರಿ ಅಗತ್ಯವಿಲ್ಲ. ಒಂದು ರಾಜಕಾರಣಿಯಾಗಲು ಹಾಗೂ ಇನ್ನೊಂದು ಪತ್ರಕರ್ತರಾಗಲು.

ಪದವಿ ಪಡೆಯದವರು, ಕಾಲೇಜು ಮೆಟ್ಟಿಲು ಹತ್ತದವರು, ಕಾಲೇಜಿನಲ್ಲಿ ಗೋತಾ ಹೊಡೆದವರು, ಉಳಿದ ಯಾವ ಕ್ಷೇತ್ರದಲ್ಲೂ ಕೆಲಸ ಸಿಗದವರು, ಒಂದೇ ಮಾತಿನಲ್ಲಿ ಹೇಳುವುದಾದರೆ ಎಲ್ಲೂ ಸಲ್ಲದವರು ಪತ್ರಕರ್ತರಾಗಿದ್ದಾರೆಂದರೆ ಆಶ್ಚರ್ಯವಾಗಬಹುದು.

ಇನ್ನೂ ತಮಾಷೆಯ ಸಂಗತಿಯೆಂದರೆ -ರಿಕ್ಷಾ ಓಡಿಸುವವರು, ಟ್ರಕ್ ಚಾಲಕರು, ಸೈಕಲ್ ಅಂಗಡಿ ಇಟ್ಟುಕೊಂಡವರು, ಗೂಂಡಾಗಿರಿ ಮಾಡುವವರು, ಪತ್ರಿಕೆ ನಡೆಸಿದ್ದಾರೆ, ನಡೆಸುತ್ತಿದ್ದಾರೆ. ದೊಡ್ಡ ಪತ್ರಕರ್ತರಾಗಿದ್ದಾರೆ. ಪ್ರಶಸ್ತಿ ಪಡೆದಿದ್ದಾರೆ. ಪತ್ರಕರ್ತರ ಸಂಘ - ಸಂಸ್ಥೆಗಳ ಅಧ್ಯಕ್ಷರಾಗಿದ್ದಾರೆ. ಇನ್ನೂ ಸೋಜಿಗದ ಸಂಗತಿಯೆಂದರೆ ಯಾವ ಪತ್ರಿಕೆಯಲ್ಲೂ ಕೆಲಸ ಮಾಡದವರು ಪತ್ರಕರ್ತರೆಂದು ಮೆರೆಯುತ್ತಿದ್ದಾರೆ. ಹತ್ತಿಪ್ಪತ್ತು ವರ್ಷಗಳ ಕಾಲ ರಾಜ್ಯಮಟ್ಟದ ಪ್ರಮುಖ ದಿನಪತ್ರಿಕೆಯಲ್ಲಿದ್ದೂ ಒಂದೂ ಅಕ್ಷರ ಬರೆಯದೇ 'ದೊಡ್ಡ ಪತ್ರಕರ್ತ' ಎಂದು ಕರೆಯಿಸಿಕೊಂಡವರಿದ್ದಾರೆ.

ಖ್ಯಾತನಾಮ ಪತ್ರಕರ್ತರು/ಸಂಪಾದಕರಾರೂ ಸಾಂಪ್ರದಾಯಿಕ ಪತ್ರಿಕೋದ್ಯಮ ಶಿಕ್ಷಣ ಪಡೆದವರಲ್ಲ. ಕುಶವಂತ್‌ಸಿಂಗ್, ಅರುಣ ಶೌರಿ, ಎಂ.ವಿ.ಕಾಮತ್, ಪೋತೆನ್ ಜೋಸೆಫ್, ಸದಾನಂದ, ಖಾದ್ರಿಶಾಮಣ್ಣ.... ಇವರ್‍ಯಾರೂ ಪತ್ರಿಕೋದ್ಯಮ ಶಿಕ್ಷಣ ಪಡೆದವರಲ್ಲ. ಪತ್ರಿಕೋದ್ಯಮದ ಗೀಳು, ಬರವಣಿಗೆ ಹುಚ್ಚು, ವಿಷಯದಲ್ಲಿ ಕುತೂಹಲ, ತೀರದ ದಾಹ ಇವರನ್ನು ಶ್ರೇಷ್ಠ ಪತ್ರಕರ್ತರನ್ನಾಗಿಸಿವೆ. ಬರೆಯುವ ಕಲೆ ಇವರಿಗೆ ಕರಗತವಾಗಿದ್ದರಿಂದ ಇವರಿಗೆ ಪತ್ರಿಕೋದ್ಯಮದಲ್ಲಿ ಅಗಾಧವಾದುದನ್ನು ಸಾಧಿಸಲು ಸಾಧ್ಯವಾಯಿತು.

ಪತ್ರಿಕೋದ್ಯಮ ಶಿಕ್ಷಣ ಪಡೆಯದೇ ಪತ್ರಿಕಾಲಯಗಳಲ್ಲಿ ಕೆಲಸ ಮಾಡಿ ಉತ್ತಮ ಹೆಸರು ಮಾಡಿದವರ ಅನೇಕ ನಿದರ್ಶನಗಳನ್ನು ನೀಡಬಹುದು. ಬರವಣಿಗೆಯೊಂದನ್ನೇ ಅರ್ಹತೆಯನ್ನಾಗಿಸಿಕೊಂಡು ಪತ್ರಿಕಾ ಕಚೇರಿ ಸೇರುವುದು ಭಾರತದ ಪತ್ರಿಕೋದ್ಯಮ ಸಂದರ್ಭದಲ್ಲಂತೂ ಸಾಮಾನ್ಯ.

ಆದರೆ ಇತ್ತೀಚಿನ ದಿನಗಳಲ್ಲಿ ಈ ಪರಿಸ್ಥಿತಿ ಗಣನೀಯವಾಗಿ ಬದಲಾಗಿದೆ. ಉಳಿದ ಕ್ಷೇತ್ರಗಳಂತೆ, ಪತ್ರಿಕೋದ್ಯಮ ಕ್ಷೇತ್ರಕ್ಕೆ ಸೇರ ಬಯಸುವವರು ಅಥವಾ ಈ ಕ್ಷೇತ್ರದಲ್ಲಿ ವೃತ್ತಿ ಬಯಸುವವರು ಪತ್ರಿಕೋದ್ಯಮ ಶಿಕ್ಷಣ ಹೊಂದಿರಬೇಕಾದುದು ಅಗತ್ಯವಾಗಿದೆ. ರಾಷ್ಟ್ರದ ಬಹುತೇಕ ಕನ್ನಡ, ಇಂಗ್ಲಿಷ್ ಮತ್ತು ಇತರ ಭಾಷೆಗಳ ಪತ್ರಿಕೆಗಳಿಗೆ ಸೇರಲು ಪದವಿ ಜತೆ ಪತ್ರಿಕೋದ್ಯಮ ಶಿಕ್ಷಣ ಅವಶ್ಯಕ. ಅಂಥವರಿಗೆ ಪ್ರಾಧಾನ್ಯ ನೀಡಲಾಗುತ್ತದೆ.

ಪತ್ರಿಕೋದ್ಯಮ ಶಿಕ್ಷಣ ಮುಗಿಸಿಬಂದ ಅಭ್ಯರ್ಥಿಗಳನ್ನು ಬಹಳ ಲಘುವಾಗಿ ಕಾಣುವ ಕಾಲವೊಂದಿತ್ತು. ಈ ಶಿಕ್ಷಣ ಪಡೆಯುವುದನ್ನು ಒಂದು 'ಅನರ್ಹತೆ' ಎಂದು ಭಾವಿಸುವ ಕಾಲವೂ ಇತ್ತು. ಪತ್ರಿಕೋದ್ಯಮ ಶಿಕ್ಷಣ ಮುಗಿಸಿ ಪತ್ರಿಕಾಲಯಗಳಿಗೆ ಸೇರಿದ ವರದಿಗಾರ/ಉಪಸಂಪಾದಕರನ್ನು ತಾತ್ಸಾರದಿಂದ ಕಾಣಲಾಗುತ್ತಿತ್ತು. ಇದಕ್ಕೆ ಮುಖ್ಯ ಕಾರಣ ಪತ್ರಿಕೋದ್ಯಮ ಶಿಕ್ಷಣ ಪಡೆದವರಿಗೆ ಪ್ರಾಯೋಗಿಕ ತರಬೇತಿ ಗೊತ್ತಿರುವುದಿಲ್ಲ ಎಂಬ ಭಾವನೆ. ಪ್ರಾರಂಭದಲ್ಲಿ ಕೆಲ ಅಭ್ಯರ್ಥಿಗಳ ನೀರಸ ಸಾಧನೆ, ಕಳಪೆ ಗುಣಮಟ್ಟ ಎಲ್ಲ ವಿದ್ಯಾರ್ಥಿಗಳೂ ಹೇಗೇ

ಎಂಬ ಭಾವನೆ ನೆಲೆಯೂರಲು ಕಾರಣವಾಗಿತ್ತು. ಪತ್ರಿಕೋದ್ಯಮದಲ್ಲಿ ಸ್ನಾತಕೋತ್ತರ ಪದವಿ ಮುಗಿಸಿ ಬಂದ ಅಭ್ಯರ್ಥಿಗಳಿಗೆ ಹೇಗೆ ಇಂಟ್ರೊ (ಸುದ್ದಿಯ ಮೊದಲ ಪ್ಯಾರಾ) ಬರೆಯಬೇಕು, ಹೆಡ್‌ಲೈನ್ ಹೇಗೆ ಕೊಡಬೇಕು, ಯಾವ ಪಾಯಿಂಟ್ ಸೈಜ್‌ನಲ್ಲಿರಬೇಕೆಂಬ ಸಾಮಾನ್ಯ ಜ್ಞಾನವು ಗೊತ್ತಿರುತ್ತಿರಲಿಲ್ಲ. ಪತ್ರಿಕಾ ಕಚೇರಿಗೆ ಬಂದಾಗ ಯಾವುದೋ ಅಪರಿಚಿತ ಸ್ಥಳಕ್ಕೆ ಬಂದವರಂತೆ ಗರಬಡಿದು ನಿಂತುಬಿಡುತ್ತಿದ್ದರು. ಈ ಮಾತು ಎಲ್ಲರಿಗೂ ಅನ್ವಯಿಸದಿದ್ದರೂ, ಪತ್ರಿಕಾ ಕಚೇರಿಯಲ್ಲಿ, ಪತ್ರಿಕೋದ್ಯಮದಲ್ಲಿ ಎಂ.ಎ. ಮುಗಿಸಿದವರೆಂದರೆ ಪ್ರಾಯೋಗಿಕ ಜ್ಞಾನ ಇಲ್ಲದವರೆಂಬ ಅಭಿಪ್ರಾಯ ನೆಲೆಸಿದೆ.

ಪತ್ರಿಕೋದ್ಯಮ ಶಿಕ್ಷಣ ಮುಗಿಸಿ ಪತ್ರಿಕಾ ಕಚೇರಿ ಸೇರಿ ಉತ್ತಮ ಸಾಧನೆ ಮೆರೆದವರು ಶೀಘ್ರವಾಗಿ ಮೇಲೇರಿದವರು ಅನೇಕ ಮಂದಿಯಿದ್ದಾರೆ. ಚಿಕ್ಕ ವಯಸ್ಸಿನಲ್ಲಿ ದೊಡ್ಡ ಸ್ಥಾನವನ್ನು ಅಲಂಕರಿಸಿದವರಿದ್ದಾರೆ. ಆದರೆ ಅಂಥವರ ಸಂಖ್ಯೆ ಕಡಿಮೆಯಿರಬಹುದು. ಕೆಲವು ವಿದ್ಯಾರ್ಥಿಗಳ ವೈಫಲ್ಯ ಹಾಗೂ ದಡ್ಡತನದಿಂದ ಎಲ್ಲರನ್ನೂ ದೂರುವುದು ಸರಿ ಅಲ್ಲ.

ಭಾರತದಲ್ಲಿ ೧೯೪೧ರಲ್ಲಿ ಪ್ರಥಮ ಬಾರಿಗೆ ವಿಶ್ವವಿದ್ಯಾಲಯದಲ್ಲಿ ಪತ್ರಿಕೋದ್ಯಮ ಶಿಕ್ಷಣವನ್ನು ಆರಂಭಿಸಲಾಯಿತಾದರೂ. ಪತ್ರಿಕೆಗಳು ಈ ಶಿಕ್ಷಣ ಮುಗಿಸಿ ಬಂದ ಅಭ್ಯರ್ಥಿಗಳನ್ನು ಗಂಭೀರವಾಗಿ ಪರಿಗಣಿಸಿದ್ದು ತಡವಾಗಿ ಎಂದೇ ಹೇಳಬೇಕು. ಇದಕ್ಕೆ ಮುಖ್ಯ ಕಾರಣ ಪತ್ರಿಕೋದ್ಯಮ ಶಿಕ್ಷಣದಲ್ಲಿನ ದೋಷ ಹಾಗೂ ಕಳಪೆ ಗುಣಮಟ್ಟ. ಈ ಶಿಕ್ಷಣ ಮುಗಿಸಿ ಬಂದವರು ಪತ್ರಿಕಾಲಯದಲ್ಲಿ ಸರಳಸುದ್ದಿ ಬರೆಯಲೂ ಪೇಚಾಡಿದರೆ ಅಂಥವರ ಶೈಕ್ಷಣಿಕ ಹಿನ್ನೆಲೆ ಬಗ್ಗೆ ಅನುಮಾನ ಬರುವುದು ಸಹಜ. ಪಠ್ಯಕ್ರಮದಲ್ಲಿನ ದೋಷ, ಪಠ್ಯಪುಸ್ತಕಗಳ ಕೊರತೆ, ಪ್ರಾಯೋಗಿಕ ಕಲಿಕೆಗೆ ಒತ್ತು ನೀಡದಿರುವುದು ಮತ್ತು ಉಪನ್ಯಾಸಕರಿಗೆ ಪತ್ರಿಕಾ ಕಚೇರಿಯಲ್ಲಿನ ಅನುಭವ ಕೊರತೆ ಪತ್ರಿಕೋದ್ಯಮ ಶಿಕ್ಷಣ ಸೊರಗಲು ಕಾರಣವಾಗಿದೆ.

ಪತ್ರಿಕೋದ್ಯಮ ಶಿಕ್ಷಣ ನ್ಯೂನತೆಗೆ ಹಲವು ಕಾರಣಗಳಿರಬಹುದು. ಹಾಗೆಂದು ಶಿಕ್ಷಣವನ್ನೇ ದೂರುವುದು ಸರಿ ಅಲ್ಲ. ಶಿಕ್ಷಣದ ಆಚರಣೆಯಲ್ಲಿನ ದೋಷಕ್ಕೆ ಶಿಕ್ಷಣವನ್ನೇ ಹೊಣೆ ಮಾಡಬೇಕಿಲ್ಲ. ಅದು ಯಾವುದೋ ಸಂಸ್ಥೆ ಅಥವಾ ವಿಶ್ವವಿದ್ಯಾಲಯದ ಲೋಪವಿರಬಹುದೇ ಹೊರತು ಪತ್ರಿಕೋದ್ಯಮ ಶಿಕ್ಷಣದ್ದಲ್ಲ. ಈ ಹಿನ್ನೆಲೆಯಲ್ಲಿ ಪತ್ರಿಕೋದ್ಯಮ ಶಿಕ್ಷಣದ ಅಗತ್ಯವನ್ನು ಮನಗಾಣಬೇಕಾಗಿದೆ.

ಆರೋಗ್ಯಕರ ಸಂಗತಿಯೆಂದರೆ, ಕಳೆದ ಏಳೆಂಟು ವರ್ಷಗಳ ಅವಧಿಯಲ್ಲಿ ಪತ್ರಿಕಾಲಯಗಳಲ್ಲಿ ಪತ್ರಿಕೋದ್ಯಮ ಶಿಕ್ಷಣ ಪಡೆದವರಿಗೆ ಆದ್ಯತೆ ನೀಡಲಾಗುತ್ತಿದೆ. ಕಳೆದ ಐದು ವರ್ಷಗಳಲ್ಲಿ ರಾಜ್ಯದ ಕನ್ನಡ ಮತ್ತು ಇಂಗ್ಲಿಷ್ ದಿನಪತ್ರಿಕೆಗಳಲ್ಲಿ ಉದ್ಯೋಗ ಗಿಟ್ಟಿಸಿಕೊಂಡವರಲ್ಲಿ ಸುಮಾರು ಶೇ. ೮೦ರಷ್ಟು ಅಭ್ಯರ್ಥಿಗಳು ಪತ್ರಿಕೋದ್ಯಮದಲ್ಲಿ ಪದವಿ ಅಥವಾ ಸ್ನಾತಕೋತ್ತರ ಪದವಿ ಪಡೆದವರು. ಸಾಮಾನ್ಯವಾಗಿ ಎಲ್ಲ ಪತ್ರಿಕೆಗಳು ಅಭ್ಯರ್ಥಿಗಳಿಗಾಗಿ ಅರ್ಜಿ ಆಹ್ವಾನಿಸುವಾಗ ಪತ್ರಿಕೋದ್ಯಮ ಪದವೀಧರರಿಗೆ ಪ್ರಥಮ ಆದ್ಯತೆ ನೀಡಲಾರಂಭಿಸಿವೆ. ಈ ಅಂಶವನ್ನು ಗಮನಿಸಿದರೆ ಈ ಶಿಕ್ಷಣವನ್ನು ಪತ್ರಿಕಾಲಯಗಳಲ್ಲಿ ತಡವಾಗಿಯಾದರೂ ಗಂಭೀರವಾಗಿ

ಪತ್ರಿಕೋದ್ಯಮದಲ್ಲಿ ಉದ್ಯೋಗದ ಅವಕಾಶಗಳು

ಇದು ಬಹು ಮುಖ್ಯವಾದ ಸಂಗತಿ. ಪತ್ರಿಕೋದ್ಯಮದಲ್ಲಿ ಸ್ನಾತಕೋತ್ತರ ಪದವಿ ಮುಗಿಸಿದ ಬಳಿಕ ಮುಂದೇನು ಎಂಬ ಪ್ರಶ್ನೆ ಕಾಡುತ್ತದೆ. ಪತ್ರಿಕೋದ್ಯಮದಲ್ಲಿ ಎಂ.ಎ. ಪಾಸು ಮಾಡಿದವರಿಗೆ ಉದ್ಯೋಗಾವಕಾಶಗಳು ಸಾಕಷ್ಟಿವೆ.

ಮೊದಲನೆಯದಾಗಿ, ಪತ್ರಿಕಾ ಕಚೇರಿಯಲ್ಲಿ ವರದಿಗಾರ ಅಥವಾ ಉಪಸಂಪಾದಕರಾಗಿ ಕೆಲಸ ಗಿಟ್ಟಿಸಿಕೊಳ್ಳಬಹುದು. ಆರಂಭದಲ್ಲಿ ಟ್ರೇನಿ ಅಥವಾ ಅಪ್ರೆಂಟಿಸ್ ವರದಿಗಾರ ಅಥವಾ ಉಪಸಂಪಾದಕರೆಂದು ಕೆಲಸಕ್ಕೆ ತೆಗೆದುಕೊಳ್ಳಬಹುದು. ಸೇವೆ ಖಾಯಂ ಆದ ಬಳಿಕ ಅಭ್ಯರ್ಥಿಯ ಆಸಕ್ತಿ, ಪರಿಣತಿ ಆಧಾರದ ಮೇಲೆ ಸಂಪಾದಕೀಯ ವಿಭಾಗದ ಬೇರೆ ಬೇರೆ ವಿಭಾಗಗಳಲ್ಲಿ ಕೆಲಸ ಮಾಡಬೇಕಾಗುವುದು.

ಪತ್ರಿಕೋದ್ಯಮ ಪದವೀಧರರು ದೂರದರ್ಶನ ಹಾಗೂ ಆಕಾಶವಾಣಿ ವಾರ್ತೆ/ಸುದ್ದಿ ವಿಭಾಗಗಳಲ್ಲಿ ಉಪಸಂಪಾದಕ/ವರದಿಗಾರರಾಗಿ ಕೆಲಸಕ್ಕೆ ಸೇರಬಹುದು. ಖಾಸಗಿ ಚಾನೆಲ್‌ಗಳು ಆರಂಭಿಸಿರುವ ವಾರ್ತಾ ವಿಭಾಗದಲ್ಲೂ ಉಪಸಂಪಾದಕ/ವರದಿಗಾರರಾಗಿ ಸೇರಬಹುದು.

ಸರ್ಕಾರಿ ಹಾಗೂ ಖಾಸಗಿ ರಂಗದ ಉದ್ಯಮಗಳಲ್ಲಿ ಮತ್ತು ಪ್ರಮುಖ ಸಂಸ್ಥೆಗಳಲ್ಲಿ ಪತ್ರಿಕೋದ್ಯಮ ಪದವೀಧರರು ಸಾರ್ವಜನಿಕ ಸಂಪರ್ಕ ಅಧಿಕಾರಿ (Public Relations Officer) ಯಾಗಿ ಕೆಲಸ ಪಡೆಯಬಹುದು.

ಪತ್ರಿಕೋದ್ಯಮ ಪದವೀಧರರು ರಾಜ್ಯ ಹಾಗೂ ಕೇಂದ್ರ ಸರ್ಕಾರದ ವಾರ್ತಾ ಹಾಗೂ ಪ್ರಚಾರ ಇಲಾಖೆಯಲ್ಲಿ ಪ್ರಚಾರಾಧಿಕಾರಿ, ಕ್ಷೇತ್ರ ಪ್ರಚಾರಾಧಿಕಾರಿ, ಸಹಾಯಕ ಪ್ರಚಾರಾಧಿಕಾರಿಯಾಗಿ ಕೆಲಸಕ್ಕೆ ಸೇರಬಹುದು.

ಪತ್ರಿಕೋದ್ಯಮ ಕೋರ್ಸಿನಲ್ಲಿ ಛಾಯಾಚಿತ್ರ ಪತ್ರಿಕೋದ್ಯಮ (Photo journalism)ವನ್ನು ವಿಶೇಷವಾಗಿ ಅಧ್ಯಯನ ಮಾಡಿದ್ದರೆ, ಫೋಟೋ ಜರ್ನಲಿಸ್ಟ್ ಆಗಿ ಕೆಲಸ ಮಾಡಬಹುದು.

ಪ್ರಮುಖ ಜಾಹೀರಾತು ಸಂಸ್ಥೆ (Advertising Agency) ಗಳಲ್ಲಿ ಪತ್ರಿಕೋದ್ಯಮ ಪದವೀಧರರು 'ಕಾಪಿ ರೈಟರ್' ಆಗಿ ಕೆಲಸ ಗಿಟ್ಟಿಸಬಹುದು. ಅಲ್ಲದೇ ಮೀಡಿಯಾ ಮ್ಯಾನೇಜರ್, ಮೀಡಿಯಾ ಪ್ಲಾನರ್, ಮೀಡಿಯಾ ಆಪರೇಶನ್ ಮ್ಯಾನೇಜರ್ ಆಗಿ ಕೂಡ ಕೆಲಸ ಪಡೆಯಬಹುದು.

ಕೇಂದ್ರ ಸರ್ಕಾರದ ಪ್ರೆಸ್ ಇನ್‌ಫಾರ್ಮೇಶನ್ ಬ್ಯೂರೋದಲ್ಲಿ ವಾರ್ತಾ ಸಹಾಯಕ ಅಧಿಕಾರಿಯಾಗಿ ಉದ್ಯೋಗ ಪಡೆಯಬಹುದು.

ಕಲಿಕೆಯಲ್ಲಿ ಆಸಕ್ತಿಯಿದ್ದರೆ ಪತ್ರಿಕೋದ್ಯಮ ಪ್ರಾಧ್ಯಾಪಕರಾಗಬಹುದು.

ಇಷ್ಟೇ ಏನು? ಸಾಕಷ್ಟು ಹಣ, ಉತ್ತಮ ಬರವಣಿಗೆ, ಸಾಕಷ್ಟು ಧೈರ್ಯವಿದ್ದರೆ, ಪತ್ರಿಕೆಯನ್ನೇ ಆರಂಭಿಸಬಹುದು.

ಪರಿಗಣಿಸಲಾಗುತ್ತಿದೆ ಎಂದು ಹೇಳಬಹುದು.

ಇಂದು ಪರಿಸ್ಥಿತಿ ಎಷ್ಟು ಸುಧಾರಿಸಿದೆ ಯೆಂದರೆ, ಪತ್ರಿಕಾ ಕಚೇರಿಯಲ್ಲಿ ವರದಿಗಾರ ಅಥವಾ ಉಪಸಂಪಾದಕನಾಗಲು ಪತ್ರಿಕೋದ್ಯಮ ಶಿಕ್ಷಣದಲ್ಲಿ ಪದವಿಯನ್ನು ಪ್ರಮುಖವಾಗಿ ಪರಿಗಣಿಸಲಾಗುತ್ತಿದೆ. ಭಾವೀ ಪತ್ರಕರ್ತರಾಗಬಯಸುವವರು ಈ ನಿಟ್ಟಿನಲ್ಲಿ ಗಮನಹರಿಸುವುದು ಅಗತ್ಯ. ಈ ದೃಷ್ಟಿಯಿಂದ ಪತ್ರಿಕೋದ್ಯಮ ಶಿಕ್ಷಣ ಮಹತ್ವವನ್ನು ಪಡೆಯುತ್ತಿದೆ.

ಭಾರತದಲ್ಲಿ ಪತ್ರಿಕೋದ್ಯಮ ಶಿಕ್ಷಣ ಬೆಳೆದು ಬಂದ ರೀತಿಯನ್ನು ಸಂಕ್ಷಿಪ್ತವಾಗಿ ಗಮನಿಸೋಣ. ವಿಶ್ವವಿದ್ಯಾಲಯ ಮಟ್ಟದಲ್ಲಿ ಪತ್ರಿಕೋದ್ಯಮ ಡಿಪ್ಲೋಮ ಕೋರ್ಸ್‌ನ್ನು ಮೊಟ್ಟ ಮೊದಲಿಗೆ ಆರಂಭಿಸಿದ ಕೀರ್ತಿ ಅಲಿಘಡ್ ಮುಸ್ಲಿಂ ವಿಶ್ವವಿದ್ಯಾಲಯಕ್ಕೆ ಸಲ್ಲಬೇಕು. ೧೯೪೮ರಲ್ಲಿ ಅಲ್ಲಿ ಈ ಕೋರ್ಸ್‌ನ್ನು ಆರಂಭಿಸಲಾಯಿತು. ದುರದೃಷ್ಟವಶಾತ್, ಎರಡು ವರ್ಷಗಳ ಅನಂತರ ಈ ಕೋರ್ಸ್‌ನ್ನು ಸ್ಥಗಿತಗೊಳಿಸಲಾಯಿತು. ನಲವತ್ತು ಹಾಗೂ ಐವತ್ತರ ದಶಕಗಳಲ್ಲಿ ಅಲಿಘಡ್ ವಿಶ್ವವಿದ್ಯಾಲಯದ ನಿರಾಶಾದಾಯಕ ಪ್ರಯೋಗದ ಬಳಿಕವೂ ಕೆಲವು ವಿಶ್ವವಿದ್ಯಾಲಯಗಳಲ್ಲಿ ಪತ್ರಿಕೋದ್ಯಮ ಶಿಕ್ಷಣ ಆರಂಭಿಸಲಾಯಿತಾದರೂ ಅವೂ ಕೂಡ ಅದೇ ಪಾಡನ್ನು ಅನುಭವಿಸಬೇಕಾಯಿತು. ೧೯೬೦ರ ಅವಧಿಯಲ್ಲಿ ಆರು ವಿಶ್ವವಿದ್ಯಾಲಯಗಳಲ್ಲಿ ಪತ್ರಿಕೋದ್ಯಮ ಶಿಕ್ಷಣ ನೀಡಲಾಗುತ್ತಿತ್ತು. ೧೯೮೦ರಲ್ಲಿ ಈ ಸಂಖ್ಯೆ ೨೫ಕ್ಕೇರಿತು. ಪ್ರಸ್ತುತ ದೇಶದ ೪೫ ವಿಶ್ವವಿದ್ಯಾಲಯಗಳಲ್ಲಿ ಪತ್ರಿಕೋದ್ಯಮ ಶಿಕ್ಷಣ ನೀಡಲಾಗುತ್ತಿದೆ.

ನಮ್ಮ ರಾಜ್ಯದಲ್ಲಿರುವ ಆರು ವಿ.ವಿ.ಗಳ ಪೈಕಿ ಕರ್ನಾಟಕ, ಮೈಸೂರು, ಮಂಗಳೂರು ಮತ್ತು ಬೆಂಗಳೂರು ವಿ.ವಿ.ಗಳಲ್ಲಿ ಪತ್ರಿಕೋದ್ಯಮ ಸ್ನಾತಕೋತ್ತರ ವಿಭಾಗಗಳಿವೆ. ಇವುಗಳ ಪೈಕಿ ಮೈಸೂರು ವಿ.ವಿ. ಪತ್ರಿಕೋದ್ಯಮ ವಿಭಾಗ ಅತಿ ಹಳೆಯದು. ರಾಜ್ಯದಲ್ಲಿ ಡಿಗ್ರಿಮಟ್ಟದಲ್ಲಿ ಕೂಡ ಪತ್ರಿಕೋದ್ಯಮ ಶಿಕ್ಷಣವನ್ನು ಸಮಾರು ೨೦ ಕಾಲೇಜುಗಳಲ್ಲಿ ನೀಡಲಾಗುತ್ತಿದೆ. ಬೆಂಗಳೂರಿನಲ್ಲೊಂದೇ ಸುಮಾರು ೧೨ ಕಾಲೇಜುಗಳಲ್ಲಿ ಪದವಿ ಮಟ್ಟದಲ್ಲಿ ಐಚ್ಛಿಕ ವಿಷಯವಾಗಿ ಪತ್ರಿಕೋದ್ಯಮವನ್ನು ಅಳವಡಿಸಲಾಗಿದೆ. ಮೈಸೂರಿನ ಮಹಾರಾಜ ಕಾಲೇಜು, ಬೆಂಗಳೂರಿನ ಮೌಂಟ್ ಕಾರ್ಮೆಲ್ ಕಾಲೇಜ್, ಎನ್.ಎಂ.ಕೆ.ಆರ್.ವಿ. ಕಾಲೇಜು, ವೀರೇಂದ್ರ ಪಾಟೀಲ ಕಾಲೇಜು, ಜ್ಯೋತಿ ನಿವಾಸ ಕಾಲೇಜ್, ಕ್ರೈಸ್ಟ್‌ಕಾಲೇಜ್



ಮತ್ತು ಉಜಿರೆಯ ಎಸ್.ಡಿ.ಎಂ. ಕಾಲೇಜು ಪ್ರಮುಖವಾಗಿವೆ. ಶಿರಸಿಯಲ್ಲಿರುವ ಎಂ.ಎಂ. ಕಲಾ ಮತ್ತು ವಿಜ್ಞಾನ ಕಾಲೇಜು ಮತ್ತು ಧಾರವಾಡದ ಕರ್ನಾಟಕ ಕಾಲೇಜುಗಳಲ್ಲಿ ಪತ್ರಿಕೋದ್ಯಮ ಕೋರ್ಸ್ ಆರಂಭಿಸಲು ನಿರ್ಧರಿಸಲಾಗಿದೆ.

ಇದರ ಜತೆಗೆ ಕೆಲವು ಖಾಸಗಿ ಸಂಸ್ಥೆಗಳು ಕೂಡ ಪತ್ರಿಕೋದ್ಯಮ ಡಿಪ್ಲೋಮಾ ಶಿಕ್ಷಣವನ್ನು ನೀಡುತ್ತಿವೆ. ಅವುಗಳಲ್ಲಿ ಪ್ರಮುಖವಾದವುಗಳೆಂದರೆ ಬೆಂಗಳೂರಿನ ಏಷ್ಯನ್ ಕಾಲೇಜ್ ಆಫ್ ಜರ್ನಲಿಸಂ, ಭಾರತೀಯ ವಿದ್ಯಾಭವನ ಹಾಗೂ ಮಿಡಿಯಾ ಸೆಂಟರ್.

ಇದಲ್ಲದೆ ಮೈಸೂರು ವಿಶ್ವವಿದ್ಯಾಲಯದಲ್ಲಿ ಅಂಚೆ ತೆರಪಿನ (Correspondence Course) ಮೂಲಕ ಪತ್ರಿಕೋದ್ಯಮ ಶಿಕ್ಷಣವನ್ನು ಪಡೆಯಬಹುದಾಗಿದೆ.

ಸಂಬಳವೆಷ್ಟು?

ಇದು ಇನ್ನೂ ಮುಖ್ಯವಾದ ಪ್ರಶ್ನೆ.

ರಾಜ್ಯಮಟ್ಟದ ದಿನಪತ್ರಿಕೆಗಳಲ್ಲಿ ಪ್ರಜಾವಾಣಿ, ಕನ್ನಡಪ್ರಭ, ಸಂಯುಕ್ತ ಕರ್ನಾಟಕ ಹಾಗೂ ಉದಯವಾಣಿ ಪ್ರಮುಖವಾದವುಗಳು. ಈ ಪತ್ರಿಕೆಗಳನ್ನು ವೇತನ ಮಂಡಲಿ ಅವುಗಳ ಪ್ರಸಾರ ಸಂಖ್ಯೆಯನ್ನು ಆಧರಿಸಿ ವರ್ಗೀಕರಿಸಿರುವುದರಿಂದ ಒಂದೊಂದು ಪತ್ರಿಕೆ ಒಂದೊಂದು ವೇತನ ಪಟ್ಟಿಯನ್ನು ಹೊಂದಿದೆ. ಆದ್ದರಿಂದ ಪತ್ರಿಕೆಗಳಲ್ಲಿನ ವೇತನ ಶ್ರೇಣಿಯನ್ನು ಸ್ಥೂಲವಾಗಿ ಪರಿಶೀಲಿಸೋಣ.

ಈ ಪತ್ರಿಕೆಗಳಲ್ಲಿ ಟ್ರೇನಿ ಅಥವಾ ಅಪ್ರೆಂಟೀಸ್ ವರದಿಗಾರ/ ಉಪಸಂಪಾದಕನಾಗಿ ಕೆಲಸಕ್ಕೆ ಸೇರಿದರೆ ೧೫೦೦ ರೂ. ದಿಂದ

ಮುಂದಿನ ಸಂಚಿಕೆ ನಿರೀಕ್ಷಿಸಿ !

ಒಂದು ಪತ್ರಿಕೆಯ ಕಾರ್ಯಾಲಯ ಹೇಗಿರುತ್ತದೆ? ಅದು ಹೇಗೆ ಕಾರ್ಯನಿರ್ವಹಿಸುತ್ತದೆ? ಪತ್ರಿಕಾ ಕಚೇರಿಯಲ್ಲಿರುವ ವಿಭಾಗಗಳು ಯಾವುವು? ಸಂಪಾದಕ, ಸಹ ಸಂಪಾದಕ, ಉಪ ಸಂಪಾದಕ, ವರದಿಗಾರ, ಪ್ರಧಾನ ವರದಿಗಾರ ಇತ್ಯಾದಿ ಹೆಸರಿನಲ್ಲಿ ಕಾರ್ಯನಿರ್ವಹಿಸುವ ಪ್ರತಿಯೊಬ್ಬ ಪತ್ರಕರ್ತನ ಕರ್ತವ್ಯ ಎಂತಹದು? ಕಾರ್ಯವ್ಯಾಪ್ತಿ ಎಷ್ಟು? ಪತ್ರಿಕೆಗಳಲ್ಲಿ ಸುದ್ದಿ ಪ್ರಕಟವಾಗಲು ಜನರು ಹಣ ನೀಡಬೇಕೆ? ಪತ್ರಿಕೆಗಳು ತಪ್ಪು ಮಾಡಿದಾಗ, ಯಾರಿಗೆ ಹೇಗೆ ದೂರು ನೀಡಬೇಕು? ಓದುಗರಲ್ಲಿ ಇಂತಹ ಅನೇಕ ಪ್ರಶ್ನೆಗಳು ಉಂಟಾಗಿರುತ್ತವೆ. ಈ ಬಗೆಗಿನ ಸಂಪೂರ್ಣ ವಿವರಗಳನ್ನು ''ಬಿಸಿಲ ಬದುಕು'' ಪತ್ರಿಕೆಯ ಸೆಪ್ಟೆಂಬರ್ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು.

ಜೊತೆಗೆ....

ಕರ್ನಾಟಕದಲ್ಲಿ ಪತ್ರಿಕೋದ್ಯಮ ಶಿಕ್ಷಣ ನೀಡುವ ಸಂಸ್ಥೆಗಳ ವಿಳಾಸಗಳನ್ನು ಪ್ರಕಟಿಸಲಾಗುವುದು.

ಸೆಪ್ಟೆಂಬರ್ ಸಂಚಿಕೆ ಆಗಸ್ಟ್ ೧೫ರಂದು ಮಾರುಕಟ್ಟೆಯಲ್ಲಿರುತ್ತದೆ. ಹತ್ತಿರದ ಏಜೆಂಟರಲ್ಲಿ ನಿಮ್ಮ ಪ್ರತಿ ಕಾಯ್ದಿರಿಸಲು ಮರೆಯಬೇಡಿ!

ಸಂಬಳ ಪಡೆಯಬಹುದು. ಒಮ್ಮೆ ಉದ್ಯೋಗ ಖಾಯಂ ಆದರೆ ೪೦೦೦ ರೂ. ಯಿಂದ ೫೫೦೦ರೂ. (ಪತ್ರಿಕೆ ಆಧರಿಸಿ) ಸಂಬಳ ಸಿಗುವುದು. ಇದಲ್ಲದೇ ಉಳಿದ ಭತ್ಯೆಗಳು ಪ್ರತ್ಯೇಕ.

ದೂರದರ್ಶನ ಹಾಗೂ ಆಕಾಶವಾಣಿಯಲ್ಲಿ ವರದಿಗಾರ/ ಉಪಸಂಪಾದಕರಾಗಿ ಕೆಲಸಕ್ಕೆ ಸೇರುವವರಿಗೆ ಸಮಾರು ೨೮೦೦ರೂ. ಯಿಂದ ೩೫೦೦ರೂ. ಸಂಬಳ ಲಭಿಸುವುದು.

ಸಾರ್ವಜನಿಕ ಸಂಪರ್ಕ ಅಧಿಕಾರಿಯಾಗಿ ಸೇರುವವರ ಸಂಬಳ ಅವರು ಸೇರಿದ ಸಂಸ್ಥೆ ಅಥವಾ ಕಂಪನಿಯನ್ನು ಆಧರಿಸಿರುತ್ತದೆ. ಈ ಮಾತು ಜಾಹೀರಾತು ಸಂಸ್ಥೆಗಳಲ್ಲಿ ಕೆಲಸ ಮಾಡುವ ಕಾಪಿರೈಟರ್‌ಗಳಿಗೂ ಅನ್ವಯಿಸುತ್ತದೆ.

ರಾಜ್ಯ ಮತ್ತು ಕೇಂದ್ರ ಸರ್ಕಾರದ ವಾರ್ತಾ ಮತ್ತು ಪ್ರಚಾರ ಇಲಾಖೆಗಳಲ್ಲಿನ ವಾರ್ತಾಧಿಕಾರಿ ಹಾಗೂ ಪ್ರಚಾರಾಧಿಗಳಿಗೆ ಸಹ ೨೮೦೦ ರೂ. ಯಿಂದ ೪೦೦೦ರೂ. ವರೆಗೆ ವೇತನ ಬರುತ್ತದೆ.

ಪತ್ರಿಕೋದ್ಯಮ ಕೋರ್ಸಿಗೆ ಸೀಟು ಗಿಟ್ಟಿಸುವುದು ಹೇಗೆ?

ವಿಶ್ವವಿದ್ಯಾಲಯಗಳಲ್ಲಿ

ಪತ್ರಿಕೋದ್ಯಮ (ಸ್ನಾತಕೋತರ) ಶಿಕ್ಷಣ ಪಡೆಯಲು ಮೂಲ ಅರ್ಹತೆ ಯಾವುದೇ ವಿಷಯದಲ್ಲಿ ಪದವಿ. ಪದವಿಯಲ್ಲಿ ಐಚ್ಛಿಕ ವಿಷಯವಾಗಿ ಪತ್ರಿಕೋದ್ಯಮವನ್ನು ಅಭ್ಯಸಿಸಿದ್ದರೆ ಅಂಥವರಿಗೆ ಆದ್ಯತೆ ನೀಡಲಾಗುವುದು.

ಅಭ್ಯರ್ಥಿಗಳ ಆಯ್ಕೆಗೆ ಎಲ್ಲ ವಿಶ್ವವಿದ್ಯಾಲಯಗಳೂ ಸಾಮಾನ್ಯ ಪ್ರವೇಶ ಪರೀಕ್ಷೆಯನ್ನು ಏರ್ಪಡಿಸುತ್ತವೆ. ಸೀಟುಗಳು ೧೫-೨೦

ಕಾಲೇಜುಗಳಲ್ಲಿ

ಕಾಲೇಜಿನಲ್ಲಿ ಪತ್ರಿಕೋದ್ಯಮವನ್ನು ಮೂರು ಮೇಜರ್‌ಗಳ ಪೈಕಿ ಒಂದನ್ನಾಗಿ ಆಯ್ಕೆ ಮಾಡಿಕೊಳ್ಳಬಹುದು. ಇದಕ್ಕೆ ಪ್ರವೇಶ ಪರೀಕ್ಷೆ ಇರುವುದಿಲ್ಲ. ಅಪೇಕ್ಷಿತ ಅಭ್ಯರ್ಥಿಗಳಿಗೆ ಸೀಟು ಸಿಗುತ್ತದೆ.

ಸಾಮಾನ್ಯವಾಗಿ ಸೀಟುಗಳ ಸಂಖ್ಯೆಗಳಿಗೆ ಕಡ್ಡಾಯ ಮಿತಿ ಇರುವುದಿಲ್ಲ.

ಭಾರತೀಯ ವಿದ್ಯಾಭವನ

ಪ್ರವೇಶ ಪರೀಕ್ಷೆ ಮೂಲಕ:

ಇಲ್ಲಿ ಪತ್ರಿಕೋದ್ಯಮ ಡಿಪ್ಲೋಮಾ ಅಭ್ಯರ್ಥಿಗಳನ್ನು ಆಯ್ಕೆಮಾಡಲಾಗುತ್ತದೆ. ಸಾಮಾನ್ಯವಾಗಿ ಒಂದು ವಿಷಯದ ಮೇಲೆ ಪ್ರಬಂಧ ಬರೆಯಲು ಸೂಚಿಸಲಾಗುತ್ತದೆ. ಸೀಟುಗಳಿಗೆ ಕಡ್ಡಾಯ ಮಿತಿ ಇಲ್ಲ. ೩೦-೪೦ ವಿದ್ಯಾರ್ಥಿಗಳನ್ನು ಆಯ್ಕೆ ಮಾಡಲಾಗುತ್ತದೆ.

ಅಭ್ಯರ್ಥಿಯು ಯಾವುದೇ ವಿಷಯದಲ್ಲಾದರೂ ಪದವಿ ಹೊಂದಿರಬೇಕು. ವಾರದಲ್ಲಿ ಮೂರು ದಿನ ಕ್ಲಾಸುಗಳು. ಅದೂ ಸಂಜೆ ೬ ಗಂಟೆ ನಂತರ. ಉದ್ಯೋಗದಲ್ಲಿರುವವರಿಗೆ ಈ ಕೋರ್ಸ್ ಸಹಾಯಕ.

ಏಷ್ಯನ್ ಕಾಲೇಜ್ ಆಫ್ ಜರ್ನಲಿಸಂ

ಇದು ಒಂಬತ್ತು ತಿಂಗಳ ಅವಧಿಯ ಸ್ನಾತಕೋತ್ತರ ಡಿಪ್ಲೋಮಾ ಕೋರ್ಸ್. ಪೂರ್ಣಾವಧಿ ತರಬೇತಿ ನೀಡಲಾಗುತ್ತದೆ. ಕನ್ನಡ ಮತ್ತು ಇಂಗ್ಲಿಷ್ ಪತ್ರಿಕೋದ್ಯಮದಲ್ಲಿ ತರಬೇತಿ.

ಪ್ರವೇಶ ಪರೀಕ್ಷೆ ಮೂಲಕ ಅಭ್ಯರ್ಥಿಗಳ ಆಯ್ಕೆ. ಪ್ರವೇಶ ಪರೀಕ್ಷೆಯನ್ನು ವಿಷಯಗಳು: ಸಾಮಾನ್ಯ ಜ್ಞಾನ ಹಾಗೂ ಕನ್ನಡ (ಕನ್ನಡ ವಿದ್ಯಾರ್ಥಿಗಳಿಗೆ) ಸಾಮಾನ್ಯ ಜ್ಞಾನ ಹಾಗೂ ಇಂಗ್ಲೀಷ್ (ಇಂಗ್ಲಿಷ್ ವಿದ್ಯಾರ್ಥಿಗಳಿಗೆ).

ಕೋರ್ಸ್ ಮುಗಿದ ಬಳಿಕ ಉದ್ಯೋಗಕ್ಕೆ ನೆರವಾಗಲು ಕ್ಯಾಂಪಸ್ ಸಂದರ್ಶನ.

ಕೋರ್ಸ್ ಫೀಸ್ :

ಮೂರು ಸಮ ಕಂತುಗಳಲ್ಲಿ ೧೫ ಸಾವಿರ ರೂಪಾಯಿ.

ಮಿಡಿಯಾ ಸೆಂಟರ್

ಇಲ್ಲಿ ಸೇರಲು ವಯಸ್ಸಿನ ಮಿತಿಯಿಲ್ಲ. ಯಾರು ಬೇಕಾದರೂ ಸೇರಬಹುದು. ಕೋರ್ಸ್ ಅವಧಿ ಆರು ತಿಂಗಳು. ವಾರದಲ್ಲಿ ಮೂರು ದಿನ ಕ್ಲಾಸ್. ಸಂಜೆ ೬ ಗಂಟೆಯಿಂದ ಒಂದೂವರೆ ಗಂಟೆ ಕ್ಲಾಸ್.

ಮೂವತ್ತಕ್ಕಿಂತ ಜಾಸ್ತಿ ಅರ್ಜಿ ಬಂದರೆ ಮಾತ್ರ ಪ್ರವೇಶ ಪರೀಕ್ಷೆ ಮೂಲಕ ಆಯ್ಕೆ.

ನುರಿತ ಪತ್ರಕರ್ತರಿಂದ ಪಾಠ.

ಬಾಯ್ಲರ್ ಪರೀಕ್ಷೆ

ಆಗಸ್ಟ್ ತಿಂಗಳಲ್ಲಿ ನಡೆಯಲಿರುವ ಬಾಯ್ಲರ್ ಆಪರೇಷನ್ ಎಂಜಿನಿಯರ್‌ಗಳ ಪರೀಕ್ಷೆಗೆ ಬಾಯ್ಲರ್ ಆಪರೇಷನ್ ಎಂಜಿನಿಯರ್‌ಗಳ ಪರೀಕ್ಷಾ ಮಂಡಲಿ ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಿದೆ. ಭರ್ತಿ ಮಾಡಿದ ಅರ್ಜಿಗಳನ್ನು ಜುಲೈ ೨೦ರೊಳಗೆ ಕಳುಹಿಸಲು ಕೋರಲಾಗಿದೆ.

ಅರ್ಜಿ ನಮೂನೆ ಹಾಗೂ ಹೆಚ್ಚಿನ ವಿವರಗಳನ್ನು ಕಾರ್ಯದರ್ಶಿ, ಬಾಯ್ಲರ್ ಆಪರೇಷನ್ ಎಂಜಿನಿಯರ್‌ಗಳ ಪರೀಕ್ಷಾ ಮಂಡಲಿ, ನಂ.೨, ಬಿ.ಬಿ.ನಾಯ್ಡು ರಸ್ತೆ, ಗಾಂಧಿನಗರ, ಬೆಂಗಳೂರು-೧ ಇವರಿಗೆ ಸ್ವವಿಳಾಸವಿರುವ ನಾಲ್ಕು ರೂಪಾಯಿಗಳ ಅಂಚೆ ಚೀಟಿ ಲಗತ್ತಿಸಿದ ಲಕೋಟೆ ಕಳುಹಿಸಿ ಪಡೆಯಲು ಪ್ರಕಟಣೆ ತಿಳಿಸಿದೆ.

ಕನ್ನಡ ಎಂ.ಎ.

ಮುಂಬೈ ವಿಶ್ವವಿದ್ಯಾನಿಲಯದ ಕನ್ನಡ ವಿಭಾಗ, ಅರ್ಹ ವಿದ್ಯಾರ್ಥಿಗಳಿಂದ ಕನ್ನಡ ಎಂ.ಎ. ತರಗತಿಗಳಿಗೆ ಅರ್ಜಿಗಳನ್ನು ಆಹ್ವಾನಿಸಿದೆ. ಸೇರಬಯಸುವವರು ಹೆಚ್ಚಿನ ವಿವರಗಳಿಗೆ ವಿಭಾಗದ ಕಚೇರಿಯಿಂದ ಮಾಹಿತಿ ಪಡೆಯಬಹುದು.

ಅರ್ಜಿಗಳನ್ನು ಅಂಚೆ ಮೂಲಕ ತರಿಸಿಕೊಳ್ಳುವ ಅಭ್ಯರ್ಥಿಗಳು ಮುಖ್ಯಸ್ಥರು, ಕನ್ನಡ ವಿಭಾಗ, ಮುಂಬೈ ವಿಶ್ವವಿದ್ಯಾಲಯ, ಕಾಲಿನಾ ಕ್ಯಾಂಪಸ್, ವಿದ್ಯಾನಗರಿ, ಮುಂಬಯಿ-೯೮ ಈ ವಿಳಾಸಕ್ಕೆ ರೂ.೫೦ ಡಿ.ಡಿ. ಅಥವಾ ಎಂ.ಓ. ಮಾಡಿ ಪಡೆದುಕೊಳ್ಳುವುದು. ಇದರ ಜತೆಯಲ್ಲಿ ಸ್ವವಿಳಾಸದ ಅಂಚೆ ಕವರ್ ಲಗತ್ತಿಸಬೇಕು. ಆಯ್ಕೆಯಾದ ಅರ್ಹ ವಿದ್ಯಾರ್ಥಿಗಳಿಗೆ ಶಿಷ್ಯವೇತನ ನೀಡಲಾಗುವುದು. ಭರ್ತಿ ಮಾಡಿದ ಅರ್ಜಿಗಳನ್ನು ಜುಲೈ ೩೦ರೊಳಗೆ ಮೇಲಿನ ವಿಳಾಸಕ್ಕೆ ಕಳುಹಿಸಬೇಕು.

ಎಲ್ಲರಿಗೂ ನಿಲುಕುವ ಅಂಚೆ ಶಿಕ್ಷಣ

○ ರಾಜಲಕ್ಷ್ಮೀ ಸೋಮಣ್ಣ

ಅಭಿವೃದ್ಧಿಶೀಲ ರಾಷ್ಟ್ರವಾದ ಭಾರತ ದಂತಹ ದೇಶದಲ್ಲಿ ಉನ್ನತ ಶಿಕ್ಷಣದ ಬೇಡಿಕೆಯನ್ನು ದೂರ ಶಿಕ್ಷಣ ವಿಧಾನ ಮಾತ್ರವೇ ಪೂರೈಸಬಲ್ಲುದು. ದೂರ ಶಿಕ್ಷಣ (Correspondence Course)ದ ಶಿಕ್ಷಣ ಕ್ರಮಗಳನ್ನು ಈ ಕೆಳಕಂಡ ವಿದ್ಯಾರ್ಥಿ ವರ್ಗಗಳಿಗೆಂದೇ ವಿಶೇಷವಾಗಿ ರಚಿಸಲಾಗಿದೆ.

೧. ಆರ್ಥಿಕ ತೊಂದರೆ ಹಾಗೂ ಇತರ ಪರಿಸ್ಥಿತಿಗಳಿಂದಾಗಿ ತಮ್ಮ ಶಾಲಾ ಕಾಲೇಜುಗಳ ನಿಯತ ಶಿಕ್ಷಣವನ್ನು ಸ್ಥಗಿತಗೊಳಿಸಿದ ವಿದ್ಯಾರ್ಥಿಗಳಿಗೆ.

೨. ಭೌಗೋಳಿಕವಾಗಿ ತುಂಬ ದೂರ ಪ್ರದೇಶದಲ್ಲಿ ವಾಸ ಮಾಡುತ್ತಿರುವ ವಿದ್ಯಾರ್ಥಿಗಳಿಗೆ.

೩. ನಿಯತ ಕಾಲೇಜು/ ವಿಶ್ವವಿದ್ಯಾನಿಲಯದ ವಿಭಾಗಗಳಲ್ಲಿ ಸಾಧ್ಯವಾಗದ ವಯಸ್ಕರಿಗೆ.

೪. ಪೂರ್ಣಕಾಲಿಕ ವಿದ್ಯಾರ್ಥಿಗಳಂತೆ ಅಧ್ಯಯನ ಮುಂದುವರಿಸಲು ಸಾಧ್ಯವಾಗದ ಉದ್ಯೋಗಸ್ಥ ವಯಸ್ಕರಿಗೆ.

ನಮ್ಮ ದೇಶದ, ಅದರಲ್ಲೂ ನಮ್ಮ ರಾಜ್ಯದ ಶೈಕ್ಷಣಿಕ ಅಗತ್ಯವನ್ನು ಗಮನದಲ್ಲಿರಿಸಿಕೊಂಡು ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ ಸ್ಥಾಪಿತವಾಗಿದೆ.

ಮೈಸೂರಿನ ಮಾನಸ ಗಂಗೋತ್ರಿ ಆವರಣದ ವಾಯುವ್ಯ ದಿಕ್ಕಿನ ಕೊನೆಯಲ್ಲಿ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ ಸ್ಥಾಪಿತವಾಗಿದೆ. ಮೈಸೂರು ನಗರ ಕೇಂದ್ರ ಭಾಗದಿಂದ ೫ ಕಿಲೋ ಮೀಟರ್ ದೂರದಲ್ಲಿರುವ ಗಂಗೋತ್ರಿ ಆವರಣವು ಶೈಕ್ಷಣಿಕ ಆಸಕ್ತಿ ಹಾಗೂ ಮುಂದುವರಿಕೆಗೆ ಅನುಗುಣವಾದ ಪ್ರಶಾಂತ ಮತ್ತು ಸೂಕ್ತ ವಾತಾವರಣವನ್ನು ಹೊಂದಿದೆ.

ಸದ್ಯಕ್ಕೆ ವಿಶ್ವವಿದ್ಯಾನಿಲಯ ಆಡಳಿತ ಕಛೇರಿ, ಬೋಧನ ವಿಭಾಗಗಳು, ಉಪನ್ಯಾಸ ಕೊಠಡಿಗಳನ್ನು ಹೊಂದಿದೆ. ಸುಸಜ್ಜಿತವಾದ ಗ್ರಂಥಾಲಯವಿದೆ. ಪರೀಕ್ಷೆಗಳಿಗೆ, ಸಂಪರ್ಕ ಕಾರ್ಯಕ್ರಮಗಳಿಗೆಂದು ಇಲ್ಲಿಗೆ ಬರುವ ವಿದ್ಯಾರ್ಥಿಗಳಿಗೆ ಸ್ವಲ್ಪ ಮಟ್ಟಿನ ವಸತಿ ಸೌಕರ್ಯ ಒದಗಿಸಲು ಕೆಲವು ಕುಟೀರಗಳು ಇವೆ.

★ ೧೮ ವರ್ಷ ವಯಸ್ಸಿನ ವ್ಯಕ್ತಿಗಳಿಗೆ ಬಿ.ಎ. / ಬಿ.ಕಾಂ ಪದವಿ ಶಿಕ್ಷಣ ಕ್ರಮಕ್ಕೆ ಸೇರಲು ಹಾಗೂ ೨೧ ವರ್ಷ ವಯಸ್ಸಾದ ವ್ಯಕ್ತಿಗಳಿಗೆ ಎಂ.ಎ/ಎಂ.ಕಾಂ. ಪದವಿ ಶಿಕ್ಷಣ ಕ್ರಮಗಳಿಗೆ ಸೇರಲು ಕನಿಷ್ಠ ವಿದ್ಯಾರ್ಹತೆಯು ಅಗತ್ಯವಿರುವುದಿಲ್ಲ.

★ ಅರ್ಹತಾ ಪರೀಕ್ಷೆಯಲ್ಲಿ ತೇರ್ಗಡೆಯಾದ ವ್ಯಕ್ತಿಗಳು ಮುಂದಿನ ಶಿಕ್ಷಣ ಕ್ರಮಕ್ಕೆ ಪ್ರವೇಶ ಪಡೆಯಬಹುದು. ವಯಸ್ಸಿನ ಯಾವ ಮಿತಿಯೂ ಇರುವುದಿಲ್ಲ.

ಈ ಎರಡು ನಿಯಮಾವಳಿಗಳ ವಿದ್ಯಾರ್ಥಿಗಳಿಗೂ ಸಮಾನ ಪಠ್ಯಕ್ರಮ/ ಸಮಾನ ಪರೀಕ್ಷೆ ವಿಧಾನವಿರುತ್ತದೆ.

ವಿಳಾಸ:
ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ
ಮಾನಸಗಂಗೋತ್ರಿ,
ಮೈಸೂರು - ೫೭೦ ೦೦೬.

ವಿಶ್ವವಿದ್ಯಾನಿಲಯ ನೀಡುವ ವಿವಿಧ ಶಿಕ್ಷಣಗಳು

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ ೧೯೯೭-೯೮ರ ಶೈಕ್ಷಣಿಕ ವರ್ಷದಲ್ಲಿ ಈ ಕೆಳಗೆ ಕಾಣಿಸಿರುವ ಶಿಕ್ಷಣ ಕ್ರಮಗಳನ್ನು ನೀಡುತ್ತದೆ.

ಸ್ನಾತಕಪೂರ್ವ ಶಿಕ್ಷಣಗಳು

೧. ಬಿ.ಎ. ಪದವಿ (೩ ವರ್ಷಗಳು)
೨. ಬಿ.ಕಾಂ. ಪದವಿ (೩ ವರ್ಷಗಳು)
೩. ಬಿ.ಇಡಿ ಪದವಿ (೨೪ ತಿಂಗಳು)

ಸ್ನಾತಕೋತ್ತರ ಶಿಕ್ಷಣಗಳು

(ಎರಡು ವರ್ಷ)

೧. ಇಂಗ್ಲೀಷ್ ಎಂ.ಎ.
೨. ಕನ್ನಡ ಎಂ.ಎ.
೩. ಹಿಂದಿ ಎಂ.ಎ.
೪. ಉರ್ದು ಎಂ.ಎ.
೫. ಸಂಸ್ಕೃತ ಎಂ.ಎ.
೬. ಇತಿಹಾಸ ಎಂ.ಎ.
೭. ಸಮಾಜ ಶಾಸ್ತ್ರ ಎಂ.ಎ.
೮. ರಾಜ್ಯ ಶಾಸ್ತ್ರ ಎಂ.ಎ.
೯. ಅರ್ಥಶಾಸ್ತ್ರ ಎಂ.ಎ.
೧೦. ಎಂ.ಕಾಂ.
೧೧. ಎಂ.ಇಡಿ.
೧೨. ಎಂ.ಫಿಲ್. (ಶಿಕ್ಷಣ ಶಾಸ್ತ್ರ) (೨ ವರ್ಷಗಳು ನವೆಂಬರ್ ೯೭ರಿಂದ ಪ್ರಾರಂಭ)
೧೩. ಎಂ.ಬಿ.ಎ (೩ ವರ್ಷಗಳು ನವೆಂಬರ್ ೯೭ರಿಂದ ಪ್ರಾರಂಭ)

ಡಿಪ್ಲೊಮ ಶಿಕ್ಷಣಗಳು

(೧ ವರ್ಷ)

೧. ಇಂಗ್ಲೀಷ್ ಸ್ನಾತಕೋತ್ತರ ಡಿಪ್ಲೊಮ
೨. ಮಾರ್ಕೆಟಿಂಗ್ ಮ್ಯಾನೇಜ್‌ಮೆಂಟ್ ಸ್ನಾತಕೋತ್ತರ ಡಿಪ್ಲೊಮ
೩. ಹ್ಯೂಮನ್ ರಿಸೋರ್ಸ್ ಮ್ಯಾನೇಜ್‌ಮೆಂಟ್ ಸ್ನಾತಕೋತ್ತರ ಡಿಪ್ಲೊಮ
೪. ಪ್ರಿಯೂನಿವರ್ಸಿಟಿ ನಂತರದ ಕನ್ನಡ ಡಿಪ್ಲೊಮ
೫. ಪ್ರಿಯೂನಿವರ್ಸಿಟಿ ನಂತರದ ಪತ್ರಿಕೋದ್ಯಮ ಡಿಪ್ಲೊಮ.

ಸರ್ಟೀಫಿಕೇಟ್ ಶಿಕ್ಷಣ

ಕನ್ನಡೇತರರಿಗಾಗಿ ಎಸ್.ಎಸ್. ಎಲ್. ಸಿ ನಂತರದ ಕನ್ನಡ ಸರ್ಟೀಫಿಕೇಟ್ (ಇಂಗ್ಲೀಷ್ ಮತ್ತು ಹಿಂದಿ ಮಾಧ್ಯಮಗಳಲ್ಲಿ)

ಬಿ.ಎ., ಬಿ.ಕಾಂ ಪದವಿ

ಪ್ರವೇಶಾರ್ಹತೆ

ಬಿ.ಎ., ಬಿ.ಕಾಂ ಪದವಿ ಶಿಕ್ಷಣಗಳಿಗೆ

ಪ್ರವೇಶ ಬಯಸುವವರಿಗೆ ಯಾವುದೇ ಬಗೆಯ ಶೈಕ್ಷಣಿಕ ಅರ್ಹತೆಗಳನ್ನು ಒತ್ತಿ ಕೇಳುವುದಿಲ್ಲ.

೧೯೯೭ರ ಜುಲೈ ೧ನೇಯ ತಾರೀಖಿನಂದು ೧೮ ವರ್ಷಗಳಾಗಿರುವ (೩೦-೬-೧೯೭೯ ರಂದು ಅಥವಾ ಮುಂಚೇ ಜನಿಸಿದವರು) ಈ ಎಲ್ಲ ಅಭ್ಯರ್ಥಿಗಳು ಬಿ.ಎ, ಬಿ.ಕಾಂ ಶಿಕ್ಷಣಗಳಿಗೆ ಅರ್ಜಿ ಸಲ್ಲಿಸಲು ಅರ್ಹರು. ಈ ಶಿಕ್ಷಣ ಮೂರು ವರ್ಷದ ಅವಧಿಯದು. ವಯಸ್ಸಿನ ಮೂಲ ಪತ್ರ ಒದಗಿಸಿ ಭೋದನ ಶುಲ್ಕ ಪಾವತಿಸಿದ ಎಲ್ಲಾ ಅರ್ಹ ಅಭ್ಯರ್ಥಿಗಳಿಗೂ ಆಯಾ ಶಿಕ್ಷಣಗಳ ಮೊದಲ ಶೈಕ್ಷಣಿಕ ವರ್ಷಕ್ಕೆ ಸೇರಿಸಿಕೊಳ್ಳಲಾಗುವುದು.

ಅರ್ಜಿಯೊಂದಿಗೆ ವಯಸ್ಸಿನ ಪ್ರಮಾಣ ಪತ್ರ ಸಲ್ಲಿಸಬೇಕು.

ಈ ಪದ್ಧತಿಯ ಮೂಲಕ ಪ್ರವೇಶ ಬಯಸಿ ಅರ್ಜಿ ಸಲ್ಲಿಸುವ ವಿದ್ಯಾರ್ಥಿಗಳು ಅರ್ಹತಾ ಪರೀಕ್ಷೆಯಲ್ಲಿ ತೇರ್ಗಡೆಯಾಗಿರಬೇಕು. ಬಿ.ಎ/ಬಿ.ಕಾಂ ಶಿಕ್ಷಣ ಪ್ರವೇಶಗಳಿಗೆ ಎರಡು ವರ್ಷದ ಪಿ.ಯು.ಸಿಯಲ್ಲಿ ತೇರ್ಗಡೆಯಾಗಿರಬೇಕು. ಎನ್ನುವುದು ಪ್ರವೇಶ ಅರ್ಹತೆಗಳಲ್ಲಿಯ ಒಂದು ನಿಯಮ.

ಬಿ.ಎ.

೧. ಮೂರು ವರ್ಷಗಳ ಬಿ.ಎ ಪದವಿ ಶಿಕ್ಷಣದ ಮೊದಲ ವರ್ಷಕ್ಕೆ ಸೇರುವವರು ಕರ್ನಾಟಕ ರಾಜ್ಯ ಪ್ರಿಯೂನಿವರ್ಸಿಟಿ ಶಿಕ್ಷಣ ಮಂಡಲಿ ನಡೆಸುವ ಎರಡು ವರ್ಷಗಳ ಪರೀಕ್ಷೆಯಲ್ಲಿ ತೇರ್ಗಡೆಯಾದ ಅಭ್ಯರ್ಥಿಗಳು.

ಅಥವಾ

ಮೇಲೆ ಸೂಚಿಸಿದ ಪ್ರಿಯೂನಿವರ್ಸಿಟಿ ಪರೀಕ್ಷೆಗೆ ಸಮಾನವೆಂದು ಪರಿಗಣಿಸುವ ಇತರ ಯಾವುದೇ ಪರೀಕ್ಷೆಯಲ್ಲಿ ತೇರ್ಗಡೆಯಾದ ಅಭ್ಯರ್ಥಿಗಳು.

೨. ೧೨ ವರ್ಷಗಳ ಶಾಲಾ ಶಿಕ್ಷಣವನ್ನು ಯಶಸ್ವಿಯಾಗಿ ಪೂರೈಸಿರುವ ಇತರ ರಾಜ್ಯಗಳ ಅಭ್ಯರ್ಥಿಗಳು (೧೨ ವರ್ಷಗಳ ಶಿಕ್ಷಣ ಎಂದರೆ ೧೦+೨ ಅಥವಾ ೧೧+೧ ಅಥವಾ ಶಿಶುವಿಹಾರ ಶಿಕ್ಷಣ ಹೊರತುಪಡಿಸಿ ೧೨ ವರ್ಷಗಳ ಶಿಕ್ಷಣ ನಂತರದ ಹೈಯರ್ ಸೆಕೆಂಡರಿ ಪರೀಕ್ಷೆ).

೩. ಕರ್ನಾಟಕ ಸರ್ಕಾರದ ವ್ಯಕ್ತಿ ಶಿಕ್ಷಣ ಇಲಾಖೆಯು ನಡೆಸುವ ವೃತ್ತಿ ಶಿಕ್ಷಣ ಕೇಂದ್ರ, ಪ್ರಿಯೂನಿವರ್ಸಿಟಿ ಪರೀಕ್ಷೆಯಲ್ಲಿ ತೇರ್ಗಡೆಯಾದ ಅಭ್ಯರ್ಥಿಗಳು.

ಬಿ.ಕಾಂ.

ಮೂರು ವರ್ಷಗಳ ಬಿ.ಕಾಂ. ಪದವಿ ಶಿಕ್ಷಣದ ಮೊದಲ ವರ್ಷಕ್ಕೆ ಸೇರುವವರೂ ಕರ್ನಾಟಕ ರಾಜ್ಯ ಪ್ರಿಯೂನಿವರ್ಸಿಟಿ ಶಿಕ್ಷಣ ಮಂಡಲಿ ನಡೆಸುವ ಎರಡು ವರ್ಷಗಳ ಪ್ರಿಯೂನಿವರ್ಸಿಟಿ ಪರೀಕ್ಷೆಯಲ್ಲಿ ತೇರ್ಗಡೆಯಾದ ಅಭ್ಯರ್ಥಿಗಳು.

ಅಥವಾ

ಮೇಲೆ ಸೂಚಿಸಿದ ಪ್ರಿಯೂನಿರ್ವಸಿಟಿ ಪರೀಕ್ಷೆಗೆ ಸಮಾನವೆಂದು ಪರಿಗಣಿಸುವ ಇತರ ಯಾವುದೇ ಪರೀಕ್ಷೆಯಲ್ಲಿ ತೇರ್ಗಡೆಯಾದ ಅಭ್ಯರ್ಥಿಗಳು.

ಅಥವಾ

ಕರ್ನಾಟಕ ಸರ್ಕಾರದ ವೃತ್ತಿ ಶಿಕ್ಷಣ ಇಲಾಖೆ ನಡೆಸುವ ವೃತ್ತಿ ಶಿಕ್ಷಣದ ಪ್ರಿಯೂನಿವರ್ಸಿಟಿ ಪರೀಕ್ಷೆಯಲ್ಲಿ ವಾಣಿಜ್ಯ ವಿಷಯಗಳನ್ನು ಅಧ್ಯಯನ ಮಾಡಿ ತೇರ್ಗಡೆಯಾದ ಅಭ್ಯರ್ಥಿಗಳು.

೨. ಕರ್ನಾಟಕ ಸರ್ಕಾರದ ತಾಂತ್ರಿಕ ಶಿಕ್ಷಣ ಇಲಾಖೆ ನಡೆಸುವ ಮೂರು ವರ್ಷಗಳ ಡಿಪ್ಲೊಮ ಇನ್ ಕಮರ್ಷಿಯಲ್ ಸೆಕ್ರಟೇರಿಯಲ್ ಪ್ರಾಕ್ಟಿಸ್ ಪರೀಕ್ಷೆಯಲ್ಲಿ ತೇರ್ಗಡೆಯಾದ ಅಭ್ಯರ್ಥಿಗಳು ನೇರವಾಗಿ ಎರಡನೇ ವರ್ಷದ ಬಿ.ಕಾಂ. ಶಿಕ್ಷಣ ಪ್ರವೇಶಕ್ಕೆ ಅರ್ಹರಾಗುತ್ತಾರೆ.

೩. ಕರ್ನಾಟಕ ಸರ್ಕಾರದ ತಾಂತ್ರಿಕ ಶಿಕ್ಷಣ ಇಲಾಖೆ ನಡೆಸುವ ಮೂರು ವರ್ಷಗಳ ಡಿಪ್ಲೊಮ ಇನ್ ಬಿಸಿನೆಸ್ ಅಡ್ಮಿನಿಸ್ಟ್ರೇಷನ್ ಪರೀಕ್ಷೆಯಲ್ಲಿ ತೇರ್ಗಡೆಯಾಗಿರುವ ಅಭ್ಯರ್ಥಿಗಳು ನೇರವಾಗಿ ಮೂರನೇ ಬಿ.ಕಾಂ. ಶಿಕ್ಷಣ ಪ್ರವೇಶಕ್ಕೆ ಅರ್ಹರಾಗಿರುತ್ತಾರೆ. ಅಂಥ ವಿದ್ಯಾರ್ಥಿಗಳು ಮೂರನೇ ವರ್ಷದ ಬಿ.ಕಾಂ ಪರೀಕ್ಷೆ ಮುಗಿಸುವ ಮುನ್ನ ಮೊದಲನೆಯ ಮತ್ತು ಎರಡನೇ ವರ್ಷಗಳ ಬಿ.ಕಾಂ. ತರಗತಿಗಳಿಗೆ ನಿಗದಿಗೊಳಿಸಿದ ಭಾಷಿಕ ಪತ್ರಿಕೆಗಳಲ್ಲಿ ಪರೀಕ್ಷೆ ತೆಗೆದುಕೊಳ್ಳಬೇಕು. ಇದಲ್ಲದೇ ಅಂಥ ವಿದ್ಯಾರ್ಥಿಗಳು ಮೂರನೇ ವರ್ಷದ ಬಿ.ಕಾಂ. ಪರೀಕ್ಷೆಯ ಎಲ್ಲಾ ವಿಷಯಗಳನ್ನು ಕಡ್ಡಾಯವಾಗಿ ಓದಲೇಬೇಕು. ಹಾಗೂ ಎಲ್ಲಾ ಪತ್ರಿಕೆಗಳಲ್ಲಿ ಪರೀಕ್ಷೆ ತೆಗೆದುಕೊಳ್ಳಬೇಕು.

ಎರಡನೇಯ, ಮೂರನೇ ವರ್ಷಗಳಿಗೆ ನವೀಕರಣ

೧. ಎರಡನೇಯ ಅಥವಾ ಮೂರನೇಯ ಬಿ.ಎ/ಬಿ.ಕಾಂಗಳಿಗೆ ಸೇರಿ ಶಿಕ್ಷಣ ಮುಂದುವರಿಸಲು ಬಯಸುವ ವಿದ್ಯಾರ್ಥಿಗಳು ವಿಶ್ವವಿದ್ಯಾನಿಲಯದ ಸೂಚನೆ ಬಂದ ಮೇಲೆಯೇ ಭೋದನ ಶುಲ್ಕವನ್ನು ಪಾವತಿ ಮಾಡಬೇಕು.

೨. ಮೂರು ವರ್ಷಗಳ ಬಿ.ಎ, ಬಿ.ಕಾಂ ಪದವಿ ಶಿಕ್ಷಣ ಕ್ರಮದಲ್ಲಿ ಅಧ್ಯಯನ ಮಾಡುತ್ತಿರುವ ವಿದ್ಯಾರ್ಥಿಗಳು ಮೊದಲ ವರ್ಷದ ಪರೀಕ್ಷೆಗೆ ಹಾಜರಾಗದಿದ್ದರೂ ಅಥವಾ ಯಾವ ಪತ್ರಿಕೆಯಲ್ಲಿಯೂ ಉತ್ತೀರ್ಣ ರಾಗದಿದ್ದರೂ ಎರಡನೇ ವರ್ಷದ ಪದವಿ ಶಿಕ್ಷಣ ಕ್ರಮಕ್ಕೆ ಸೇರಲು ಅರ್ಹರಾಗಿರುತ್ತಾರೆ. ಹಾಗೆಯೇ ಮೊದಲ ವರ್ಷ ಮತ್ತು ಎರಡನೇ ವರ್ಷದ ಪರೀಕ್ಷೆಗಳಿಗೆ ಹಾಜರಾಗದಿದ್ದರೂ ಅಥವಾ ಆ ಎರಡು ವರ್ಷಗಳು ಯಾವ ಪತ್ರಿಕೆಯಲ್ಲಿಯೂ ಉತ್ತೀರ್ಣರಾಗದಿದ್ದರೂ ಮೂರನೇ ವರ್ಷದ ಪದವಿ ಶಿಕ್ಷಣ ಕ್ರಮಕ್ಕೆ ಸೇರಲು ಅರ್ಹರಾಗಿರುತ್ತಾರೆ.

೩. ಯಾವುದೇ ಶಿಕ್ಷಣ ಕ್ರಮವನ್ನು ಪೂರೈಸಲು ಇರುವ ಗರಿಷ್ಠ ಅವಧಿ ಎಂದರೆ ಶಿಕ್ಷಣ ಕ್ರಮಕ್ಕೆ ಪ್ರವೇಶ ಪಡೆದ ದಿನಾಂಕದಿಂದ ಆ ಶಿಕ್ಷಣ ಕ್ರಮದ ಅವಧಿಯ ಎರಡರಷ್ಟು ಕಾಲಾವಧಿ ಮಾತ್ರ. ಮೇಲೆ ನಿಗದಿಪಡಿಸಿದ ಶಿಕ್ಷಣ ಕ್ರಮದ ಅವಧಿಯಲ್ಲಿ ಪಠ್ಯಕ್ರಮ ವೇನಾದರೂ ಬದಲಾದರೆ ಗರಿಷ್ಠ ೪ ಪ್ರಯತ್ನ ಅಥವಾ ಎರಡು ವರ್ಷಗಳ ಅವಧಿಯವರೆಗೆ ಹಳೆಯ ಪಠ್ಯಕ್ರಮದ ಮೇರೆಗೆ ಪರೀಕ್ಷೆ ಬರೆಯಲು ವಿದ್ಯಾರ್ಥಿಗೆ ಅವಕಾಶ ನೀಡಲಾಗುವುದು.

೪. ಯಾವುದೇ ಶಿಕ್ಷಣ ಕ್ರಮಕ್ಕೆ ಸೇರಿದ್ದು ನಂತರ ನಾಲ್ಕು ಶೈಕ್ಷಣಿಕ ವರ್ಷಗಳಿಗಿಂತ ಹೆಚ್ಚು ಕಾಲ ಬಿಟ್ಟಿದ್ದು ಮತ್ತೆ ಸೇರ ಬಯಸಿದರೆ ವಿಶ್ವವಿದ್ಯಾನಿಲಯದಲ್ಲಿ ಹೊಸ ಪ್ರವೇಶವನ್ನು ಪಡೆಯಬೇಕು.

ಡಿಪ್ಲೊಮ ಮತ್ತು ಸರ್ಟಿಫಿಕೇಟ್

ಪ್ರವೇಶಾರ್ಹತೆ

ಇಂಗ್ಲೀಷ್ ಸ್ನಾತಕೋತ್ತರ ಡಿಪ್ಲೊಮ

ಇಂಗ್ಲೀಷ್ ಪ್ರಧಾನ ವಿಷಯವಾಗಿಯಾಗಲಿ (ಅಂತಿಮ ವರ್ಷದ ೨ನೇಯ ಗುಂಪು) ಓದಿ

ಗಳಿಸಿದ ಪದವೀಧರರ (ಬಿ.ಎ/ಬಿ.ಎಸ್ಸಿ) ಅಂಕಗಳ ಆಧಾರದ ಮೇಲೆ ಪ್ರವೇಶ ಮಾಡಿಕೊಳ್ಳಲಾಗುತ್ತದೆ.

೧. ಮಾರ್ಕೆಟಿಂಗ್ ಮ್ಯಾನೇಜ್‌ಮೆಂಟ್ ಸ್ನಾತಕೋತ್ತರ ಡಿಪ್ಲೊಮ

ಮಾನ್ಯತೆ ಹೊಂದಿದ ಯಾವುದೇ ವಿಶ್ವ ವಿದ್ಯಾನಿಲಯದ ಪದವೀಧರರು ಅಥವಾ ಸ್ನಾತಕೋತ್ತರ ಪದವೀಧರರು.

೨. ಹ್ಯೂಮನ್ ರಿಸೋರ್ಸ್ ಮ್ಯಾನೇಜ್ ಮೆಂಟ್ ಸ್ನಾತಕೋತ್ತರ ಡಿಪ್ಲೊಮ

ಮಾನ್ಯತೆ ಹೊಂದಿದ ಯಾವುದೇ ವಿಶ್ವ ವಿದ್ಯಾನಿಲಯದ ಪದವೀಧರರು ಅಥವಾ ಸ್ನಾತಕೋತ್ತರ ಪದವೀಧರರು.

೩. ಪ್ರಿಯೂನಿವರ್ಸಿಟಿ ನಂತರದ ಕನ್ನಡ ಡಿಪ್ಲೊಮ

೧. ಎರಡು ವರ್ಷಗಳ ಪ್ರಿಯೂನಿವರ್ಸಿಟಿಯಲ್ಲಿ ಕನ್ನಡವನ್ನು ಒಂದು ಭಾಷೆಯಾಗಿ ತೆಗೆದುಕೊಂಡು ತೇರ್ಗಡೆಯಾದ ಅಭ್ಯರ್ಥಿಗಳು.

ಅಥವಾ

೨. ಎರಡು ವರ್ಷಗಳ ಪ್ರಿಯೂನಿವರ್ಸಿಟಿಯಲ್ಲಿ ಸಂಸ್ಕೃತವನ್ನು ಒಂದು ಭಾಷೆಯಾಗಿ ತೆಗೆದುಕೊಂಡು ಪ್ರಿಯೂನಿವರ್ಸಿಟಿ ಪರೀಕ್ಷೆಯಲ್ಲಿ ತೇರ್ಗಡೆಯಾಗಿದ್ದು ಕನ್ನಡ ಮಾತೃಭಾಷೆಯಾಗಿರುವ ಅಭ್ಯರ್ಥಿಗಳು.

ಅಥವಾ

೩. ಕರ್ನಾಟಕ ಸರ್ಕಾರ ನಡೆಸುವ ಕನ್ನಡ ಪಂಡಿತ ಅಥವಾ ಸಂಸ್ಕೃತ ವಿದ್ವತ್ತಿನ ಪರೀಕ್ಷೆಯಲ್ಲಿ ಅಥವಾ ತತ್ಸಮಾನವೆಂದು ಪರಿಗಣಿತವಾಗಿರುವ ಪರೀಕ್ಷೆಯಲ್ಲಿ ತೇರ್ಗಡೆಯಾದ ಅಭ್ಯರ್ಥಿಗಳು.

೪. ಪ್ರಿಯೂನಿವರ್ಸಿಟಿ ನಂತರದ ಪತ್ರಿಕೋದ್ಯಮ ಡಿಪ್ಲೊಮ

ಅ. ಕರ್ನಾಟಕ ರಾಜ್ಯದ ಪ್ರಿಯೂನಿವರ್ಸಿಟಿ ಶಿಕ್ಷಣ ಮಂಡಲಿ ನಡೆಸುವ ಎರಡು ವರ್ಷಗಳ ಪ್ರಿಯೂನಿವರ್ಸಿಟಿ ಪರೀಕ್ಷೆಯಲ್ಲಿ ಅಥವಾ ತತ್ಸಮಾನ ಪರೀಕ್ಷೆಯಲ್ಲಿ ತೇರ್ಗಡೆಯಾದ ಅಭ್ಯರ್ಥಿಗಳು.

ಅಥವಾ

ಆ. ಮೈಸೂರು ವಿಶ್ವವಿದ್ಯಾನಿಲಯ ನಡೆಸುವ ಪತ್ರಿಕೋದ್ಯಮ ಸರ್ಟೀಫಿಕೇಟ್ ಶಿಕ್ಷಣ ಪರೀಕ್ಷೆಯಲ್ಲಿ ತೇರ್ಗಡೆಯಾದ ಅಭ್ಯರ್ಥಿಗಳು.

೬. ಕನ್ನಡೇತರರಿಗಾಗಿ ಕನ್ನಡ ಸರ್ಟೀಫಿಕೇಟ್ ಶಿಕ್ಷಣ

ಎಸ್.ಎಸ್.ಎಲ್.ಸಿ. ಅಥವಾ ತತ್ಸಮಾನ ಪರೀಕ್ಷೆಯಲ್ಲಿ ತೇರ್ಗಡೆಯಾದ ಕನ್ನಡವನ್ನು ಶಿಕ್ಷಣದ ಯಾವುದೇ ಹಂತದಲ್ಲಿ ಅಧ್ಯಯನ ಮಾಡದ ಅಥವಾ ಕನ್ನಡ ಮಾತೃ ಭಾಷೆಯಾಗಿಲ್ಲದ ಅಭ್ಯರ್ಥಿಗಳು.

ಸೂಚನೆ :

ಬಿ.ಎ./ಬಿ.ಕಾಂ./ಎಂ.ಎ./ಎಂ.ಕಾಂ./ಡಿಪ್ಲೊಮ/ಸರ್ಟೀಫಿಕೇಟ್ ಶಿಕ್ಷಣ ಕ್ರಮಗಳಿಗೆ ಪ್ರವೇಶ ಬಯಸುವ ಅಭ್ಯರ್ಥಿಗಳು ಬೋಧನ ಶುಲ್ಕವನ್ನು ಪೂರ್ಣವಾಗಿ ಪಾವತಿ ಮಾಡಿ ಅದಕ್ಕೆ ಸಂಬಂಧಿಸಿದ ಚಲನ್ ಮತ್ತು ಮೂಲ ದಾಖಲೆಗಳನ್ನು ಪ್ರವೇಶ ಅರ್ಜಿಯೊಂದಿಗೆ ಅಡಕಗೊಳಿಸಬೇಕು.

ಅರ್ಜಿಸಲ್ಲಿಸಲು ಕೊನೆಯ ದಿನಾಂಕ

೧. ದಂಡ ಶುಲ್ಕವಿಲ್ಲದೆ - ೧೪.೮.೯೭

೨. ೫೦-೦೦ ರೂ. ದಂಡ ಶುಲ್ಕ ಸಹಿತ - ೨೮-೮-೯೭.

ಎಂ.ಎ., ಎಂ.ಕಾಂ. ಪದವಿ

ಎಂ.ಎ., ಎಂ.ಕಾಂ ಪದವಿ ಶಿಕ್ಷಣಗಳಿಗೆ ಪ್ರವೇಶ ಬಯಸುವವರಿಗೆ ಯಾವುದೇ ಬಗೆಯ ಶೈಕ್ಷಣಿಕ ಅರ್ಹತೆಗಳನ್ನು ಒತ್ತಿಕೇಳುವುದಿಲ್ಲ. ೧೯೯೭ ಜುಲೈ ೧ನೇ ತಾರೀಖಿನಂದು ೨೧ ವರ್ಷಗಳಾಗಿರುವ (೩೦-೬-೧೯೭೬ರ ಅಥವಾ ಮುಂಚೇ ಜನಿಸಿರುವವರು) ಎಲ್ಲ ಅಭ್ಯರ್ಥಿಗಳೂ ಎಂ.ಎ ಮತ್ತು ಎಂ.ಕಾಂ ಶಿಕ್ಷಣಗಳಿಗೆ ಅರ್ಜಿ ಹಾಕಲು ಅರ್ಹರು. ಅಭ್ಯರ್ಥಿಗಳನ್ನ ಅಯಾ ಶಿಕ್ಷಣಗಳ ಮೊದಲ ಶೈಕ್ಷಣಿಕ ವರ್ಷಕ್ಕೆ ಸೇರಿಸಿಕೊಳ್ಳಲಾಗುತ್ತದೆ.

ವಯಸ್ಸು


೧. ಹುಟ್ಟಿದ ದಿನಾಂಕ ನಮೂದಿಸಿರುವ S.S.L.C/S.S.C ಅಂಕಪಟ್ಟಿಯ ಅಥವಾ ವರ್ಗಾವಣೆ ಪತ್ರದ ಮೂಲಪ್ರತಿ

ಅಥವಾ

೨. ಯಾವುದಾದರೂ ಶಾಲೆಯ ಪ್ರವೇಶ ದಾಖಲಾತಿಯಲ್ಲಿ ಜನ್ಮದಿನಾಂಕ ನಮೂದಾದ ಉದ್ಧೃತ ಭಾಗ. ಇದನ್ನು ಆಯಾ ಸಂಸ್ಥೆಯ ಮುಖ್ಯಸ್ಥರು ಪ್ರಮಾಣೀಕರಿಸಬೇಕು.

ಅಥವಾ

೩. ಪೌರಸಭೆಗಳು ಅಥವಾ ಇತರ ಸ್ಥಳೀಯ ಅಂಗ ಸಂಸ್ಥೆಗಳ ದಾಖಲೆಗಳಲ್ಲಿ ನಮೂದಾದ ಜನ್ಮ ದಿನಾಂಕದ ಉದ್ಧೃತ ಭಾಗ ಅಥವಾ ಯಾವುದೇ ಸರ್ಕಾರಿ ಅಥವಾ ಅರೆಸರ್ಕಾರಿ ಸಂಸ್ಥೆಯ ದಾಖಲೆಗಳ ಉದ್ಧೃತ ಭಾಗ.



ಸೂಚನೆ :

ಅಫಿಡವಿಟ್, ಜಾತಕಗಳು ಮತ್ತು ಅನಧಿಕೃತ ದಾಖಲೆ ಪತ್ರಗಳನ್ನು ವಯಸ್ಸಿನ ಪ್ರಮಾಣ ಪತ್ರಗಳಾಗಿ ಒಪ್ಪಿಕೊಳುವುದಿಲ್ಲ.

ಈ ಪದ್ಧತಿಯ ಪ್ರಕಾರ ಪ್ರವೇಶ ಬಯಸಿ ಅರ್ಜಿಸಲ್ಲಿಸುವ ವಿದ್ಯಾರ್ಥಿಗಳು ಅರ್ಹತಾ ಪರೀಕ್ಷೆಯಲ್ಲಿ ತೇರ್ಗಡೆಯಾಗಿರಬೇಕು. ಎಂ.ಎ. ಶಿಕ್ಷಣ ಪ್ರವೇಶಕ್ಕೆ ಬಿ.ಎಯಲ್ಲಿ, ಎಂ.ಕಾಂ. ಶಿಕ್ಷಣ ಪ್ರವೇಶಕ್ಕೆ ಬಿ.ಕಾಂ ನಲ್ಲಿ ತೇರ್ಗಡೆಯಾಗಿರಬೇಕು ಎನ್ನುವುದು ಪ್ರವೇಶದ ಅರ್ಹತೆಗಳಲ್ಲಿ ಒಂದು ನಿಯಮ.

ಇಂಗ್ಲೀಷ್ ಎಂ.ಎ.

೧. ಮಾನ್ಯತೆ ಪಡೆದ ಯಾವುದೇ ವಿಶ್ವವಿದ್ಯಾನಿಲಯದ ಮೂರು ವರ್ಷಗಳ ಬಿ.ಎ/ಬಿ.ಎಸ್.ಸಿ/ಬಿ.ಎ. ಲಲಿತಕಲೆ ಪರೀಕ್ಷೆಯಲ್ಲಿ ಇಂಗ್ಲೀಷ್‌ನ್ನು ಪ್ರಧಾನ ವಿಷಯವಾಗಿ ತೆಗೆದುಕೊಂಡು ತೇರ್ಗಡೆಯಾದ ಅಭ್ಯರ್ಥಿಗಳು ಅಥವಾ ತತ್ಸಮಾನವೆಂದು ಪರಿಗಣಿತವಾದ ಪರೀಕ್ಷೆಯಲ್ಲಿ ತೇರ್ಗಡೆಯಾದ ಅಭ್ಯರ್ಥಿಗಳು.

ಅಥವಾ

೨. ಮೂರು ವರ್ಷಗಳ ಬಿ.ಎ/ಬಿ.ಎಸ್.ಸಿ/ಬಿ.ಮ್ಯುಸಿಕ್ ಪದವಿ, ಪದವಿ ಮಟ್ಟದಲ್ಲಿ ಇಂಗ್ಲೀಷ್‌ನ್ನು ಉಪಪ್ರಧಾನ ವಿಷಯವಾಗಿ ತೆಗೆದುಕೊಂಡು ತೇರ್ಗಡೆಯಾದ ಅಭ್ಯರ್ಥಿಗಳು. ಆದರೆ ಈ ಅಭ್ಯರ್ಥಿಗಳು ಇಂಗ್ಲೀಷ್

ಭಾಷೆ/ ವಿಷಯಕ್ಕೆ ನಿಗದಿಗೊಳಿಸಿರುವ ಗರಿಷ್ಠಾಂಕದಲ್ಲಿ ಒಟ್ಟಾರೆ ಶೇಕಡಾ ೫೦ರಷ್ಟು ಅಂಕಗಳನ್ನಾದರೂ ಗಳಿಸಿರಬೇಕು.

೩. ಮೈಸೂರು ವಿಶ್ವವಿದ್ಯಾನಿಲಯದ ನಾಲ್ಕು ವರ್ಷಗಳ ಬಿ.ಎಡ್, ಪದವಿ ಪರೀಕ್ಷೆಯಲ್ಲಿ (ಪ್ರಾದೇಶಿಕ ಶಿಕ್ಷಣ ಕಾಲೇಜಿನ ಪದ್ಧತಿ) ಇಂಗ್ಲೀಷ್‌ನ್ನ ಪ್ರಧಾನ/ ಐಚ್ಛಿಕ ವಿಷಯವನ್ನಾಗಿ ಆರಿಸಿಕೊಂಡು ತೇರ್ಗಡೆಯಾದ ಅಭ್ಯರ್ಥಿಗಳು

ಅಥವಾ

೪. ಮೈಸೂರು ವಿಶ್ವವಿದ್ಯಾನಿಲಯದ ನಾಲ್ಕು ವರ್ಷಗಳ ಬಿ.ಎಸ್ಸಿ.ಎಡ್, ಪದವಿ ಪರೀಕ್ಷೆಯಲ್ಲಿ ತೇರ್ಗಡೆಯಾದವರು. ಆದರೆ ಅಭ್ಯರ್ಥಿಗಳು ಇಂಗ್ಲೀಷ್ ಭಾಷಾ ವಿಷಯದಲ್ಲಿ ಕನಿಷ್ಠ ಶೇಕಡ ೫೦ ರಷ್ಟು ಅಂಕಗಳನ್ನು ಗಳಿಸಿರಬೇಕು.

ಅಥವಾ

೫, ಮೈಸೂರು ವಿಶ್ವವಿದ್ಯಾನಿಲಯದ ಹಾಗೂ ಈ ವಿಶ್ವವಿದ್ಯಾನಿಲಯದ ಇಂಗ್ಲೀಷ್ ಸ್ನಾತಕೋತ್ತರ ಡಿಪ್ಲೊಮದಲ್ಲಿ ತೇರ್ಗಡೆಯಾಗಿರುವ ವಿಶ್ವವಿದ್ಯಾನಿಲಯಗಳ ಪದವೀಧರರು.

ಕನ್ನಡ ಎಂ.ಎ

೧. ಮಾನ್ಯತೆ ಪಡೆದ ಯಾವುದೇ ವಿಶ್ವವಿದ್ಯಾನಿಲಯದ ಮೂರು ವರ್ಷಗಳ ಬಿ.ಎ/ಬಿ.ಎಸ್.ಸಿ/ಬಿ.ಎ ಲಲಿತಕಲೆಗೆ ಪರೀಕ್ಷೆಯಲ್ಲಿ ಕನ್ನಡವನ್ನು ಪ್ರಧಾನ/ಐಚ್ಛಿಕ ವಿಷಯವಾಗಿ ತೆಗೆದುಕೊಂಡು ತೇರ್ಗಡೆಯಾದ ಅಭ್ಯರ್ಥಿಗಳು ಅಥವಾ ತತ್ಸಮಾನವೆಂದು ಪರಿಗಣಿಸುವ ಪರೀಕ್ಷೆಯಲ್ಲಿ ತೇರ್ಗಡೆಯಾದ ಅಭ್ಯರ್ಥಿಗಳು.

ಅಥವಾ

೨. ಕರ್ನಾಟಕ ಸರ್ಕಾರ ನಡೆಸುವ ಕನ್ನಡ ಪಂಡಿತ ಪರೀಕ್ಷೆಯಲ್ಲಿ ತೇರ್ಗಡೆಯಾದ ಅಭ್ಯರ್ಥಿಗಳು.

ಅಥವಾ

೩. ಎಸ್.ಎಸ್.ಎಲ್.ಸಿ ಯಲ್ಲಿ ಉತ್ತೀರ್ಣರಾಗಿ, ಮದರಾಸು ವಿಶ್ವವಿದ್ಯಾನಿಲಯದ ವಿದ್ವಾನ್ ಪರೀಕ್ಷೆಯಲ್ಲಿ ತೇರ್ಗಡೆಯಾಗಿರುವ ಮೈಸೂರು ವಿಶ್ವವಿದ್ಯಾನಿಲಯದ ಬಿ.ಎಡ್ ಪದವೀಧರ ಅಭ್ಯರ್ಥಿಗಳು.

ಅಥವಾ

೪. ಪ್ರಿಯೂನಿವರ್ಸಿಟಿ ನಂತರದ ಮೈಸೂರು ವಿಶ್ವವಿದ್ಯಾನಿಲಯದ ಹಾಗೂ ಈ ವಿಶ್ವವಿದ್ಯಾನಿಲಯದ ಕನ್ನಡ ಡಿಪ್ಲೊಮ ಪರೀಕ್ಷೆಯಲ್ಲಿ ತೇರ್ಗಡೆಯಾದ ಅಭ್ಯರ್ಥಿಗಳು.

ಹಿಂದಿ ಎಂ.ಎ

೧. ಮಾನ್ಯತೆ ಪಡೆದ ಯಾವುದೇ ವಿಶ್ವವಿದ್ಯಾನಿಲಯದ ಮೂರು ವರ್ಷಗಳು ಬಿ.ಎ/ಬಿ.ಎಸ್.ಸಿ/ಬಿ.ಎ. ಲಲಿತಕಲೆ ಪರೀಕ್ಷೆಯಲ್ಲಿ ಗುಂಪು I ಗುಂಪು IIರಲ್ಲಿ ಒಂದು ವಿಷಯವಾಗಿ ಅಧ್ಯಯನ ಮಾಡಿ ತೇರ್ಗಡೆಯಾದ ಅಭ್ಯರ್ಥಿಗಳು.

ಅಥವಾ

೨. ಇತರ ಯಾವುದೇ ವಿಶ್ವವಿದ್ಯಾನಿಲಯದಲ್ಲಿ ತತ್ಸಮಾನವೆಂದು ಪರಿಗಣಿತ ಪದವಿ ಪರೀಕ್ಷೆಯಲ್ಲಿ ಹಿಂದಿಯನ್ನು ಒಂದು ವಿಷಯವಾಗಿ ಅಧ್ಯಯನ ಮಾಡಿ ತೇರ್ಗಡೆಯಾದ ಅಭ್ಯರ್ಥಿಗಳು.

ಅಥವಾ

೩. ಮಾನ್ಯತೆ ಪಡೆದ ಯಾವುದೇ ವಿಶ್ವವಿದ್ಯಾನಿಲಯದ ಪದವೀಧರರಾಗಿದ್ದು ಈ ಕೆಳಗೆ ಸೂಚಿಸಿದ ಯಾವುದಾದರೂ ಒಂದು ಪರೀಕ್ಷೆಯಲ್ಲಿ ತೇರ್ಗಡೆಯಾದ ಅಭ್ಯರ್ಥಿಗಳು.

ಅ. ಮದರಾಸಿನ ದಕ್ಷಿಣ ಭಾರತ ಹಿಂದಿ ಪ್ರಚಾರ ಸಭಾ ನಡೆಸುವ ರಾಷ್ಟ್ರಭಾಷಾ ಪ್ರವೀಣ ಅಥವಾ ರಾಷ್ಟ್ರಭಾಷಾ ವಿಶಾರದ ಪರೀಕ್ಷೆ.

ಆ. ಬೆಂಗಳೂರಿನ ಕರ್ನಾಟಕ ಹಿಂದಿ ಪ್ರಚಾರ ಸಮಿತಿ ನಡೆಸುವ ರಾಜಭಾಷಾ ವಿದ್ವಾನ್ ಅಥವಾ ರಾಜಭಾಷಾ ಪ್ರಕಾಶ ಪರೀಕ್ಷೆ.

ಇ. ಬೆಂಗಳೂರಿನ ಮೈಸೂರು ಹಿಂದಿ ಪ್ರಚಾರ ಪರಿಷತ್ತಿನವರು ನಡೆಸುವ ಹಿಂದಿ ರತ್ನ ಪರೀಕ್ಷೆ.

ಬು (ಸು) ದ್ಧಿ ಜೀವಿ

ಗಡ್ಡ ಬಿಟ್ಟವರು-
-ವವರೆಲ್ಲಾ ಬುದ್ಧಿ
ಜೀವಿಗಳಂತೆ
ಆದರೆ......
ನಮ್ಮ ಪ್ರಧಾನಿ
ಗುಜ್ರಾಲರೋ ಬರೀ
ಸುದ್ದಿ ಜೀವಿ.

— ಜಗದೀಶ ಶ. ದುದ್ಗಿ

ಎಚ್ಚರಿಕೆ !

ಕೆಲವು ಖಾಸಗಿ ಸಂಸ್ಥೆಗಳು ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಪ್ರತಿನಿಧಿಗಳು ಎಂದು ಹೇಳಿಕೊಂಡು ಶುಲ್ಕ ವಸೂಲಿ ಮಾಡಿ ಪ್ರವೇಶ ಅರ್ಜಿಗಳನ್ನು ನೀಡಿ ಈ ವಿಶ್ವವಿದ್ಯಾನಿಲಯದ ವಿವಿಧ ತರಗತಿಗಳಿಗೆ ಪ್ರವೇಶ ದೊರಕಿಸಿ ಕೊಡುವ ಭರವಸೆ ನೀಡುತ್ತಿರುವ ಸಂಗತಿ ನಮ್ಮ ಗಮನಕ್ಕೆ ಬಂದಿದೆ.

ಯಾವುದೇ ವ್ಯಕ್ತಿ ಇಲ್ಲವೆ ಯಾವುದೇ ಸಂಸ್ಥೆಗೆ ನಮ್ಮ ಪರವಾಗಿ ಕೆಲಸ ಮಾಡಲು ಯಾವುದೇ ಅಧಿಕಾರ ನೀಡಿರುವುದಿಲ್ಲ. ಆದ್ದರಿಂದ ಅಂಥ ರೀತಿಯಲ್ಲಿ ಪಡೆದ ವಿವರಣಾ ಪತ್ರಗಳಿಗಾಗಲಿ, ಅಂಥವರಿಂದ ಪಡೆದ ಆಶ್ವಾಸನೆಗಳಿಗಾಗಲಿ ವಿಶ್ವವಿದ್ಯಾನಿಲಯ ಯಾವುದೇ ರೀತಿಯಲ್ಲಿ ಹೊಣೆಯಾಗಿರುವುದಿಲ್ಲ. ಪ್ರವೇಶ ಅರ್ಜಿ, ಶುಲ್ಕ ಇತ್ಯಾದಿಗಳನ್ನು ನೇರವಾಗಿ ಅಭ್ಯರ್ಥಿಗಳು ತಾವೇ ಕಳುಹಿಸಬೇಕೆಂದು ಸೂಚಿಸಲಾಗಿದೆ.

ಖಾಸಗಿ ಬೋಧನ ಸಂಸ್ಥೆಗಳ/ಕಾಲೇಜುಗಳ/ಸಂಘಗಳ ಮೂಲಕ ಕಳುಹಿಸುವ ಪ್ರವೇಶ ಅರ್ಜಿಗಳನ್ನು ಪರಿಗಣಿಸುವುದಿಲ್ಲ. ಒಟ್ಟುಗಟ್ಟಲೆ ಕಳುಹಿಸಿದ ಪ್ರವೇಶ ಅರ್ಜಿಗಳನ್ನು ಅಂಗೀಕರಿಸುವುದಿಲ್ಲ.

ಕೆ.ಆರ್. ರಾಮಕೃಷ್ಣ ಕೆ.ಎ.ಎಸ್.
ಕುಲಸಚಿವ, ಕ.ರಾ. ಮು ವಿ.ವಿ., ಮಾ.ಗಂ. ಮೈಸೂರು- ೬

ಈ. ಬೆಂಗಳೂರಿನ ಕರ್ನಾಟಕ ಮಹಿಳಾ ಹಿಂದಿ ಸೇವಾ ಸಮಿತಿ ನಡೆಸುವ ಭಾಷಾ ಪ್ರವೀಣ ಪರೀಕ್ಷೆ

ಉ. ಪ್ರಯಾಗದ ಹಿಂದಿ ಸಾಹಿತ್ಯ ಸಮ್ಮೇಳನದವರು ನಡೆಸುವ ಹಿಂದಿ ಸಾಹಿತ್ಯ ಪರೀಕ್ಷೆಯೊಂದಿಗಿನ ಸಾಹಿತ್ಯ ವಿಶಾರದ ಅಂದರೆ ಸಾಹಿತ್ಯ ಮಧ್ಯಮ ಅಥವಾ ಉತ್ತಮ ಅಂದರೆ ಸಾಹಿತ್ಯ ರತ್ನ ಪರೀಕ್ಷೆ.

ಅಥವಾ

೪. ಕರ್ನಾಟಕ ಸರ್ಕಾರದ ಹಿಂದಿ ವಿದ್ವಾನ್ ಪರೀಕ್ಷೆಯಲ್ಲಿ ಮತ್ತು ಮೈಸೂರು ವಿಶ್ವವಿದ್ಯಾನಿಲಯದ ಪ್ರಿಯೂನಿವರ್ಸಿಟಿ ನಂತರದ ಹಿಂದಿ ಡಿಪ್ಲೊಮ ಪರೀಕ್ಷೆಯಲ್ಲಿ ತೇರ್ಗಡೆಯಾದ ಅಭ್ಯರ್ಥಿಗಳು.

ಅಥವಾ

೫. S.S.L.C ಮತ್ತು ಬಿ.ಎಡ್. ಪದವಿ ಆಗಿರುವ ಮತ್ತು ಕರ್ನಾಟಕ ಸರ್ಕಾರ ನಡೆಸುವ ಹಿಂದಿ ವಿದ್ವಾನ್ ಪರೀಕ್ಷೆಯಲ್ಲಿ ತೇರ್ಗಡೆಯಾದ ಅಭ್ಯರ್ಥಿಗಳು.

ಉರ್ದು ಎಂ.ಎ

೧. ಮಾನ್ಯತೆ ಪಡೆದ ಯಾವುದೇ ವಿಶ್ವವಿದ್ಯಾನಿಲಯದ ಮೂರು ವರ್ಷಗಳ ಬಿ.ಎ/ಬಿ.ಎಸ್.ಸಿ/ಬಿ.ಎ ಲಲಿತಕಲೆ ಪರೀಕ್ಷೆಯಲ್ಲಿ ಉರ್ದುವನ್ನು ಪ್ರಧಾನ/ಐಚ್ಛಿಕ ವಿಷಯವಾಗಿ ತೆಗೆದುಕೊಂಡು ತೇರ್ಗಡೆಯಾದ ಅಭ್ಯರ್ಥಿಗಳು ಅಥವಾ ಯಾವುದೇ ವಿಶ್ವವಿದ್ಯಾನಿಲಯಾದ ತತ್ಸಮಾನ ಪರೀಕ್ಷೆಯಲ್ಲಿ ಐಚ್ಛಿಕ ವಿಷಯದೊಂದಿಗೆ ತೇರ್ಗಡೆಯಾದ ಅಭ್ಯರ್ಥಿಗಳು.

ಅಥವಾ

೧. ಮೂರು ವರ್ಷಗಳ ಬಿ.ಎ/ಬಿ.ಎಸ್.ಸಿ/ಬಿ.ಕಾಂ/ಬಿ. ಮ್ಯೂಸಿಕ್ ಪದವಿ ಪರೀಕ್ಷೆಯಲ್ಲಿ ಉರ್ದುವನ್ನು ದ್ವಿತೀಯ ಭಾಷೆಯಾಗಿ ಅಥವಾ ಪದವಿ ಮಟ್ಟದಲ್ಲಿ ಉರ್ದುವನ್ನು ಉಪ ಪ್ರದಾನ/ಐಚ್ಛಿಕ ವಿಷಯವಾಗಿ ತೆಗೆದುಕೊಂಡು ತೇರ್ಗಡೆಯಾದ ಅಭ್ಯರ್ಥಿಗಳು (ಆದರೇ ಇಂಥ ಅಭ್ಯರ್ಥಿಗಳು ಉರ್ದು ಭಾಷೆ/ವಿಷಯಕ್ಕೆ ನಿಗದಿಗೊಳಿಸಿರುವ ಗರಿಷ್ಠಾಂಕದಲ್ಲಿ ಒಟ್ಟಾರೆ ಶೇಕಡಾ ೫೦ ಅಂಕಗಳನ್ನಾದರೂ ಕನಿಷ್ಠಗಳಿಸಿರಬೇಕು.

ಅಥವಾ

೩. ಬೆಂಗಳೂರಿನ ಸಂಸ್ಕೃತ ಶಿಕ್ಷಣ ಮಂಡಲಿ ನಡೆಸುವ ಸಾಹಿತ್ಯ ಪರೀಕ್ಷೆಯಲ್ಲಿ ಅಥವಾ ಇದಕ್ಕೆ ತತ್ಸಮಾನವೆಂದು ಪರಿಗಣಿಸಿರುವ ಇತರ ಯಾವುದೇ ಪರೀಕ್ಷೆಯಲ್ಲಿ ತೇರ್ಗಡೆಯಾದ ಮಾನ್ಯತೆ ಪಡೆದ ಯಾವುದೇ ವಿಶ್ವವಿದ್ಯಾನಿಲಯದ ಪದವೀಧರರು.

ಅಥವಾ

೪. ಮೈಸೂರು ವಿಶ್ವವಿದ್ಯಾನಿಲಯ ನಡೆಸುವ ಪ್ರಿಯೂನಿವರ್ಸಿಟಿ ನಂತರದ ಸಂಸ್ಕೃತ ಡಿಪ್ಲೊಮ ಪರೀಕ್ಷೆಯಲ್ಲಿ ತೇರ್ಗಡೆಯಾಗಿರುವ ಅಥವಾ ಮಾನ್ಯತೆ ಪಡೆದ ಇತರ ವಿಶ್ವವಿದ್ಯಾನಿಲಯಗಳ ಪದವೀಧರರು.

ಅಥವಾ

೫. ಕರ್ನಾಟಕ ಸರ್ಕಾರ ನಡೆಸುವ ಕನ್ನಡ ಪಂಡಿತ ಪರೀಕ್ಷೆಯಲ್ಲಿ ತೇರ್ಗಡೆಯಾಗಿದ್ದು ಮಾನ್ಯತೆ ಪಡೆದ ಯಾವುದೇ ವಿಶ್ವವಿದ್ಯಾನಿಲಯದ ಪದವಿಧರರು.

ಇತಿಹಾಸ ಎಂ.ಎ

ಮಾನ್ಯತೆ ಪಡೆದ ಯಾವುದೇ ವಿಶ್ವವಿದ್ಯಾನಿಲಯದ ಮೂರು ವರ್ಷಗಳ ಬಿ.ಎ ಪದವಿ ಪರೀಕ್ಷೆಯಲ್ಲಿ ಇತಿಹಾಸವನ್ನು ಒಂದು ಪ್ರಧಾನ/ಐಚ್ಛಿಕ ವಿಷಯವಾಗಿ ಪದವಿ ಮಟ್ಟದಲ್ಲಿ ತೆಗೆದುಕೊಂಡು ತೇರ್ಗಡೆಯಾದ ಅಭ್ಯರ್ಥಿಗಳು ಅಥವಾ ಇತರ ಯಾವುದೇ ವಿಶ್ವವಿದ್ಯಾನಿಲಯಗಳ ತತ್ಸಮಾನ ಪರೀಕ್ಷೆಯಲ್ಲಿ ಐಚ್ಛಿಕ ವಿಷಯದೊಂದಿಗೆ ತೇರ್ಗಡೆಯಾದ ಅಭ್ಯರ್ಥಿಗಳು.

ಸಮಾಜಶಾಸ್ತ್ರ ಎಂ.ಎ.

ಮಾನ್ಯತೆ ಪಡೆದ ಯಾವುದೇ ವಿಶ್ವವಿದ್ಯಾನಿಲಯದ ಮೂರು ವರ್ಷಗಳ ಬಿ.ಎ. ಪದವಿ ಪರೀಕ್ಷೆಯಲ್ಲಿ ಸಮಾಜಶಾಸ್ತ್ರವನ್ನು ಒಂದು ಪ್ರಧಾನ/ಐಚ್ಛಿಕ ವಿಷಯವಾಗಿ ಪದವಿ ಮಟ್ಟದಲ್ಲಿ ತೆಗೆದುಕೊಂಡು ತೇರ್ಗಡೆಯಾದ ಅಭ್ಯರ್ಥಿಗಳು ಅಥವಾ ಯಾವುದೇ ವಿಶ್ವವಿದ್ಯಾನಿಲಯಗಳ ತತ್ಸಮಾನ ಪರೀಕ್ಷೆಯಲ್ಲಿ ಐಚ್ಛಿಕ ವಿಷಯದೊಂದಿಗೆ ತೇರ್ಗಡೆಯಾದ ಅಭ್ಯರ್ಥಿಗಳು.

ರಾಜ್ಯಶಾಸ್ತ್ರ ಎಂ.ಎ

ಮಾನ್ಯತೆ ಪಡೆದ ಯಾವುದೇ ವಿಶ್ವವಿದ್ಯಾನಿಲಯದ ಮೂರು ವರ್ಷಗಳ ಬಿ.ಎ ಪದವಿ ಪರೀಕ್ಷೆಯಲ್ಲಿ ರಾಜ್ಯಶಾಸ್ತ್ರ ಅಥವಾ ಸಾರ್ವಜನಿಕ ಆಡಳಿತವನ್ನು ಪದವಿ ಮಟ್ಟದಲ್ಲಿ ಒಂದು ಪ್ರಧಾನ/ಐಚ್ಛಿಕ ವಿಷಯವಾಗಿ ತೆಗೆದುಕೊಂಡು ತೇರ್ಗಡೆಯಾದ ಅಥವಾ ಯಾವುದೇ ವಿಶ್ವವಿದ್ಯಾನಿಲಯಗಳ ತತ್ಸಮಾನ ಪರೀಕ್ಷೆಯಲ್ಲಿ ತೇರ್ಗಡೆಯಾದ ಅಭ್ಯರ್ಥಿಗಳು.

ಬೆವರುವುದೇಕೆ?

ನಲ್ಲೆ
ಅಂದು
ನೀ ಬಳಿಬರಲು
ಬೇಸಿಗೆಯಲ್ಲೂ
ಮೈ ನಿಮಿರಿದವು
ಆದರಿಂದು
ನೀ
ಬಳಿಯಿರಲು
ಚಳಿಯಲ್ಲೂ
ಮೈ ಬೆವರುವುದೆ!?

- ಎಲ್. ಪ್ರವೀಣ್‌ಕುಮಾರ್

ಅರ್ಥಶಾಸ್ತ್ರ ಎಂ.ಎ

ಮಾನ್ಯತೆ ಪಡೆದ ಯಾವುದೇ ವಿಶ್ವವಿದ್ಯಾನಿಲಯದ ಮೂರು ವರ್ಷಗಳ ಬಿ.ಎ. ಪದವಿ ಪರೀಕ್ಷೆಯಲ್ಲಿ ಅರ್ಥಶಾಸ್ತ್ರವನ್ನು ಒಂದು ಪ್ರಧಾನ/ಐಚ್ಛಿಕ ವಿಷಯವಾಗಿ ತೆಗೆದುಕೊಂಡು ತೇರ್ಗಡೆಯಾದ ಅಥವಾ ಯಾವುದೇ ವಿಶ್ವವಿದ್ಯಾನಿಲಯಗಳ ತತ್ಸಮಾನ ಪರೀಕ್ಷೆಯಲ್ಲಿ ತೇರ್ಗಡೆಯಾದ ಅಭ್ಯರ್ಥಿಗಳು.

ಎಂ.ಕಾಂ

ಮಾನ್ಯತೆ ಪಡೆದ ಯಾವುದೇ ವಿಶ್ವವಿದ್ಯಾನಿಲಯದ ಮೂರು ವರ್ಷಗಳ ಬಿ.ಕಾಂ/ಬಿ.ಬಿ.ಎಂ ಪದವಿ ಪರೀಕ್ಷೆಯಲ್ಲಿ ತೇರ್ಗಡೆಯಾದ ಅಥವಾ ಯಾವುದೇ ವಿಶ್ವವಿದ್ಯಾನಿಲಯಗಳ ತತ್ಸಮಾನ ಪರೀಕ್ಷೆಯಲ್ಲಿ ತೇರ್ಗಡೆಯಾದ ಅಭ್ಯರ್ಥಿಗಳು.

ಫಾರ್ಮಸಿ ಶಿಕ್ಷಣ

ಔಷಧಿ ವಿಜ್ಞಾನ ವಿಭಾಗವು ಔಷಧಿಗಳ ತಯಾರಿಕೆ ಹಾಗೂ ಅಭಿವೃದ್ಧಿಪಡಿಸುವಿಕೆ ಬಗ್ಗೆ ಶಿಕ್ಷಣ-ತರಬೇತಿ ನೀಡುತ್ತದೆ. ವೈದ್ಯಕೀಯ ಸವಲತ್ತು ಹಾಗೂ ಸಲಹೆ - ಸೂಚನೆಗಳನ್ನು ನೀಡುವುದು ಸಹ ಈ ವೃತ್ತಿಪರ ಕೋರ್ಸಿನ ಮುಖ್ಯ ಉದ್ದೇಶ.

ಬಿ.ಫಾರ್ಮ್, ಡಿ.ಫಾರ್ಮ್ ಕಲಿತವರಿಗೆ ಆಸ್ಪತ್ರೆ, ಉದ್ದಿಮೆಗಳು, ಉಪನ್ಯಾಸಕರ ಕೆಲಸ, ಹಾಗೂ ಸಂಶೋಧನಾ ವಿಭಾಗಗಳಲ್ಲಿ ಕೆಲಸದ ಅವಕಾಶಗಳಿವೆ.

ಈ ಕೋರ್ಸು ಪಾಸು ಮಾಡಿಕೊಂಡವರು ಸ್ವತಃ ಔಷಧಿ ಅಂಗಡಿ, ಇಲ್ಲವೆ ಔಷಧಿ ಉತ್ಪಾದನೆಗಳನ್ನು ಮಾಡಬಹುದಾಗಿದೆ. ಸರ್ಕಾರಿ ಇಲಾಖೆಗಳಲ್ಲಿ ಡ್ರಗ್ ಇನ್ಸ್‌ಪೆಕ್ಟರ್ ಎಂಬ ಹುದ್ದೆಗಳು ಬರುತ್ತವೆ. ನೀವು ಪಡೆದ ದರ್ಜೆಯ ಮೇಲೆ ನಿಮಗೆ ಅವಕಾಶ ಲಭ್ಯ.

ಪಿ.ಯು.ಸಿ. ವಿಜ್ಞಾನದಲ್ಲಿ ಭೌತಶಾಸ್ತ್ರ ರಾಸಾಯನಶಾಸ್ತ್ರ, ಜೀವಶಾಸ್ತ್ರ ಹಾಗೂ ಗಣಿತ ತೆಗೆದುಕೊಂಡು ಪಾಸಾದವರು ಈ ಕೋರ್ಸುಗಳಿಗೆ ಪ್ರವೇಶ ಪಡೆಯಬಹುದು. ಬಿ.ಫಾರ್ಮ್ ಕೋರ್ಸಿಗೆ ಪ್ರವೇಶ ಪಡೆಯಲು ಪ್ರವೇಶ ಪರೀಕ್ಷೆ ಏರ್ಪಡಿಸಲಾಗುತ್ತದೆ. ನೀವು ಇದರಲ್ಲಿ ಗಳಿಸಿದ ಅಂಕಗಳ ಆಧಾರದ ಮೇಲೆ ಇದು ಅವಕಾಶ ನೀಡುತ್ತದೆ. ಡಿಫಾರ್ಮಾವು ೨ ವರ್ಷಗಳ ಅವಧಿಯ ಶಿಕ್ಷಣವರ್ಗ, ಎಂ.ಫಾರ್ಮವು ೨ ವರ್ಷಗಳ ಕೋರ್ಸಾಗಿದ್ದು ಇದರಲ್ಲಿ ಸಂಶೋಧನೆ ಕೈಗೊಳ್ಳುವವರಿಗೆ ಕನಿಷ್ಠ ೩ ವರ್ಷಗಳವರೆಗೆ ಅಧ್ಯಯನ ಮಾಡಬೇಕಾಗುತ್ತದೆ.

ಕರ್ನಾಟಕ ವಿಶ್ವವಿದ್ಯಾಲಯ, ಆಂಧ್ರ ವಿಶ್ವವಿದ್ಯಾಲಯ ಹಾಗೂ ಮೈಸೂರು-ಬೆಂಗಳೂರುಗಳಲ್ಲಿಯೂ ಈ ಕಾಲೇಜುಗಳಂತೆ ಅವುಗಳ ಬಗ್ಗೆ ವಿಶ್ವವಿದ್ಯಾಲಯಗಳಿಂದ ಮಾಹಿತಿ ಪಡೆಯುವುದು ಸೂಕ್ತ.

ಆಯುರ್ವೇದ ಸ್ನಾತಕೋತ್ತರ ಕೋರ್ಸಿಗಾಗಿ ಅರ್ಜಿ

ಬಳ್ಳಾರಿಯ ತಾರಾನಾಥ ಸರ್ಕಾರಿ ಆಯುರ್ವೇದ ವೈದ್ಯಕೀಯ ಮಹಾವಿದ್ಯಾಲಯದಲ್ಲಿ ರಸಶಾಸ್ತ್ರ ಮತ್ತು ಬೈಪಜ್ಯ ಕಲ್ಪನ ವಿಷಯದಲ್ಲಿ ಸ್ನಾತಕೋತ್ತರ ಪದವಿ ಕೋರ್ಸಿಗೆ ೧೯೯೭-೯೮ನೇ ಶೈಕ್ಷಣಿಕ ವರ್ಷಕ್ಕೆ ನಿಗದಿತ ನಮೂನೆಯಲ್ಲಿ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಅಭ್ಯರ್ಥಿಯು ಕರ್ನಾಟಕ ರಾಜ್ಯದ ಯಾವುದಾದರೂ ವಿಶ್ವವಿದ್ಯಾನಿಲಯದ ಆಯುರ್ವೇದ ಪದವಿ ಪಡೆದಿರಬೇಕು ಅಥವಾ ಕರ್ನಾಟಕ ಸರ್ಕಾರದ ಅಥವಾ ಶಾಸನ ರೀತ್ಯಾ ಸ್ಥಾಪನೆಯಾದ ವಿಶ್ವವಿದ್ಯಾಲಯದ ಆಯುರ್ವೇದ ಪದವಿಗೆ ತತ್ಸಮಾನ ಎಂದು ಘೋಷಿಸಿರುವ ಪದವಿ ಹೊಂದಿರಬೇಕು. ಆಯುರ್ವೇದ ಪದವಿ ಪರೀಕ್ಷೆಯ ಅಂತಿಮ ವರ್ಷದಲ್ಲಿ ಮತ್ತು ರಸಶಾಸ್ತ್ರ ಮತ್ತು ಬೈಪಜ್ಯ ಕಲ್ಪನ ವಿಷಯದಲ್ಲಿ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಕರ್ನಾಟಕ ಸರ್ಕಾರಿ ಸೇವೆಯಲ್ಲಿರುವವರಾಗಿದ್ದರೆ ಶೇಕಡ ೫೦ರಷ್ಟು ಅಂಕಗಳನ್ನು ಹಾಗೂ ಇತರರು ಶೇಕಡ ೫೫ ರಷ್ಟು ಅಂಕಗಳನ್ನು ಪಡೆದಿರಬೇಕು. ಅರ್ಜಿಗಳನ್ನು ಸ್ವೀಕರಿಸಲು ನಿಗದಿಪಡಿಸಿದ ಕೊನೆಯ ದಿನಾಂಕದೊಳಗೆ ನಿಗದಿತ ಇಂಟರ್‌ಷಿಪ್ ಅವಧಿಯನ್ನು ಪೂರ್ಣಗೊಳಿಸಿರಬೇಕು. ಕರ್ನಾಟಕ ರಾಜ್ಯದಲ್ಲಿ ಆಯುರ್ವೇದ ವಿದ್ಯಾಲಯಗಳಿಗೆ ಪ್ರವೇಶ ಪಡೆಯುವ ಮುನ್ನ ರಾಜ್ಯದ ಯಾವುದಾದರೂ ಅಂಗೀಕೃತ ವಿದ್ಯಾಸಂಸ್ಥೆಗಳಲ್ಲಿ ಒಂದನೇ ತರಗತಿಯ ನಂತರ ಐದು ವರ್ಷ ವಿದ್ಯಾಭ್ಯಾಸ ಮಾಡಿರಬೇಕು. ಇದು ಹೊರರಾಜ್ಯದ ವಿದ್ಯಾರ್ಥಿಗಳಿಗೆ ಅನ್ವಯಿಸುವುದಿಲ್ಲ. ಈ ಸ್ನಾತಕೋತ್ತರ ಪದವಿ ಕೋರ್ಸ್‌ನ ವಿದ್ಯಾರ್ಥಿ ಪ್ರವೇಶ ಸಂಖ್ಯೆ: ಏಳು (೭) ಆಗಿದ್ದು, ಇದರಲ್ಲಿ ಮೂರು ಸೀಟುಗಳನ್ನು ಹೊರ ರಾಜ್ಯದ ವಿದ್ಯಾರ್ಥಿಗಳಿಗೆ ಮೀಸಲಿರಿಸಲಾಗಿದೆ. ಈ ಕೋರ್ಸ್‌ನ ಅವಧಿಯು ಮೂರು ವರ್ಷಗಳಾಗಿದ್ದು, ಸರ್ಕಾರಿ ಸೇವೆಯಲ್ಲಿರುವ ಅಭ್ಯರ್ಥಿಗಳನ್ನು ಹೊರತುಪಡಿಸಿ ಇತರೆ ಆಯ್ಕೆಯಾದ ಅಭ್ಯರ್ಥಿಗಳಿಗೆ ರೂ. ೧೮೦೦-೦೦, ಎರಡನೇ ವರ್ಷದ ವಿದ್ಯಾರ್ಥಿಗಳಿಗೆ ರೂ. ೧೯೦೦-೦೦, ಮೂರನೇ ವರ್ಷದ ವಿದ್ಯಾರ್ಥಿಗಳಿಗೆ ರೂ. ೨೦೦೦-೦೦ಗಳಂತೆ ತಿಂಗಳಿಗೆ ನೀಡಲಾಗುವುದು. ನಿಗದಿತ ಅರ್ಜಿಗಳನ್ನು ಪ್ರಾಚಾರ್ಯರು, ಸರ್ಕಾರಿ ತಾರಾನಾಥ ಆಯುರ್ವೇದ ವೈದ್ಯಕೀಯ ಮಹಾವಿದ್ಯಾಲಯ, ಅನಂತಪುರ ರಸ್ತೆ, ಬಳ್ಳಾರಿ ಇವರಿಗೆ ಖುದ್ದಾಗಿ ಅಥವಾ ಮನಿಯಾರ್ಡರ್ ಮೂಲಕ ಸಂದಾಯ ಮಾಡಿ ಸ್ವವಿಳಾಸದ ಸಾಕಷ್ಟು ಅಂಚೆ ಚೀಟಿ ಲಗತ್ತಿಸಿದ ಲಕೋಟೆಯನ್ನು ಕಳುಹಿಸುವ ಮೂಲಕ ಪಡೆಯಬಹುದು. ಅರ್ಜಿ ಫಾರಂ ಬೆಲೆ ರೂ. ೫೦-೦೦ ಆಗಿರುತ್ತದೆ. ಭರ್ತಿ ಮಾಡಿದ ಅರ್ಜಿಗಳನ್ನು "ಕಾರ್ಯದರ್ಶಿ", ಸ್ನಾತಕೋತ್ತರ ಪದವಿ ಪ್ರವೇಶ ಆಯ್ಕೆ ಸಮಿತಿ, ಭಾರತೀಯ ವೈದ್ಯ ಪದ್ಧತಿಗಳು ಮತ್ತು ಹೋಮಿಯೋಪತಿ ನಿರ್ದೇಶನಾಲಯ, ಧನ್ವಂತರಿ ರಸ್ತೆ ಬೆಂಗಳೂರು-೫೬೦ ೦೦೯. ಇವರಿಗೆ ದಿನಾಂಕ ೨೧-೭-೯೭ರ ಸಂಜೆ ೫-೦೦ ಗಂಟೆಯೊಳಗಾಗಿ ಸಲ್ಲಿಸತಕ್ಕದ್ದು.

ಮದ್ರಾಸ್ ವಿ.ವಿ.

ಕನ್ನಡ ಎಂ.ಫಿಲ್.ಗೆ ಅರ್ಜಿ ಆಹ್ವಾನ

ಮದ್ರಾಸ್ ವಿಶ್ವವಿದ್ಯಾಯನಿಲಯದ ಕನ್ನಡ ವಿಭಾಗದಲ್ಲಿ ಎಂ.ಫಿಲ್ ಮಾಡಲು ಬಯಸುವ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಅರ್ಜಿ ಸಲ್ಲಿಸಲು ಜುಲೈ ೩೧ ಕೊನೆಯ ದಿನಾಂಕ ೧೯೯೧ರ ಜ. ೧ರ ಬಳಿಕ ಎಂ.ಎ. ಪದವಿ ಗಳಿಸಿದವರಾದಲ್ಲಿ ಕನಿಷ್ಠ ಶೇ. ೫೫ ಅಂಕಗಳಲ್ಲಿ ಅದಕ್ಕಿಂತ ಹಿಂದೆ ಆದಲ್ಲಿ ಶೇ. ೫೦ ಅಂಕಗಳನ್ನೂ ಪಡೆದ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಬಹುದು. (ಎಸ್‌ಸಿ/ಎಸ್‌ಟಿ ಆದಲ್ಲಿ ೫ ಅಂಕಗಳು ರಿಯಾಯಿತಿ ಇದೆ)

ಅರ್ಜಿ ಸಲ್ಲಿಸ ಬಯಸುವವರು 'ದಿ ರಿಜಿಸ್ಟ್ರಾರ್‌ಗೆ ಇಂಗ್ಲಿಷ್‌ನಲ್ಲಿ ಒಂದು ಪತ್ರವನ್ನು ರೂ. ೮ ರ ಅಂಚೆ ಚೀಟಿ ಹಚ್ಚಿದ ಸ್ವ ವಿಳಾಸ ವಿರುವ ಉದ್ದನೆಯ ಕವರನ್ನು ಜು. ೩೧ರ ಮೊದಲು 'ದಿ ರಿಜಿಸ್ಟಾರ್ ಯೂನಿವರ್ಸಿಟಿ ಆಫ್ ಮದ್ರಾಸ್', ಚೆಪಾಕ್ ಮದ್ರಾಸ್-೬೦೦೦೦೫, ಎಂಬ ವಿಳಾಸಕ್ಕೆ ಕಳುಹಿಸಬೇಕು. ಭರ್ತಿ ಮಾಡಿದ ಅರ್ಜಿಗಳನ್ನು ಮುಖ್ಯಸ್ಥರು ಕನ್ನಡ ವಿಭಾಗ ಮದ್ರಾಸ್ ವಿ.ವಿ. ಮೆರೀನಾ ಕ್ಯಾಂಪಸ್, ಮದ್ರಾಸ್ ೬೦೦೦೦೫ ಈ ವಿಳಾಸಕ್ಕೆ ಕಳಿಸಬೇಕು.

ಐ.ಪಿ.ಎಸ್. ಮಾಡುವುದು ಹೇಗೆ?

ಐ.ಪಿ.ಎಸ್. ಮಾಡುವುದೆಂದರೆ ಭಾರತದ ಅಧಿಕಾರಶಾಹಿ ಪಂಗಡದಲ್ಲಿ ಬಹಳ ಪ್ರತಿಷ್ಠಿತ ಹುದ್ದೆಗೇರುವುದು. ಈ ಪರೀಕ್ಷೆ ಪಾಸಾದ ಕೂಡಲೇ ಜಿಲ್ಲೆಯೊಂದರ ಪೊಲೀಸ್ ಇಲಾಖೆಯ ಮುಖ್ಯಸ್ಥರಾಗಿ ಅಧಿಕಾರ ಚಲಾಯಿಸುವ ಅವಕಾಶ ಹಾಗೂ ಸವಾಲು ಲಭಿಸುತ್ತದೆ. ಆದರೆ ಈ ಪರೀಕ್ಷೆ ಪಾಸಾಗುವುದು ಬರೀ ಕನಸು ಕಂಡಷ್ಟು ಸುಲಭವಲ್ಲ. ಶ್ರದ್ಧೆ, ಸ್ವವಿಶ್ವಾಸ, ಪ್ರತಿಭೆ, ಸಿದ್ಧತೆ ಇದ್ದರೆ ಈ ಹುದ್ದೆ ನಿಲುಕದ ಹುಳಿ ದ್ರಾಕ್ಷಿಯೂ ಅಲ್ಲ!

ಐ.ಪಿ.ಎಸ್.ಎಂದರೇನು?

ಐ.ಪಿ.ಎಸ್. ಪೂರ್ಣ ಅರ್ಥ ಇಂಡಿಯನ್ ಪೊಲೀಸ್ ಸರ್ವಿಸ್. ನಾಗರಿಕರ ಸುರಕ್ಷತೆ ಮತ್ತು ಸೌಹಾರ್ದತೆಯನ್ನು ಕಾಪಾಡುವ ಜವಾಬ್ದಾರಿ ಇವರದಾಗಿರುತ್ತದೆ. ಈ ಇಲಾಖೆಯು ಮುಖ್ಯವಾಗಿ ದೇಶದಲ್ಲಿಯ ಕಾನೂನು ವ್ಯವಸ್ಥೆ ಕಾಪಾಡುತ್ತದೆ. ಈ ಇಲಾಖೆಯನ್ನು ಕಾರ್ಯಗಳಿಗನುಗುಣವಾಗಿ ಹಲವು ವಿಭಾಗಗಳನ್ನಾಗಿ ವಿಂಗಡಿಸಿದ್ದಾರೆ. ಅವು ಯಾವುವೆಂದರೆ.

೧. ಕ್ರೈಮ್ ಶಾಖೆ,
೨. ಕ್ರಿಮಿನಲ್ ಇನಿವೆಸ್ಟಿಗೇಟಿಂಗ್ ಡಿಪಾರ್ಟ್‌ಮೆಂಟ್ (CID)
೩. ಹೋಮ್‌ಗಾರ್ಡ್ಸ್
೪. ಟ್ರಾಫಿಕ್ ಬ್ಯೂರೋ.

ಅರ್ಹತೆಗಳು

ಐ.ಪಿ.ಎಸ್. ಆಗಬೇಕೆಂದು ಬಯಸುವ ವಿದ್ಯಾರ್ಥಿಗಳು ಕೇಂದ್ರ ಲೋಕಸೇವಾ ಆಯೋಗದವರು ನಡೆಸುವ ಭಾರತೀಯ ನಾಗರೀಕ ಸೇವೆ (ಸಿವಿಲ್ ಸರ್ವಿಸ್) ಪರೀಕ್ಷೆಯನ್ನು ತೆಗೆದುಕೊಳ್ಳಬೇಕಾಗುವುದು. ಈ ಪರೀಕ್ಷೆಗೆ ಅರ್ಹತೆಗಳೆಂದರೆ ವಿದ್ಯಾರ್ಥಿಯ ಕನಿಷ್ಠ ಮತ್ತು ಗರಿಷ್ಠ ವಯಸ್ಸು ೨೧-೨೮ ಆಗಿದ್ದು (ಪರಿಶಿಷ್ಟ ಪಂಗಡ ಹಾಗೂ ಪರಿಶಿಷ್ಟ ಜಾತಿಯವರಿಗೆ ವಯಸ್ಸಿನ ಮಿತಿಯಲ್ಲಿ ೫ ವರ್ಷ, ಇತರ ಹಿಂದುಳಿದ ಪಂಗಡ (ಓ.ಬಿ.ಸಿ.)ಗಳಿಗೆ ೩ ವರ್ಷ ಸಡಿಲಿಕೆ ಇರುತ್ತದೆ) ಹಾಗೂ ಕನಿಷ್ಠ ಪದವಿಯನ್ನು (ಸರಕಾರದಿಂದ ಮಾನ್ಯತೆ ಪಡೆದ ಪದವಿ) ಪಡೆದಿರಬೇಕು. ಈ ಪರೀಕ್ಷೆಯನ್ನು ಸಾಮಾನ್ಯ ವರ್ಗದ ಅಭ್ಯರ್ಥಿಯು ಗರಿಷ್ಠ ನಾಲ್ಕು ಸಲ ಕಟ್ಟಬಹುದಾಗಿದೆ. ಹಿಂದುಳಿದ ಪಂಗಡದ ಅಭ್ಯರ್ಥಿಗಳಿಗೆ ೭ ಬಾರಿ ಪರೀಕ್ಷೆ ತೆಗೆದುಕೊಳ್ಳಲು ಅವಕಾಶವಿದ್ದರೆ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದವರಿಗೆ ಪರೀಕ್ಷಾ ಪ್ರಯತ್ನಗಳ ಮಿತಿ ಇರುವುದಿಲ್ಲ.

ಆಯಾ ವೃತ್ತಿಗಳಲ್ಲಿ ಯಶಸ್ವಿಯಾದವರ ಮೂಲಕವೇ ವಿದ್ಯಾರ್ಥಿಗಳಿಗೆ ವೃತ್ತಿ ಮಾರ್ಗದರ್ಶನ ಮಾಡಿಸುವ ಅಪೂರ್ವ ಪ್ರಯೋಗವಿದು. ಪ್ರತಿ ತಿಂಗಳು ಒಬ್ಬ ವೃತ್ತಿ ನಿರತರು ನಿಮ್ಮ ಮುಂದೆ ಪ್ರತ್ಯಕ್ಷವಾಗಲಿದ್ದಾರೆ.

ಪರೀಕ್ಷಾ ವಿಧಾನ

ಈ ಪರೀಕ್ಷೆಯನ್ನು ಒಟ್ಟಾರೆ ಮೂರು ಭಾಗಗಳನ್ನಾಗಿ ವಿಂಗಡಿಸಿದ್ದಾರೆ. ಅಂದರೆ ಮೊದಲನೆಯಾದಾಗಿ ವಿದ್ಯಾರ್ಥಿಯು ಪ್ರಿಲಿಮಿನರಿ (ಪೂರ್ವಭಾವಿ) ಪರೀಕ್ಷೆಯನ್ನು ಎದುರಿಸಬೇಕಾಗುವುದು. ಇದರಲ್ಲಿ ತೇರ್ಗಡೆಯಾದನಂತರ ಮೆಯನ್ (ಮುಖ್ಯ) ಪರೀಕ್ಷೆ ಎದುರಿಸಬೇಕಾಗುವುದು. ಇದರಲ್ಲಿ ತೇರ್ಗಡೆಯಾದ ನಂತರ ಸಂದರ್ಶನವನ್ನು ಎದುರಿಸಬೇಕಾಗುವುದು. ಈ ಮೇಲಿನ ರೀತಿಯಲ್ಲಿ ವಿದ್ಯಾರ್ಥಿಯನ್ನು ನೇಮಕ ಮಾಡಲಾಗುತ್ತದೆ.

ಅಭ್ಯಸಿಸಬೇಕಾದ ವಿಷಯಗಳು

ಈ ಪರೀಕ್ಷೆಗೆ ಕುಳಿತುಕೊಳ್ಳ ಬಯಸುವ ವಿದ್ಯಾರ್ಥಿಗಳು ಈ ಕೆಳಗೆ ತಿಳಿಸಿದ ವಿಷಯಗಳ ಬಗ್ಗೆ ಗಮನಹರಿಸಬೇಕಾಗುವುದು.

ಪ್ರಿಲಿಮಿನರಿ ಈ ಪರೀಕ್ಷೆಯನ್ನು ಪ್ರತಿ ವರ್ಷ ಜೂನ್ ತಿಂಗಳಲ್ಲಿ ನಡೆಸಲಾಗುವುದು. ಈ ಪರೀಕ್ಷೆಯು ಎರಡು ಪತ್ರಿಕೆಗಳನ್ನು ಒಳಗೊಂಡಿರುತ್ತದೆ. ಮೊದಲನೆಯದಾಗಿ ಜನರಲ್ ಸ್ಟಡಿಸ್ ಪತ್ರಿಕೆಯು ೧೫೦ ಪ್ರಶ್ನೆಗಳನ್ನು ಹೊಂದಿದ್ದು ೧೫೦ ಅಂಕಗಳನ್ನು ಒಳಗೊಂಡಿರುತ್ತದೆ. ಇದಕ್ಕೆ ಸಮಯವಕಾಶ ಎಂದರೆ ೨ ಗಂಟೆಗಳು. ಇದು ಈ ವಿಷಯಗಳ ಮೇಲೆ ಆಧಾರಪಟ್ಟಿರುತ್ತದೆ. ಅವೆಂದರೆ, ಇಂಡಿಯನ್ ಹಿಸ್ಟರಿ, ಕಾನ್‌ಸ್ಟಿಟ್ಯೂಷನ್ ಆಫ್ ಇಂಡಿಯಾ, ಜಿಯೋಗ್ರಫಿ, ಎಕಾನಾಮಿಕ್ಸ್, ಸೈನ್ಸ್ ಮತ್ತು ಕರೆಂಟ್ ಅಫೇರ್ಸ್.


ಎರಡನೆಯದಾಗಿ ಐಚ್ಛಿಕ ವಿಷಯ

ಇದು ವಿದ್ಯಾರ್ಥಿಯ ಇಚ್ಛೆಯ ಮೇರೆಗೆ ಸಂಬಂಧಪಟ್ಟಿರುತ್ತದೆ. ಈ ಪತ್ರಿಕೆಯು ೩೦೦ ಅಂಕಗಳನ್ನು ಹೊಂದಿದ್ದು ೧೨೦ ಪ್ರಶ್ನೆಗಳಿಗೆ ಉತ್ತರಿಸಬೇಕಾಗುವುದು. ಇದಕ್ಕೆ ಕೂಡಾ ಸಮಯವಕಾಶ ೨ ಗಂಟೆಗಳು.

ಈ ಮೇಲಿನ ಎರಡು ಪತ್ರಿಕೆಗಳು ವಸ್ತುನಿಷ್ಟ ಮಾದರಿ (objective type)ಯ, ಬಹು ಆಯ್ಕೆ ರೂಪದ ಪ್ರಶ್ನೆ (Multiple choice questions)ಗಳನ್ನು ಒಳಗೊಂಡಿರುತ್ತದೆ. ಪ್ರತಿ ವರ್ಷ ಸುಮಾರು ೧,೫೦,೦೦೦ ಅಭ್ಯರ್ಥಿಗಳು ಹಾಜರಾಗಿ ಅದರಲ್ಲಿ ಸುಮಾರು ೧೦,೦೦೦ ಅಭ್ಯರ್ಥಿಗಳು ಮೆಯನ್ (ಮುಖ್ಯ) ಪರೀಕ್ಷೆಗೆ ಅರ್ಹರಾಗುತ್ತಾರೆ.

ಮೆಯನ್ ಪರೀಕ್ಷೆಯು ಕೂಡ ಲಿಖಿತ ಪರೀಕ್ಷೆಯಾಗಿದ್ದು ಇದು ನವೆಂಬರ್/ಡಿಸೆಂಬರ್ ತಿಂಗಳಲ್ಲಿ ನಡೆಸಲಾಗುವುದು. ಈ ಪರೀಕ್ಷೆಯಲ್ಲಿ ಕೆಳಗಿನ ರೀತಿಯಲ್ಲಿ ನಡೆಸುತ್ತಾರೆ.

❖ **ಎರಡು ಭಾಷೆಯ ಪತ್ರಿಕೆಗಳು**: ಇವು ಒಂದು ಆಂಗ್ಲ ಭಾಷೆಯಲ್ಲಿ ಹಾಗೂ ಮತ್ತೊಂದು ಯಾವುದಾದರೂ ಭಾರತೀಯ ಭಾಷೆಗಳಲ್ಲಿ ಬರೆಯಬೇಕಾಗುವುದು. ಇದರಲ್ಲಿ ಅಂಕಗಳನ್ನು ಅಂತಿಮ ಪಟ್ಟಿಯನ್ನು (ರ‍್ಯಾಂಕ್) ತಯಾರಿಸುವಾಗ ಪರಿಗಣಿಸಲಾಗುವುದಿಲ್ಲ.



ವಿಜಯ ಸಾಸನೂರು

ನಾವು ಪೊಲೀಸ್ ಇಲಾಖೆಯಲ್ಲಿ ಹಲವಾರು ಜನಪ್ರಿಯ ಹಾಗೂ ಸಾಹಸಮಯ ವ್ಯಕ್ತಿಗಳನ್ನು ಕಂಡಿದ್ದೇವೆ. ಆದರೆ ಪೊಲೀಸ್ ಇಲಾಖೆಯಲ್ಲಿ ತಮ್ಮನ್ನು ತಾವು ಸಕ್ರಿಯವಾಗಿ ತೊಡಗಿಸಿಕೊಂಡಿರುವುದಲ್ಲದೇ ಸಾಹಸಮಯ ಸಾಹಿತ್ಯದಲ್ಲಿ ಸೇವೆ ಸಲ್ಲಿಸಿರುವ ಅಪರೂಪದ ವ್ಯಕ್ತಿ ವಿಜಯ ಸಾಸನೂರು.

ಬಿಜಾಪುರ ಜಿಲ್ಲೆಯವರಾದ ವಿಜಯ ಸಾಸನೂರು ಪದವಿಯನ್ನು ವಿಜ್ಞಾನದ ವಿಷಯದಲ್ಲಿ (ಬಿ.ಎಸ್ಸಿ) ಧಾರವಾಡ ವಿಶ್ವವಿದ್ಯಾಲಯದಿಂದ ೧೯೭೦ರಲ್ಲಿ ಪಡೆದರು. ಆದರೆ ಅವರು ಮುಂದೆ ಐ.ಪಿ.ಎಸ್. ಮುಗಿಸಿ ಪೊಲೀಸ್ ಅಧಿಕಾರಿಯಾದರು. ಇವರು ಕನ್ನಡದಲ್ಲಿ ಅನೇಕ ಸಣ್ಣ ಕಥೆಗಳನ್ನು ಬರೆದಿದ್ದಾರೆ. ಅವರ ಮುಖ್ಯ ಸಂಕಲನಗಳೆಂದರೆ ಅಪರಾಜಿತ, ಉಡುಗೊರೆ, ಕೂರೆಗಳು, ಕ್ಷಣಗಳು, ಉತ್ಸವ, ಏಕಾಂಗಿ, ಶಾಂತಿ ಗ್ರಾಮದ ರಾಜಕೀಯ ಮುಂತಾದವು. ಇವರದು ಸಾಹಸಮಯ ಕಾದಂಬರಿಗಳನ್ನು ಬರೆಯುವುದರಲ್ಲಿ ಎತ್ತಿದ ಕೈ. ಇವರ ಲೇಖನಿಯಲ್ಲಿ ೨೭ ಕಾದಂಬರಿಗಳು ಜನಿಸಿ ನಮ್ಮ ನಾಡಿನಲ್ಲಿ ಮನೆಮಾತಾಗಿವೆ.

ಇವರ ಸಾಹಿತ್ಯ ಇಷ್ಟಕ್ಕೆ ನಿಲ್ಲದೆ ಅದು ಬಣ್ಣದ ಜಗತ್ತಿಗೂ ಕಾಲಿಟ್ಟು ಮುನ್ನಡೆಯಿತು. ಇವರ ಅನೇಕ ಕಾದಂಬರಿಗಳು ಕನ್ನಡ, ತೆಲುಗು, ಮಲೆಯಾಳಂನಲ್ಲಿ ಚಲನಚಿತ್ರವಾಗಿವೆ. ವಿಗ್ರಹ ಚೋರರು, ಮಹಾಪ್ರಚಂಡರು, ಅಜಿತ್, ಜ್ವಾಲಾಮುಖಿ, ಅಪರಂಜಿ, ಸವ್ಯಸಾಚಿ ಇವೆಲ್ಲ ಸಾಹಸಮಯ ಚಿತ್ರಗಳಾಗಿ ಚಿತ್ರರಸಿಕರ ಮನಸೂರೆಗೊಂಡವು. ಸಾಸನೂರರು ಕೌಟುಂಬಿಕ ಸಾಹಿತ್ಯವನ್ನು ಸಹ ರಚಿಸಿದ್ದಾರೆ. ಅವರ ಧ್ರುವತಾರೆ ಒಂದು ಅತ್ಯುತ್ತಮ ಕಾದಂಬರಿ. ಅವರಿಗೆ ಇದರ ಚಿತ್ರಕತೆಗೆ ನಮ್ಮ ರಾಜ್ಯದ ಅತ್ಯುತ್ತಮ ಚಿತ್ರಕತೆ ಪ್ರಶಸ್ತಿ ಬಂದಿದೆ.

ಇವರ ''ಪಾತಾಳಗರಡಿ'' ಧಾರಾವಾಹಿಯು ದೂರದರ್ಶನದಲ್ಲಿ ಪ್ರಸಾರದೊಂದಿಗೆ ಜನಸಾಮಾನ್ಯರನ್ನು ಮುಟ್ಟಿತು. ''ಸೇವೆ'' ಎಂಬ ನಾಟಕ ಬಾನುಲಿ ಕೇಂದ್ರಗಳಲ್ಲಿ ಪ್ರಸಾರವಾಯಿತು. ''ಹಾಡೆನ್ನ ಕೋಗಿಲೆ'' ಎಂಬ ಕವನಗಳ ಧ್ವನಿಸುರುಳಿ ಬಿಡುಗಡೆಮಾಡಿದ್ದಾರೆ. ಜನಸಾಮಾನ್ಯರ ಹಾಗೂ ಪೊಲೀಸ್ ಇಲಾಖೆಯ ನಡುವಿನ ಸಂಬಂಧಗಳನ್ನು ಸುಧಾರಿಸಲು ''ಪೊಲೀಸ್ ಸಾಮೂಹಿಕ ಬ್ಯಾಂಡ್ ವಾದನ'', ''ಕೋಮು ಸೌಹಾರ್ದ'' ಮುಂತಾದ ವಿಷಯಗಳ ಬಗ್ಗೆ ಸುಮಾರು ೧೮ ಸಾಕ್ಷ್ಯ ಚಿತ್ರಗಳನ್ನು ವಿಡಿಯೋ ಕ್ಯಾಸೆಟ್‌ಗಳ ರೂಪದಲ್ಲಿ ಚಿತ್ರಿಸಿದ್ದಾರೆ. ಇವೆಲ್ಲ ಇವರ ಕ್ರಿಯಾಶೀಲ ಬದುಕಿಗೆ ಮಾದರಿಗಳಾಗಿವೆ.

ಬೆಂಗಳೂರು ಮತ್ತು ಕಲಬುರ್ಗಿ ಜಿಲ್ಲೆಯ ಎಸ್ಪಿಯಾಗಿ, ಪೊಲೀಸ್ ತರಬೇತಿ ಕಾಲೇಜಿನ ಪ್ರಾಂಶುಪಾಲರಾಗಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ವಾರ್ತಾ ಮತ್ತು ಪ್ರಚಾರ ಇಲಾಖೆ, ಪ್ರವಾಸೋದ್ಯಮ ಇಲಾಖೆ ಸೇರಿದಂತೆ ಹಲವಾರು ಇಲಾಖೆಗಳಲ್ಲಿ ನಿರ್ದೇಶಕರಾಗಿ ಈಗ ಐ.ಜಿ.ಪಿ. ಯಾಗಿರುವ ವಿಜಯ ಸಾಸನೂರು ಅವರು ಎಲ್ಲರಿಗೂ ಚಿರಪರಿಚಿತರಾಗಿರುವುದು ಕ್ರಿಯಾಶೀಲ ಬರಹಗಾರರಾಗಿ.

''ಪ್ರತಿಯೊಬ್ಬ ಯಶಸ್ವಿ ವ್ಯಕ್ತಿಯ ಹಿಂದೆ ಮಾನಿನಿಯ ಪ್ರೋತ್ಸಾಹವಿರುತ್ತದೆ'' ಎಂಬುದು ಲೋಕರೂಢಿಯಾದ ಮಾತು. ಈ ಮಾತು ವಿಜಯ ಸಾಸನೂರು ಜೀವನದಲ್ಲಿ ನೂರಕ್ಕೆ ನೂರರಷ್ಟು ಸತ್ಯ. ಇವರ ಸಹಧರ್ಮಿಣಿ ವಿದ್ಯುಲ್ಲತಾ, ಪತಿಯ ಎಲ್ಲ ಚಟುವಟಿಕೆಗಳಲ್ಲಿ ಭಾಗಿಯಾಗಿ ತಮ್ಮ ಯಜಮಾನರ ಶ್ರೇಯಸ್ಸಿಗೆ ಕಾರಣರಾದರು. ಇಷ್ಟೇ ಅಲ್ಲದೆ ಇವರು ಸಹ ಹೆಸರಾಂತ ಕಾದಂಬರಿಗಾರ್ತಿ. ಸಾಸನೂರು ಅವರು ಆಡಳಿತ ನಿರ್ವಹಣೆ, ಬರವಣಿಗೆಯ ಜೊತೆಗೆ ತಮ್ಮ ಧರ್ಮಪತ್ನಿಯೊಂದಿಗೆ ಅನೇಕ ಸಾಮಾಜಿಕ ಕೆಲಸಗಳಲ್ಲಿ ಭಾಗವಹಿಸುತ್ತಾರೆ.

ವಿಜಯ ಸಾಸನೂರರು ೪೯ ವಸಂತಗಳನ್ನು ಕಂಡಿದ್ದರೂ ಕ್ರಿಯಾಶೀಲತೆಯಲ್ಲಿ ಇನ್ನೂ ಉಲ್ಲಾಸ ಉಳಿಸಿಕೊಂಡಿದ್ದಾರೆ.

ಆದರೆ ಈ ಪತ್ರಿಕೆಗಳಲ್ಲಿ ತೇರ್ಗಡೆಯಾಗುವುದು ಅವಶ್ಯಕವಾಗಿರುತ್ತದೆ.

❖ ಎರಡು ಜನರಲ್ ಸ್ಟಡಿಸ್ ಪತ್ರಿಕೆಗಳು: ಒಂದು ಪತ್ರಿಕೆ ೩೦೦ ಅಂಕಗಳನ್ನು ಹೊಂದಿದ್ದು ಒಟ್ಟು ೬೦೦ ಅಂಕಗಳಿಗೆ ಇರುತ್ತದೆ.

❖ ನಾಲ್ಕು ಪತ್ರಿಕೆಗಳು ಐಚ್ಛಿಕ ವಿಷಯಗಳನ್ನು ಹೊಂದಿದ್ದು ಪ್ರತಿ ಪತ್ರಿಕೆಯು ೩೦೦ ಅಂಕಗಳನ್ನು ಹೊಂದಿದ್ದು ಒಟ್ಟು ೧೨೦೦ ಅಂಕಗಳನ್ನು ಹೊಂದಿರುತ್ತದೆ. ಇದು ಟಿಪ್ಪಣಿ ರೂಪದಲ್ಲಿ ಇರುತ್ತದೆ. ಈ ಪರೀಕ್ಷೆಯಲ್ಲಿ ಸುಮಾರು ೨೦೦೦ ಅಭ್ಯರ್ಥಿಗಳು ತೇರ್ಗಡೆಯಾಗುತ್ತಾರೆ.

ಮೂರನೆಯದಾಗಿ ಸಂದರ್ಶನ ಪರೀಕ್ಷೆ

ಇದು ಕೊನೆಯ ಹಂತವಾಗಿದ್ದು, ಇದರಲ್ಲಿ ಮೌಖಿಕ ಪ್ರಶ್ನೆಗಳನ್ನು ಕೇಳಲಾಗುವುದು. ಈ ಹಂತವು ಒಟ್ಟಾರೆ ೨೫೦ ಅಂಕಗಳನ್ನು ಹೊಂದಿದ್ದು, ೨೦೦೦ ಅಭ್ಯರ್ಥಿಗಳಲ್ಲಿ ೧೦೦೦ ಅಭ್ಯರ್ಥಿಗಳು ತೇರ್ಗಡೆಯಾಗುತ್ತಾರೆ. ರ್‍ಯಾಂಕಿಂಗ್ ವಿಧಾನದಲ್ಲಿ ಹುದ್ದೆಗಳನ್ನು ಕೊಡಲಾಗುವುದು. ಮೊದಲ ೧೦೦ ಅಭ್ಯರ್ಥಿಗಳನ್ನು ಐ.ಪಿ.ಎಸ್. ಹಾಗೂ ನಂತರ ಸುಮಾರು ೧೫೦ ಅಭ್ಯರ್ಥಿಗಳನ್ನು ಐ.ಪಿ.ಎಸ್. ಅಧಿಕಾರಿಗಳನ್ನಾಗಿ ಆಯ್ಕೆ ಮಾಡಲಾಗುವುದು.

ಈ ಪರೀಕ್ಷೆಗೆ ಸಿದ್ಧತೆಗಳು

ಈ ಪರೀಕ್ಷೆಯನ್ನು ತೇರ್ಗಡೆಯಾಗಲು

ಅಭ್ಯರ್ಥಿಯ ಸ್ವಂತ ತಿಳುವಳಿಕೆಯ ಮೇಲೆ ಆಧಾರಪಟ್ಟಿರುತ್ತದೆ. ಇದಕ್ಕೆ ಅನುಗುಣವಾಗಿ ಸುಮಾರು ಪುಸ್ತಕಗಳು ಮಾರುಕಟ್ಟೆಯಲ್ಲಿ ದೊರೆಯುತ್ತವೆ. ಈ ಪುಸ್ತಕಗಳು ಓದಬೇಕಾದ ವಿಷಯಗಳು, ಹಿಂದಿನ ಪ್ರಶ್ನೋತ್ತರಗಳು ಹಾಗೂ ತೇರ್ಗಡೆ ಹೊಂದಲು ಕೆಲವು ಮುಂಜಾಗ್ರತೆ ಮಾಹಿತಿಗಳನ್ನು ಹೊಂದಿರುತ್ತವೆ. ಅಭ್ಯರ್ಥಿಯು ದಿನಾಲು ದಿನ ಪತ್ರಿಕೆ, ಮಾಸ ಪತ್ರಿಕೆಗಳು, ವಾರ ಪತ್ರಿಕೆಗಳು, ದೇಶಿಯ ಹಾಗೂ ವಿದೇಶಿಯ ಮಾಹಿತಿಗಳನ್ನು ಗ್ರಹಿಸುವುದು ಬಹಳ ಉಪಯೋಗಕಾರಿ. ಇದು ಅಭ್ಯರ್ಥಿಯು ವಿಚಾರ ಶಕ್ತಿಯನ್ನು ಹೆಚ್ಚಿಸುತ್ತದೆ. ಅಭ್ಯರ್ಥಿಯ ಇವಲ್ಲದೆ ಎಲ್ಲಾ ವಿಷಯಗಳಲ್ಲಿ ಅಂದರೆ, ಆಟ, ವಿಜ್ಞಾನ ತಾಂತ್ರಿಕತೆ, ಜನರಲ್ ಸ್ಟಡಿಸ್ ಇವುಗಳ ಬಗ್ಗೆ ಹಾಗೂ ತಾನು ಇರುವ ಸ್ಥಳದ ಬಗ್ಗೆ, ಓದಿದ ವಿಷಯದ ಬಗ್ಗೆ ಆಳವಾದ ವಿಷಯ ಗ್ರಹಣ ಹೊಂದಿದ್ದು, ಇದನ್ನು ವಿಶ್ಲೇಷಿಸುವ ಸಾಮರ್ಥ್ಯ ಹೊಂದಿದವನಾಗಿರಬೇಕು.

ಸಾಕಷ್ಟು ವಿದ್ಯಾಸಂಸ್ಥೆಗಳು, ಖಾಸಗಿ ಸಂಸ್ಥೆಗಳು ಸುಮಾರು ಪಟ್ಟಣ ಹಾಗೂ ನಗರಗಳಲ್ಲಿ ಈ ಪರೀಕ್ಷೆಯ ವಿದ್ಯಾಭ್ಯಾಸವನ್ನು ನಡೆಸುತ್ತಿವೆ. ಇವೆಲ್ಲಕ್ಕಿಂತ ಮೇಲಾಗಿ ಅಭ್ಯರ್ಥಿಯು ಸ್ವಂತ ತಿಳುವಳಿಕೆ ಹೊಂದಿರುವುದು ಉಚಿತ.

ಈ ಮೇಲಿನ ೩ ವಿಭಾಗಗಳಲ್ಲಿ ತೇರ್ಗಡೆಯಾದ ವಿದ್ಯಾರ್ಥಿಯು ೪ ತಿಂಗಳ ಕಾಲ ತರಬೇತಿಯನ್ನು ಪಡೆಯಬೇಕಾಗುವುದು. ಇದಾದನಂತರ ಅಭ್ಯರ್ಥಿಯನ್ನು ಆಯ್ಕೆ ಮಾಡಲಾಗುವುದು.

ಜಿಲ್ಲಾಧಿಕಾರಿ ಆಗಲು ಏನು ಮಾಡಬೇಕು?

ಜಿಲ್ಲಾಧಿಕಾರಿ ಆಗುವ ಕನಸು ಕಾಣಲು ಯಾವುದೇ ನಿರ್ಬಂಧವಿಲ್ಲ. ಆದರೆ ಕನಸಿದವರೆಲ್ಲ ಜಿಲ್ಲಾಧಿಕಾರಿ ಆಗಲು ಸಾಧ್ಯವಿಲ್ಲವೆಂಬುದು ದಿಟ. ಹಾಗಾದರೆ ನಿಜಕ್ಕೂ ಜಿಲ್ಲಾಧಿಕಾರಿ ಹುದ್ದೆ ಎಂತಹದು? ಈ ಹುದ್ದೆ ಗಿಟ್ಟಿಸಬೇಕಾದರೆ ಅರ್ಹತೆಯೇನು? ಯಾವ ಪರೀಕ್ಷೆ ಪಾಸಾಗಬೇಕು? ಮುಂತಾದ ಸಂಪೂರ್ಣ ಮಾಹಿತಿಯನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು.

ಈ ಎಲ್ಲಾ ಮಾಹಿತಿಯನ್ನು ಒಬ್ಬ ಜಿಲ್ಲಾಧಿಕಾರಿಯೇ ನೀಡುತ್ತಾರೆ!

..........ನಿರೀಕ್ಷಿಸಿ !

ಬ್ಯಾಂಕಿಂಗ್ ನೇಮಕಾತಿ; ತ್ವರೆ ಮಾಡಿ, ತಯಾರಾಗಿರಿ

ರಾಷ್ಟ್ರೀಯ ಬ್ಯಾಂಕುಗಳಲ್ಲಿ ಖಾಲಿ ಇರುವ ಹಲವಾರು ಹುದ್ದೆಗಳಿಗಾಗಿ ದಕ್ಷಿಣ ವಲಯದ ಬ್ಯಾಂಕಿಂಗ್ ಸೇವಾ ನೇಮಕಾತಿ ಮಂಡಳಿಯವರು ಅರ್ಜಿ ಆಹ್ವಾನಿಸಿದ್ದಾರೆ. ಜುಲೈ ೨೫, ೧೯೯೭, ಅರ್ಜಿ ಸಲ್ಲಿಸಲು ಕೊನೆಯ ದಿನಾಂಕವಾಗಿದೆ. ಈ ನೇಮಕಾತಿ ಕುರಿತಂತೆ ಬರುವ ಅಕ್ಟೋಬರ್‌ನ ೧೯ಕ್ಕೆ ಪರೀಕ್ಷೆಗಳಿವೆ.

ಈ ಹುದ್ದೆಗೆ ಅರ್ಜಿ ಸಲ್ಲಿಸುವವರು ದಿನಪತ್ರಿಕೆಗಳಲ್ಲಿ ನೀಡಿರುವ ಫಾರ್ಮೆಟ್‌ನ್ನು ಸ್ಪಷ್ಟವಾಗಿ ಟೈಪು ಮಾಡಿಸಿ ಮಾಹಿತಿ ತುಂಬಿ ಕಳಿಸಬಹುದು (೨೬-೬-೯೬ರ ಸಂಯುಕ್ತ ಕರ್ನಾಟಕ ದಿನಪತ್ರಿಕೆ ನೋಡಿ) ಇಲ್ಲವೆ ಕೆಲವು ಟೈಪ್ ಹಾಗೂ ಝೆರಾಕ್ಸ್ ಅಂಗಡಿಗಳಲ್ಲಿ ಈ ಫಾರ್ಮುಗಳು ದೊರೆಯುತ್ತವೆ.

೧೮ ರಿಂದ ೨೬ ವರ್ಷದವರೆಗೆ ವಯೋಮಿತಿ ಇದೆ. ಡಿಗ್ರಿ ಪಾಸಾದವರು, ಪಿಯುಸಿಯಲ್ಲಿ ಶೇ.೫೦ಕ್ಕಿಂತ ಕಡಿಮೆ ಇಲ್ಲದೆ ಅಂಕ ಗಳಿಸಿದವರು ಹಾಗೂ ಮೆಟ್ರಿಕ್ (ಹತ್ತನೆ ತರಗತಿ)ನಲ್ಲಿ ಶೇ.೬೦ ಹಾಗೆ ಅಧಿಕ ಅಂಕ ಗಳಿಸಿದವರು ಅರ್ಜಿ ಹಾಕಲು ಅರ್ಹರು.

ಎಸ್‌ಸಿ, ಎಸ್.ಟಿ. ಎಕ್ಸ್‌ಎಸ್ ಹಾಗೂ ಓಎಚ್ ಗುಂಪಿಗೆ ಸೇರಿದವರಿಗೆ ಪಿ.ಯು.ಸಿ. ಪಾಸು, ಇಲ್ಲವೆ ಡಿಪ್ಲೊಮಾ ಇನ್ ಬ್ಯಾಂಕಿಂಗ್ ಇಲ್ಲವೆ ಮೆಟ್ರಿಕ್‌ನಲ್ಲಿ ಶೇ.೫೦ ರಷ್ಟು ಅಂಕ ಗಳಿಸಿದರೆ ಸಾಕು. ಮಾಜಿ ಯೋಧರು ಅರ್ಜಿ ಸಲ್ಲಿಸುವವರಾದರೆ ಅವರು ಇಲಾಖಾ ಪರೀಕ್ಷೆ ಪಾಸು ಮಾಡಿರಬೇಕು. ಉದಾಹರಣೆಗೆ ಪಿ.ಎ.ಎಫ್. ಕಾರ್ಪೊರಲ್ ಎಜುಕೇಶನ್ ಟೆಸ್ಟ್ ನಂತಹ ಪರೀಕ್ಷೆಗಳು ಮೆಟ್ರಿಕ್ ಪರೀಕ್ಷೆವರೆಗಿನ ಅರ್ಹತೆ ಹೊಂದಿರಬೇಕಾದುದು ಅವಶ್ಯ.

ಇದರಲ್ಲಿ ಹಿಂದೀ, ಇಂಗ್ಲೀಷ್ ಟೈಪಿಸ್ಟ್ ಹುದ್ದೆಗಳಿಗೂ ಇವೆ. ಮೇಲಿನ ಶೈಕ್ಷಣಿಕ ವಿದ್ಯಾರ್ಹತೆಗಳನ್ನಲ್ಲದೇ ಇಂಗ್ಲೀಷ್ ಟೈಪ್ ರೈಟಿಂಗ್‌ನಲ್ಲಿ ೩೦ ಶಬ್ದಗಳು ಪ್ರತಿ ನಿಮಿಷಕ್ಕೆ, ಹಿಂದೀ ಭಾಷೆಯಲ್ಲಿ ಪ್ರತಿ ನಿಮಿಷಕ್ಕೆ ೨೫ ಶಬ್ದಗಳ ವೇಗವಿರಬೇಕು. ಸ್ಟೆನೊ ಹುದ್ದೆಗೆ ಶೈಕ್ಷಣಿಕ ಅರ್ಹತೆಯೊಂದಿಗೆ (ಮೆಟ್ರಿಕ್ ಪಾಸು) ಇಂಗ್ಲೀಷ್ ಟೈಪಿಂಗ್ ನಿಮಿಷಕ್ಕೆ ೩೦ ಶಬ್ದ, ಶಾರ್ಟ್‌ಹ್ಯಾಂಡ್‌ನಲ್ಲಿ ಪ್ರತಿ ನಿಮಿಷಕ್ಕೆ ೮೦ ಶಬ್ದಗಳ ವೇಗವಿರಬೇಕು. ಹಿಂದೀ ಸ್ಟೆನೊಗಳಿಗೆ ಪ್ರತಿನಿಮಿಷಕ್ಕೆ ೬೦ ಶಬ್ದಗಳ ವೇಗಬೇಕು. ಟೈಪಿಸ್ಟ್ ಕಮ್ ಟೆಲೆಕ್ಸ್ ಆಪರೇಟರ್‌ಗಳ ಹುದ್ದೆಗಳಿಗೆ ಟೆಲಿಫೋನ್ ಆಪರೇಟಿಂಗ್‌ನಲ್ಲಿ ವಿಶೇಷ ಜಾಣ್ಮೆ (ಟೈಪಿಂಗ್‌ನೊಂದಿಗೆ) ಪಿಬಿಎಕ್ಸ್, ಪಿಎಬಿಎಕ್ಸ್, ಇಪಿಎಬಿಎಕ್ಸ್ ಹಾಗೂ ಟೆಲೆಕ್ಸ್ ಬಗ್ಗೆ ಜ್ಞಾನವಿರಬೇಕು.

ಅರ್ಹ ಅರ್ಜಿಗಳನ್ನು ಪರಿಗಣಿಸಿ ಲಿಖಿತ ಪರೀಕ್ಷೆಗೆ ಕರೆಯಲಾಗುತ್ತದೆ. ಇದರಲ್ಲಿ ಅವರದೇ ಆದ ಪ್ರಶ್ನೋತ್ತರ-ಬುಕ್‌ಲೆಟ್‌ವೊಂದನ್ನು ನೀಡಲಾಗುತ್ತದೆ. ಅದರಲ್ಲಿಯೇ ಉತ್ತರಿಸಿ ಅದನ್ನು ಮರಳಿಸಬೇಕಾಗುತ್ತದೆ. ರೀಜನಿಂಗ್ ಎಬಿಲಿಟಿ, ನ್ಯುಮಿರಿಕಲ್ (ಗಣಿತ) ಎಬಿಲಿಟಿ, ಕ್ಲರಿಕಲ್ ಅಪ್ಟಿಟ್ಯುತ್ ಇಂಗ್ಲೀಷ್ ಭಾಷಾ ಜ್ಞಾನ, ವಿವರಣಾತ್ಮಕ ನಿಬಂಧ ಬರೆಯುವ ಪತ್ರಿಕೆಯೊಂದನ್ನು ನೀಡಲಾಗುತ್ತದೆ. ಇದಲ್ಲದೇ ಟೈಪಿಂಗ್, ಸ್ಟೆನೊಗಳಿಗೆ ಅವರ ವಿದ್ಯಾರ್ಹತೆಗನುಗುಣವಾಗಿ ಪರೀಕ್ಷೆ ನಡೆಸಲಾಗುತ್ತದೆ.

ಯಾವ ಕೇಂದ್ರಕ್ಕೆ ಅರ್ಜಿ ಹಾಕಬೇಕು?

ಬೆಂಗಳೂರು (೮೩), ಧಾರವಾಡ (೧೦೦), ಗುಲ್ಬಗಾ (೮೮), ಮಂಗಳೂರು (೧೭೩), ತುಮಕೂರು (೯೨) ಹೀಗೆ ಐದು ವಲಯಗಳಲ್ಲಿ ಖಾಲಿ ಹುದ್ದೆಗಳನ್ನು ವಿಂಗಡಿಸಲಾಗಿದೆ. ಬೆಂಗಳೂರು ವಲಯದವರಿಗೆ ಬೆಂಗಳೂರು, ಮಂಡ್ಯ ಹಾಗೂ ಮೈಸೂರು, ಧಾರವಾಡ ವಲಯದವರಿಗೆ ಧಾರವಾಡ, ಬೆಳಗಾವಿ, ಹುಬ್ಬಳ್ಳಿ, ಕಾರವಾರ ಹಾಗೂ ಶಿವಮೊಗ್ಗ; ಗುಲ್ಬರ್ಗಾ ವಲಯದವರಿಗೆ ಗುಲ್ಬರ್ಗಾ, ಬೀದರ, ಬಿಜಾಪುರ ಮತ್ತು

ಟಿ.ಸಿ.ಎಚ್. ಪ್ರವೇಶಕ್ಕೆ ಅರ್ಜಿ

೧೯೯೭-೯೮ನೇ ಸಾಲಿಗೆ ಟಿ.ಸಿ.ಎಚ್. ಕೋರ್ಸಿನ ವ್ಯಾಸಂಗಕ್ಕಾಗಿ ರಾಜ್ಯದ ಎಲ್ಲಾ ಸರ್ಕಾರಿ ಹಾಗೂ ಮಾನ್ಯತೆ ಪಡೆದ ಶಿಕ್ಷಕರ ತರಬೇತಿ ಸಂಸ್ಥೆಗಳಿಗೆ (ಟಿ.ಟಿ.ಐ.) ಸರ್ಕಾರಿ ಸೀಟುಗಳನ್ನು ತುಂಬಲು ಕರ್ನಾಟಕದ ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ವಿದ್ಯಾರ್ಹತೆ : ದ್ವಿತೀಯ ಪಿ.ಯು.ಸಿ. ಅಥವಾ ತತ್ಸಮಾನ ಪರೀಕ್ಷೆಯಲ್ಲಿ ತೇರ್ಗಡೆಯಾಗಿರಬೇಕು. (ಜೆ.ಒ.ಸಿ. ಅಭ್ಯರ್ಥಿಗಳನ್ನು ಹೊರತುಪಡಿಸಿ) ಕನಿಷ್ಠ ಶೇಕಡ ೫೦ ಅಂಕಗಳನ್ನು ಪಡೆದಿರಬೇಕು. ಪ.ಜಾ., ಪ.ಪಂಗಡ, ಪ್ರವರ್ಗ-೧ ಮತ್ತು ಅಂಗವಿಕಲ ಅಭ್ಯರ್ಥಿಗಳು ಕನಿಷ್ಠ ಶೇಕಡ ೪೫ ಅಂಕಗಳನ್ನು ಪಡೆದಿರಬೇಕು.

ಅರ್ಜಿ ಶುಲ್ಕ : ರೂ. ೨೦-೦೦ ಅನ್ನು ನಗದಾಗಿ ಪಾವತಿ ಮಾಡಿ ಅರ್ಜಿ ಪಡೆಯಬಹುದು.

ಅರ್ಜಿ ದೊರೆಯುವ ಸ್ಥಳ ಮತ್ತು ಭರ್ತಿ ಮಾಡಿದ ಅರ್ಜಿಗಳನ್ನು ಸಲ್ಲಿಸುವ ಸ್ಥಳ :

೧. ರಾಜ್ಯದ ಎಲ್ಲಾ ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆಗಳು.

೨. ಸರ್ಕಾರಿ ಉರ್ದು ಶಿಕ್ಷಕರ ತರಬೇತಿ ಸಂಸ್ಥೆ, ಬಿಜಾಪುರ.

೩. ಸಿ.ಟಿ.ಇ. ಚಿತ್ರದುರ್ಗ.

ಅರ್ಜಿ ದೊರೆಯುವ ದಿನಾಂಕ : ದಿನಾಂಕ ೧೫-೭-೯೭ ರಿಂದ ೨೬-೭-೯೭ರವರೆಗೆ

ನೋಂದಣಿ ಶುಲ್ಕ : ಸಾಮಾನ್ಯ ಮತ್ತು ಇತರೆ ವರ್ಗದವರಿಗೆ ರೂ.೫೦/- ಮತ್ತು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ರೂ. ೨೫/- ಅನ್ನು ಸ್ಟೇಟ್ ಬ್ಯಾಂಕ್ ಆಫ್ ಮೈಸೂರಿನ ನಿಗದಿಪಡಿಸಿದ ಶಾಖೆಯಲ್ಲಿ ಬ್ಯಾಂಕ್ ಚಲನ್ ಮೂಲಕ ಪಾವತಿ ಮಾಡಬೇಕು.

ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ : ೨೬-೭-೧೯೯೭ ಸಂಜೆ ೫ ಗಂಟೆಯೊಳಗೆ.

ಅರ್ಜಿ ದೊರೆಯುವ-ಸಲ್ಲಿಸುವ ಸ್ಥಳ :

ರಾಜ್ಯದ ಎಲ್ಲಾ ಜಿಲ್ಲಾ ಕೇಂದ್ರಗಳಲ್ಲಿರುವ ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ ಕಛೇರಿಯಲ್ಲಿ ಅರ್ಜಿಗಳು ಲಭಿಸುತ್ತವೆ.

ರಾಯಚೂರು; ಮಂಗಳೂರು ವಲಯದವರಿಗೆ ದ.ಕ., ಚಿಕ್ಕಮಗಳೂರು, ಹಾಸನ ಹಾಗೂ ಕೊಡಗು; ತುಮಕೂರು ವಲಯದವರಿಗೆ ತುಮಕೂರು, ಬಳ್ಳಾರಿ, ಕೋಲಾರ ಹಾಗೂ ಚಿತ್ರದುರ್ಗಗಳನ್ನು ಪರೀಕ್ಷಾ ಕೇಂದ್ರಗಳೆಂದು ವಿಂಗಡಿಸಲಾಗಿದೆ. ಆಯಾ ವಲಯಕ್ಕೆ ಸೇರಿದ ಜಿಲ್ಲೆಯವರು ಸಂಬಂಧಪಟ್ಟ ವಲಯಕ್ಕೆ ಅರ್ಜಿ ಹಾಕಬೇಕಾದುದು ಅಗತ್ಯ. ಅರ್ಜಿ ಹಾಕುವಾಗ ಆಯಾ ಕೇಂದ್ರಗಳ ಕೋಡ್‌ನಂಬರುಗಳನ್ನು ಗಮನಿಸಬೇಕು.

ವಯೋಮಿತಿ ಸಡಿಲಿಕೆ ಹೇಗೆ?

ಎಸ್‌ಸಿ, ಎಸ್‌ಟಿ ಪಂಗಡದವರಿಗೆ ನಿಗದಿತ ವಯೋಮಿತಿಗಿಂತ ೫ ವರ್ಷ, ಓಎಚ್ ಗುಂಪಿನವರಿಗೆ ೧೦ ವರ್ಷ, ಓಬಿಸಿಯವರಿಗೆ ೩ ವರ್ಷ ಹಾಗೂ ಎಕ್ಸ್‌ಎಸ್ ಗುಂಪಿಗೆ ೩ ವರ್ಷ ವಯೋಮಿತಿಯಲ್ಲಿ ಸಡಿಲಿಕೆ ಇದೆ.

ಪರೀಕ್ಷಾ ಶುಲ್ಕ

ಎಸ್‌ಸಿ, ಎಸ್‌ಟಿ, ಎಕ್ಸ್‌ಎಸ್ ಅಭ್ಯರ್ಥಿಗಳಿಗೆ ಕೇವಲ ೧೦ ರೂಪಾಯಿ (ಒಂದಕ್ಕಿಂತ ಹೆಚ್ಚು ಹುದ್ದೆಗಳಿದ್ದರೂ ಅಷ್ಟೇ ಶುಲ್ಕ) ಉಳಿದ ಗುಂಪಿಗೆ ೪೦ ರೂಪಾಯಿ ಹಾಗೂ ಒಂದಕ್ಕಿಂತ ಹೆಚ್ಚು ಹುದ್ದೆಗಳಿಗೆ-ಪ್ರತ್ಯೇಕ ೧೫ ರೂ. ಪೋಸ್ಟಲ್ ಆರ್ಡರ್ ಅಥವಾ ಬ್ಯಾಂಕ್ ಡಿಡಿ ಲಗತ್ತಿಸಬೇಕು.

ಪರೀಕ್ಷಾ ಪೂರ್ವ ತರಬೇತಿ (ಪ್ರತ್ಯೇಕ ಅರ್ಜಿ)

ಬ್ಯಾಂಕಿಂಗ್ ಪರೀಕ್ಷೆಗೆ ಸ್ಪರ್ಧಿಸಲಿಚ್ಛಿಸುವ ಎಸ್‌ಸಿ, ಎಸ್‌ಟಿ ಎಕ್ಸ್‌ಎಸ್ ಹಾಗೂ ಮೈನಾರ್ಟಿ ಗುಂಪಿನವರಿಗೆ ಬೆಂಗಳೂರು (೧೧), ಬೆಳಗಾವಿ (೨೨), ಬಳ್ಳಾರಿ (೫೨), ಬೀದರ (೩೨), ಬಿಜಾಪುರ (೩೩), ದಾವಣಗೆರೆ (೫೩), ಧಾರವಾಡ (೨೧), ಗುಲ್ಬರ್ಗಾ (೩೧), ಹುಬ್ಬಳ್ಳಿ (೨೩), ಮಂಗಳೂರು (೪೧) ಹಾಗೂ ಮೈಸೂರು (೧೩) ಇಲ್ಲಿ ತರಬೇತಿ ಕೇಂದ್ರಗಳಿಗೆ ಬ್ರಾಕೆಟ್ಟಿನಲ್ಲಿ ಆಯಾ ಕೇಂದ್ರಗಳ ಕೋಡ್ ನಂಬರ್ ನೀಡಲಾಗಿದೆ. ಈ ತರಬೇತಿ ಕುರಿತಂತೆ ಪ್ರತ್ಯೇಕ ಅರ್ಜಿಯನ್ನು ಬೋರ್ಡ್‌ಗೆ ಸಲ್ಲಿಸಬೇಕು. ಬೋರ್ಡು ಈ ಬಗ್ಗೆ ಸಂಪೂರ್ಣ ಹಕ್ಕನ್ನು ಕಾಯ್ದಿರಿಸಿಕೊಂಡಿದೆ. ಮೊದಲು ಅರ್ಜಿ ಸಲ್ಲಿಸುವವರಿಗೆ ಮೊದಲು ಆದ್ಯತೆ. ಈ ತರಬೇತಿಯನ್ನು ಕೆಲವು ಸ್ವಯಂ ಸೇವಾ ಸಂಸ್ಥೆಗಳು ಹಾಗೂ ಇತರೆ ಆಸಕ್ತ ಸಂಸ್ಥೆಗಳು ನಡೆಸಲಿವೆ. ಇದರ ಎಲ್ಲ ವೆಚ್ಚವನ್ನು (ತರಬೇತಿ) ಅಭ್ಯರ್ಥಿಗಳೇ ಭರಿಸಬೇಕು.

ಅರ್ಜಿ ಎಲ್ಲಿ ಕಳಿಸಬೇಕು?

ದಿ ಸೆಕ್ರೆಟರಿ, ಬ್ಯಾಂಕಿಂಗ್ ಸರ್ವಿಸ್ ರಿಕ್ರುಟ್‌ಮೆಂಟ್ ಬೋರ್ಡ್, ೧೯/೫ ಮತ್ತು ೧೯/೬ ಕರೀಮ್ ಟಾವರ್ಸ್, ಕನ್ನಿಂಗ್ ಹ್ಯಾಂ ರೋಡ್, ಬೆಂಗಳೂರು-೫೨. ಯಾವ ಹುದ್ದೆ ಎಂಬುದನ್ನು ಹಾಗೂ (ಟೆಸ್ಟ್‌ಸೆಂಬರ್) ಬಗ್ಗೆ ಅರ್ಜಿ ಕವರ್ ಮೇಲೆ ನಮೂದಿಸಬೇಕು. ●

ಎಂ.ಬಿ.ಎ. ಅರ್ಹತೆ ಅಗತ್ಯಗಳೇನು?

ಎಂ.ಬಿ.ಎ. ಎಂದರೆ ಮಾಸ್ಟರ್ ಆಫ್ ಬಿಸಿನೆಸ್ ಆ್ಯಡ್ಮಿನಿಸ್ಟ್ರೇಶನ್. ಇದೊಂದು ಸ್ನಾತಕೋತ್ತರ ಪದವಿ. ಪದವಿ ಪರೀಕ್ಷೆಯಲ್ಲಿ ಇಲ್ಲವೆ ಇಂಜಿನೀಯರಿಂಗ್ ವೃತ್ತಿಪರ ಪದವಿಯಲ್ಲಿ ಮೊದಲ ದರ್ಜೆಯಲ್ಲಿ ಪಾಸು ಮಾಡಿಕೊಂಡವರಿಗೆ ಹೆಚ್ಚು ಫಲಪ್ರದವಾದುದು. ಇಂದಿನ ಉದ್ಯಮ ವಲಯಕ್ಕೆ ಪದವೀಧರರು ಅತ್ಯವಶ್ಯ-ಅನಿವಾರ್ಯ. ಎರಡು ವರ್ಷಗಳ ಅವಧಿಯ ಸ್ನಾತಕೋತ್ತರ ಪದವಿ ಇದಾಗಿದೆ.

ಈ ಪದವಿ ಪಡೆಯಲಿಕ್ಕೆ ಝೀ ಟಿವಿ ಚಾನಲ್ ಸಹ ಶೈಕ್ಷಣಿಕ ಕಾರ್ಯಕ್ರಮ ನೀಡುತ್ತವೆ. ಆದರೆ ಇದನ್ನು ಅಂಚೆ ಶಿಕ್ಷಣಕ್ಕಿಂತ ರೆಗ್ಯುಲರ್ ಆಗಿ ಓದುವುದು ಉತ್ತಮ.

ಪ್ರವೇಶ ಪರೀಕ್ಷೆ

ಎಂಬಿಎಗೆ ಸೇರಲು ಸಾಮಾನ್ಯ ಪ್ರವೇಶ ಪರೀಕ್ಷೆ (ಸಿಎಟಿ) ಕಡ್ಡಾಯವಿದೆ. ಇದರಲ್ಲಿ ಗುಂಪು ಚರ್ಚೆ, ವೈಯಕ್ತಿಕ ಜಾಣ್ಮೆ, ಭಾಷೆಯ ನಿರರ್ಗಳತೆ ಹಾಗೂ ಗಣಿತ ಜ್ಞಾನದ ಪರೀಕ್ಷೆಯೂ ಇರುತ್ತವೆ. ಸುಮಾರು ಎರಡು ಗಂಟೆಗಳ ಅವಧಿಯ ಈ ಪರೀಕ್ಷೆಯು ಅಭ್ಯರ್ಥಿಗಳನ್ನು ಒರಗೆ ಹಚ್ಚುತ್ತದೆ. ಜಿಎಂಎಟಿ ಹಾಗೂ ಜಿಆರ್‌ಇ ಪರೀಕ್ಷೆಗಳಂತೆ ಇವುಗಳ ಸಿದ್ಧತೆ ಬಹಳಷ್ಟು ಅಚ್ಚುಕಟ್ಟಾಗಿರಬೇಕು.

ಕೋರ್ಸಿನ ವೆಚ್ಚ - ಇತರೆ ಶುಲ್ಕ

ನೀವು ಪದವಿ ಪರೀಕ್ಷೆಯಲ್ಲಿ ಅತ್ಯುತ್ತಮ ಅಂಕಗಳಿಸುವದರೊಂದಿಗೆ ಎಂಬಿಎದ ಪ್ರವೇಶ ಪರೀಕ್ಷೆ ಪಾಸಾದಲ್ಲಿ ಸುಮಾರು ಎಲ್ಲಾ ಬ್ಯಾಂಕುಗಳು ನಿಮಗೆ ಧನಸಹಾಯ (ಸಾಲ) ಒದಗಿಸುವ ಸಾಧ್ಯತೆ ಇದೆ. ನಿಮ್ಮ ಭವಿಷ್ಯ ರೂಪಿಸಲು ಹಲವಾರು ಹಣಕಾಸು ಸಂಸ್ಥೆಗಳು ನೆರವನ್ನು ಒದಗಿಸುತ್ತವೆ. ಆ ಬಗ್ಗೆ ನೀವು ಬ್ಯಾಂಕುಗಳಲ್ಲಿ ಮಾಹಿತಿ ಪಡೆಯಬಹುದು.

ಯಾರು ಅರ್ಹರು ?

ಬಿ.ಎ., ಬಿ.ಕಾಂ., ಬಿ.ಎಸ್ಸಿ., ಇಂಜಿನಿಯರಿಂಗ್, ಮ್ಯಾನೇಜ್‌ಮೆಂಟ್ ಪದವಿ ಪಡೆದ ಅಭ್ಯರ್ಥಿಗಳು ಎಂಬಿಎ ಶಿಕ್ಷಣ ಪಡೆಯಬಹುದಾಗಿದೆ. ಹೆಚ್ಚಿನ ಮಾಹಿತಿ ಹಾಗೂ ವಿವರ ಪತ್ರಿಕೆಗಳಿಗಾಗಿ ಇಂಡಿಯನ್ ಇನ್ಸಿಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್ ಬನ್ನೇರಘಟ್ಟ ರಸ್ತೆ ಬೆಂಗಳೂರು-ಜಮನಾಲಾಲ್ ಬಜಾಜ್ ಇನ್ಸಿಟಿಟ್ಯೂಟ್ ಆಫ್ ಮ್ಯಾನೇಜಮೆಂಟ್ ಸ್ಟಡೀಸ್ ದಾದಾಭಾಯಿ ನವರೋಜಿ ಹೌಸ್ ೧೬೪, ಬ್ಯಾಕ್ ಬೇ ರಿಕ್ಲೇಮೆಶನ್ ನಂ. ೩- ಚರ್ಚ್‌ಗೇಟ್ ಮುಂಬಯಿ-೨೦. ಇಲ್ಲಿಗೆ ಬರೆದು ತಿಳಿಯಬಹುದು.

ಈ ಕೋರ್ಸನ ಆಯ್ಕೆಗೆ ಯುನಿವರ್ಸಿಟಿ ಆಫ್ ದೆಹಲಿಯ (ಫ್ಯಾಕುಲ್ಟಿ ಆಫ್ ಮ್ಯಾನೇಜ್‌ಮೆಂಟ್ ಸ್ಟಡೀಸ್) ದೆಹಲಿ, ಮುಂಬಯಿ, ಕಲ್ಕತ್ತ ಹಾಗೂ ಚೆನ್ನೈಗಳಲ್ಲಿ ಲಿಖಿತ ಪರೀಕ್ಷೆಗಳನ್ನು ನಡೆಸುತ್ತದೆ. ಬನಾರಸ್ ಹಿಂದೂ ಯುನಿವರ್ಸಿಟಿ ಕೂಡ ಪ್ರವೇಶ ಪರೀಕ್ಷೆಗಳನ್ನು ನಡೆಸುತ್ತದೆ. ದೆಹಲಿ, ಕಲ್ಕತ್ತ ನಾಗಪುರ, ಹೈದ್ರಾಬಾದ್, ಕಾನಪುರ, ಪಾಟ್ನಾ ಹಾಗೂ ವಾರಣಾಸಿಗಳಲ್ಲಿ ನಡೆಸುತ್ತದೆ.

ಎಲ್ಲ ಪ್ರವೇಶ ಪರೀಕ್ಷೆಗಳಲ್ಲಿ ಸಾಮಾನ್ಯವಾಗಿ ಒಂದೇ ತೆರನಾದ ಪ್ರಶ್ನಾವಳಿ ಇರುತ್ತದೆ. ಈ ಕೋರ್ಸನ್ನು ಪಡೆಯಲು ಯಾವುದೇ ಶಾರ್ಟ್‌ಕಟ್‌ಗಳಿಲ್ಲವೆಂಬುದನ್ನು ನೆನಪಿಡಬೇಕು.

ಎಂಬಿಎ ಕೋರ್ಸನ್ನು ನಡೆಸುವ ಪರೀಕ್ಷಾ ನೆರವು ನೀಡುವ ಸಂಸ್ಥೆಗಳು

ಫಾರ್ಚೂನ್ ಅಕೆಡೆಮಿ ಆಫ್ ಮ್ಯಾನೇಜ್‌ಮೆಂಟ್ ಎಜುಕೇಶನ್ ಶುಭಾಂಜಲಿ ೩೧, ಶಿವಾಜಿ ಹೌಸಿಂಗ್ ಸೊಸೈಟಿ ೧೨ ಲೇನ್ ರಾಜಾರಾಮಪುರಿ, ಸೇನಾಪತಿ ಬಾಪಟ್ ಮಾರ್ಗ ಕೊಲ್ಹಾಪುರ - ೪೧೬ ೦೦೮.

ಕರೀಯರ್ ಪ್ಲಾನ್, ೩೦೫, ಸೋಫಿಯಾಸ್ ಚೊಯ್ಸ್ ಸೇಂಟ್ ಮಾರ್ಕ್‌ರೋಡ್ ಬೆಂಗಳೂರು-೧.

ಕರೀಯರ್ ಫೋರಮ್ ಪ್ಯೆ ಲಿ, ೧೦೬ ಹೌಸ್ ಆಫ್ ಲಾರ್ಡ್ಸ್, ಸೇಂಟ್ ಮಾರ್ಕ್ಸ್ ರಸ್ತೆ ಬೆಂಗಳೂರು-೧.

ನೀವೇನು ಮಾಡಬೇಕು?

ನೀವು ಸದ್ಯ ಯಾವುದೇ ಪದವಿಯಲ್ಲಿ ಓದುತ್ತಿದ್ದರೆ ಅದರಲ್ಲಿ ಅತ್ಯಂತ ಹೆಚ್ಚು ಅಂಕ, ದರ್ಜೆ ಪಡೆಯುವುದು ಅಗತ್ಯ. ಈಗಾಗಲೇ ಪದವೀಧರರಾಗಿದ್ದರೆ ಮೇಲೆ ತಿಳಿಸಿರುವ ಕರೀಯರ್ ಕೋಚಿಂಗ್ ಇಲ್ಲವೆ ನಿಮಗೆ ಸಮೀಪದ ಇನ್ಸಿಟಿಟ್ಯೂಟ್‌ಗಳಲ್ಲಿ ವಿಷಯ ಹಾಗೂ ಪರೀಕ್ಷಾ ಪಟ್ಟಿಯನ್ನು ಪಡೆದುಕೊಂಡು ಈ ಕ್ಷಣದಿಂದಲೇ ಅಧ್ಯಯನ ಪ್ರವೃತ್ತರಾಗಬೇಕು.

ನಿಮ್ಮ ಜಾಣ್ಮೆಯನ್ನು, ಕುಶಲತೆಯನ್ನು ಪರೀಕ್ಷಿಸಲು (ಸಿಎಟಿ)ಯಲ್ಲಿ ಒಂದು ಪ್ಯಾನಲ್ ನೇಮಕಗೊಂಡಿರುತ್ತದೆ. ನಿಮ್ಮ ಭಾಷಾ ಜ್ಞಾನ, ವ್ಯಕ್ತಿಗತ ಅಭಿಪ್ರಾಯ, ವಿಷಯ ಜ್ಞಾನ, ಸಾಮಾನ್ಯ ಜ್ಞಾನ, ಇಂಗ್ಲೀಷ್ ಜ್ಞಾನ, ಸುತ್ತಮುತ್ತಲಿನ ವ್ಯವಹಾರಿಕಗಳ ಬಗ್ಗೆ ಸಹ ನಿಮ್ಮನ್ನು ಪರೀಕ್ಷೆಗೊಳಪಡಿಸಲಾಗುತ್ತದೆ. ಈ

ಎಂಬಿಎಗೆ ಸಮನಾದ ಕೋರ್ಸು

ಮದ್ರಾಸಿನಲ್ಲಿರುವ ನ್ಯಾಶನಲ್ ಇನ್ಸಿಟಿಟ್ಯೂಟ್ ಆಪ್ ಹ್ಯೂಮನ್ ರಿಸೋರ್ಸಿಸ್ ಡೆವಲಪ್‌ಮೆಂಟ್ ಕಾಲೇಜು ಎಂಬಿಎಗೆ ಸಮನಾದ, ೩ ವರ್ಷಗಳ ಅವಧಿಯ ಪೋಸ್ಟ್ ಗ್ರಾಜುವೇಟ್ ಡಿಪ್ಲೊಮಾ ಇನ್ ಹ್ಯೂಮನ್ ರಿಸೋರ್ಸಸ್ ಕೋರ್ಸನ್ನು ನಡೆಸುತ್ತದೆ.

೧೫೧, ಸಾಂತ್‌ಹೋಮ್ ಹೈರೋಡ್, ಮದ್ರಾಸ್-೪ ಇಲ್ಲಿಗೆ ಬರೆದುಕೊಳ್ಳಬಹುದು. ಬೆಂಗಳೂರಿನಲ್ಲೂ ಶಾಖೆ ಪ್ರಾರಂಭವಾಗಲಿದೆ. ಪದವೀಧರರಲ್ಲದವರಿಗೂ ಆರು ತಿಂಗಳ ಹಾಗೂ ಒಂದು ವರ್ಷದ ಡಿಪ್ಲೊಮಾ ಕೋರ್ಸುಗಳು ಮುಕ್ತವಾಗಿವೆ.

ಪ್ಯಾನಲ್‌ನೊಂದಿಗೆ ಸೌಜನ್ಯ ಹಾಗೂ ವಿನಯದಿಂದ ವರ್ತಿಸುವುದೂ ಬಹುಮುಖ್ಯ.

ಗುಂಪು ಚರ್ಚೆಯಲ್ಲಿ ನಿಮ್ಮನ್ನು ನೀವು ಹೇಗೆ ನಿರೂಪಿಸಿಕೊಳ್ಳುತ್ತೀರೆಂಬುದು ಬಹುಮುಖ್ಯ. ಇದು ವೃತ್ತಿಪರ ಕೋರ್ಸು ಎನಿಸದಿದ್ದರೂ ವೃತ್ತಿಗಿಂತಲೂ ಹೆಚ್ಚಿನ ಫಲ ತಂದುಕೊಡುವುದರಲ್ಲಿ ಸಂದೇಹವಿಲ್ಲ.

ವಿದೇಶಗಳಲ್ಲಿ ಸಹ ಭಾರತದ ಎಂಬಿಎಗೆ ಬಹಳಷ್ಟು ಮಹತ್ವವಿದೆ. ಕಳೆದ ಬಾರಿ ಸುಮಾರು ೮ ಸಾವಿರಕ್ಕೂ ಹೆಚ್ಚು ಎಂಬಿಎ ಸ್ನಾತಕೋತ್ತರ ಪದವೀಧರರು ವಿದೇಶದಲ್ಲಿ ದೊಡ್ಡ ಹುದ್ದೆ ಗಿಟ್ಟಿಸಿಕೊಂಡಿದ್ದಾರೆ.

ಎಂಬಿಎ ಎರಡು ವರ್ಷಗಳ ಅವಧಿಯ ಸ್ನಾತಕೋತ್ತರ ಕೋರ್ಸು ಇಡೀ ಉದ್ಯಮ ವಲಯದ ಮ್ಯಾನೇಜ್‌ಮೆಂಟ್ ಒಳ-ಹೊರಗನ್ನು ಪರಿಚಯಿಸುತ್ತದೆ. ಆಡಳಿತಾತ್ಮಕ ನೀತಿ ನಿಯಮಗಳು-ನಿಯಂತ್ರಣಗಳ ಬಗ್ಗೆ ಸ್ಪಷ್ಟ ಮಾಹಿತಿ ನೀಡುತ್ತದೆ. ಕೆಲವೊಂದು ವಿಶ್ವವಿದ್ಯಾಲಯಗಳಲ್ಲಿ ಈ ಕೋರ್ಸಿನ ವಿದ್ಯಾರ್ಥಿಗಳಿಗೆ ಪ್ರತ್ಯಕ್ಷ ಅನುಭವ ನೀಡಲು ಕಲಿಯುವ ಅವಧಿಯಲ್ಲೇ ಫ್ಯಾಕ್ಟರಿ, ದೊಡ್ಡ ಕಂಪೆನಿಗಳಲ್ಲಿ ಕಲಿಕೆ-ಕೆಲಸ ಕೂಡ ನೀಡುತ್ತಾರೆ.

ಸಾರ್ವಜನಿಕ ವಲಯದ, ಸರ್ಕಾರಿ ಒಡೆತನದ ಹಾಗೂ ಬಹುರಾಷ್ಟ್ರೀಯ ಕಂಪೆನಿಗಳಲ್ಲಿ ಮ್ಯಾನೇಜರ್‌ಗಿಂತ ಹೆಚ್ಚಿನ ಹುದ್ದೆ ದೊರಕಿಸಿಕೊಳ್ಳಬಹುದು. ಸಂಬಳ-ಸವಲತ್ತುಗಳು ಒಂದು ವರ್ಷಕ್ಕೆ ಲಕ್ಷ ರೂಪಾಯಿಗೂ ಅಧಿಕವಿರುತ್ತದೆ.

ಕರ್ನಾಟಕ ಸ್ಟೇಟ್ ಓಪನ್ ಯುನಿವರ್ಸಿಟಿ

ಮೈಸೂರಿನ ಮಾನಸ ಗಂಗೋತ್ರಿಯಲ್ಲಿ ಸಹ ಎಂಬಿಎ (ಮೂರು ವರ್ಷಗಳ ಅವಧಿ) ಕರೆಸ್‌ಪಾಂಡನ್ಸ್ ಕೋರ್ಸ್ ಕೂಡ ಲಭ್ಯವಿದೆ. ಯಾವುದೇ ಪದವಿ ಪಡೆದಿದ್ದರೂ ಈ ಕೋರ್ಸಿಗೆ ಪ್ರವೇಶ ಪಡೆಯಬಹುದು. ೧೯೯೭ರ ನವೆಂಬರ್‌ದಿಂದ ಈ ಶಿಕ್ಷಣ ಆರಂಭಗೊಳ್ಳುತ್ತದೆ.

೩೦೦ ರೂಪಾಯಿಗಳ ಡಿ.ಡಿ. ಪಡೆದುಕೊಂಡು ಅಗತ್ಯ ಮಾಹಿತಿ ಹಾಗೂ ಅರ್ಜಿಯನ್ನು ತರಿಸಿಕೊಳ್ಳಬಹುದು. ರಜಿಸ್ಟ್ರಾರ್ ಕರ್ನಾಟಕ ಸ್ಟೇಟ್ ಓಪನ್ ಯೂನಿವರ್ಸಿಟಿ ಮಾನಸಗಂಗೋತ್ರಿ, ಮೈಸೂರು ಇಲ್ಲಿ ಬರೆದುಕೊಂಡು-ಕೋರ್ಸಿಗೆ ಸೇರಿಕೊಳ್ಳಬಹುದು. ಆಗಸ್ಟ್ ೧೪, ೧೯೯೭ ಕೊನೆಯ ದಿನಾಂಕ. ದಂಡದ ಶುಲ್ಕದೊಂದಿಗೆಯಾದರೆ ೨೮ ಆಗಸ್ಟ್ ೧೯೯೭.

ಈ ಕೋರ್ಸನ್ನು ಅಂಚೆ ಮೂಲಕ ಪಡೆಯುವವರು ಅಗತ್ಯ ಅರ್ಹತೆ ಹೊಂದಿರಲೇಬೇಕು. ನಿಗದಿತ ಶುಲ್ಕ ಸಂದಾಯ ಮಾಡದೇ ಅರ್ಜಿ ದೊರೆಯುವುದಿಲ್ಲ.

ಇಂದಿರಾಗಾಂಧಿ ಮುಕ್ತ ವಿಶ್ವವಿದ್ಯಾಲಯ

ಇಗ್ನೊದಿಂದ ಎಂಬಿಎ ಡಿಪ್ಲೊಮಾ ಇನ್ ಮ್ಯಾನೇಜ್‌ಮೆಂಟ್ ಪೋಸ್ಟ್‌ಗ್ರಾಜುವೇಟ್ ಡಿಪ್ಲೊಮಾ ಇನ್ ಫೈನಾನ್ಸ್, ಮಾರ್ಕೆಟಿಂಗ್ ಹ್ಯೂಮನ್ ರಿಸೋರ್ಸಿಸ್ ಹಾಗೂ ಆಪರೇಶನ್ ಮ್ಯಾನೇಜ್‌ಮೆಂಟ್ ಕೋರ್ಸುಗಳಿಗೆ ಪ್ರವೇಶ ಪರೀಕ್ಷೆ ನಡೆಯುತ್ತದೆ.

ಓಪನ್ ಮ್ಯಾಟ್-ಅಂದರೆ ಪ್ರವೇಶ ಪರೀಕ್ಷೆಗಳನ್ನು ಆಗಸ್ಟ್ ೨೪ರಂದು ನಡೆಸಲಾಗುತ್ತದೆ. ಈ ಪರೀಕ್ಷೆಯಲ್ಲಿ ಪಾಸು ಮಾಡಿಕೊಂಡವರು ೧೯೯೮ರ ಶೈಕ್ಷಣಿಕ ವರ್ಷದಲ್ಲಿ ಪ್ರವೇಶ ಪಡೆಯಬಹುದು.

ಡಿಪ್ಲೊಮಾ ಕಲಿಯುತ್ತಿರುವವರಿಗೆ ೫ ಸಾವಿರ ರೂ. ವಿದ್ಯಾರ್ಥಿವೇತನ

ಮಹೀಂದ್ರಾ ಆಲ್ ಇಂಡಿಯಾ ಟ್ಯಾಲೆಂಟ್ ಸ್ಕಾಲರ್‌ಸಿಪ್ ಎಂಬ ಹೆಸರಿನ ವಿದ್ಯಾರ್ಥಿವೇತನವನ್ನು ಮುಂಬಯಿನ ಕೆಸಿ ಮಹೀಂದ್ರ ಎಜುಕೇಶನ್ ಟ್ರಸ್ಟ್‌ನವರು ಘೋಷಿಸಿದ್ದಾರೆ.

ಕಡಿಮೆ ಆದಾಯ ಹೊಂದಿರುವ ಕುಟುಂಬದಿಂದ ಬಂದಿರುವ, ಹಾಗೂ ಎಸ್.ಎಸ್.ಎಲ್.ಸಿ. ಹಾಗೂ ಎಚ್.ಎಸ್.ಸಿ. ಇಲ್ಲವೆ ಸಮನಾದ ಶೈಕ್ಷಣಿಕ ಅರ್ಹತೆ ಪಡೆದಿರುವ, ಸದ್ಯದ ಸಾಲಿನಲ್ಲಿ ಯಾವುದೇ ಮಾನ್ಯತೆ ಪಡೆದ ಸಂಸ್ಥೆಯಲ್ಲಿ ಪಾಲಿಟೆಕ್ನಿಕ್, ಡಿಪ್ಲೊಮಾ ಕೋರ್ಸ್ ಕಲಿಯುತ್ತಿರುವವರಿಗೆ ಪ್ರತಿ ವರ್ಷ ೫ ಸಾವಿರ ರೂ.ಗಳಂತೆ ೩ ವರ್ಷಗಳ ಅವಧಿಗೆ ಈ ನೆರವು ಕಲ್ಪಿಸಲಾಗುತ್ತದೆ.

ಈ ಸ್ಕಾಲರ್‌ಶಿಪ್‌ಗೆ ಅರ್ಜಿ ಸಲ್ಲಿಸಲು ಅರ್ಜಿ ಫಾವರ್ಮ್‌ಗಳನ್ನು - ವಿ. ಚೌಧರಿ, ಏರಿಯಾ ಮ್ಯಾನೇಜರ್, ಮಹೀಂದ್ರಾ ಆ್ಯಂಡ್ ಮಹೀಂದ್ರಾ ಲಿ., ರಹೇಜಾ ಟಾವರ್ಸ್, ನಂ.೧೨, ಮ್ಯೂಸಿಯಂ ರಸ್ತೆ, ಬೆಂಗಳೂರು-೧.

ಪಿ.ಕೆ. ಪಾಲಿವ್, ಮ್ಯಾನೇಜಿಂಗ್ ಟ್ರಸ್ಟಿ, ಕೆ.ಸಿ.ಮಹೀಂದ್ರಾ ಎಜುಕೇಶನ್ ಟ್ರಸ್ಟ್ ಸಿವಿಲ್ ಕೋರ್ಟ್ ಮೂರನೇ ಮಹಡಿ, ಮಹಾಕವಿ ಭೂಷಣ ಮಾರ್ಗ, ಮುಂಬಯಿ-೪೦೦ ೦೦೧. ಇಲ್ಲಿಂದ ತರಿಸಿಕೊಳ್ಳಬೇಕು. ಜುಲೈ ೩೦ರೊಳಗಾಗಿ ಈ ಅರ್ಜಿಗಳು ತಲುಪಬೇಕು.

ಬೆಳಗಾವಿಯಲ್ಲೊಂದು ಸ್ಕೂಲ್ ಆಫ್ ಬಿಸಿನೆಸ್ ಮ್ಯಾನೇಜ್‌ಮೆಂಟ್

ಬೆಳಗಾವಿಯ ಕರ್ನಾಟಕ ಲಾ ಸೊಸೈಟಿಯ ಸ್ಕೂಲ್ ಆಫ್ ಬಿಸಿನೆಸ್ ಮ್ಯಾನೇಜ್‌ಮೆಂಟ್ ಒಂದು ವರ್ಷದ ಪೋಸ್ಟ್ ಗ್ರಾಜುವೇಟ್ ಡಿಪ್ಲೊಮಾ ಕೋರ್ಸನ್ನು ಮ್ಯಾನೇಜ್‌ಮೆಂಟ್ ವಿಭಾಗದಲ್ಲಿ ನೀಡುತ್ತದೆ.

ಕಲೆ, ವಿಜ್ಞಾನ, ವಾಣಿಜ್ಯ, ಕಾನೂನು, ಫಾರ್ಮಸಿ ಹಾಗೂ ಇಂಜನೀಯರಿಂಗ್ ಪದವೀಧರರು ಈ ಸ್ನಾತಕೋತ್ತರ ಡಿಪ್ಲೊಮಾಗೆ ಪ್ರವೇಶ ಪಡೆಯಬಹುದು.

ಮಾರ್ಕೆಟಿಂಗ್ ಹಾಗೂ ಸೇಲ್ಸ್ ಮ್ಯಾನೇಜ್‌ಮೆಂಟ್ ಹಾಗೂ ಇಂಡಸ್ಟ್ರೀಯಲ್ ರಿಲೇಶನ್ಸ್ ಆ್ಯಂಡ್ ಪರಸಾನೆಲ್ ಮ್ಯಾನೇಜ್‌ಮೆಂಟ್‌ಗಳಲ್ಲಿ ಈ ಶಿಕ್ಷಣ ನೀಡಲಾಗುತ್ತದೆ.

೬೦ ರೂಪಾಯಿ ಡಿಡಿ ಹಾಗೂ ೨೦ ರೂಪಾಯಿ ಅಂಚೆ ವೆಚ್ಚಗಳೊಂದಿಗೆ ಆಸಕ್ತರು ಬರೆದುಕೊಳ್ಳಬಹುದು. ವಿಳಾಸ : ಸ್ಕೂಲ್ ಆಫ್ ಬಿಸಿನೆಸ್ ಮ್ಯಾನೇಜ್‌ಮೆಂಟ್ ಪ್ಲಾಟ್ ನಂ.೪೨೭, ಭಾಗ್ಯನಗರ, ೨ನೇ ಕ್ರಾಸ್, ಟಿಳಕವಾಡಿ, ಬೆಳಗಾವಿ-೫೯೦ ೦೦೬.

ಮದ್ರಾಸ್ ವಿಶ್ವವಿದ್ಯಾಲಯದ ಅಂಚೆ ಕೋರ್ಸ್‌ಗಳು

೧೯೯೭-೯೮ನೆಯ ಸಾಲಿಗಾಗಿ ಮದ್ರಾಸ್ ವಿಶ್ವವಿದ್ಯಾಲಯವು ಬಿ.ಎ., ಬಿ.ಎಸ್ಸಿ., ಬಿ.ಕಾಂ., ಬಿ.ಬಿ.ಎಂ., ಬಿ.ಲಿಟ್. ಹಾಗೂ ಬಿ.ಸಿ.ಎ. (ಕಂಪ್ಯೂಟರ್ಸ್) ೩ ವರ್ಷ ಅವಧಿಯ ಕೋರ್ಸುಗಳಿಗೆ ಅಂಚೆ ಮೂಲಕ ಶಿಕ್ಷಣ ನೀಡುತ್ತದೆ. ಇಂಗ್ಲೀಷ್ ಹಾಗೂ ತಮಿಳು ಮಾಧ್ಯಮದಲ್ಲಿ ಈ ಶಿಕ್ಷಣ ದೊರೆಯುತ್ತದೆ. ಎರಡು ವರ್ಷಗಳ ಅವಧಿಯ ಎಂ.ಎ., ಎಂ.ಕಾಂ., ಸ್ನಾತಕೋತ್ತರ ಶಿಕ್ಷಣವನ್ನು ಅಂಚೆ ಮೂಲಕ ನೀಡುತ್ತದೆ.

ಡಿಗ್ರಿ ಕೋರ್ಸಿಗೆ ಪ್ರವೇಶ ಪಡೆಯಲಿಚ್ಚಿಸುವವರು ಪಿ.ಯು.ಸಿ. ಪಾಸು ಮಾಡಿರಬೇಕು. ಸ್ನಾತಕೋತ್ತರ ಪದವಿಗೆ ಪದವಿ ಪರೀಕ್ಷೆ ಪಾಸಾಗಿರಬೇಕು. ಪಿ.ಯು.ಸಿ. ಆದವರಿಗೆ ಮೂರು ತಿಂಗಳ ಅವಧಿಯ ಲೈಬ್ರರಿ ಆ್ಯಂಡ್ ಇನ್‌ಫಾರ್ಮೇಶನ್ ಬ್ಯಾಚುಲರ್ ಇನ್ ಲೈಬ್ರರಿ ಸೈನ್ಸ್ (ಇಂಗ್ಲೀಷ್ ಮಾಧ್ಯಮ) ಹಾಗೂ ಮಾಸ್ಟರಿ ಇನ್ ಲೈಬ್ರರಿ ಸೈನ್ಸ್ ಕೋರ್ಸುಗಳು ಸಹ ಇರುತ್ತವೆ. ಬಿಎಲ್‌ಐಎಸ್ ಹಾಗೂ ಎಂಎಲ್‌ಐಎಸ್ ಕೋರ್ಸುಗಳಿಗೆ ಪ್ರವೇಶ ಪಡೆಯಲು ಪದವಿ ಪಡೆದಿರಬೇಕು ಹಾಗೂ ಇವೆರಡು ಕೋರ್ಸುಗಳ ಅವಧಿ ಒಂದು ವರ್ಷ.

ಇಂಗ್ಲೀಷ್ ಮಾಧ್ಯಮದಲ್ಲಿ ಬಿಎಡ್ ಹಾಗೂ ಎಂಎಡ್ ಕೋರ್ಸ್ ಸಹ ಇದೆ. ಈ ಕೋರ್ಸುಗಳಿಗೆ ಪ್ರವೇಶ ಪಡೆಯಲು ಪದವಿ ಕಡ್ಡಾಯವಾಗಿರಬೇಕು. ಲೇಬರ್ ಲಾ ಹಾಗೂ ಟ್ಯಾಕ್ಸೇಶನ್ (ಒಂದು ವರ್ಷ ಡಿಪ್ಲೊಮಾ) ಗಳಿಗೆ ಕೂಡ ಪದವಿ ಅಗತ್ಯ. ಡಿಗ್ರಿ ಆಫ್ ಮಾಸ್ಟರ್ ಆಫ್ ಕಂಪ್ಯೂಟರ್ ಅಪ್ಲಿಕೇಶನ್‌ಗೆ ಪ್ರವೇಶ ಬಯಸುವವರು. ಬಿಎಸ್ಸಿ ಪಾಸು ಮಾಡಿರಬೇಕು. ಬಿ.ಕಾಂ. ಪದವೀಧರರು ಹಾಗೂ ಬ್ಯಾಂಕ್ ಮ್ಯಾನೇಜ್‌ಮೆಂಟ್ ಪದವೀಧರರು, ಬಿ.ಎ. ಹಾಗೂ ಬಿ.ಎ. ಕಾರ್ಪೋರೇಟ್ ಸೆಕ್ರೆಟರಿಶಿಪ್‌ನ್ನು ಬಿಸಿನೆಸ್ ಮೆತ್‌ಮೆಟಿಕ್ಸ್ ಇಲ್ಲವೆ ಸ್ಟ್ಯಾಟಿಸ್ಟಿಕ್ಸ್‌ನೊಂದಿಗೆ ಪಾಸು ಮಾಡಿರಬೇಕು.

ಮೂರು ವರ್ಷಗಳ ಅಂಡರ್ ಗ್ರಾಜುವೇಟ್ ಕೋರ್ಸುಗಳ ಪ್ರವೇಶ ಪರೀಕ್ಷೆಯು ೧೯-೧೦-೧೯೯೭ರಂದು ನಡೆಯುತ್ತದೆ. ಬಿಎಡ್ ಕೋರ್ಸನ್ನು ಪಡೆಯುವವರು ಕಡ್ಡಾಯವಾಗಿ ಶಿಕ್ಷಕ ವೃತ್ತಿಯಲ್ಲಿರಬೇಕು. ಆಯಾ ಕೇಂದ್ರಗಳಿಗೆ ಸಂಬಂಧಿಸಿದವರು ಅರ್ಜಿ ಹಾಕಬೇಕು.

ಜುಲೈ ಒಂದರಿಂದ ಪ್ರವೇಶ ಅರ್ಜಿಗಳನ್ನು ನೀಡಲು ಪ್ರಾರಂಭಿಸಲಾಗುತ್ತಿದೆ. ೫೦ ರೂಪಾಯಿ ಡಿ. ಡಿ. ಯೊಂದಿಗೆ ಪೂರ್ಣ ಮಾಹಿತಿ ಪಡೆಯಲು ಇನ್ಸಿಟಿಟ್ಯೂಟ್ ಕರೆಸ್ಪಾಂಡೆನ್ಸ್ ಕೋರ್ಸ್-ಎಜುಕೇಶನ್ ಕಾಲೇಜು-ಯುನಿವರ್ಸಿಟಿ ಆಫ್ ಮದ್ರಾಸ್, ಚೆನ್ನೈ-೬೦೦ ೦೦೫ ಇಲ್ಲಿಗೆ ಬರೆಯಬಹುದು.

ಅಂಡರ್ ಗ್ರಾಜುವೇಟ್ಸ್ ಕೋರ್ಸಿಗೆ ೩೧-೭-೯೭, ಪೋಸ್ಟ್‌ಗ್ರ್ಯಾಜುವೇಟ್ ರೆಗ್ಯುಲರ್ ಸ್ಕೀಮ್ ೨೯-೮-೯೭ ಕ್ಯಾಲಂಡರ್ ಇಯರ್ ಕೋರ್ಸ್ ೩೦-೯-೯೭ ಕೊನೆಯ ದಿನಾಂಕವಾಗಿದೆ.



ಎಸ್.ಎಸ್.ಎಲ್.ಸಿ. ನಂತರ ಏನು?

ಎಸ್.ಎಸ್.ಎಲ್.ಸಿ. ನಂತರ ಬೆಂಗಳೂರಿನ ಸ್ಯಾನ್‌ಫೋರ್ಟ್ ಕಾಲೇಜು ವೃತ್ತಿಪರ ಡಿಪ್ಲೊಮಾ ಕೋರ್ಸುಗಳನ್ನು ನಡೆಸುತ್ತದೆ. ಫಿಸಿಯೋಥೆರಪಿ, ಎಕ್ಸರೇ ಟೆಕ್ನಿಶಿಯನ್, ಲ್ಯಾಬರೋಟರಿ ಟೆಕ್ನಿಶಿಯನ್ ಬಗ್ಗೆ ತರಬೇತಿ-ಶಿಕ್ಷಣ ನೀಡುತ್ತದೆ. ಹೆಚ್ಚಿನ ಮಾಹಿತಿಗಾಗಿ ನಂ.೧೦೭, ಪೈಪ್‌ಲೈನ್ ರೋಡ್, ಕುರುಬರಹಳ್ಳಿ, ಬೆಂಗಳೂರು-೮೬ ಇಲ್ಲಿಗೆ ಸಂಪರ್ಕಿಸಿ.

ಪಿ.ಯು.ಸಿ. ನಂತರ ಕಾನೂನು ಪದವಿ

ಐದು ವರ್ಷಗಳ ಅವಧಿಯ ಪಿ.ಯು.ಸಿ. ನಂತರದ ಕಾನೂನು ಪದವಿ ಶಿಕ್ಷಣಕ್ಕೆ ಕೆಎಲ್‌ಇ ಸೊಸೈಟಿಯ ಬೆಂಗಳೂರಿನ ಕಾಲೇಜು ಪ್ರವೇಶ ದೊರಕಿಸುತ್ತದೆ. ಪಿಯುಸಿಯಲ್ಲಿ ಕನಿಷ್ಟ ಶೇ.೪೫ ಅಂಕ, ಎಸ್‌ಸಿ, ಎಸ್‌ಟಿ ಪಂಗಡದವರಿಗೆ ಶೇ. ೪೦ ಅಂಕ ಪಡೆದಿರಬೇಕು. ಡಿಗ್ರಿಯಲ್ಲಿ ಕನಿಷ್ಟ ಶೇ.೪೦, ಎಸ್‌ಸಿ, ಎಸ್‌ಟಿಯವರಿಗೆ ಶೇ ೩೫ರಷ್ಟು ಅಂಕ ಪಡೆದವರು ಮೂರು ವರ್ಷಗಳ ಪದವಿಗೆ ಪ್ರವೇಶ ಪಡೆಯಬಹುದು.

ವಿದ್ಯಾರ್ಥಿಗಳಿಗೆ - ವಿದ್ಯಾರ್ಥಿನಿಯರಿಗೆ ಪ್ರತ್ಯೇಕ ಹಾಸ್ಟೆಲ್ ವ್ಯವಸ್ಥೆ ಇದೆ. ಕೆ.ಎಲ್.ಇ. ಸೊಸೈಟಿ ಲಾ ಕಾಲೇಜು, ರಾಜಾಜಿನಗರ ೨ನೆಯ ಬ್ಲಾಕ್ ಬೆಂಗಳೂರು-೧೦ ಇಲ್ಲಿಗೆ ಬರೆದು ಮಾಹಿತಿ ಪಡೆಯಬಹುದು.

ಡಿಪ್ಲೊಮಾ ಕೋರ್ಸುಗಳು

ಬೆಂಗಳೂರಿನ ಬಿಡಿಪಿಎಸ್ ಹಾಗೂ ಐಟಿಐ ತರಬೇತಿ ಸಂಸ್ಥೆಯು ಎಲೆಕ್ಟ್ರಾನಿಕ್ ಇಂಜನೀಯರಿಂಗ್, ರೆಫ್ರಿಜರೇಶನ್, ಪರ್ಸನಲ್ ಸೆಕ್ರೆಟರಿಶಿಪ್, ಟೆಲಿಫೋನ್ ಆಪ್‌ರೇಟಿಂಗ್, ಏರ್ ಟಿಕೇಟಿಂಗ್ ಹಾಗೂ ಟ್ರಾವಲ್ ಮ್ಯಾನೇಜ್‌ಮೆಂಟ್‌ಗಳಲ್ಲಿ ಡಿಪ್ಲೊಮಾ ಕೋರ್ಸುಗಳನ್ನು ನಡೆಸುತ್ತದೆ. ವಿಳಾಸ : ೧೨೨, ೬ನೆಯ ಕ್ರಾಸ್, ಗಾಂಧಿನಗರ, ಬೆಂಗಳೂರು.

ಬಿ.ಸಿ. ಮಾರುತಿ, ಭೀಮಸಮುದ್ರ.


ನಾನು ದ್ವಿತೀಯ ಪಿ.ಯು.ಸಿ.ಯನ್ನು ಪ್ರಥಮ ಶ್ರೇಣಿಯಲ್ಲಿ ಮುಗಿಸಿ ಮುಂದೆ ಪೊಲೀಸ್ ಸಬ್‌ಇನ್ಸ್‌ಪೆಕ್ಟರ್ ಆಗಬೇಕೆಂದು ತುಂಬ ಕಾತುರನಾಗಿದ್ದೇನೆ,ಅದರ ಅರ್ಹತೆಗಳನ್ನು ತಿಳಿಸಿ.

ನೀವು ಸಬ್‌ಇನ್‌ಸ್ಪೆಕ್ಟರ್ ಆಗಬೇಕಾದಲ್ಲಿ ಕನಿಷ್ಠ ಪದವಿಯನ್ನು ಪಡೆದಿರಬೇಕು. ಇದಕ್ಕೆ ಲಿಖಿತ ಪರೀಕ್ಷೆಯನ್ನು ಬರೆಯಬೇಕಾಗುವುದು ಇದ್ದಲ್ಲದೆ ದೇಹದಾರ್ಢ್ಯ ಪರೀಕ್ಷೆಯಲ್ಲಿ ಕೂಡ ತೇರ್ಗಡೆಯಾಗ ಬೇಕಾದ್ದ ರಿಂದ ಉತ್ತಮ ದೇಹದಾರ್ಢ್ಯವನ್ನು ಹೊಂದಿರಬೇಕಾಗುತ್ತದೆ.

ಕೆ. ಸುಪ್ರಭ ರಾವ್, ಉಜಿರೆ.

ಸಾರ್, ನಾನು ಈ ವರ್ಷ ದ್ವಿತೀಯ ಪಿ.ಯು.ಸಿ. ಕಲಾ ವಿಭಾಗದಲ್ಲಿ ಓದುತ್ತಿದ್ದೇನೆ. ನಾನು ೧೦ನೇ ತರಗತಿಯಲ್ಲಿ ಶೇ. ೭೮ರಷ್ಟು ಅಂಕಗಳನ್ನು ಪಡೆದಿರುತ್ತೇನೆ. ಕಾರಣಾಂತರಗಳಿಂದ ನಾನು ವಿಜ್ಞಾನ ವಿಭಾಗವನ್ನು ತೆಗೆದುಕೊಳ್ಳಲಾಗಲಿಲ್ಲ. ಆದ್ದರಿಂದ ನನಗೆ ಪಿ.ಯು.ಸಿ.ಯ ನಂತರ ಏನು ಮಾಡಬೇಕೆಂದು ತಿಳಿಯುತ್ತಿಲ್ಲ. ನಾನು ಬಿ.ಎ. ಅಥವಾ ಎಲ್.ಎಲ್.ಬಿ.ಯನ್ನು ಮಾಡಲಿಚ್ಛಿಸುವುದಿಲ್ಲ. ಆದ್ದರಿಂದ ತಾವು ನನಗೆ ಮಾರ್ಗದರ್ಶನ ಮಾಡಿ.

ನೀವು ಪಿ.ಯು.ಸಿ.ಯಲ್ಲಿ ಉತ್ತಮ ಅಂಕಗಳನ್ನು ಪಡೆದುಕೊಂಡರೆ ಟಿ.ಸಿ.ಹೆಚ್.ಕೋರ್ಸ್‌ನ ಪ್ರವೇಶವನ್ನು ಉಚಿತವಾಗಿ ಪಡೆಯಬಹುದು. ಈ ಕೋರ್ಸ್ ಉತ್ತಮ ಉದ್ಯೋಗಾವಕಾಶವನ್ನು ಹೊಂದಿರುತ್ತದೆ. ನಿಮಗೆ ೧೦ನೇ ತರಗತಿಯಲ್ಲಿ ಉತ್ತಮ ಅಂಕಗಳು ಬಂದಿರುವುದರಿಂದ ನೀವು ಈಗಲೂ ಅದರ ಆಧಾರದ ಮೇಲೆ ಡಿಪ್ಲೋಮಾ ಕೋರ್ಸ್‌ಗಳನ್ನು ಮಾಡಲು ಸಾಧ್ಯವಿದೆ.



ಡಾ. ಎಸ್.ಸಿ. ಶರ್ಮಾ
ಪ್ರಾಧ್ಯಾಪಕರು
ಆರ್.ವಿ. ಇಂಜಿನಿಯರಿಂಗ್ ಕಾಲೇಜು,
ಮೈಸೂರು ರಸ್ತೆ, ಬೆಂಗಳೂರು - ೫೬೦ ೦೫೯

ಜಯದೇವ ಸೊರಣಗಿ, ಹಲಕಿ.

ಮಾನ್ಯರೆ, ನಾನು ಬಿ.ಎ. ಪದವೀಧರನಾಗಿದ್ದು, ಐ.ಎ.ಎಸ್. ಪರೀಕ್ಷೆ ಕಟ್ಟಬೇಕೆಂದಿರುವೆ, ಆದರೆ ಇದರ ಬಗ್ಗೆ ನನಗೆ ಏನೂ ಗೊತ್ತಿಲ್ಲ. ಈ ಪರೀಕ್ಷೆ ಯಾವಾಗ ನಡೆಯುತ್ತದೆ? ಎಸ್.ಸಿ. ಮತ್ತು ಎಸ್.ಟಿ.ಯವರಿಗೆ ಏನು ಸರಕಾರದಿಂದ ಸೌಲಭ್ಯಗಳು ಸಿಗುತ್ತವೆ. ಸರಕಾರದಿಂದ ಯಾವ ರೀತಿಯಲ್ಲಿ ಇದರ ಬಗ್ಗೆ ತರಬೇತಿ ಸಿಗುತ್ತದೆ ಎಂದು ದಯವಿಟ್ಟು ತಿಳಿಸಿದರೆ ನಿಮಗೆ ನಾನು ಆಭಾರಿಯಾಗಿರುತ್ತೇನೆ.

ಐ.ಎ.ಎಸ್.ಮಾಡಬೇಕಾದಲ್ಲಿ ಕನಿಷ್ಠ ವಿದ್ಯಾರ್ಹತೆ ಪದವಿ. ಆದ್ದರಿಂದ ನೀವು ಇದಕ್ಕೆ ಅರ್ಹರಾಗಿದ್ದೀರಿ. ಪರಿಶಿಷ್ಟ ಜಾತಿ ಹಾಗೂ ಪಂಗಡದವರಿಗೆ ವಯಸ್ಸು ಮತ್ತು ಪರೀಕ್ಷೆ ತೆಗೆದುಕೊಳ್ಳುವ ಅವಕಾಶಗಳಲ್ಲಿ (Attempts) ಸಡಿಲಿಕೆ ಇರುತ್ತದೆ. ಈ ಪರೀಕ್ಷೆ ಕುರಿತು ನವಂಬರ್-ಡಿಸೆಂಬರ್ ತಿಂಗಳಲ್ಲಿ ಜಾಹೀರಾತನ್ನು ಪ್ರಕಟಿಸುತ್ತಾರೆ. ಪರೀಕ್ಷೆಗಳನ್ನು ಮೇ-ಜೂನ್ ತಿಂಗಳಲ್ಲಿ ನಡೆಸಲಾಗುವುದು. ರಾಜ್ಯ ಸರಕಾರಗಳು ಪ.ಜಾ. ಮತ್ತು ಪ.ಪ. ದವರಿಗೆ ಜನವರಿ-ಫೆಬ್ರವರಿ ತಿಂಗಳುಗಳಲ್ಲಿ ಐ.ಎ.ಎಸ್. ಪರೀಕ್ಷೆಗಳಿಗೊಸ್ಕರ ತರಬೇತಿಯನ್ನು ಉಚಿತವಾಗಿ ನೀಡಲಾಗುತ್ತದೆ. ಆದ್ದರಿಂದ ನೀವು ದಿನನಿತ್ಯ ಪತ್ರಿಕೆಗಳನ್ನು ಗಮನಿಸುತ್ತಿರಿ.

ಎನ್. ದೇವದಾಸ್, ಧರ್ಮಸ್ಥಳ.

ನಾನು ಬಿ.ಎಸ್ಸಿ., ಬಿ.ಎಡ್., ಪದವಿ ಪಡೆದಿದ್ದು, ಮುಂದೆ ಎಂ.ಎಸ್ಸಿ.ಯನ್ನು ಬಾಟನಿ ಅಥವಾ ಜಿಯೊಲಾಜಿಯಲ್ಲಿ ಅಂಚೆ ತೆರಪಿನ ಮೂಲಕ ಮಾಡಬೇಕೆಂದಿದ್ದೇನೆ. ದಯವಿಟ್ಟು ವಿಳಾಸ ಹಾಗೂ ಅದರ ಅರ್ಹತೆಯನ್ನು ತಿಳಿಸಿ.

ನೀವು ಅಗತ್ಯವಾಗಿ ಎಂ.ಎಸ್ಸಿ.ಯನ್ನು ಅಂಚೆ ತೆರಪಿನ ಸಸ್ಯಶಾಸ್ತ್ರ ಮತ್ತು ಪ್ರಾಣಿಶಾಸ್ತ್ರ ವಿಷಯಗಳಲ್ಲಿ ಮಾಡಬಹುದು. ಅದಕ್ಕಾಗಿ ನೀವು ಕ್ರಮವಾಗಿ ಬಿ.ಎಸ್ಸಿ.ಯಲ್ಲಿ ಸಸ್ಯಶಾಸ್ತ್ರ ಹಾಗೂ ಜೀವಶಾಸ್ತ್ರ ರಸಾಯನಶಾಸ್ತ್ರದೊಂದಿಗೆ ವ್ಯಾಸಂಗ ಮಾಡಿರಬೇಕು. ಅರ್ಜಿಗಾಗಿ ಡೈರೆಕ್ಟರೇಟ್ ಆಫ್ ಡಿಸ್ಟೆನ್ಸ್ ಎಜುಕೇಷನ್, ಅಣ್ಣಾಮಲೈ ಯುನಿವರ್ಸಿಟಿ, ಅಣ್ಣಾಮಲೈ ನಗರ್-೬೦೮ ೦೦೨ ಈ ವಿಳಾಸಕ್ಕೆ ೫೦ ರೂಪಾಯಿ ಡಿ.ಡಿ.ಯನ್ನು ಕಳುಹಿಸಿ ಪಡೆಯಬಹುದಾಗಿದೆ.

ಎ.ಸಿ. ಕಸ್ತೂರಿ, ಮಣಿಪಾಲ್.

ನಾನು ಪಿ.ಯು.ಸಿ.ಯನ್ನು ವಿಜ್ಞಾನ ವಿಭಾಗದಲ್ಲಿ ಮುಗಿಸಿದ್ದೇನೆ. ನಾನು ಡಿಸ್ಟೆನ್ಸ್ ಎಜುಕೇಶನ್ ಮೂಲಕ ಬಿ.ಎಸ್ಸಿ.ಯನ್ನು ಮಾಡಬಹುದೇ? ಇದ್ದರೆ ಅದರ ವಿಳಾಸ ತಿಳಿಸಿ.

ನೀವು ಅಗತ್ಯವಾಗಿ ಬಿ.ಎಸ್ಸಿ.ಯನ್ನು ಡಿಸ್ಟೆನ್ಸ್ ಎಜುಕೇಶನ್ ಮೂಲಕ ಮಾಡಬಹುದು. ವಿವರಗಳಿಗಾಗಿ ಡೈರೆಕ್ಟರೇಟ್ ಆಫ್ ಡಿಸ್ಟೆನ್ಸ್ ಎಜುಕೇಶನ್, ಅಣ್ಣಾಮಲೈ ಯುನಿವರ್ಸಿಟಿ, ಅಣ್ಣಾಮಲೈ ನಗರ್-೬೦೮ ೦೦೨ ಅಥವಾ ಡೈರೆಕ್ಟರೇಟ್ ಆಫ್ ಡಿಸ್ಟೆನ್ಸ್ ಎಜುಕೇಶನ್, ಬೆಂಗಳೂರು ವಿಶ್ವವಿದ್ಯಾಲಯ, ಸೆಂಟ್ರಲ್ ಕಾಲೇಜು ಕ್ಯಾಂಪಸ್, ಬೆಂಗಳೂರು ಇವರನ್ನು ಸಂಪರ್ಕಿಸಿ.

ಮಮತ ರಮೇಶ್, ಬೆಂಗಳೂರು.

Distance education ಮೂಲಕವಾಗಿ M.phil ಕೋರ್ಸು ಮಾಡಲು ಯಾವ ಶಿಕ್ಷಣ ಸಂಸ್ಥೆಯನ್ನು ವಿಚಾರಿಸಬಹುದು? ಅದರ ವಿಳಾಸ ತಿಳಿಸಿ.

ನೀವು ಅಗತ್ಯವಾಗಿ Distance education ಮೂಲಕ M.phil ಕೋರ್ಸನ್ನು ಮಾಡಬಹುದು. ವಿವರಗಳಿಗಾಗಿ ನೀವು Distance learning Programmes division, BITS. ಪಿಲಾನಿ, ರಾಜಸ್ಥಾನ್-೩೩೩ ೦೩೧ ಇವರನ್ನು ಸಂಪರ್ಕಿಸಿ.

ಸಹನ, ಮೈಸೂರು.

ನಾನು ದ್ವಿತಿಯ ಪಿ.ಯು.ಸಿ. ಬರೆದಿದ್ದು, ನನಗೆ ಈ ಮಾಹಿತಿ ಒದಗಿಸಿ:

ಸಿ.ಇ.ಟಿ. ಪರೀಕ್ಷೆ ಬರೆಯಲು ಕನಿಷ್ಠ ಅರ್ಹತೆ, ವೈದ್ಯಕೀಯ ಸೀಟುಗಳನ್ನು ಪಡೆಯಲು ಬರೆಯಬೇಕಾದ ವಿಷಯಗಳು, ಪೇಮೆಂಟ್ ಸೀಟ್ ಪಡೆಯಲು ಸಿ.ಇ.ಟಿ. ಬರೆಯಬೇಕೆ?

ಸಿ.ಇ.ಟಿ. ಪರೀಕ್ಷೆಗೆ ಕುಳಿತುಕೊಳ್ಳಲು ಪಿ.ಯು.ಸಿ. (ವಿಜ್ಞಾನ) ಯಲ್ಲಿ ಕನಿಷ್ಠ ಶೇ.೫೦ರಷ್ಟು ಅಂಕಗಳನ್ನು ಪಡೆದಿರಬೇಕು. ಪರಿಶಿಷ್ಟ ಜಾತಿ ಹಾಗೂ ಪಂಗಡದವರಿಗೆ ಇದರಲ್ಲಿ ಸಡಿಲಿಕೆ ಇರುತ್ತದೆ. ರ್‍ಯಾಂಕಿಂಗ್ ವಿಧಾನದ ಮೇಲೆ ಪ್ರವೇಶವನ್ನು ಕೊಡಲಾಗುವುದು. ವೈದ್ಯಕೀಯ ಸೀಟಿನ ಸಲುವಾಗಿ ಭೌತ, ರಾಸಾಯನ, ಜೀವಶಾಸ್ತ್ರ ವಿಷಯಗಳನ್ನು ಬರೆಯಬೇಕಾಗುವುದು. ಪೇಮೆಂಟ್ ಸೀಟ್ ತೆಗೆದುಕೊಳ್ಳಬೇಕಾದಲ್ಲಿ ಸಿ.ಇ.ಟಿ.ಯ ಅವಶ್ಯಕತೆ ಇರುವುದು. ಆದರೆ ಪಿ.ಯು.ಸಿ.ಯಲ್ಲಿ ಶೇ.೫೦ರಷ್ಟು ಅಂಕಗಳೊಂದಿಗೆ ತೇರ್ಗಡೆಯಾಗಿರಬೇಕು.

ಸಿದ್ಧನಗೌಡ ಪಾಟೀಲ, ಬಿಜಾಪುರ

ನಾನು ಪಿ.ಯು.ಸಿ. ಮುಗಿಸಿದ್ದು ಅನಾನುಕೂಲತೆಗಳಿಂದ ಜಮೀನು ನೋಡಿಕೊಳ್ಳುವುದಕ್ಕಾಗಿ ವಿದ್ಯಾಭ್ಯಾಸವನ್ನು ನಿಲ್ಲಿಸಬೇಕಾಯಿತು. ನನಗೆ ಅಗ್ರಿಕಲ್ಚರ್‌ಗೆ ಸಂಬಂಧಪಟ್ಟ ಕೋರ್ಸ್‌ಗಳನ್ನು ತಿಳಿಸಿ. ಡಿಸ್ಟೆನ್ಸ್ ಎಜುಕೇಶನ್ ಮೂಲಕ ಮಾಡುವ ಅನುಕೂಲವಿದೆಯೇ?

ನೀವು ಅಗ್ರಿಕಲ್ಚರಗೆ ಸಂಬಂಧಪಟ್ಟ ಡಿಪ್ಲೋಮಾ ಇನ್ ಹಾರ್ಟಿಕಲ್ಚರ್ ನರ್ಸರಿ ಮ್ಯಾನೇಜ್‌ಮೆಂಟ್, ಡಿಪ್ಲೋಮಾ ಇನ್ ಮಶ್ರೂಮ್ ಟೆಕ್ನಾಲಜಿ, ಡಿಪ್ಲೋಮಾ ಇನ್ ಆರ್ಗಾನಿಕ್ ಫಾರ್ಮಿಂಗ್, ಕೋರ್ಸ್‌ಗಳನ್ನು ಮಾಡಬಹುದು. ಇದಕ್ಕೆ ಅರ್ಹತೆ ಎಂದರೆ ಪಿ.ಯು.ಸಿ. ಅಥವಾ ಅದರ ಸಮಾನವಾದ ಕೋರ್ಸ್‌ಗಳು. ನೀವು ಇದನ್ನು ಡಿಸ್ಟೆನ್ಸ್ ಎಜುಕೇಶನ್ ಮೂಲಕ ಮಾಡಬಹುದು. ವಿವರಗಳಿಗಾಗಿ ಡೈರೆಕ್ಟರೇಟ್ ಆಫ್ ಡಿಸ್ಟೆನ್ಸ್ ಎಜುಕೇಶನ್, ಅಣ್ಣಾಮಲೈ ಯುನಿವರ್ಸಿಟಿ, ಅಣ್ಣಾಮಲೈ ನಗರ್-೬೦೮ ೦೦೨. ಇವರನ್ನು ಸಂಪರ್ಕಿಸಿ.

ಪಾಂಡುರಂಗ ಪೂಜಾರಿ, ಮಂಡ್ಯ.

ನಾನು ಪಿ.ಯು.ಸಿ. (ವಿಜ್ಞಾನ) ವಿದ್ಯಾರ್ಥಿ. ಮುಂದೆ ಸೈಕಿಯಾಟ್ರಿಸ್ಟ್ ಆಗಬೇಕೆಂಬ ಬಯಕೆ. ನಾನು ಯಾವ ರೀತಿಯಲ್ಲಿ ಮುಂದುವರೆಯಬೇಕು ದಯವಿಟ್ಟು ತಿಳಿಸಿ.

ನೀವು ಸೈಕಿಯಾಟ್ರಿಸ್ಟ್ ಆಗಬೇಕಾದಲ್ಲಿ ಎಂ.ಬಿ.ಬಿ.ಎಸ್.ಪದವಿಯನ್ನು ಮುಗಿಸಿ ಸ್ನಾತಕೋತ್ತರದಲ್ಲಿ ಐಚ್ಛಿಕ ವಿಷಯವಾಗಿ ಈ ವಿಷಯವನ್ನು ತೆಗೆದುಕೊಂಡು ನಿಮ್ಮ ಅಭ್ಯಾಸವನ್ನು ಮುಂದುವರೆಸಬಹುದು.

ಸಹದೇವ, ತಿಪ್ಟೂರು.

ನಾನು ಅಂತಿಮ ಬಿ.ಕಾಂ. ವಿದ್ಯಾರ್ಥಿ, ಮುಂದೆ I.C.W.A. ಮಾಡಬೇಕೆಂದಿದ್ದೇನೆ. ಇದನ್ನು ಖಾಸಗಿಯಾಗಿ ಮಾಡಬೇಕೆ ಅಥವಾ ರೆಗ್ಯೂಲರ್ ಕ್ಲಾಸ್‌ಗಳು ಇವೆಯೇ? ದಯವಿಟ್ಟು ತಿಳಿಸಿ.

ನೀವು I.C.W.A. ಮಾಡಬೇಕಾದಲ್ಲಿ ನಿಮ್ಮ ಹೆಸರನ್ನು I.C.W.A. ಇನ್‌ಸ್ಟಿಟ್ಯೂಟ್‌ನಲ್ಲಿ ನೋಂದಾಯಿಸತಕ್ಕದ್ದು. ಈ ಕೋರ್ಸ್‌ನ್ನು ಖಾಸಗಿಯಾಗಿ ಅಥವಾ ರೆಗ್ಯೂಲರ್ ಕ್ಲಾಸ್‌ಗಳ ಮೂಲಕ ಮಾಡಬಹುದು. ವಿವರಗಳಿಗಾಗಿ I.C.W.A. ಇನ್‌ಸ್ಟಿಟ್ಯೂಟ್, ನಂ.೧೨, ಸುಡ್ಡರ್ ಸ್ಟ್ರೀಟ್, ಕಲ್ಕತ್ತ-೭೦೦ ೦೧೬ ಇವರನ್ನು ಸಂಪರ್ಕಿಸಿ.

ನೀಲಗಂಗ ವರುಣ, ಬೆಂಗಳೂರು.

ನಾನು ಎಸ್.ಎಸ್.ಎಲ್.ಸಿ. ತರಗತಿಯಲ್ಲಿ ಉತ್ತೀರ್ಣಳಾಗಿದ್ದು ಆಗ ನನಗೆ ನಮ್ಮ ಪೋಷಕರು ಮದುವೆ ಮಾಡಿದ ಕಾರಣ ಮುಂದೆ ಓದಲು ಆಗಲಿಲ್ಲ. ಈಗ ಖಾಸಗಿಯಾಗಿ ಬಿ.ಎ. ಪರೀಕ್ಷೆಗೆ ಕುಳಿತುಕೊಳ್ಳಲು ನಾನು ಅರ್ಹಳೆ? ನನಗೆ ೨೧ ವರ್ಷ ವಯಸ್ಸು.

ನಿಮಗೆ ೨೧ ವರ್ಷ ವಯಸ್ಸಾಗಿರುವುದರಿಂದ ಅಗತ್ಯವಾಗಿ ವಯಸ್ಸಿನ ಆಧಾರದ ಮೇಲೆ ಬಿ.ಎ. ಪದವಿಯನ್ನು ಖಾಸಗಿಯಾಗಿ ಮುಂದುವರೆಸಬಹುದು. ವಿವರಗಳಿಗಾಗಿ ಕರ್ನಾಟಕ ಮುಕ್ತ ವಿಶ್ವವಿದ್ಯಾಲಯ, ಮೈಸೂರು ಅಥವಾ ಡೈರೆಕ್ಟರೇಟ್ ಆಫ್ ಡಿಸ್ಟೆನ್ಸ್ ಎಜುಕೇಶನ್, ಸೆಂಟ್ರಲ್ ಕಾಲೇಜ್ ಕ್ಯಾಂಪಸ್, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು ಇವರನ್ನು ಸಂಪರ್ಕಿಸಿ.

ಉಮೇಶ್ ಎಫ್, ಮಂಗಳೂರು.

ಸಾರ್, ಪಿ.ಯು.ಸಿ. (ವಾಣಿಜ್ಯ) ತೇರ್ಗಡೆ ಹೊಂದಿದ್ದು ಕಂಪನಿ ಸೆಕ್ರೆಟರಿಯಾಗಲು ತುಂಬ ಆಸೆ. ಅರ್ಹತೆ ಮತ್ತು ಸಂಪರ್ಕಿಸಬೇಕಾದ ವಿಳಾಸ ತಿಳಿಸಬೇಕಾಗಿ ವಿನಂತಿ.

ನೀವು C.S. ಮಾಡಬೇಕಾದಲ್ಲಿ ಕನಿಷ್ಠ ಪದವಿಯಾಗಿರಬೇಕು ಹಾಗೂ ಪಿ.ಯು.ಸಿ. ಆಧಾರದ ಮೇಲೆ ಒಂದು ವರ್ಷದ ಫೌಂಡೇಷನ್ ಕೋರ್ಸ್ ಮಾಡಿ ಕಂಪನಿ ಸೆಕ್ರೆಟರಿ ಕೋರ್ಸ್‌ನ್ನು ಮುಂದುವರೆಸಬಹುದು. ವಿವರಗಳಿಗಾಗಿ I.C.S.I. ಇನ್‌ಸ್ಟಿಟ್ಯೂಟ್, ಶಿನೇ ಮಹಡಿ, I.C.S.I. ಹೌಸ್, ೨೨, ಇನ್ಸಿಟಿಟ್ಯೂಶನಲ್ ಏರಿಯಾ, ಲೋದಿ ರೋಡ್, ಹೊಸದೆಹಲಿ-೧೧೦ ೦೦೩ ಇವರನ್ನು ಸಂಪರ್ಕಿಸಿ.

ಶ್ರೀನಾಥ್, ಶ್ರೀನಿವಾಸಪುರ.

ಮಾನ್ಯರೇ, ನನ್ನ ವಯಸ್ಸು ೨೧. S.S.L.C. ಯಲ್ಲಿ ಅನುತ್ತೀರ್ಣನಾಗಿರುತ್ತೇನೆ. ನಾನು ಈಗ ದ್ವಿತೀಯ P.U.C. ಪರೀಕ್ಷೆ ಅಥವಾ ಪದವಿ ಪರೀಕ್ಷೆಯನ್ನು ಕಟ್ಟಬೇಕೆಂದುಕೊಂಡಿದ್ದೇನೆ. ಇದಕ್ಕೆ ನಾನು ಎಸ್.ಎಸ್.ಎಲ್.ಸಿ. ಕಡ್ಡಾಯವಾಗಿ ತೇರ್ಗಡೆ ಹೊಂದಿರಬೇಕೆ? ದಯವಿಟ್ಟು ತಿಳಿಸಿ.

ನಿಮಗೆ ೨೧ ವರ್ಷ ವಯಸ್ಸಾಗಿರುವುದರಿಂದ ನೀವು ವಯಸ್ಸಿನ ಆಧಾರದ ಮೇಲೆ P.U.C. ಅಥವಾ ಪದವಿ ಪರೀಕ್ಷೆಯನ್ನು ನೇರವಾಗಿ ತೆಗೆದುಕೊಳ್ಳಬಹುದು. ಇದಕ್ಕೆ ಎಸ್.ಎಸ್.ಎಲ್.ಸಿ. ತೇರ್ಗಡೆಯಾಗಿರಬೇಕೆಂಬ ನಿಯಮವಿಲ್ಲ. ನೀವು ಪಿ.ಯು.ಸಿ. ಮಾಡಲು ಇಚ್ಛಿಸಿದರೆ ಯಾವುದಾದರು ನಿಮ್ಮ ಹತ್ತಿರದ ಸರಕಾರಿ ಪದವಿ ಪೂರ್ವ ಕಾಲೇಜಿನಲ್ಲಿ ವಿಚಾರಿಸಿ. ಈ ಕುರಿತಾಗಿ ಆಗಸ್ಟ್-ಸೆಪ್ಟೆಂಬರ್ ತಿಂಗಳಲ್ಲಿ ಕಾಲೇಜುಗಳಿಗೆ ನೋಟೀಸ್ ಕಳುಹಿಸುತ್ತಾರೆ.

ಹುಬ್ಬಳ್ಳಿಯ ಶ್ರೀ ಸಾಯಿ ಉದ್ದಿಮೆಗಳ ಸಮೂಹ

ತಂದೆ ಲಕ್ಷ್ಮಣಸಾ ಮಲ್ಹಾರಸಾ ನಿರಂಜನರ ಸ್ಫೂರ್ತಿದಾಯಕ ಬದುಕಿನ ಪ್ರಯೋಜನವನ್ನು ಅವರ ಆರೂ ಜನ ಮಕ್ಕಳು ಮೈಗೂಡಿಸಿಕೊಂಡು ಮುನ್ನಡೆಯುತ್ತಿದ್ದುದೇ, ತಂದೆ ೧೯೭೨ರಲ್ಲಿ ಸ್ಥಾಪಿಸಿದ ಒಂದು ಕಿರು ಉದ್ದಿಮೆ ಇನ್ನೊಂದಕ್ಕೆ ಕಾಲಕ್ರಮೇಣ ಹನ್ನೊಂದಕ್ಕೆ ಬೆಳೆಯುವ ಸಮೀಪದಲ್ಲಿದೆ. ಶ್ರೀ ಸಾಯಿ ಉದ್ದಿಮೆ ಈಗ ಸಮೂಹ ರೂಪ ತಳೆದಿದ್ದು ಅದರ ಮುಂಚೂಣಿಯಲ್ಲಿ ಶ್ರೀ ನಾರಾಯಣ ಲಕ್ಷ್ಮಣಸಾ ನಿರಂಜನ್ (ವಿಜ್ಞಾನ ಪದವೀಧರ) ಇದ್ದಾರೆ. ಅವರು ಈ ಸಮೂಹದ ಆಡಳಿತ ನಿರ್ದೇಶಕರು. ಅವರಿಗೆ ವಾಣಿಜ್ಯ ಪದವೀಧರ ಶಂಕರ ಲಕ್ಷ್ಮಣಸಾ ನಿರಂಜನ್ ಸಹಾಯ ಸಹಕಾರಗಳು ಸದಾ ಲಭ್ಯವಿವೆ. ಈ 'ಹರಿಹರ' ಸಂಯೋಗವು ಸಣ್ಣ ಉದ್ದಿಮೆಗಳೆಲ್ಲವುಗಳಿಗೆ ಪ್ರೇರಣೆ ನೀಡುವ ಉದ್ದಿಮೆ ಸಮೂಹ ನಿರ್ಮಾಣದತ್ತ ದಾಪುಗಾಲಿಕ್ಕುತ್ತಲಿದೆ. ಇವರ ಎಲ್ಲ ಉದ್ದಿಮೆಗಳೂ ಕುಟುಂಬ ಪಾಲುಗಾರಿಕೆಯ ರೂಪದಲ್ಲಿವೆ.

ಇದೇ ವರುಷ ರಜತೋತ್ಸವವನ್ನಾಚರಿಸಿ ಬೀಗುತ್ತಿರುವ ಈ ಸಮೂಹದ ಘಟಕಗಳಿಂತಿವೆ:

೧. ಶ್ರೀ ಸಾಯಿನಾಥ್ ಎಂಜಿನಿಯರಿಂಗ್ ವರ್ಕ್ಸ್ (೧೯೭೨)
೨. ಶ್ರೀ ಸಾಯಿ ಇಂಡಸ್ಟ್ರೀಸ್ (೧೯೮೪)
೩. ಶ್ರೀ ಸಾಯಿ ಆಟೋಮೊಬೈಲ್ಸ್ (೧೯೮೭)
೪. ಶ್ರೀ ಸಾಯಿ ಟ್ರ್ಯಾಕ್ಟರ್ ಸೆಂಟರ್ (೧೯೮೮)
೫. ಶ್ರೀ ಸಾಯಿ ಇಂಪ್ಲಿಮೆಂಟ್ ಇಂಡಸ್ಟ್ರೀಸ್ (೧೯೯೧)
೬. ಶ್ರೀ ಸಾಯಿ ಆಟೋ ಸೆಂಟರ್ (೧೯೯೧)
೭. ಶ್ರೀ ಸಾಯಿ ವ್ಹೀಲ್ಸ್ (೧೯೯೩)
೮. ಶ್ರೀ ಸಾಯಿ ಅಸೋಶಿಯೇಟ್ಸ್ (೧೯೯೪)

ಅಲ್ಲದೆ ಎಸ್.ಬಿ. ಇಂಪ್ಲಿಮೆಂಟ್ಸ್ ಎಂಬ ಶಾಖೆಯೂ ಸಹ ಹೊಸಪೇಟೆಯಲ್ಲಿದೆ. ಕರ್ನಾಟಕದಲ್ಲಿಯ ಕ್ಷತ್ರಿಯ ಸಮಾಜದ ಕುಂಟುಂಬವೊಂದರ ಒಡೆತನದಲ್ಲಿ ಇಷ್ಟು ದೊಡ್ಡ ಸಂಖ್ಯೆಯ ಚಿಕ್ಕ ಉದ್ದಿಮೆಗಳ ಸಮೂಹ ಬೇರೊಂದಿಲ್ಲ.

ಸಮಾಜದ ಸಂಪತ್ತನ್ನು ನಮ್ಮತ್ತ ಆಕರ್ಷಿಸುವಾಗ ಸಮಾಜೋಪಯೋಗಿಯಾದ, ದೇಶದ ಉನ್ನತಿಗೆ ಸಂಬಂಧಿಸಿದ ಚಟುವಟಿಕೆಗಳಲ್ಲಿ ನಮ್ಮನ್ನು ತೊಡಗಿಸಿಕೊಳ್ಳಬೇಕೆಂಬ ಧ್ಯೇಯವೇ ಈ ಸಮೂಹದ ಪ್ರಗತಿಗೆ ಕಾರಣ. ಒಕ್ಕಲುತನ ನಮ್ಮ ದೇಶದ ಅತಿ ದೊಡ್ಡ, ಆದರೆ ನಿರ್ಲಕ್ಷಿತ ಉದ್ಯಮ. ಯಾಂತ್ರೀಕರಣದ ಅಭಾವ ಇದರ ದೊಡ್ಡ ಊನ. ಇದನ್ನು ನೋಡಿ ಮನನೊಂದು ತಮ್ಮಲ್ಲಿದ್ದ ತಾಂತ್ರಿಕ ಕೌಶಲ್ಯವನ್ನು ಇತರರಿಗೆ ಉತ್ಪಾದನೆಯ ರೂಪದಲ್ಲಿ ನೀಡಬೇಕೆಂದು ಸಂಕಲ್ಪಿಸಿದವರು ಲಕ್ಷ್ಮಣಸಾ ನಿರಂಜನ್. ತಮ್ಮ ಛಾಪು ಮೂಡಿಸಬೇಕೆಂದೂ ಸಹ ಅವರ ಆಕಾಂಕ್ಷೆ. ಹಾಗಾಗಿ ತಮ್ಮ ಕಲ್ಪನೆಯ ಕೂಸಾದ ಶ್ರೀ ಸಾಯಿನಾಥ್ ಎಂಜನಿಯರಿಂಗ್ ವರ್ಕ್ಸ್‌ದಲ್ಲಿ ಅವರು ಟ್ರ್ಯಾಕ್ಟರ್ ಟ್ರೇಲರ್‌ಗಳಿಗೆ ಬೇಕಾಗುವ ಉಂಗುರಾಕಾರದ ಗಾಲಿಯ ಅಚ್ಚುಗಳನ್ನು (Ring Type Discs) ತಾಂತ್ರಿಕ ಕೌಶಲ್ಯದ ಪ್ರತೀಕವಾದ ಅಲಗಿನ ಹರಗುವ ಉಪಕರಣಗಳನ್ನೂ (Highly Mechanised Blade Harrows) ಪೇಟೆಗೆ ಬಿಡುಗಡೆ ಮಾಡಿ 'ಮೆಚ್ಚುಗೆ' ಪಡೆದರು. ಅವರ ಮಕ್ಕಳು ಇದರಿಂದ ಸ್ಫೂರ್ತಿ ಪಡೆದು ಈಗ ನಾಲ್ಕು ವಿಧದ ನೇಗಿಲುಗಳು, ಎರಡು ವಿಧದ ತಿರುವು ಮುರುವು ನೇಗಿಲುಗಳು (ಪಲಟಿಪಾಳ್), ಎರಡು ವಿಧದ ಗುರದಾಳಗಳು, ಎರಡು ವಿಧದ ಕುಂಟೆಗಳು ಮತ್ತು ಎರಡು ವಿಧದ ಗಾಲಿಯ ಅಚ್ಚುಗಳನ್ನೂ ಉತ್ಪಾದಿಸುತ್ತಿದ್ದಾರೆ. ಈ ಉತ್ಪನ್ನಗಳಲ್ಲಿ ಎರಡು ಸಾಲಿನ ನೇಗಿಲು ಮತ್ತು ಗುರದಾಳ (Cultivator)ಗಳಿಗೆ ಅತ್ಯಂತ ಹೆಚ್ಚಿನ ಬೇಡಿಕೆಯಿದೆ. ರೈತರಿಗೆ ಎಟಕುವ ದರದಲ್ಲಿರುವದು ಈ ಉಪಕರಣಗಳು ಜನಪ್ರಿಯವಾಗಲು ಬಹು ಮುಖ್ಯ ಕಾರಣ. ಅತಿ ಲಾಭದಾಸೆ ಮಾತ್ರ ಸಲ್ಲ ಎಂಬುದನ್ನು ಉದ್ದಿಮೆ

ಸಮಾಜದ ಸಂಪತ್ತನ್ನು ನಮ್ಮತ್ತ ಆಕರ್ಷಿಸುವಾಗ ಸಮಾಜೋಪಯೋಗಿಯಾದ, ದೇಶದ ಉನ್ನತಿಗೆ ಸಂಬಂಧಿಸಿದ ಚಟುವಟಿಕೆಗಳಲ್ಲಿ ನಮ್ಮನ್ನು ತೊಡಗಿಸಿಕೊಳ್ಳಬೇಕೆಂಬ ಧ್ಯೇಯವೇ ಈ ಸಮೂಹದ ಪ್ರಗತಿಗೆ ಕಾರಣ.



ಎರಡು ಸಾಲಿನ ನೇಗಿಲು : ಅತ್ಯಂತ ಹೆಚ್ಚು ಬೇಡಿಕೆಯಿರುವ ಉಪಕರಣ

ಸಮೂಹ ಅರ್ಥ ಮಾಡಿಕೊಂಡಿದೆ. ಹಾಗಾಗಿ ಸಮಗ್ರ ಕರ್ನಾಟಕದಲ್ಲಿ ಕೃಷಿಕರು ತಮಗೆ ಬೇಕಾಗುವ ಉಪಕರಣಗಳನ್ನು ಕಾರಖಾನೆಯಿಂದ ನೇರವಾಗಿ, ಆಗ್ರೋ ಇಂಡಸ್ಟ್ರೀಸ್ ಕಾರ್ಪೋರೇಶನ್ ಮುಖಾಂತರ, ಉದ್ದಿಮೆ ನೇಮಕ ಮಾಡಿದ ಗುಲ್ಬರ್ಗಾ, ಬೀದರ್, ಬೆಂಗಳೂರು, ಮಂಡ್ಯ, ಮೈಸೂರು, ಶಿವಮೊಗ್ಗ, ಹಾಸನಗಳಲ್ಲಿಯ ದಾಸ್ತಾನುದಾರರು, ಹಂಚಿಕೆದಾರರ ಮುಖಾಂತರ ಪೈಪೋಟಿಯಲ್ಲಿ ಕೊಳ್ಳುತ್ತಾರೆ. ಉದ್ದಿಮೆಯ ಪ್ರತಿಷ್ಠೆಯನ್ನು ಕಾಯ್ದು ಕೊಳ್ಳಲು ಹಾಗೂ ಗುಣಾತ್ಮಕವಾದ ಅಭಿವೃದ್ಧಿ ತರಲು ಮುಂಚೂಣಿಯ ಆರು ಬಂಧುಗಳಲ್ಲದೆ ೧೨೫ ತಾಂತ್ರಿಕ ವರ್ಗದವರು ಹಾಗೂ ೨೫ ಜನ ಆಡಳಿತ ಸಿಬ್ಬಂದಿ ಅಹರ್ನಿಶಿ ಶ್ರಮಿಸುತ್ತಿದ್ದಾರೆ. ಇದೆಲ್ಲವೂ ಏರುತ್ತಿರುವ ವಾರ್ಷಿಕ ವಹಿವಾಟಿನಲ್ಲಿ ಪ್ರತಿಬಿಂಬಿತವಾಗಿದೆ (೧೯೭೨-ಸುಮಾರು ರೂ.೧೦,೦೦೦-೧೯೯೭-ಸುಮಾರು ರೂ. ೭ ಕೋಟಿ)

ವೃತ್ತಿಬಾಂಧವರ ಬಗೆಗಿನ ಕಾಳಜಿಯೂ ನಿರಂಜನ ಬಂಧುಗಳಿಗಿದೆ. ತಮ್ಮ ಹಿತಾಸಕ್ತಿಗಳ ರಕ್ಷಣೆ ಕುರಿತು ಕರ್ನಾಟಕ ಟ್ರ್ಯಾಕ್ಟರ್ ಟ್ರೇಲರ್ಸ್ ಹಾಗೂ ಕೃಷಿ ಉಪಕರಣಗಳ ಉತ್ಪಾದಕರ ಸಂಘವನ್ನು ಹುಟ್ಟು ಹಾಕಿರುವರಲ್ಲದೆ ನಾರಾಯಣ ನಿರಂಜನರು ಅದರ ಸಂಸ್ಥಾಪಕ ಅಧ್ಯಕ್ಷರೂ ಆಗಿದ್ದಾರೆ. ತಮ್ಮ ಸಮಸ್ಯೆಗಳನ್ನು ರಾಜ್ಯ ಸರಕಾರದ ಮುಂದೆ ಸಮರ್ಥವಾಗಿ ಬಿಂಬಿಸಿ ಕೃಷಿ ಉಪಕರಣಗಳ ಮೇಲಿನ ತೆರಿಗೆಯನ್ನು ಶೇಕಡಾ ೧೨ ರಿಂದ ಶೇಕಡಾ ೪ಕ್ಕೆ ತಗ್ಗಿಸುವಂತೆ ಮನವೊಲಿಸಲು ಯಶಸ್ವಿಯಾಗಿದ್ದಾರೆ. ವೃತ್ತಿ ಬಾಂಧವರು ಅವರನ್ನು ಈ ಕಾರ್ಯಕ್ಕಾಗಿ ಅಭಿನಂದಿಸುತ್ತಿದ್ದಾರೆ.

ಸಾರ್ವಜನಿಕರಲ್ಲಿ ಜನಪ್ರಿಯವಾದ ಈ ಉದ್ದಿಮೆ ಸರಕಾರದ ವಲಯದಲ್ಲಿಯೂ ಗಮನ ಸೆಳೆದಿದೆ. ರಾಜ್ಯ ಸರಕಾರದ ವಾಣಿಜ್ಯೋದ್ಯಮ ಇಲಾಖೆ ಇತರ ಸಂಸ್ಥೆಗಳ ಸಹಯೋಗದಿಂದ ಪ್ರಾಯೋಜಿಸಿದ "ಇನ್ ಕಾಮೆರ್ಸ್-೯೬ ಔದ್ಯೋಗಿಕ ವಸ್ತು

"ನಾವು ಒಂದು ಶತಮಾನ ಹಿಂದಿದ್ದೇವೆ"

- ನಾರಾಯಣ ನಿರಂಜನ



ನಾರಾಯಣ ನಿರಂಜನ

ಸಂದರ್ಶನ

ಡೆನ್ಮಾರ್ಕ್‌ನಲ್ಲಿ ನೀವು ಭಾಗವಹಿಸಿದ ವಸ್ತುಪ್ರದರ್ಶನದಲ್ಲಿ ಸಂದರ್ಶಕರ ಪ್ರತಿಕ್ರಿಯೆ ಹೇಗಿತ್ತು?

ಅಲ್ಲಿ ಸದ್ಯ ಬಳಕೆಯಲ್ಲಿಲ್ಲದ ಆದರೆ ಈಗಲೂ ಕೆಲವರಿಗೆ ಉಪಯೋಗವಾಗಬಹುದಾದ ನಮ್ಮ ಸಮೂಹದ ಉತ್ಪಾದನೆಗಳಾದ ಕೃಷಿ ಉಪಕರಣಗಳು ಸಂದರ್ಶಕರನ್ನು ಪ್ರಭಾವಿತಗೊಳಿಸಿದ್ದು ಸ್ಥಳೀಯವಾಗಿ ಕೊಳ್ಳಲು ಅನುವಾಗುವಂತೆ ಹಂಚಿಕೆದಾರರನ್ನು ನೇಮಕ ಮಾಡಲು ವಿನಂತಿಸಿದರು.

ಡೆನ್ಮಾರ್ಕ್‌ದಲ್ಲಿನ ಕೃಷಿ ಚಟುವಟಿಕೆಗಳ ಬಗೆಗೆ ಏನು ತಿಳಿದುಕೊಂಡಿರಿ?

ಈಗ ನಾವು ಉತ್ಪಾದಿಸುತ್ತಿರುವ ಕೃಷಿ ಉಪಕರಣಗಳನ್ನು ಆ ದೇಶದಲ್ಲಿ ಕಳೆದ ಶತಮಾನದಲ್ಲಿ ಉಪಯೋಗಿಸುತ್ತಿದ್ದರು ಎಂಬುದನ್ನು ತಿಳಿದು ನಾಚಿಕೆಯಾಯಿತು.

ಅಲ್ಲಿಯ ಒಕ್ಕಲುತನ ಸಾಗುವ ಬಗೆ ಹೇಗೆ?

ಉಪಗ್ರಹ ಕೃಷಿ ಚಟುವಟಿಕೆಗಳು ಸಂಪರ್ಕಸಾಧಿತ ಸಂಪೂರ್ಣ ಕಂಪ್ಯೂಟರ್ ನಿಯಂತ್ರಿತವಾಗಿವೆ. ಹಾಗಾಗಿ ಕೃಷಿಕನ ವಶದಲ್ಲಿಯ ಸಾವಿರಾರು ಎಕರೆ ಜಮೀನಿನ ಸಾಗುವಳಿ ನೀರು ಕುಡಿದಷ್ಟು ಸುಲಭ. ಭೂಮಿಯಲ್ಲಿ ಒಂದೂವರೆ ಅಡಿಯವರೆಗೆ ಹುದುಗಿದ ಕಲ್ಲುಗಳನ್ನು ಹೊರಕ್ಕೆಳೆಯುವ ಯಂತ್ರಗಳು, ಆಲೂಗಡ್ಡೆ, ಬೀಟ್ ಗಡ್ಡೆ ಇವುಗಳನ್ನು ಭೂಮಿಯಿಂದ ಹೊರದೆಗೆದು, ಸ್ವಚ್ಛಗೊಳಿಸಿ, ಪ್ಯಾಕ್ ಮಾಡುವ ಯಂತ್ರಗಳು ಅಲ್ಲಿ ಸಾರ್ವತ್ರಿಕ ಬಳಕೆಯಲ್ಲಿವೆ.

ಹಾಗಾದರೆ ನಿತ್ಯದ ಜೀವನವೂ ಇಲ್ಲಿಗಿಂತ ಭಿನ್ನವಾಗಿರಬೇಕಲ್ಲ?

ಖಂಡಿತ. ನಾವು ತಿರುಗಾಡಿದಲ್ಲೆಲ್ಲ ನಾಗರಿಕರು ಪೂರ್ವಯೋಜನೆ, ಸಮಯಪ್ರಜ್ಞೆ, ಶಿಷ್ಟಾಚಾರ, ವಿನಯ, ಸೌಜನ್ಯಶೀಲತೆ ಪ್ರದರ್ಶಿಸಿ ನಾವು ಮಾರು ಹೋಗುವಂತೆ ಮಾಡಿದರು. ಇದು ನಮಗಾಗಿ ಮಾಡಿದ ನಾಟಕವಲ್ಲ; ಈ ಗುಣಗಳು ಅವರಲ್ಲಿ ರಕ್ತಗತವಾಗಿವೆ.

ನಿಮ್ಮನ್ನು ಪ್ರಭಾವಿತಗೊಳಿಸಿದ ಬೇರೆ ಅನುಭವಗಳು?

ಕೆಲವನ್ನಂತೂ ಮರೆಯಲಾರೆವು. ಅವರಿಗೆ ಇದೂವರೆಗೆ ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯವೆಂದರೇನೆಂಬುದೇ ತಿಳಿಯದು! ಗಂಟೆಗಟ್ಟಲೆ ವಿದ್ಯುತ್ ಪೂರೈಕೆಯಿಲ್ಲದ ಬದುಕನ್ನು ಊಹಿಸಿಯೇ ಅವರು ಕಂಗೆಟ್ಟರು.

ನಗರ ಸಂಚಾರದಲ್ಲಿ ಬೇರೆ ಬೇರೆ ವಾಹನಗಳಿಗೆ ಮತ್ತು ಬೇರೆ ಬೇರೆ ವೇಗಗಳಿಗೆ ಪ್ರತ್ಯೇಕ ವ್ಯವಸ್ಥೆಯಿದೆ. ಕಳೆದ ಹಿಮಪಾತಾವಧಿಯ ಅಪಘಾತದಿಂದಲೇ ಅಲ್ಲಿ ತುಂಬ ದುಃಖಿತರಾಗಿದ್ದರು. ನಮ್ಮಲ್ಲಿ ಪ್ರತಿ ೮ ಕಿ.ಮೀ. ಗೊಂದರ ಅಪಘಾತದ ದರ ಕೇಳಿದ ಮೇಲಂತೂ ಸುಸ್ತಾದರು!


ಮತ್ತಾವ ವಿಷಯಗಳನ್ನು ಗಮನಿಸಿದಿರಿ?

ಶಿಕ್ಷಣ ನೀಡುವುದು ಸರಕಾರದ ಹೊಣೆ. ಕಡ್ಡಾಯ ಶಿಕ್ಷಣವಿದೆ. ಜೊತೆಗೆ ಪ್ರತಿ ವಿದ್ಯಾರ್ಥಿಗೂ ವಿದ್ಯಾರ್ಥಿವೇತನ ಸೌಲಭ್ಯ ಇದೆ. ಪ್ರತಿಯೊಬ್ಬರೂ ಕನಿಷ್ಟ '೧೦x೨'ರ ಶಿಕ್ಷಣ ಪೂರೈಸಲೇ ಬೇಕು. ಫಲಿತಾಂಶ : ೫೪ ಲಕ್ಷ ಜನಸಂಖ್ಯೆಯ ಈ ರಾಷ್ಟ್ರದಲ್ಲಿ ಸಂಪೂರ್ಣ ಸಾಕ್ಷರತೆ ಇದೆ. ಪ್ರವೇಶ ಪಡೆಯಲು ಡೊನೇಷನ್ ಬೇಡ; ಸೀಟು ಶುಲ್ಕವೂ ಇಲ್ಲ. ವಿದ್ಯಾಭ್ಯಾಸ ನಿರಾಕರಿಸುವ ನಾಗರಿಕ ಕಡ್ಡಾಯ ಜೈಲು ಶಿಕ್ಷೆಗೆ ಒಳಗಾಗಬೇಕು.

ನೌಕರಿ ಸಿಗುವವರೆಗೆ ನಿರುದ್ಯೋಗ ಪಿಂಚಣಿ ವ್ಯವಸ್ಥೆಯಿದೆ. ನಿವೃತ್ತಿಯ ವಯಸ್ಸು ೫೦ಕ್ಕೆ ನಿಗದಿಗೊಳಿಸಿದ್ದಾರೆ. ನಂತರ ಭಾರತದ ರೂಪಾಯಿ ಲೆಕ್ಕದಲ್ಲಿ ರೂ. ೪೮೦೦೦ರಷ್ಟು ಮಾಸಿಕ ವೃದ್ಧಾಪ್ಯ ಪಿಂಚಣಿ ದೊರೆಯುತ್ತದೆ.



ಶಂಕರ ನಿರಂಜನ



ಪ್ರದರ್ಶನ''ದಲ್ಲಿ ಶ್ರೀ ಸಾಯಿ ಇಂಪ್ಲಿಮೆಂಟ್ ಇಂಡಸ್ಟ್ರೀಸ್, ಸಣ್ಣ ಉದ್ದಿಮೆಗಳ ಎಂಜಿನಿಯರಿಂಗ್ ಘಟಕಗಳು ನೀಡಿದ ಉಪಕರಣ ಪ್ರದರ್ಶನದಲ್ಲಿ ಅತ್ಯುತ್ತಮ ಮಳಿಗೆ ಎಂದು ನಿರ್ಣಯಿತವಾಗಿ ಮೊದಲ ಬಹುಮಾನ ಪಡೆದಿದೆ.

ಜನವರಿ ೧೯, ೧೯೯೭ ರಿಂದ ಒಂದು ವಾರ ಡೆನ್ಮಾರ್ಕ್ ದೇಶದಲ್ಲಿ ಜರುಗಿದ 'ಟೆಕ್‌ಚೇಂಜ್ -೯೭-ಅಗ್ರೋಮೆಕ್' ವಸ್ತು ಪ್ರದರ್ಶನದಲ್ಲಿ ಭಾಗವಹಿಸಿ ಮಳಿಗೆಗಳನ್ನು ಹೊಂದಲು ಭಾರತದಿಂದ ಆಯ್ಕೆಯಾದ ಎರಡು ಸಂಸ್ಥೆಗಳಲ್ಲಿ ಶ್ರೀ ಸಾಯಿ ಇಂಪ್ಲಿಮೆಂಟ್ ಇಂಡಸ್ಟ್ರೀಸ್ ಸಹ ಒಂದು. ಇನ್ನೊಂದು ಸಂಸ್ಥೆ ಮಹಾರಾಷ್ಟ್ರದ (ಪುಣೆ) ಗರವಾರೆ ವಾಲ್‌ರೋಪ್ಸ್ ಲಿ., ಇಲ್ಲಿ ಡನ್‌ಮಾರ್ಕ್ ದೇಶದ ವಿದೇಶ ವ್ಯವಹಾರಗಳ ಸಚಿವಾಲಯ ಆತಿಥೇಯರಾಗಿದ್ದು ವಸ್ತು ಪ್ರದರ್ಶನದಲ್ಲಿ ಪುಕ್ಕಟೆಯಾಗಿ ಮಳಿಗೆ ಮತ್ತು ಒಬ್ಬ ಪ್ರತಿನಿಧಿಯ ಸಮಗ್ರ ಖರ್ಚು-ವೆಚ್ಚಗಳ ನಿರ್ವಹಣೆಯನ್ನು ಆ ಸರಕಾರ ವಹಿಸಿಕೊಂಡಿತ್ತು. ಆಧುನಿಕ ಆಗುಹೋಗುಗಳನ್ನು ತಿಳಿದುಕೊಳ್ಳುವ ಉದ್ದೇಶದಿಂದ ಶಂಕರ ಅವರೂ ಸಹ ಸ್ವಂತ ವೆಚ್ಚದಲ್ಲಿ ಸಹೋದರನೊಡನೆ ಪ್ರಯಾಣಿಸಿದ್ದರು. ಇಲ್ಲಿ ಕೂಡ ಉದ್ದಿಮೆ ಪ್ರದರ್ಶಿಸಿದ ಮಳಿಗೆಗೆ ಅತ್ಯುತ್ಕೃಷ್ಟ ಮಳಿಗೆ ಎಂಬ ಪ್ರಥಮ ಪುರಸ್ಕಾರ ಲಭಿಸಿದೆ.

ಇವೆರಡೂ ಸಾಧನೆಗಳು ಸಂಸ್ಥೆಗೆ ಗರಿಮೂಡಿಸಿವೆಯಲ್ಲದೆ ಬೇರೆ ಬಗೆಯ ಲಾಭಗಳಿಗೂ ಕಾರಣವಾಗಿವೆ.

ನಮಗೆ ದೂರದ ಚಂದ್ರ ಕಾಣುತ್ತಾನೆ; ಹತ್ತಿರದ ಹುಬ್ಬಳ್ಳಿ ಕಾಣುವುದಿಲ್ಲ!

○ ಡಾ. ಟಿ.ಕೆ. ತಾಪಸ್

''ಬೇಟಾ ಹೋತೋ ಐಸಾ; ಬಾಪ್ ಹೋ ತೋ ಐಸಾ''

ದೇಶಪ್ರೇಮ, ಸಾಮಾಜಿಕ ಕಳಕಳಿ, ಅದಮ್ಯ ಉತ್ಸಾಹ, ಅಚಲ ಶ್ರದ್ಧೆ, ದೃಢನಿಶ್ಚಯ, ಕುಟುಂಬ ವಾತ್ಸಲ್ಯ-ಈ ಗುಣಗಳು ಉಜ್ವಲಗೊಳಿಸುತ್ತವೆಯೇ ವಿನಾ ಕೇವಲ ಸಾಲುಗಟ್ಟಲೆ ಪಡೆದ ಪದವಿ, ಬಿರುದು-ಬಾವಲಿಗಳಲ್ಲ ಎಂಬುದರ ಸಾಕಾರ ರೂಪ ಶ್ರೀ ಸಾಯಿ ಉದ್ದಿಮೆ ಸಮೂಹದ ಜನಕ, ಆಧಾರ ಸ್ತಂಭ, ಲಕ್ಷ್ಮಣಸಾ ಮಲ್ಹಾರಸಾ ನಿರಂಜನ್‌ರವರು.

ಭಾರತ ಸ್ವಾತಂತ್ರ್ಯಕ್ಕಿಂತ ಸುಮಾರು ಕಾಲು ಶತಮಾನ ಮೊದಲು (ಜುಲೈ ೨೮, ೧೯೨೩) ಜನಿಸಿದ ಅವರ ಬಾಲ್ಯ ಸಮಸ್ಯೆಗಳ ಆಗರ, ಮುಳ್ಳಿನ ಹಾಸಿಗೆ. ಕೇವಲ ಪ್ರಾಥಮಿಕ ಶಿಕ್ಷಣ ಮಾತ್ರ ಪಡೆಯಲು ಸಾಧ್ಯವಾದ ಮನೆತನದ ಪರಿಸ್ಥಿತಿ ಆ ಎಳೆಯ ಕೈಗಳು ತಂದೆಯ ಕೈ ಮಗ್ಗದ ವ್ಯವಹಾರದಲ್ಲಿ ಕೈ ಜೋಡಿಸುವಂತೆ ಮಾಡಿದವು. ಮೇಧಾವಿ ಬಾಲಕನ ಕಣ್ಣಿನ ಮಿಂಚು ಶಿಕ್ಷಣ ಮೊಟಕುಗೊಂಡರೂ ಮಾಸಲಿಲ್ಲ. ಬದುಕಿನ ಒತ್ತಡ ರೈಲ್ವೆ ಇಲಾಖೆಯಲ್ಲಿ ನೌಕರಿ ಮಾಡುವಂತೆ ಮಾಡಿತು.

ದೇಶದ ಬಗೆಗಿನ ಪ್ರೀತಿ ಮತ್ತೊಂದು ತಿರುವು ತಂದಿತು. ಪರಿಣಾಮ : ನೌಕರಿಗೆ ಶರಣು ಹೊಡೆದು ಸ್ವಾತಂತ್ರ್ಯ ಸಂಗ್ರಾಮದಲ್ಲಿ ಅಳಿಲು ಸೇವೆ. ಫಲ-ಆರು ತಿಂಗಳ ಜೈಲು ವಾಸ (ಹಿಂಡಲಗಾ ಜೈಲು ಸೆಪ್ಟೆಂಬರ್ ೧೯೪೨ರಿಂದ ಮಾರ್ಚ್ ೧೯೪೩).

ಸ್ವಂತದ, ತನ್ನವರ ತುತ್ತಿನ ಚೀಲ ತುಂಬಿಸುವದಕ್ಕಾಗಿ ಸುಮಾರು ಹನ್ನೆರಡು ವರ್ಷಗಳ ಖಾಸಗಿ ನೌಕರಿ.

ಜೀವನದಲ್ಲಿ ಇಷ್ಟರವರೆಗೆ ಕೂಡಿಹಾಕಿದ ಅನುಭವ, ಶ್ರದ್ಧೆ, ಉತ್ಸಾಹಗಳು ಬೆಸುಗೆಯಾದುದರ ಮೂರ್ತರೂಪ: ಪಾಲುದಾರಿಕೆಯ ಬೆಸುಗೆ ಕಾರ್ಯಾಗಾರದ ಸ್ಥಾಪನೆ. ಇದೂ ಸಹ ಪೂರ್ಣ ತೃಪ್ತಿ ನೀಡದೆ, ಸಾಧನೆ ಇನ್ನೂ ಸಾಲದು ಎಂದು ತೋರಿದಾಗ ಶ್ರೀ ಶಿರಡಿ ಸಾಯಿಬಾಬಾರವರ ಹೆಸರಿನಲ್ಲಿ ಜನ್ಮತಳೆದ ಸಂಸ್ಥೆ ''ಶ್ರೀ ಸಾಯಿನಾಥ ಎಂಜಿನಿಯರಿಂಗ್ ವರ್ಕ್ಸ್''.

ಇದು ತಂದೆಗೆ ತಕ್ಕ ಮಗನ, ಮಕ್ಕಳಿಗೆ ತಕ್ಕ ತಂದೆಯ ಯಶೋಗಾಥೆ.

– ಟಿ.ಕೆ.ಟಿ

ಮಹತ್ವಾಕಾಂಕ್ಷಿ ಕೃಷಿ ಉದ್ಯಮಿಗಳೇ, ಇತ್ತ ಗಮನಿಸಿ

ಡೆನ್ಮಾರ್ಕ್‌ನ ಹರ್ನಿಂಗ್ ನಗರದಲ್ಲಿ ಪ್ರತಿ ವರ್ಷ ಉತ್ತರ ಯುರೋಪಿನಲ್ಲಿಯೇ ಅತಿ ದೊಡ್ಡದಾದ ಬೃಹತ್ ಪ್ರಮಾಣದ 'ಹರ್ನಿಂಗ್ ಆಗ್ರೋಮೆಕ್ ವ್ಯಾಪಾರೀ ಜಾತ್ರೆ' ಜರುಗುತ್ತದೆ. ಇದರಂಗವಾಗಿ ವರ್ಷ ವರ್ಷವೂ 'ಆಗ್ರೋಮೆಕ್ ಅಂತಾರಾಷ್ಟ್ರೀಯ ವಸ್ತುಪ್ರದರ್ಶನ'ವೂ ಏರ್ಪಡುತ್ತದೆ. ಇದು ಕೃಷಿ ಯಾಂತ್ರೀಕರಣ, ದನ ಮತ್ತು ಹಂದಿ ಮಹಾಭಿವೃದ್ಧಿ, ತಳಿ ಸುಧಾರಣೆ, ತರಕಾರಿ ಅಭಿವೃದ್ಧಿ ಇತ್ಯಾದಿಗಳಿಗೆ ಮೀಸಲಾಗಿದೆ. ಈ ವಸ್ತು ಪ್ರದರ್ಶನದ ವಿಶೇಷಗಳು:

★ ಉತ್ತರ ಯುರೋಪಿನಲ್ಲಿಯೇ ಅತಿ ಮಹತ್ವದ್ದಾದ ಕೃಷಿ ಯಂತ್ರೋಪಕರಣಗಳ ವಸ್ತು ಪ್ರದರ್ಶನ.
★ ೩೦ ರಾಷ್ಟ್ರಗಳ ಭಾಗವಹಿಸುವಿಕೆಯ ಮುಖಾಂತರ ಕೃಷಿ ಯಂತ್ರೋಪಕರಣಗಳು, ಸಲಕರಣೆಗಳು, ಉತ್ಪಾದಕರು ಮತ್ತು ತಂತ್ರಕೌಶಲ್ಯಗಳಲ್ಲಿಯ ತೀರ ಇತ್ತೀಚಿನ ಬೆಳವಣಿಗೆಗಳ ಬಗೆಗೆ ವಿಚಾರ ವಿನಿಮಯ ವಿಷಯ ಸಂಗ್ರಹ ಮಾಡಿಕೊಳ್ಳಲು ವೇದಿಕೆ.
★ ಡೆನ್ಮಾರ್ಕ್ ಮತ್ತು ಯುರೋಪಗಳಲ್ಲಿ ಉತ್ಪಾದನೆಯಾದ ಆಧುನಿಕ ೨೦೦ ವಸ್ತುಗಳ ಪ್ರದರ್ಶನ.
★ ೭೯೦೦೦ ಚ.ಮೀ. ವಿಸ್ತೀರ್ಣದ, ೧೪ ಹಜಾರಗಳಲ್ಲಿ ವಿಭಜಿತವಾದ ಹರ್ನಿಂಗ್ ನಗರದ ವಸ್ತುಪ್ರದರ್ಶನ ಕೇಂದ್ರದಲ್ಲಿ ಆಯೋಜನ.
★ ೫೫೦ಕ್ಕಿಂತಲೂ ಹೆಚ್ಚಿನ ಸಂಖ್ಯೆಯ ವಸ್ತುಪ್ರದರ್ಶಕರ ಸಮ್ಮಿಲನ.
★ ಜಗತ್ತಿನ ೬೦-೭೦ ದೇಶಗಳ ೧೨೦೦೦ ಪ್ರತಿನಿಧಿಗಳ ಭಾಗವಹಿಸುವಿಕೆ.
★ ಸುಮಾರು ೬೦,೦೦೦ ಸಂದರ್ಶಕರಿಂದ ವಸ್ತು ಪ್ರದರ್ಶನ ವೀಕ್ಷಣೆ.
★ ೫೦ ರಾಷ್ಟ್ರಗಳಿಂದ ಅಧಿಕೃತ ಶಿಷ್ಟ ಮಂಡಳಗಳ ಹಾಜರಾತಿ.
★ ಪ್ರತಿ ವರ್ಷ ಜನವರಿಯಲ್ಲಿ ವಸ್ತುಪ್ರದರ್ಶನದ ಏರ್ಪಾಡು.
★ ೨೦೦೦ ವಸ್ತು ಪ್ರದರ್ಶನ ಮಳಿಗೆಗಳು.

– ಟಿ.ಕೆ.ಟಿ

ಕ್ವಿಜ್-೧ರ ಬಹುಮಾನ ವಿಜೇತರು

ಪ್ರಥಮ ಬಹುಮಾನ

೫೦೦-೦೦ ರೂ.



ಜಿ.ಎಚ್. ಲಕ್ಷ್ಮೀಪತಿ
C/o ಹನುಮಂತಗೌಡ ಗೊಲ್ಲರ
ವಿದ್ಯಾನಗರ,
ಹಾವೇರಿ - ೫೮೧ ೧೧೦ ಜಿಲ್ಲೆ : ಧಾರವಾಡ

ದ್ವಿತಿಯ ಬಹುಮಾನ

೨೦೦-೦೦ ರೂ.



ಜಿ. ಇಮ್ತಿಯಾಜ್
S/o ಡಿ. ರಾಮನ್‌ಮಲಿ (F.D.A.)
ಅಗಸನಕಟ್ಟೆ - ೫೮೩ ೧೩೪
ಅಂಚೆ : ಹರಪನಹಳ್ಳಿ, ಜಿಲ್ಲೆ : ಬಳ್ಳಾರಿ

ಸಮಾಧಾನಕರ ಬಹುಮಾನಗಳು

ತಲಾ ರೂ. ೧೦೦/-

ಜಿ.ಎಸ್.ಬುಡ್ಡನಗೌಡರ
ರಾಘವೇಂದ್ರ ಕಾಲೋನಿ
ಮಲ್ಲಾಡಿಹಳ್ಳಿ - ೫೭೭ ೫೩೧, ಚಿತ್ರದುರ್ಗ ಜಿಲ್ಲೆ

ಪ್ರೇಮಿಲಾ
D/o ಗಂಗಪ್ಪ ಶೀಲವಂತ
ಮ.ನಂ. ೧೧-೧೧೮೮,
ಎಂ.ಎಸ್.ಕೆ. ಮಿಲ್ ಹತ್ತಿರ, ಜೀಲಾನಾಬಾದ್,
ಗುಲ್ಬರ್ಗಾ-೫೮೫ ೧೦೩

ರಾಜೇಶ್ವರಿ ರೇ. ಶೆಟ್ಟರ
C/o ಆರ್.ಆರ್.ಶೆಟ್ಟರ
ಎ.ಸಿ. ಘಟ್ಟದ ಹೌಸ್ಕೂಲ್
ಕೆರೂರ-೫೮೭ ೨೦೬, ಬಿಜಾಪುರ ಜಿಲ್ಲೆ

ಕ್ವಿಜ್-೧ರ ಸರಿಯುತ್ತರ : ೧. ಮಹಾಬಲೇಶ್ವರ (ಮಹಾರಾಷ್ಟ್ರ) ೨. ಕೊಡಗು ೩. ಶ್ರೀರಂಗಪಟ್ಟಣ ೪. ಬಿಜಾಪುರ ೫. ಮದ್ರಾಸ್ ಪ್ರಾಂತ್ಯ.

ಮೊದಲ ಬಹುಮಾನ	ರೂ. ೫೦೦/-
ಎರಡನೇ ಬಹುಮಾನ	ರೂ. ೨೦೦/-
ಸಮಾಧಾನಕರ ಬಹುಮಾನಗಳು (ಮೂರು)	ರೂ. ೧೦೦/-

ವಿವರ :

- ಪಕ್ಕದಲ್ಲಿ ಕೇಳಿದ ಪ್ರಶ್ನೆಗಳಿಗೆ ಸರಿಯಾದ ಉತ್ತರವನ್ನು ಆಯಾ ಪ್ರಶ್ನೆಯ ಕೆಳಗೆ ನೀಡಲಾದ ಸ್ಥಳದಲ್ಲಿ ಬರೆಯಿರಿ.
- ಒಬ್ಬರು ಎಷ್ಟು ಪ್ರವೇಶ ಪತ್ರಗಳನ್ನಾದರೂ ಕಳಿಸಬಹುದು. ಆದರೆ ಪಕ್ಕದಲ್ಲಿರುವ ಪ್ರವೇಶ ಕೂಪನ್ನೇ ಬಳಸಬೇಕು. ಜೆರಾಕ್ಸ್ ಪ್ರತಿ ಪರಿಗಣಿಸುವುದಿಲ್ಲ.
- ಪ್ರಥಮ-ದ್ವಿತಿಯ ಬಹುಮಾನ ಪಡೆದವರ ಭಾವಚಿತ್ರ ಪ್ರಕಟಿಸಲಾಗುವುದು.
- ಸರಿಯುತ್ತರಗಳ ಪ್ರವೇಶ ಪತ್ರಗಳನ್ನೆಲ್ಲಾ ಸೇರಿಸಿ ಲಾಟರಿ ಮೂಲಕ ಬಹುಮಾನಗಳನ್ನು ನಿರ್ಧರಿಸಲಾಗುವುದು.
- ಪ್ರವೇಶ ಪತ್ರ ತಲುಪಲು ಅಂತಿಮ ದಿನಾಂಕ ೦೫-೦೮-೧೯೯೭

ಕ್ವಿಜ್ - ೨

೧. ಮೈಸೂರು ರಾಜ್ಯಕ್ಕೆ ಕರ್ನಾಟಕ ಎಂದು ಯಾವ ವರ್ಷ ನಾಮಕರಣ ಮಾಡಲಾಯಿತು?

....

೨. ರನ್ನ ಕವಿಯ ಹುಟ್ಟೂರಿನ ಹೆಸರೇನು?

....

೩. ತುಂಗಭದ್ರಾ ಅಣೆಕಟ್ಟನ್ನು ಯಾವ ಊರಿನ ಬಳಿ ಕಟ್ಟಲಾಗಿದೆ?

....

೪. ಕರ್ನಾಟಕದ ಎರಡು ಚಿನ್ನದ ಗಣಿಗಳು ಎಲ್ಲೆಲ್ಲಿವೆ?

....

೫. ಮೈಸೂರು ಸಂಸ್ಥಾನದ ದಿವಾನರಾಗಿದ್ದ ಪ್ರಖ್ಯಾತ ಇಂಜನಿಯರರ ಹೆಸರೇನು?

....

ಹೆಸರು..


ವಿಳಾಸ..

....

....

ಪಿನ್ ಕೋಡ್............................... ದೂರವಾಣಿ...........................

ಪ್ರವೇಶ ಪತ್ರಗಳನ್ನು ಕಳುಹಿಸಬೇಕಾದ ವಿಳಾಸ :
ಸಂಪಾದಕರು, **ಬಿಸಿಲ ಬದುಕು,** ಅಂಚೆ ಪೆಟ್ಟಿಗೆ ೭೯೫೧, ಬಸವೇಶ್ವರ ನಗರ, ಬೆಂಗಳೂರು-೭೯.



ಸ್ವಾತಂತ್ರ್ಯ ಪುರುಷನಿಗೆ ಐವತ್ತು!

○ ಎಸ್.ಕೆ. ಕುಲಕರ್ಣಿ
"ಪರಿಮಳ"
ರೇಲ್ವೆ ಗೂಡ್ಸ್ ಶೆಡ್ ಬಳಿ, ಧಾರವಾಡ - ೭.

ಹೌದು. ಐವತ್ತು-ಸಮೀಪಿಸಿತು! ಸ್ವತಂತ್ರ ಭಾರತ ನಡೆದು ಬಂದ ದಾರಿಯ ಹಿಂದೆ ಎಂಟು ಪಂಚವಾರ್ಷಿಕ ಯೋಜನೆಗಳು ತೆರೆಯ ಹಿಂದೆ ಸರಿದಿವೆ. ಒಂಭತ್ತನೆಯ ಪಂಚವಾರ್ಷಿಕದ ಪ್ರಗತಿಯ ಮೈಲುಗಲ್ಲಿಗೆ ಬಂದು ನಿಂತಿದೆ ರಥ-ನಮ್ಮ ಮನೋರಥ. ಅದರ ಮುಂದೆ ದಶಮ ಪಂಚವಾರ್ಷಿಕ ದಶರಥ ಮನೋರಥ. ಆದರೆ ಭಾರತದ ಪ್ರಗತಿ, ಅಭಿವೃದ್ಧಿ ಎಲ್ಲಿ? ಯಾವ ಯಾವ ದಿಶೆಯಲ್ಲಿ ನಡೆದಿದೆ? ಮೊದಲು ಕುಡಿಯುವ ನೀರು! ಅದಕ್ಕಾಗಿ ಒಂದು ವಿದೇಶಿ ಮೆಡಿಕಲ್‌ಕಂಪನಿಗೆ ಭಾರತದಲ್ಲಿ ಬಂಡವಾಳ ಹಾಕಿ, ಕುಡಿಯುವ ನೀರಲ್ಲದಿದ್ದರೂ ನೀರಡಿಕೆ, ತೃಷ್ಣೆಗಳು ಹಿಂಗುವ ಮಾತ್ರೆಗಳನ್ನು ತಯಾರಿಸಲಿಕ್ಕೆ ಲೈಸನ್ಸ್ ಕೊಟ್ಟಿದ್ದಾರಂತೆ! ವಿದೇಶಿ ಬಂಡವಾಳ ಹೂಡಿಕೆ ನಮ್ಮ ಗ್ರಾಮೀಣ ಬಡವರ ತೃಷೆಗಳನ್ನು ತಣಿಸಲಿರುವುದು ಎಂದರೇನು ಅಲ್ಪ ಸಾಧನೆಯೆ? ಅಥವಾ ಕುಡಿಯುವ ನೀರಿನ ಬದಲು ಪ್ರೈಮರಿ ವಿದ್ಯಾರ್ಥಿಗಳಿಗೆ ದಿನಾಲು ಮಧ್ಯಾಹ್ನ ನೀರಡಿಕೆ ಮಾತ್ರೆಗಳನ್ನೇ ಹಂಚುವಂತಾದರೆ ಅದೇನು ಕಡಿಮೆ? ಅದರ ಜೊತೆಗೆ ಒಂದು ಅನ್ನಾಂಶದ ಗುಳಿಗೆಯನ್ನು ವಿತರಿಸಿದರೆ ಫ್ರೀ ಲಂಚ್ ಹಂಚಿದಂತಾಗಲಿಲ್ಲವೆ? ಮೊನ್ನೆ ನಮ್ಮ ಗ್ರಾಮಕ್ಕೆ ಬಂದಿದ್ದ ಪುಢಾರಿಗಳೊಬ್ಬರು, ಪಂಚಾಯ್ತಿ ಯೋಜನೆಯನ್ವಯ ಅಧಿಕಾರ ವಿಕೇಂದ್ರೀಕರಣ ಯೋಜನೆಗಳಲ್ಲೆಲ್ಲಾ ನಂಬರೊನ್ ಇನ್ನು ನಮ್ಮ ಸ್ವತಂತ್ರ ಭಾರತದ ೫೧ನೆಯ ವರುಷದಿಂದ ಒಂದೊಂದೇ ಗ್ರಾಮದಲ್ಲಿ 'ಮಾಫಿಯಾ' ಅನುಗೊಳಿಸಲಾಗುವುದು ಎಂದು ಘೋಷಿಸಿದಾಗ ಒಬ್ಬ ಗ್ರಾಮೀಣ ಎದ್ದವನೆ ಕೇಳಿದ:

"ಮಾಫಿಯಾ ತರ್ತೀವಿ ಅಂದರ ಮಕ್ಕಳ ಫೀ ಮಾಫೀ ಮಾಡ್ತೀರೇನ್ರಿ? ಅಂದರ ಎಂಜಿನೀರು, ವೈದ್ಯಕೀಯ ಕಾಲೇಜು ಕಟ್ಟಿ ಹತ್ತಿದ ಮ್ಯಾಗು ಮಾಫೀ ಕೊಡ್ತೀರಿ ಹೌದಲ್ರೀ?" ಎಂದು ಪ್ರಶ್ನಿಸಿದಾಗ ಸರಪಂಚ ಉಮೇದವಾರರು "ಸುಮ್ ಕೂಡಲೇ ಹುಚ್ಗೊಟ್ಟಿ, ನಿನಗೇನು ತಿಳೀತೈತಿ? ಅದೆಲ್ಲಾ ನಮ್ಮ ಮಾ ಬಾಪ್ ಸರಕಾರದ ಗ್ರಾಮ ಯೋಜನಾದಾಗ ಬಂದೇ ಬರತೈತಿ! ತನಗಾರ ಮಾಫಿಯಾ ಅಂದ್ರೇನು ಗೊತ್ತಿಲ್ಲಾ.... ಹಂತಾದು ಅಡ್ಡ ಬಾಯಿ ಹಾಕತಾನು. ಗಪ್ ಕುಂಡರಬಾರದ ಬಾಯಿ ಹೊಲಕೊಂಡು?" ಎಂದು ಛೀಮಾರಿ ಹಾಕಿದರು.

"ಜಿಲ್ಲಾ ಪಂಚಾಯಿತಿ ಅಧ್ಯಕ್ಷರು ಉಪಾಧ್ಯಕ್ಷರು ಇವರ ಅಧಿಕಾರದ ಅವಧಿ ಹೆಚ್ಚಿಸಿ ಬಿಡ್ರಿ ಸರ್ ಸಾಕು" ಎಂದು ಒಬ್ಬ ಪಂಚಾಯ್ತಿ ಸದಸ್ಯ ವೇದಿಕೆಯ ಪುಢಾರಿಗಳ ಮುಂದೆ ಅರಿಕೆ ಮಾಡಿಕೊಂಡರು. ಆಗ ಪುಢಾರಿ ಹೇಳಿದರು:

"ಸ್ವಲ್ಪ ಕುಂತು ಮಕ್ಕೋರೊ ತಮ್ಮ! ಈ ಸ್ವತಂತ್ರದ ಐವತ್ತು ವರ್ಷ ಅಂದರ ಪ್ರಗತಿ ಅನ್ನೋದು ಮನೀಮನೀಗೆ, ಅಡಿಗೆ ಮನ್ಯಾಗ, ಗಂಡಾಹೇಣ್ತಿ ಮಲಗೊ ಕ್ವಾಣ್ಯಾಗ ಸುದ್ದಾ ಮೂತಿ ಹಾಕೇತಿ. ಹುಟ್ಟಿದ ಕೂಸಿಗೆ ಸುದ್ಧಾ "ನಿರೋದ್" ಅಂದರೇನು ಗೊತ್ತಿರತೈತಿ"- ಎಂದು ಉತ್ತರಿಸಿದ.

"ಉಷಾಸ್ವಯಂವರ-ನಾಟಕದ ಅನಿರುದ್ದ ಅಲ್ಲ ಮತ್ತ", ನಡುವೆ ಒಬ್ಬ ರಸಿಕ ದನಿ ಎತ್ತಿದ. ಪುಢಾರಿ ತನ್ನ ಭಾಷಣ ಮುಂದುವರಿಸಿದ:

"ನಮ್ಮ ಸ್ವತಂತ್ರದ ಐವತ್ತು ವರ್ಷ ಅಂದರ ಜಾತಿ ಭೇದ ಅಳಿಸಿ ಬಿಟ್ಟೈತಿ. ಆದರೂ ಎಲ್ಲಾ ಖಾತೇದಾಗೂ ಎಸ್.ಟಿ. ಎಸ್.ಸಿ. ಕಂಪಲ್‌ಸರಿ ಆಗೇತಿ! ಅಲ್ಲೇ ಇರೂದು ಹಿಕಮತ್. ಇದಕ್ಕ "ಸೆಕ್ಯೂಲರ್" ಅಂತ ಹೊಸಾ ಹೆಸರು ಕೊಟ್ಟಾರು. ಅಂದರ ಜಾತಿ ಆಧಾರದ ಮ್ಯಾಗ ಜಾತಿ ಇಲ್ಲಧಾಂಗ ಮಾಡೂದು. ಹಿಂದುಳಿದ ವರ್ಗ ಮುಂದ ತರೂದು". "ಮತ್ತ ಹೆಣ್ಣಮಕ್ಕಳಿಗೂ ಶೇಕಡಾ ಮೂವತ್ತು ಮೂರು ಮೀಸಲಾತಿ ಅಂತಾರಲ್ರೀ?" "ಪುರುಷನ ಪ್ರಕೃತಿದೇವಿ ಆಕಿ ಅಂದಮ್ಯಾಗ ಅರ್ಧಾಂಗಿ. ಅರ್ಧಾಂಗಿ ಅಂದರ ಶೇಕಡಾ ಮೂವತ್ತು ಮೂರು ಭಾಳೇನಲೆ? ನೀ ಮಣ್ಣಿನಮಗಾ ಅದರ ಆಕಿ ಮಣ್ಣಿನ ಮಗಳು. ನಮ್ಮ ಸೀತಾದೇವಿ ಹಾಂಗ, ಸೀತಾದೇವಿ ಮಣ್ಣ್ಯಾಗ ಹುಟ್ಯಾಳ ಗೊತ್ತೈತಿಲ್ಲೊ?" ಪ್ರಶ್ನಿಸಿದ ಪುಢಾರಿ. "ಸ್ವತಂತ್ರದ ಐವತ್ತು ವರ್ಷ! ಎಂಟು ಪಂಚವಾರ್ಷಿಕ ಯೋಜನೆ ಮುಗಿದು ಒಂಭತ್ತನೇದ್ದು ಬಂತು. ಇನ್ನೇನು ಉಳೀತು? ವಿದ್ಯುತ್ ಕರೆಂಟ್ ಒಂದಿಷ್ಟು, ನಳಕ್ಕ ನೀರು ಒಂದಿಷ್ಟು, ರಸ್ತೆ ರಿಪೇರಿ ಒಂದಿಷ್ಟು, ಸೂರ ಇಲ್ಲದ ಸಾಲಿಗೋಳಿಗೆಲ್ಲಾ ಸಂಡಾಸ್ ಕಟ್ಟಿಸೋದು, ಗಿಡಾ ಮರಾಬಳ್ಳಿ ಹೂ ಹಂಪಲಾ ಬೆಳಸಿ ಪರಿಸರ ನಾಶ ಇಲ್ಲದಾಂಗ ಮಾಡಿ ಸ್ವಚ್ಛ ಹವಾ ಉಸರಾಡಿಸೋ ಹಾಂಗ ಮಾಡೂದು- ಇಷ್ಟೇ ಇನ್ನೇನೈತಿ? ಸ್ವತಂತ್ರದ 'ಐವತ್ತು ವರ್ಷದಾಗ ದೇಶದ ಸಾಲಾ ' ಏಳುಲಕ್ಷ ಕೋಟಿ-ಅದಕ್ಕಾಗಿ ವರ್ಷಾವರ್ಷಾ ಅರುವತ್ತು ಕೋಟಿ ರೂಪಾಯಿ ಬಡ್ಡಿ. ಇದಕ್ಕ ಉಪಾಯ ನಮ್ಮ ಕೈಯಾಗ ಐತಿ-ನಮ್ಮ ಅಮಿತಾಬ ಬಚ್ಚನ್, ನಮ್ಮ ಹೇಮಾಮಾಲಿನೀ, ನಮ್ಮ ದಾವೂದ್ ಇಬ್ರಾಹಿಮ್ ಇಂಥವರೆಲ್ಲ ವರ್ಷಾ ವರ್ಷಾ ಒಂದು ಲಕ್ಷ ಕೋಟಿ ರೂಪಾಯಿ ಕಪ್ಪು ಹೋಳೀ ಆಗಿ ಕಾಳೀನದಿ ಕೂಡತೈತೆಲ್ಲಾ ಅದನ್ನ ಬಿಳೀದು ಮಾಡಿ ಬಿಟ್ಟರ ಆತು! ಬಸ್! ಎಲ್ಲೈತಿ ಬಡತನ? ನಮ್ಮ ಬಡತನಾ ನಮ್ಮ ಕೈಯಾಗ ಐತಿ. ಮುಖ್ಯ ಅಂದ್ರ ಸರಕಾರಿ ನೌಕರಶಾಹಿ ಪಗಾರಕ್ಕ ಶೇಕಡಾ ನಲೌತ್ತೆಂಟು ಖರ್ಚು, ವಿದೇಶಿ ಸಾಲಕ್ಕ ಶೇಕಡಾ ನಾಲ್ವತ್ತು ಮೂರು ಖರ್ಚು! ಇನ್ನ ಅದೇನಿಲ್ಲ. ಸರಕಾರಿ ನೌಕರಶಾಹಿ ಪ್ಯೂನ್‌ನಿಂದ ಐ.ಎ.ಎಸ್. ತನಾ ಎಲ್ಲಾರೂ ಆನರೇಬಲ್ ಅಂದರ ಬಿನ್‌ಪಗಾರಿ ಕೆಲಸಾ ಮಾಡಬೇಕು. ಇದು ನಮ್ಮ ಒಂಭತ್ತು ಹತ್ತನೆಯ ಯೋಜನಾದ ಜೀವಾಳ... ವಿದೇಶೀ ಸಾಲದ ಬಡ್ಡೀ ಸಾಲ ಮನ್ನಾ ಮಾಡ್ರೆಪಾ ಅಂತ ಕೈ ಜೋಡಿಸಿದರಾತು. ಇನ್ನೇನೈತಿ ಎಲ್ಲಾ ಸುಖೀರಾಜ್ಯ ಸರ್ವೇ ಜನಾಃ ಖುಷೀ ಭವಂತು" ಪುಢಾರಿಗಳ ಭಾಷಣ ಇನ್ನೂ ನಡೆದಿತ್ತು. ಬೇಂದ್ರೆ ಮಾಸ್ತರ ಮಾತೊಂದು ನೆನಪಾತು. 'ನಾವೀಗ ಸ್ವತಂತ್ರರು. ದೇಶ ಹಾಳಾದರ ನಮ್ಮಿಂದನ ಹಾಳಾಗಬೇಕು' ನಿಜ, ನೂರಕ್ಕೆ ನೂರು ನಿಜ! ಮತಗಳ ಬ್ಯಾಟಿ ಆಡಿ ಕುರ್ಚಿ ಗಳಿಸೋದು. ಆಮ್ಯಾಲೆ ದೇಶಾ ಲೂಟಿ ಮಾಡೋದು! ಮತಿ ಇಲ್ಲದ ಮತಗಳ ಬಹುಮತದ ದೇಶ!

'ಇದು ನಮ್ಮ ದೇಶ. ಪರಂಪರೆಯ ಗಂಗೆ ಹರಿವಳಿಲ್ಲಿ!'


●

ಅವರು ಮಾಡದ್ದು ಹಣ ಮಾತ್ರ!

○ ವಸಂತಕುಮಾರ ಹಿಂಡಿಗಿ

ಮಾಡಿದ್ದು ಮಾಡದ್ದು

ಡಾ. ಚಿತ್ತರಂಜನ್



"ನನ್ನ ಕನಸು ಸಶಕ್ತ, ಸುಭಿಕ್ಷ, ಶಾಂತ ಭಾರತ"

ಮೂಲತಃ ದಕ್ಷಿಣ ಕನ್ನಡದವರಾದ ಡಾ. ಚಿತ್ತರಂಜನ್ ಡಾಕ್ಟರ್ ವೃತ್ತಿಯಿಂದ ಉತ್ತರ ಕನ್ನಡಕ್ಕೆ ಆಗಮಿಸಿದರು. ಇವರು ಪ್ರಾಮಾಣಿಕ ಜನ ಸೇವೆಯಿಂದ ತಮ್ಮ ಕೀರ್ತಿಯನ್ನು ಮೆರೆದರು. ಜನತೆಯನ್ನು ಜಾಗೃತಗೊಳಿಸಿದರು. ಅಲ್ಲದೆ ಸಾರ್ವಜನಿಕರ ಸಂಘ ಸಂಸ್ಥೆಗಳಲ್ಲಿ ತಮ್ಮನ್ನು ತೊಡಗಿಸಿಕೊಂಡರು.

ಭಟ್ಕಳದ ಏಳಿಗೆಗಾಗಿ ತಮ್ಮ ೨೭ ವರ್ಷ ಮುಡಿಪಾಗಿಟ್ಟು ಕೊನೆಗೂ ಹಂತಕರ ಗುಂಡಿಗೆ ಬಲಿಯಾದ ಡಾ. ಚಿತ್ತರಂಜನ್‌ರವರು ಇಂದಿನ ಎಷ್ಟೋ ಜನ ಯುವಕರಿಗೆ ಮಾರ್ಗದರ್ಶನ ನೀಡಿದ್ದಾರೆ. ಯುವ ಶಕ್ತಿಗಳು ಒಂದುಗೂಡಿದರೆ ಯಾವ ಕಾರ್ಯಗಳನ್ನಾದರೂ ಮಾಡಬಹುದೆಂಬುದನ್ನು ಸಾಧಿಸಿ ತೋರಿಸಿದ್ದಾರೆ.

ಬಡ ಕೂಲಿಕಾರ್ಮಿಕರ ಕಷ್ಟ ನಷ್ಟಗಳಲ್ಲಿ ಭಾಗಿಯಾದ ಡಾ. ಚಿತ್ತರಂಜನ್ ಉಚಿತ ತಪಾಸಣೆ ಕೇಂದ್ರ ಸ್ಥಾಪಿಸಿದ್ದಾರೆ. ಕೋಮುಗಲಭೆಯಿಂದ ನರಳುತ್ತಿದ್ದ ಭಟ್ಕಳದಲ್ಲಿ ಹಿಂದೂ ಮುಸ್ಲಿಮ್‌ರನ್ನು ಒಂದುಗೂಡಿಸುವುದರಲ್ಲಿ ಯಶಸ್ವಿಯಾಗಿದ್ದರು.

ಡಾ. ಚಿತ್ತರಂಜನ್‌ರವರು ಪ್ರಥಮ ಬಾರಿ ಭಟ್ಕಳದ ಶಾಸಕರಾಗಿ ಭಟ್ಕಳದ ಕೋಮುಗಲಭೆಯನ್ನು ಶಾಂತಗೊಳಿಸುವುದರಲ್ಲಿ ಅತ್ಯಂತ ಶ್ರಮವಹಿಸಿ ತಾನೊಬ್ಬ ದಕ್ಷ ರಾಜಕಾರಣಿ ಎಂಬುದನ್ನು ರುಜುವಾತು ಪಡಿಸಿದ್ದರು.

ಅವರು ಭಟ್ಕಳಕ್ಕೆ ಮಾಡಿದ ಸೇವೆ, ಜನರಿಗೆ ನೀಡಿದ ಸ್ಫೂರ್ತಿ. ಇಂದಿಗೂ ನಮ್ಮೊಂದಿಗಿವೆ. ಇವು ಡಾ. ಚಿತ್ತರಂಜನ್ ಮಾಡಿದ ಕರ್ಮಗಳಾದವು.

ಮೋತಿ ನಾಯ್ಕ

ನನ್ನೂರು ಹರಪನಹಳ್ಳಿ ತಾಲ್ಲೂಕು ಹಾರಕನಾಳು ಗ್ರಾಮ. ತಾ.ಪಂ. ಎಲೆಕ್ಷನ್‌ನಲ್ಲಿ ನಮ್ಮೂರ ಹತ್ತಿರದ ತಾಂಡಾದವರಾದ ಮೋಟ್ಲಾನಾಯ್ಕ ಮತ್ತು ಮೋತಿನಾಯ್ಕ ಸ್ಪರ್ಧಿಸಿದ್ದರು. ಮೋಟ್ಲಾನಾಯ್ಕ ೫ ವರ್ಷ ಮಂಡಲ ಪಂಚಾಯತಿ ಉಪ ಪ್ರಧಾನರಾಗಿ ಸೇವೆ ಸಲ್ಲಿಸಿ ಸಾಕಷ್ಟು ಹಣ ಮಾಡಿದ್ದರು. ಆದರೆ ಮೋತಿನಾಯ್ಕ ಕುರಿ ಕಾಯುತ್ತ ಅಲ್ಪ ಸ್ವಲ್ಪ ಊರಿಗೆ ಕೆಲಸ ಮಾಡಿಸುತ್ತಾ ಅಡ್ಡಾಡುತ್ತಿದ್ದರು. ಮೋಟ್ಲಾನಾಯ್ಕರ ಹೆಂಡ-ಖಂಡ-ತುಂಡುಗಳ ನಡುವೆ ಮೋತಿನಾಯ್ಕ ಸೋಲುವುದು ಗ್ಯಾರಂಟಿ ಎಂದು ಎಲ್ಲರೂ ಮಾತನಾಡಿಕೊಳ್ಳುತ್ತಿದ್ದುದು ಸಾಮಾನ್ಯ ದೃಶ್ಯವಾಗಿತ್ತು.

ಆದರೆ ಕೆಲ ಯುವಕರು, ಬುದ್ಧಿವಂತರು ಮೋಟ್ಲಾನಾಯ್ಕ ಪ್ರಧಾನರಾಗಿದ್ದಾಗ ಮಾಡಿದ ಅವ್ಯವಹಾರಗಳ ಬಗ್ಗೆ ತಿಳಿಸುತ್ತಾ ಮೋತಿನಾಯ್ಕರ ಪರ ಕೆಲಸ ಮಾಡಿದರು. ಮೋತಿನಾಯ್ಕರು ಬಡವರಿಗೆ ಭಾಗ್ಯ ಜ್ಯೋತಿ ಹಾಕಿಸಿಕೊಡುತ್ತೇನೆ, ರೋಡ್ ರಿಪೇರಿ ಮಾಡಿಸುತ್ತೇನೆ, ನಿವೇಶನ ರಹಿತರಿಗೆ ಮನೆ ಕಟ್ಟಿಸುತ್ತೇವೆಂದು ಆಶ್ವಾಸನೆ ನೀಡಿದ್ದರ ಫಲವಾಗಿ ಚುನಾವಣೆಯಲ್ಲಿ ಗೆದ್ದುಬಂದರು.

ಮಾಡಿದ್ದು : ಚುನಾವಣೆಯಲ್ಲಿ ನೀಡಿದ ಆಶ್ವಾಸನೆಯಂತೆ ಮೋತಿನಾಯ್ಕರು ಸುತ್ತಮುತ್ತಲ ತಾಂಡಾಗಳ ಬಡ ಜನರಿಗೆ ಭಾಗ್ಯ ಜ್ಯೋತಿ ಅಡಿಯಲ್ಲಿ ಸಾಕಷ್ಟು ವಿದ್ಯುತ್ ಸಂಪರ್ಕ ಕಲ್ಪಿಸಿಕೊಟ್ಟಿದ್ದಾರೆ. ನಿವೇಶನ ರಹಿತರಿಗೆ ಪಟ್ಟಾ ಭೂಮಿ, ಹಂಚು ಇನ್ನು ಮುಂತಾದ ಸೌಲಭ್ಯಗಳನ್ನು ಒದಗಿಸಿಕೊಟ್ಟಿದ್ದಾರೆ. ಶಾಲಾ ಕಟ್ಟಡಗಳಾಗಿವೆ.

ಮಾಡದ್ದು : ಹರಪನಹಳ್ಳಿಯಿಂದ ಹಾರಕನಾಳಿನವರೆಗೆ, ಹಿರೇಹಡಗಲಿಯಿಂದ ನನ್ನೂರಿನವರೆಗೆ ರಸ್ತೆ ಮಾಡಿಸುತ್ತೇನೆಂದು ಆಶ್ವಾಸನೆ ನೀಡಿದ್ದರು. ಆದರೆ ಇದುವರೆಗೂ ಡಾಂಬರ್ ರಸ್ತೆಯಾಗಿಲ್ಲ, ಸರಿಯಾದ ಸಮಯಕ್ಕೆ ಬಸ್‌ಗಳೂ ಬರುತ್ತಿಲ್ಲ. ವಾಚನಾಲಯ ಆಗಬೇಕಿದೆ.

○ ಹಾರ್ಕನಾಳ್ ಶಿವಕುಮಾರ್‌ಗೌಡ

ವಿಮಲಾಬಾಯಿ ದೇಶಮುಖ

ರಾಜ್ಯದಲ್ಲಿ ಯಾವ ಪಕ್ಷ ಆಡಳಿತದಲ್ಲಿದ್ದರೂ ಮುದ್ದೇಬಿಹಾಳ ಕ್ಷೇತ್ರದ ಶಾಸಕರು ಕಳೆದ ಹಲವಾರು ದಶಕಗಳಿಂದ ಸಚಿವರಾಗುತ್ತಾ ಬಂದಿದ್ದಾರೆ. ಆದರೂ ಕುಂಬಾರರು ತಮ್ಮ ಮಡಿಕೆ-ಕುಡಿಕೆಗಳನ್ನು ಸುಡಲು ಪೂರ್ವಜರ ಕಾಲದಿಂದ ಉಪಭೋಗ ಮಾಡುತ್ತಾ ಬಂದ ನಿವೇಶನದ 'ಹಕ್ಕುಪತ್ರ'ಕ್ಕಾಗಿ ಮನವಿಸಲ್ಲಿಸುವುದು ನಿರಂತರವಾಗಿ ನಡೆದಿದೆ. ಈ ಬಾರಿಯೂ ವಿಧಾನಸಭಾ ಚುನಾವಣೆಯಲ್ಲಿ ಈ ಕುರಿತು ಮತಕ್ಷೇತ್ರದ ಶಾಸಕಿ ಹಾಗೂ ರಾಜ್ಯ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ರಾಜ್ಯ ಸಚಿವೆ ವಿಮಲಾಬಾಯಿ ದೇಶಮುಖ ಆಶ್ವಾಸನೆ ಕೊಟ್ಟು ಕಸಬುದಾರರ ಕಷ್ಟದ ಬಗ್ಗೆ ಮೊಸಳೆ ಕಣ್ಣೀರು ಸುರಿಸಿ ಅಧಿಕಾರ ಗಿಟ್ಟಿಸಿಕೊಂಡರು. ಈ ಕಾರ್ಯಕ್ಕೆ ಪ್ರಥಮ ಆದ್ಯತೆ ನೀಡುತ್ತೇನೆಂಬ ಆಶ್ವಾಸನೆ ಬರೀ ಆಶ್ವಾಸನೆಯಾಗಿ ಉಳಿದಿದೆ. ಜಿಲ್ಲಾಧಿಕಾರಿ- ಉಪವಿಭಾಗಾಧಿಕಾರಿಗಳ ಸಮ್ಮತಿ ನಗರಸಭೆಯ ಠರಾವು ಆಗಿದ್ದರೂ ಕೇವಲ ಪಟ್ಟಭದ್ರ ಹಿತಾಶಕ್ತಿಗಳ ಕುಮ್ಮಕ್ಕಿನಿಂದ ಕುಂಬಾರರ ಬೇಡಿಕೆ ನೆನೆಗುದಿಗೆ ಬಿದ್ದಿದೆ.

○ ನಾಗರಾಜ ಎಸ್. ಚಕ್ರಮನಿ

ಹಗಲು ದರೋಡೆ!

ಇಳಕಲ್ಲು
ಸೀರೆಯುಟ್ಟು
ನನ್ನ ಮನಸು ಗೆದ್ದಿ
ಧಾರವಾಡ
ಪೇಡೆ ಕೊಟ್ಟು
ನನ್ನ ಹೃದಯ ಕದ್ದಿ!

– ಗೋಪಾಲಕೃಷ್ಣ ವಂಡ್ಸೆ

ಚಕಾ ಚಕಾ

ಕೃತಜ್ಞತೆಯೋ, ಕೃತಘ್ನತೆಯೋ?

ಎಂಬತ್ತರ ದಶಕದಲ್ಲಿ ಬಳ್ಳಾರಿಯಲ್ಲಿ ಸಿರಿಗೇರಿ ಬಸವರಾಜನೆಂದರೆ ಜನಜನಿತ ಹೆಸರು. ಆಟೋ ಚಾಲಕರು ಹಾಗೂ ಬಂಡಿ ಹಮಾಲರಿಗಂತೂ ಆತ ಪ್ರಶ್ನಾತೀತ ನಾಯಕ. ನಗರಸಭಾ ಸದಸ್ಯನಾಗಿ ಸದಾ ಜನರ ಬಗ್ಗೆ ಚಿಂತಿಸಿದಾತ. ಲಂಚಕ್ಕಾಗಿ ಜೊಲ್ಲು ಸುರಿಸುವ ನಾಯಿಗಳ ಬಾಲ ಕತ್ತರಿಸಿದಾತ. ಆವೇಶದಿಂದ ನಗರಸಭೆಯ ಮೀಟಿಂಗಿನಲ್ಲೇ ಚಪ್ಪಲಿ ಬೀಸಿ ಒಗೆದಾತ. ಯಾವುದೇ ಜಾತಿಯಿರಲಿ, ಯಾವುದೇ ಸಮಸ್ಯೆಯಿರಲಿ, ಯಾವುದೇ ವೇಳೆಯಾಗಿರಲಿ- ಮುನ್ನುಗ್ಗಿದಾತ. ಹಾಗೆಯೇ ಸಾವಿನೆಡೆಗೂ....!

ಇಂತಹ ಜನಪ್ರಿಯ ನಾಯಕ ತನ್ನ ಅಲ್ಪಾವಧಿ ಬದುಕಿಗೆ ವಿದಾಯ ಹೇಳಿದಾಗ ರೋದಿಸಿದವರೆಷ್ಟೋ. ಎದೆ ಬಡಿದುಕೊಂಡವರೆಷ್ಟೋ, ಕಣ್ಣೀರ ಕೋಡಿ ಹರಿಸಿದವರೆಷ್ಟೋ. ಮಧ್ಯರಾತ್ರಿ ಮೀರಿದರೂ ಮಸಣದ ಕಾರ್ಗತ್ತಲಲ್ಲಿ ಸಹಸ್ರಾರು ಜೀವಿಗಳ ಆರ್ತನಾದ... ಅದು ಶವಯಾತ್ರೆಯಲ್ಲ, ಜನಜಾತ್ರೆ.

ಆತ ನಡೆದಾಡುತ್ತಿದ್ದ 'ಕಂಬಳಿ ಬಜಾರ್' ರಸ್ತೆಗೆ 'ಸಿರಿಗೇರಿ ಬಸವರಾಜ ರಸ್ತೆ' ಎಂದು ಪುನರ್ ನಾಮಕರಣ ಮಾಡಿ ಕಾಂಕ್ರೀಟ್ ಫಲಕ ನೆಟ್ಟು ಡಾ. ರಾಜಕುಮಾರ್ ರವರ ಅಮೃತ ಹಸ್ತದಿಂದ ಉದ್ಘಾಟನೆಯೂ ನೆರವೇರಿತು. ಅಂದು ಸೇರಿದ ಅಭಿಮಾನಿಗಳೆಲ್ಲ ಜೈಕಾರ ಹಾಕಿ ಕೃತಕೃತ್ಯರಾದರು.

ನಂತರ....

ಅದ್ಯಾವ ಕಾರಣಕ್ಕೋ ಆ ಫಲಕದ ರುಂಡ ಕತ್ತರಿಸಿಬಿತ್ತು. ಅದರ ಭಾವನಾತ್ಮಕ ಮೌಲ್ಯವರಿಯದ ಜನರಿಂದಾಗಿ ಆದು ಪಕ್ಕದ ಬೀಡಿ ಅಂಗಡಿಯ ಮುಂದೆ ಹಾಸುಗಲ್ಲಾಗಿ ಮಲಗಿತು.

ಈಗ....

ಸಹಸ್ರಾರು ಗಿರಾಕಿಗಳ ಪಾದ ಸ್ಪರ್ಶದಿಂದಾಗಿ ಆ ಫಲಕದ ಅಕ್ಷರಗಳೇ ಕಣ್ಮರೆಯಾಗಿವೆ. ರುಂಡವಿಲ್ಲದ ಮುಂಡದಂತೆ ಆ ಫಲಕದ ಸ್ತಂಭ ಮಾತ್ರ ಮೂಲೆಯಲ್ಲಿ ಒಂಟಿಯಾಗಿ- ಸಿರಿಗೇರಿ ಬಸವರಾಜನ ಆತ್ಮದಂತೆ- ಅನಾಥವಾಗಿ ನಿಂತಿದೆ.

ಇದಕ್ಕಿಂತ ಹೆಚ್ಚಿನದೇನನ್ನಾದರೂ ಇಲ್ಲಿ ನಿರೀಕ್ಷಿಸಲು ಸಾಧ್ಯವೆ?

– ಕೆ. ಜಗದೀಶ್, ಬಳ್ಳಾರಿ

ಶಿಗ್ಗಾಂವಿ ಜನರ ಆತಂಕ

ನಮ್ಮ ಘನಕರ್ನಾಟಕ ಸರ್ಕಾರ ಇತ್ತೀಚೆಗೆ ತಾನೇ ರಾಜ್ಯದಲ್ಲಿ ನೂತನವಾಗಿ ದೊಡ್ಡ ಜಿಲ್ಲೆಗಳನ್ನು ವಿಭಾಗಿಸಿ ಚಿಕ್ಕ ಜಿಲ್ಲೆಗಳನ್ನಾಗಿ ಮಾರ್ಪಡಿಸಿದೆ. ೭ ಹೊಸ ಜಿಲ್ಲೆಗಳನ್ನು ರಚಿಸಿರುವುದು ಆಡಳಿತಾತ್ಮಕವಾಗಿ ಮತ್ತು ಸಾರ್ವಜನಿಕರಿಗೆ ಅನುಕೂಲತೆಯ ದೃಷ್ಟಿಯಿಂದ ತುಂಬಾ ಸ್ತುತ್ಯಾರ್ಹವಾಗಿದೆ. ಆದರೆ ಧಾರವಾಡ ಜಿಲ್ಲೆಯೊಂದರಲ್ಲಿ ೨ ಹೊಸ ಜಿಲ್ಲೆಗಳು ರಚನೆಯಾಗಿವೆ. ಇದರಲ್ಲಿ ಪ್ರಸ್ತುತ ನೂತನ ಹಾವೇರಿ ಜಿಲ್ಲೆಗೆ ಹತ್ತಿರದಲ್ಲಿರುವ ಶಿಗ್ಗಾಂವಿ ತಾಲೂಕನ್ನು ಧಾರವಾಡ ಜಿಲ್ಲೆಯಲ್ಲಿ ಉಳಿಸಿರುವುದು ತಾಲೂಕಿನ ಸಮಸ್ತ ಜನತೆಗೆ ದಿಗ್ಭ್ರಮೆಯಾಗಿದೆ.

ಒಂದೇ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಶಿಗ್ಗಾಂವಿ-ಸವಣೂರು ತಾಲೂಕುಗಳಲ್ಲಿ ಸವಣೂರನ್ನು ನೂತನ ಹಾವೇರಿ ಜಿಲ್ಲೆಗೆ ಸೇರಿಸಿ ಶಿಗ್ಗಾಂವಿಯನ್ನು ಧಾರವಾಡ ಜಿಲ್ಲೆಯಲ್ಲಿ ಉಳಿಸಿರುವ ಸರಕಾರದ ಕ್ರಮ ಖಂಡನೀಯ. ಶಿಗ್ಗಾಂವಿ ತಾಲೂಕಿನಿಂದ ಹಾವೇರಿ ಕೇವಲ ೨೫ರಿಂದ ೩೦ ಕಿ.ಮೀ. ಅಂತರದಲ್ಲಿದ್ದರೆ. ಧಾರವಾಡ ೭೦ಕಿ.ಮೀ. ಅಂತರದಲ್ಲಿದೆ ಹೀಗಾಗಿ ಶಿಗ್ಗಾಂವಿ ತಾಲೂಕನ್ನು ಹಾವೇರಿ ಜಿಲ್ಲೆಗೆ ಸೇರಿಸಬೇಕಾದುದು ಸರ್ವಸಮ್ಮತವಾಗಿದೆ.

ಆಡಳಿತಾತ್ಮಕವಾಗಿ ಭಾವನಾತ್ಮಕವಾಗಿ ಹಾಗೂ ಸಾಂಸ್ಕೃತಿಕವಾಗಿ ಹಾವೇರಿ ಜಿಲ್ಲೆಯ ಜನತೆಯೊಂದಿಗೆ ಅನ್ಯೋನ್ಯ ಸಂಬಂಧ ಹೊಂದಿರುವ ಶಿಗ್ಗಾಂವಿ ತಾಲೂಕಿನ ಜನತೆ ಸರಕಾರದ ಈ ಅವೈಜ್ಞಾನಿಕ ಕ್ರಮದಿಂದ ಮನನೊಂದಿದ್ದಾರೆ. ಶಿಗ್ಗಾಂವಿ ತಾಲೂಕನ್ನು ಹಾವೇರಿ ಜಿಲ್ಲೆಗೆ ಸೇರಿಸಬೇಕೆಂಬ ನ್ಯಾಯ ಸಮ್ಮತ ಬೇಡಿಕೆಯನ್ನು ಸರ್ಕಾರ ಈಡೇರಿಸಬೇಕೆಂದು ತಾಲೂಕಿನ ಶಾಸಕರು ತಾಲೂಕು ಪಂಚಾಯತ್ ಸಮಿತಿ ಮತ್ತು ಜಿಲ್ಲಾ ಪಂಚಾಯತ್ ಸದಸ್ಯರು, ತಾಲೂಕಿನ ಗ್ರಾಮ ಪಂಚಾಯಿತಿಗಳು ನಗರಸಭೆಗಳು ಹಾಗೂ ಸಂಘ ಸಂಸ್ಥೆಗಳವರು ತಾಲೂಕಿನ ಸಮಸ್ತ ಜನತೆ ವ್ಯಾಪಕ ಪ್ರತಿಭಟನೆ ವ್ಯಕ್ತಪಡಿಸಿ ಮನವಿಯನ್ನು ಅರ್ಪಿಸಿ ಸರದಿ ಅನ್ನಸತ್ಯಾಗ್ರಹವನ್ನು ನಡೆಸುತ್ತಿದ್ದರೂ ನಮ್ಮ ಘನ ಸರ್ಕಾರ ಮೌನ ವಹಿಸಿರುವದು ತಾಲೂಕಿನ . ಜನತೆಗೆ ದಿಗ್ಭ್ರಮೆಯುಂಟು ಮಾಡಿದೆ.

– ಕೆ. ಬಸವಣ್ಣೆಪ್ಪ
ಕುಂದೂರು

ನಮ್ಮೂರಲ್ಲಿ ೭ನೇ ವರ್ಗದ ವರೆಗೆ ಪ್ರಾಥಮಿಕಶಾಲೆ ಇದೆ. ಶಾಲೆಯಲ್ಲಿ ಕೇವಲ ಇಬ್ಬರು ಶಿಕ್ಷಕರು ಮಾತ್ರ ಇದ್ದಾರೆ. ಹೀಗಾಗಿ ಶಿಕ್ಷಣದ ಪ್ರಗತಿಗೆ, ವಿದ್ಯಾರ್ಥಿಗಳ ಪ್ರಗತಿಗೆ ಧಕ್ಕೆಯುಂಟಾಗುತ್ತಿದೆ. ಕೂಡಲೇ ಮೇಲಾಧಿಕಾರಿಗಳು ಇದನ್ನು ಗಮನಕ್ಕೆ ತೆಗೆದುಕೊಂಡು ೨-೩ ಜನ ಶಿಕ್ಷಕರನ್ನು ನೇಮಿಸುತ್ತಾರೆ ಎಂದು ನಂಬಿದ್ದೇನೆ.

– ಫಕ್ಕೀರೇಶ ಬ. ಅಕ್ಕಿ ಸಾ : ಮಜ್ಜಿಗುಡ್ಡ
ತಾ : ನವಲಗುಂದ ಜಿ : ಧಾರವಾಡ

ಗರ್ಭಿಣಿಯಾದ ಅರೆಹುಚ್ಚಿ

ಜನರನ್ನು ನೋಡಿದ ತಕ್ಷಣ ಕಲ್ಲೆಸದು ಓಡುವವಳಲ್ಲ. ಕಂಡ ಕಂಡ ತಿನಿಸುಗಳನ್ನು ಕೈ ಹಾಕಿ ತಿನ್ನುವವಳಲ್ಲ. ಆದರೆ ಆ ತಿಂಡಿ ತಿನಿಸಿನ ಮಾಲೀಕರು ಕೈ ಎತ್ತಿ ಕೊಟ್ಟಾಗ ಮಾತ್ರ ಇಸಿದುಕೊಂಡು ತಿನ್ನುವ ಸ್ವಭಾವದವಳು. ದೇಹವೆಲ್ಲಾ ಕಪ್ಪು ಬಣ್ಣ ತೆಳುವಾದ ಪತ್ತಲ (ಸೀರಿ) ಚಿಕ್ಕದಾದ ಕುಪ್ಪಸ ತೊಟ್ಟು ಮಾತು ಬೆಳ್ಳಿ, ಮೌನ ಬಂಗಾರ ಎನ್ನುವ ಹಾಗೆ ಯಾವ ಮಾತನ್ನೂ ಆಡದೇ ಬೀದಿ ಬೀದಿ ತಿರುಗುವ ಈಕೆ ಈಗ ಗರ್ಭಿಣಿ ಎಂದರೆ ನೀವು ನಂಬುತ್ತೀರಾ? ನಂಬಲೇಬೇಕು ಹೊಲಸು ಮೈಯಿಂದ ತುಂಬಿಕೊಂಡ ಈಕೆಯನ್ನು ಕಂಡರೆ ಸಾಕು ದೂರ ಹಾದು ಹೋಗಬೇಕೆನಿಸುತ್ತದೆ. ಅಂಥದ್ರಲ್ಲಿ ಆಕೆಗೆ ತಾಯಿಯಾಗುವ ಭಾಗ್ಯವನ್ನು ನೀಡಿ ಕಾಮಕ್ಕೆ ಕಣ್ಣಿಲ್ಲ ಎಂಬುದನ್ನು ತೋರಿಸಿ ಕೊಟ್ಟಿದ್ದಾನೆ ಯಾವನೋ ಒಬ್ಬ ಮಹಾನುಭಾವ.

ಈಕೆ ಯಾವ ಊರಿಂದ ಬಂದಿದ್ದಾಳೋ ಗೊತ್ತಿಲ್ಲ. ಆದರೆ ಬಸವನಬಾಗೇವಾಡಿಗೆ ಬಂದು ಸುಮಾರು ಏಳು, ಎಂಟು ತಿಂಗಳುಗಳಾಗಿರಬಹುದು. ಎಷ್ಟೋ ಜನ ಹೆಣ್ಣು ಮಕ್ಕಳು ತಮಗೆ ಮಕ್ಕಳಾಗುವಂತೆ ದೇವರಲ್ಲಿ ಬೇಡಿಕೊಳ್ಳುತ್ತಾರೆ. ಈ ಹುಚ್ಚಿ ದೇವರಿಗೆ ಏನನ್ನೂ ಕೇಳದೇ ಮಕ್ಕಳ ಭಾಗ್ಯವನ್ನು ದಯಪಾಲಿಸಿದ್ದಾನೆ ಎಂದರೆ ಆ ದೇವರು ಕರುಣಾಶಾಲಿ ಅಲ್ಲವೇ! ಆದರೆ ನಾಳೆ ಹೆರಿಗೆಯ ಸಮಯದಲ್ಲಿ ಯಾವ ಯಾವ ಕಷ್ಟಗಳು ಆಕೆಯನ್ನು ಕಾಡುತ್ತವೆಯೋ ಆ ದೇವರಿಗೇ ಗೊತ್ತು.

○ ಮಹಾಂತೇಶ ಸಂಗಮ
ಬಸವನ ಬಾಗೇವಾಡಿ

ಹೊಸ ಸಮಾಜದ ತಳಹದಿಯಾಗಿ ಹೊಸ ಯಂತ್ರಗಳು!

○ ಡಾ. ನಾರಾಯಣ್ ಮಹಿಷಿ

ಔದ್ಯೋಗಿಕ ಕ್ರಾಂತಿಯಾದ ಮೇಲೆ ವೃತ್ತಿಗಳಲ್ಲಿ ಜೀವನೋಪಾಯಗಳಲ್ಲಿ ಆದ ಬದಲಾವಣೆಗಳು ಹೆಚ್ಚು ಎದ್ದು ಕಾಣುವಂಥವು. ವಿಜ್ಞಾನ, ತಂತ್ರಜ್ಞಾನಗಳ ಪ್ರಗತಿಯ ಹಿನ್ನೆಲೆಯಲ್ಲಿ ಜೀವನೋಪಾಯಗಳೂ (CAREERS) ಹೆಚ್ಚು ವೈವಿಧ್ಯಮಯವಾದವು.

ಐವತ್ತು ವರುಷಗಳ ಹಿಂದೆ ಜೀವನ ಸರಳವಾಗಿತ್ತು. ಯಾವ ಜಂಜಾಟವೂ ಇರಲಿಲ್ಲ. ಭಾರತದಲ್ಲಿಯಂತೂ ಯಂತ್ರಗಳ ಕಾಲವೂ ಆದಾಗಿರಲಿಲ್ಲ. ಪ್ರಕೃತಿಯು ಹೆಚ್ಚು ವಿಶಾಲವಾಗಿ ಹರಡಿಕೊಂಡಿದ್ದ ಕಾಲವದು. ಒಬ್ಬ ತಂದೆ ಸಣ್ಣ ವಯಸ್ಸಿನ ಮಗನನ್ನು ಕೈಹಿಡಿದು ಮುನ್ನಡೆಸುತ್ತಿರುವಾಗ ಅವನು ಕೇಳುವ ಪ್ರಶ್ನೆಗಳೆಲ್ಲ ಕೇವಲ ಗಿಡ-ಮರಗಳಿಗೆ, ಪಕ್ಷಿಗಳಿಗೆ, ಆಕಾಶ, ನೀರುಗಳಿಗೆ ಸಂಬಂಧಿಸಿದ್ದವು.

ಜೀವನೋಪಾಯಗಳಲ್ಲಿ ಕ್ರಮೇಣ ಬದಲಾವಣೆಗಳನ್ನು ಕಾಣುತ್ತಲೇ ಬಂದಿದ್ದೇವೆ. ನೂರಾರು ವರುಷಗಳ ಹಿಂದಿನ ದೃಶ್ಯ: ಅನೇಕ ಜನ ತರಹ-ತರಹದ ಕೆಲಸಗಳಲ್ಲಿ ನಿರತರಾದರೆ, ಕೈ ಕೆಲಸಗಾರರು, ಕುಶಲಕರ್ಮಿಗಳು, ದೇಶದಲ್ಲಿ ಹೆಚ್ಚು ಸಂಖ್ಯೆಯಲ್ಲಿರುವ ಹಳ್ಳಿಗಳಲ್ಲಿ ಮೇಲ್ವರ್ಗದ ಜನರ ಸೇವೆ ಮಾಡಿ ಹೊಟ್ಟೆ ಹೊರೆಯುತ್ತಿದ್ದರು. ಜೀತದಾಳುಗಳು ತಮ್ಮ ಧಣಿಗಳಿಗೆ ಆಹಾರ ಬೆಳೆಯುವಾಗಲೇ ತಮ್ಮ ಸಲುವಾಗಿ ಸಹ ಆಹಾರ ಬೆಳೆಯುತ್ತಿದ್ದರು. ಜೊತೆಗೆ ಧಣಿಗಳ ರಕ್ಷಣೆಯನ್ನು ಮಾಡುತ್ತಿದ್ದರು. ಅಭಿವೃದ್ಧಿಯ ಮುಂದಿನ ಹೆಜ್ಜೆ ಎಂಬಂತೆ ಕೈಕೆಲಸಗಾರರ ಮತ್ತು ಕುಶಲಕರ್ಮಿಗಳ ಜೊತೆಗೇ ಅವರ ಕೆಲಸಗಳಲ್ಲಿ ಅನುಕೂಲವಾಗಿ ಬರುವಂಥ ಸಹಾಯಕರು ಮತ್ತು ವೃತ್ತಿ-ಸಂಘಗಳು ಅಸ್ತಿತ್ವ ಪಡೆದವು. ವ್ಯಾಪಾರದಲ್ಲಿ ಬೆಳವಣಿಗೆಯಾದಂತೆ, ಉತ್ಪಾದನ ಕ್ಷೇತ್ರದಲ್ಲಿ ಸಹ ಪ್ರಗತಿಯಾದದ್ದು ಕಂಡುಬಂದಿತು. ಕೇವಲ ವ್ಯವಸಾಯ ಕ್ಷೇತ್ರವೊಂದೇ ಜೀವನೋಪಾಯವಾದ ಕಾಲದಲ್ಲಿ ಇಲ್ಲದ ಕೆಲಸಗಳು ಈಗ ಅಸ್ತಿತ್ವದಲ್ಲಿ ಬಂದವು. ಔದ್ಯೋಗಿಕ ಕ್ರಾಂತಿಯಾದ ಮೇಲೆ ವೃತ್ತಿಗಳಲ್ಲಿ ಜೀವನೋಪಾಯಗಳಲ್ಲಿ ಆದ ಬದಲಾವಣೆಗಳು ಹೆಚ್ಚು ಎದ್ದು ಕಾಣುವಂಥವು. ವಿಜ್ಞಾನ, ತಂತ್ರಜ್ಞಾನಗಳ ಪ್ರಗತಿಯ ಹಿನ್ನೆಲೆಯಲ್ಲಿ ಜೀವನೋಪಾಯಗಳೂ (CAREERS) ಹೆಚ್ಚು ವೈವಿಧ್ಯಮಯವಾದವು.

ನಮ್ಮ ದೇಶದಲ್ಲಿ ಔದ್ಯೋಗಿಕ ಕ್ರಾಂತಿಯಾಗದಿದ್ದರೂ, ಅದರ ಹೊಸ್ತಿಲಲ್ಲಿ ನಾವಿದ್ದೇವೆ ಎಂದು ಹೇಳಿದರೆ ಉತ್ಪ್ರೇಕ್ಷೆಯಾಗದು. ಉದ್ದಿಮೆಗಳು ಯಂತ್ರಮಯವಾಗಿದ್ದರೂ, ಮನುಷ್ಯಶ್ರಮಕ್ಕೆ ಪ್ರಾಧಾನ್ಯವಿದ್ದೇ ಇದೆ. ಇಲ್ಲದೆ ಹೋದರೆ ನಿರುದ್ಯೋಗ ಸಮಸ್ಯೆ ಇನ್ನೂ ಉಲ್ಬಣಗೊಳ್ಳುವುದರಲ್ಲಿ ಸಂದೇಹವೇ ಇಲ್ಲ. ಆದರೆ ಅಮೆರಿಕದಂಥ ದೇಶದಲ್ಲಿ ಎಲ್ಲ ಚಟುವಟಿಕೆಗಳೂ ಯಂತ್ರದ ಸಹಾಯದಿಂದಲೇ ನಡೆಯಬೇಕು. ಯಂತ್ರ ನಡೆಸಲಷ್ಟೇ ಜನಬೇಕು. ಉಳಿದ ಕೆಲಸವೆಲ್ಲ ಯಂತ್ರದ ಜವಾಬ್ದಾರಿ! ೧೯೮೦ರಲ್ಲಿ ಶೇಕಡ ೨೮ರಷ್ಟು ಜನ ಉತ್ಪಾದನಾ ಕ್ಷೇತ್ರದಲ್ಲಿ ನಿರತರಾಗಿದ್ದರು. ಈ ಶತಮಾನದ ಕೊನೆಗೆ ಕೆಲಸಗಾರರ ಸಂಖ್ಯೆ ಶೇಕಡ ಹನ್ನೊಂದಕ್ಕೆ ಇಳಿಯುತ್ತದೆ. ೨೦೩೦ನೆಯ ಇಸ್ವಿಯಲ್ಲಿ ಈ ಸಂಖ್ಯೆ ಮತ್ತಷ್ಟು ಇಳಿಮುಖವಾಗಿ ಶೇಕಡ ಮೂರಕ್ಕೆ ಇಳಿಯುತ್ತದೆ. ಉಕ್ಕಿನ ಉದ್ದಿಮೆಗಳಿಗಿಂತ ಆಹಾರ ಉದ್ದಿಮೆಗಳಲ್ಲೆ ಹೆಚ್ಚು ಕಾರ್ಮಿಕರು ಕೆಲಸ ಮಾಡುತ್ತಿರುವ ಕಾಲವಿದು. ವ್ಯಾಪಾರಗಳಲ್ಲಿಯೂ ಸಾಕಷ್ಟು ಬದಲಾವಣೆಯಾಗಿವೆ. ಒಂದು ಉದಾಹರಣೆ ಕೊಟ್ಟು ಹೇಳುವುದಾದರೆ-ನಾವೆಲ್ಲ ಸಿಂಗರ್ ಹೊಲಿಗೆಯಂತ್ರದ ಬಗ್ಗೆ ಕೇಳಿದ್ದೇವೆ. ಈ ಸಿಂಗರ್ ಉದ್ದಿಮೆಯಲ್ಲಿ ಹೊಲಿಗೆ ಯಂತ್ರಗಳು ಶೇಕಡ ಒಂದರಷ್ಟು ಉತ್ಪಾದನೆಯಾಗುತ್ತವೆ. ಉಳಿದ ಉತ್ಪಾದನೆ ಇಲೆಕ್ಟ್ರಾನೀಯ ಉತ್ಪಾದನೆಗಳಿಗೆ ಸಂಬಂಧಿಸಿದ್ದು.

ಹೊಸ ವ್ಯಕ್ತಿಗಳು, ಜೀವನೋಪಾಯಗಳು ನಮಗೆ ಕಾಣಸಿಗುವಂತೆ ಹಳೆಯವುಗಳು ನಿರ್ನಾಮವಾಗುತ್ತವೆ. ಅಥವಾ ಕೆಲಸಕ್ಕೆ ಬಾರದಂತಾಗುತ್ತವೆ. ಅನೇಕ ಹೊಸ ವೃತ್ತಿಗಳನ್ನು ಕೈಬಿಡಲಾಗಿದೆ. ನೂರಾರು ವೃತ್ತಿಗಳನ್ನು ಸಮರ್ಥಿಸಿಯಾದ ಮೇಲೆ, ಕೆಲವು ವೃತ್ತಿಗಳ ಹೆಜ್ಜೆ ಗುರುತುಗಳು ಅಳಿಯದೆ ಉಳಿದು, ಹೊಸ ರೂಪದಲ್ಲಿ ಕಾಣಸಿಕೊಳ್ಳುತ್ತದೆ. ಹತ್ತೊಂಬತ್ತನೆಯ ಶತಮಾನದ ಅಮೆರಿಕದಲ್ಲಿ ಸುದ್ದಿ ಮುಟ್ಟಿಸುವ ಕೆಲಸವನ್ನು ಕುದುರೆಯ ಮೇಲೆ ಕೂತು ಮಾಡಲಾಗುತ್ತಿತ್ತು. ಅದೇ ಸೇವೆಯನ್ನು ಈಗ 'ಕೊರಿಯರ್' ಮೂಲಕ ಮಾಡಲಾಗುತ್ತಿದೆ. ಸಂಪರ್ಕ ಕ್ಷೇತ್ರದಲ್ಲಿ ಯಂತು, ದೂರವಾಣಿ, ಆಕಾಶವಾಣಿ, ದೂರದರ್ಶನ ಇತ್ಯಾದಿಗಳು ಬಂದು ಕ್ರಾಂತಿಯನ್ನು ಮಾಡಿವೆ. ಭಾರತದಲ್ಲಿ ಮತ್ತು ಅಮೇರಿಕಾದಲ್ಲಿ ಕೆಲವು ವೃತ್ತಿಗಳನ್ನು ತುಲನೆ ಮಾಡಿದರೆ ನಾವು ಇನ್ನೂ ಹಳೆಯ ಕಾಲದಲ್ಲಿದ್ದೇವೆ ಎಂದೆನಿಸುತ್ತದೆ.

ಅಮೆರಿಕಾದಲ್ಲಿ ಲಿಫ್ಟ್ ಚಾಲಕನೂ ಇಲ್ಲ, ಬೆಳಿಗ್ಗೆ ಹಾಲು ತಂದು ಕೊಡುವವರೂ ಇಲ್ಲ; ಮನೆಯ ಮುಂದೆ ಬಂದು ತರಕಾರಿ ಮಾರುವವರೂ ಇಲ್ಲ. ನಮ್ಮ ದೇಶದಲ್ಲಿ

ಇವರೆಲ್ಲರೂ ಇರುವುದಕ್ಕೆ ಕಾರಣಗಳೂ ಇವೆ. ಲಿಫ್ಟಿನ ಗುಂಡಿ ಒತ್ತಿ ಕಟ್ಟಡದಲ್ಲಿ ಮೇಲೆ ಕೆಳಗೆ ಓಡಿಸಿದರೆ ಕೆಡುವ ಸಾಧ್ಯತೆ ಇದೆ. ಕೆಟ್ಟರೆ ದುರಸ್ತಿಯಾಗಲು ಬಹಳ ದಿನಗಳು ಬೇಕಾಗುವವು. ಒಬ್ಬನೇ ಅದನ್ನು ನೋಡಿ ಕೊಂಡರೆ ಕೆಡುವ ಸಾಧ್ಯತೆ ಕಡಿಮೆ ಎಂದು ತಮ್ಮ ತಿಳುವಳಿಕೆ. ಉಳ್ಳವರು ಕೆಲಸ ಮಾಡಿಸಿಕೊಂಡು ಇಲ್ಲದವರಿಗೆ ಧನ ಸಹಾಯ ಮಾಡುವುದು ನಮ್ಮ ಪರಂಪರೆಯ ಒಂದು ಭಾಗ! ಎಲ್ಲಕ್ಕೂ ದೊಡ್ಡ ತತ್ವವೆಂದರೆ ಹೊಸ ಕೆಲಸಗಳನ್ನು ಸೃಷ್ಟಿಸಿ ಜನರಿಗೆ ಕೊಟ್ಟು ಉಪಜೀವನಕ್ಕೆ ದಾರಿ ಮಾಡಿಕೊಡುವುದು. ವಿದ್ಯುತ್ ಮೀಟರ್‌ನ್ನಾಗಲಿ ಅಥವಾ ನೀರಿನ ಮೀಟರ್‌ನ್ನಾಗಲಿ ಓದಿ ದಾಖಲಿಸಲು ನಮ್ಮ ದೇಶದಲ್ಲಿ ಜನರು ಬೇಕಾಗುತ್ತಾರೆ. ಅಮೆರಿಕಾದಲ್ಲಿ ಗಣಕಯಂತ್ರಗಳು ಆ ಕೆಲಸ ಮಾಡುತ್ತವೆ. ಆ ದೇಶದಲ್ಲಿ ಒಂದು ಅಪರೂಪದ ನಿಘಂಟು ಇದ್ದು ಅದರಲ್ಲಿ ಎಲ್ಲ ಕೆಲಸಗಳ ತಲೆ ಬರಹಗಳಿರುತ್ತವೆ (Titles). ೧೯೭೭ರಲ್ಲಿ ಆ ನಿಘಂಟಿನಲ್ಲಿ ೨೧೦೦ ಹೊಸ ಕೆಲಸಗಳ ಸೇರ್ಪಡೆಯಾಯಿತು. ಅದರಲ್ಲಿಂದ ಕೈಬಿಟ್ಟ ಕೆಲಸಗಳ ಸಂಖ್ಯೆ ೩೫೦೦. ವೃತ್ತಿಯ ಮೂಲ ಕಲ್ಪನೆಯಲ್ಲಿ ಬದಲಾವಣೆಯಾಗದಿದ್ದರೂ ಅದನ್ನು ಮಾಡಿ ಪೂರೈಸುವ ರೀತಿಯಲ್ಲಿ ಹೊಸತನ ನೋಡಬಹುದು. ಒಂದು ಉದಾಹರಣೆಯನ್ನು ನೋಡಬಹುದು- ಮನೆಮನೆಗೆ ಹಾಲು ತಂದು ಮುಟ್ಟಿಸುವುದು. ಕೆಲವು ದಶಕಗಳ ಹಿಂದೆ ಹಸು, ಎಮ್ಮೆಗಳನ್ನು ಮನೆಯ ಮುಂದೇ ಕರೆದು ಹಾಲು ಕೊಡುವ ಕಾಲವೊಂದಿತ್ತು. ಹೈನುಗಾರಿಕೆ ವಿಜ್ಞಾನದ ಸ್ವರೂಪ ತಾಳಿದ ಮೇಲೆ, ಡೈರಿಯ ಕಲ್ಪನೆ ಜನಪ್ರಿಯವಾದಾಗ ಹಾಲನ್ನು ಕ್ಯಾನ್‌ಗಳಲ್ಲಿ ಮನೆ ಮನೆಗೆ ತಂದು ಅಳೆದು ಕೊಟ್ಟರು. ಈಗ ಪ್ಲಾಸ್ಟಿಕ್ ಚೀಲಗಳಲ್ಲಿ ಯಂತ್ರದ ಸಹಾಯದಿಂದ ಹಾಲನ್ನು ತುಂಬಿ ಮನೆಮನೆಗೆ ಮುಟ್ಟಿಸುವರು. ಸಮಯ ಇಲ್ಲಿ ಮಹತ್ವವನ್ನು ಪಡೆದಿದೆ. ೨೦೦೦ ಇಸ್ವಿಯಲ್ಲಿ ಅಮೆರಿಕದ ಶೇಕಡ ಎಂಬತ್ತರಷ್ಟು ಜನ ಮಾಹಿತಿ ಸಂಗ್ರಹಣೆ ಮತ್ತು ಮುಟ್ಟಿಸುವ ಕಾರ್ಯಕ್ಷೇತ್ರದಲ್ಲಿ ನಿರತರಾಗಿರುತ್ತಾರೆ! ವಿವಿಧ ಜೀವನೋಪಾಯ ಗಳಿಗೆ ಸಂಬಂಧಿಸಿದ ಮಾಹಿತಿಯನ್ನು ಸಂಕ್ಷಿಪ್ತವಾಗಿಸಿ, ಸುಲಭವಾಗಿ ಸಿಗುವ ರೀತಿಯಲ್ಲಿ ವರ್ಗೀಕರಣ ಮಾಡಿ, ಬೇಡಿಕೆ ಬಂದಾಗ ಅದನ್ನು ಸಮಯ-ವ್ಯಯ ಮಾಡದೆ ಪೂರೈಸುವದು ಆಧುನಿಕ ಜೀವನದ ಆವಶ್ಯಕತೆ ಮತ್ತು ಗುಣ ವಿಶೇಷಣ! ಯಾವುದೋ ಒಂದು ವಿಷಯದ ಬಗ್ಗೆ ಮಾಹಿತಿ ಇದ್ದರೂ ಕೇಳಿದಾಗ ಅದು ಕೈಗೆ ಎಟುಕದಿದ್ದರೆ ಏನು ಉಪಯೋಗ. ಇಂಥ ಸಂದರ್ಭಗಳಲ್ಲಿ ಗಣಕ ಯಂತ್ರಗಳ ಪಾತ್ರ ಬಹಳ ಮಹತ್ವದ್ದು. ಮಾಹಿತಿ ಸಂಗ್ರಹಣ ಕೆಲಸ ಸಹ ಬಹಳ ಮಹತ್ವದ್ದು.

ಅಮೆರಿಕಾದಲ್ಲಿ ಲಿಫ್ಟ್ ಚಾಲಕನೂ ಇಲ್ಲ, ಬೆಳಿಗ್ಗೆ ಹಾಲು ತಂದು ಕೊಡುವವರೂ ಇಲ್ಲ; ಮನೆಯ ಮುಂದೆ ಬಂದು ತರಕಾರಿ ಮಾರುವವರೂ ಇಲ್ಲ.

ವಿಜ್ಞಾನದ ಈ ಯುಗದಲ್ಲಿ ಕ್ಯಾಲ್‌ಕ್ಯುಲೇಟರುಗಳು ಬಂದಿರುವದು ಸಮಯದ ಉಳಿತಾಯಕ್ಕೆ ಮಾರ್ಗವಾದಂತಾಗಿದೆ. ಆದರೆ ಪಟ್ಟಣದ ಶಾಲೆಗಳಲ್ಲಿ ವಿಚಿತ್ರ ಪರಿಸ್ಥಿತಿ ನೋಡಲು ಸಿಗುತ್ತದೆ. ವಿದ್ಯಾರ್ಥಿಗಳು ಕೂಡುವಾಗ, ಕಳೆಯುವಾಗ, ಗುಣಿಸುವುದು, ಭಾಗಿಸುವದು - ಇವಕ್ಕೆಲ್ಲ ಕ್ಯಾಲ್‌ಕ್ಯುಲೇಟರ್‌ಗಳು ಬೇಕಾಗುತ್ತದೆ. ಅದಿಲ್ಲದೆ ಮಾಡುವ ಅಭ್ಯಾಸ ಇಲ್ಲದಂತಾಗಿದೆ. ಪರಾವಲಂಬನೆ ಅವಶ್ಯಕವಿದ್ದರೂ ಪ್ರಾರಂಭದಿಂದಲೇ ಅದಕ್ಕೆ ಮೊರೆ ಹೋದಾಗ ನಿರೀಕ್ಷಿತ ಬುದ್ಧಿಮತ್ತೆ ಮೊನಚಾಗಿ ಕಾಣುವದಿಲ್ಲ. ಸಮಯದ ಉಳಿತಾಯಕ್ಕೆ ಪ್ರತಿಭಾವಂತರು ಯಂತ್ರಗಳ ಸಹಾಯ ಪಡೆಯುವ ರೀತಿಯಲ್ಲಿ. ಸುರಕ್ಷಿತವಲ್ಲದ ಸ್ಥಳಗಳಲ್ಲಿ ಎಂದರೆ ಆಳವಾದ ಗಣಿಗಳಲ್ಲಿ ಅಥವಾ ಸಮುದ್ರದ ತಳದಲ್ಲಿ, ಕೆಲಸ ಮಾಡಲು ಯಂತ್ರ ಮನುಷ್ಯರ (ROBOTS) ವಿನ್ಯಾಸವಾಗಿದೆ. ಅತ್ಯಂತ ಶಾಖಮಯ ಸ್ಥಳವಾದ ಉಕ್ಕು ತಯಾರಿಸುವ ಉದ್ದಿಮೆಯಲ್ಲಿ ಸಹ ಯಂತ್ರ ಮನುಷ್ಯರು ಬಂದು ಎಲ್ಲವನ್ನು ನಿಯಂತ್ರಿಸುವ ಕಾಲ ಬಂದಿದೆ ಎಂದರೂ ತಪ್ಪಾಗಲಾರದು. ಸಮಯ ಪ್ರಜ್ಞೆ ಹೆಚ್ಚಾದಂತೆ, ಸಮಯದ ಮಹತ್ವ, ಮೌಲ್ಯಗಳೆಲ್ಲ ಹೆಚ್ಚಾಗುತ್ತಿವೆ. ಮನುಷ್ಯರಿಗೆ ಸಾಧ್ಯವಿದ್ದ ಅಪಾಯಗಳನ್ನೆಲ್ಲ ತಪ್ಪಿಸಿ, ಅವನ ಕ್ಷೇಮ, ಆರಾಮಗಳನ್ನೆಲ್ಲ ನೋಡಿಕೊಳ್ಳಲು ಅನೇಕ ಆಧುನಿಕ ಉಪಕರಣಗಳನ್ನು, ಯಂತ್ರಗಳನ್ನು ರೂಪಿಸಲಾಗಿದೆ. ಆಧುನಿಕ ಅಡಿಗೆ ಮನೆಯು ಯಂತ್ರಮಯವಾಗಿದೆ. ಮಹಿಳೆಯರು ತಮ್ಮ ನಿಯಂತ್ರಣದಲ್ಲಿದ್ದ ಸಮಯವನ್ನು ಯಂತ್ರದ ಸಹಾಯ ಪಡೆದು ಉಳಿಸಿ, ಮನೆಯೊಳಗಿನ ಕೆಲಸದ ಜೊತೆಗೆ ಮನೆಯ ಹೊರಗೂ ಸಹ ಕೆಲಸದಲ್ಲಿ ತೊಡಗಿಸಿ ಕೊಳ್ಳಬೇಕೆಂದು, ಹೊಸ ವಾತಾವರಣ ನಿರ್ಮಾಣಕ್ಕೆ ಅಣಿಯಾಗಬೇಕೆಂಬ ನಿರೀಕ್ಷೆ ಪ್ರಾರಂಭವಾಗಿದೆ. ಲಿಂಗ-ಭೇದವಿಲ್ಲದ ಸಮಾಜದ ನಿರ್ಮಾಣ ಸಾಧ್ಯವಾಗಬೇಕಾಗಿದೆ. ಎಂಥ ಸಮಾಜದ ನಿರ್ಮಾಣ ವಾದರೂ ಒಪ್ಪು-ತಪ್ಪುಗಳು, ಓರೆ-ಕೋರೆಗಳು ಇದ್ದೇ ಇರುತ್ತದೆ. ಎಂದ ಮಾತ್ರಕ್ಕೆ ಹೊಸ ಸಮಾಜ-ನಿರ್ಮಾಣವೇ ಬೇಡ ಎನ್ನುವುದು ಸಮಂಜಸವಾದ ವಿಚಾರವಲ್ಲ.

ಆರ್ಥಿಕ ಉದಾರೀಕರಣವಾದ ನಂತರ ನಮ್ಮ ದೇಶದಲ್ಲಿ ಒಂದು ಹೊಸ ವಾತಾವರಣವೇ ನಿರ್ಮಾಣವಾಗಿದೆ. ಬುದ್ಧಿವಂತರಿಗೆ ಅನೇಕ ಕೆಲಸದ ಅವಕಾಶಗಳಿವೆ. ಹಾಗೆ ನೋಡಿದರೆ, ಕೆಲಸಗಳೇ ಬುದ್ಧಿವಂತರ ಮನೆ ಬಾಗಿಲಿಗೆ ಬರುತ್ತಲಿವೆ. ಅಂಥ ಕೆಲಸಗಳ ಸಂಖ್ಯೆಗಳೂ ಹೆಚ್ಚಾಗುತ್ತಲಿವೆ. ಪರದೇಶದ ಕಂಪನಿಗಳು ಬಂದು ಇಲ್ಲಿ ಬೇರು ಬಿಡುತ್ತಿವೆ; ಜೊತೆಗೆ ಅನಿವಾಸಿ ಭಾರತೀಯರು ದೊಡ್ಡ ಪ್ರಮಾಣದಲ್ಲಿ ಹಣ-ಹೂಡಿಕೆ ಮಾಡುತ್ತಿದ್ದಾರೆ. ದೊಡ್ಡ ಸಂಖ್ಯೆಯಲ್ಲಿ, ದೊಡ್ಡ ಗಾತ್ರದ ಉದ್ದಿಮೆಗಳು ಬರುತ್ತಲಿವೆ. ರಾಷ್ಟ್ರೀಯ ಹೆದ್ದಾರಿಗಳು, ರಾಜ್ಯದ ಹೆದ್ದಾರಿಗಳು ಆಧುನೀಕರಣಕ್ಕೆ ಒಳಪಡುತ್ತಿವೆ. ಇಂಥ ಪಟ್ಟಿ ಕೊನೆ ಇಲ್ಲದಂತೆ ಬೆಳೆಯಬಹುದು. ಆದರೆ ಸಾಮಾನ್ಯ ಮನುಷ್ಯನ ಬಡತನ ಹಿಂಗಿದೆಯೇ ಎಂಬ ಪ್ರಶ್ನೆಗೆ ಉತ್ತರ ಇನ್ನೂ ಸಿಗಬೇಕಾಗಿದೆ. ಆದ್ದರಿಂದಲೇ ಹುಡುಕಾಟ, ಸಂಶೋಧನೆ ನಿರಂತರವಾಗಿ ನಡೆಯಬೇಕಾಗಿದೆ. ಮನುಷ್ಯ ಈ ಭೂಮಿಯ ಮೇಲೆ ಇರುವಷ್ಟು ಕಾಲ ಸಂಶೋಧನೆಯೂ ಇರುತ್ತದೆ ಎಂಬುದು ಖಂಡಿತ! ಸಂಶೋಧನೆಯ ಸಹಾಯದಿಂದ ದಿಗಂತವನ್ನು ಮುಟ್ಟಲು ಪ್ರಯತ್ನ ನಡೆದಿರುವಾಗ ದಿಗಂತವೇ ದೂರ ದೂರ ಸರಿಯುತ್ತಿರುತ್ತದೆ. ಆದ್ದರಿಂದಲೇ ಅಖಂಡವಾಗಿ ಸಂಶೋಧನೆ ನಡೆಯಲೇಬೇಕಾಗಿದೆ. ಮನುಷ್ಯ ಜೀವನದ ಉಸಿರೇ ಇದು!!

ಕಿಲ ಕಿಲ

○ ಗೋಪಾಲಕೃಷ್ಣ ವಂಡ್ಸೆ



ಚಿಣ್ಣರೆ,

ಈ ಕೆಳಗಿನ ಪುಟಾಣಿ ಪದ್ಯಗಳಲ್ಲಿ ಆರು ಪ್ರಾಣಿಗಳು ತಮ್ಮ ಹೆಸರು ಹೇಳಬೇಕೆಂದು ನಿಮಗೆ ಸವಾಲು ಹಾಕಿವೆ. ಉತ್ತರ ನೋಡದೇ ತಕ್ಷಣ ಹೇಳಿದರೆ ನೀವು ತುಂಬಾ ಜಾಣರು!

೧

ನನಗೆ ಇದೆ
ಗಣಪನ ಮೋರೆ
ಆಚೆ ಈಚೆ
ಎರಡು ಕೋರೆ
ಮೈಬಣ್ಣ ಮಾತ್ರ
ಸಿಮೆಂಟಿನ ಗಾರೆ
ಹೇಳು ಪುಟ್ಟಿ
ನಾನು ಯಾರೆ?

೨

ಪೊದೆಯೊಳಗೆ ಅಡಗಿ
ಇರುವೆನು ನಾನು
ಹಸಿ ಹುಲ್ಲು ಎಂದರೆ
ನನಗೆ ಜೇನು
ಠಣ್ಣನೆ ಜಗಿಯುವೆ
ನೊಡದೆ ಕಾನು
ಯಾರು ನಾನು
ಹೇಳುವಿಯೇನು?

೩

ರಾತ್ರಿಯ ಹೊತ್ತು
ಹೊಲಕೆ ಇಳಿವೆ
ನೇಗಿಲು ಇಲ್ಲದೆ
ಗದ್ದೆಯ ಉಳುವೆ
ಎರೆಹುಳು ಸಿಕ್ಕರೆ
ಮೆಲ್ಲನೆ ಮೆಲುವೆ
ಸಾಕಲ್ಲ ಜಾಣೆ
ಏನೆಂದು ಹೇಳುವೆ?

೪

ಹಸುವಿನ ಹಾಗೆ
ನಾನು ಸಸ್ಯಾಹಾರಿ
ಎರಡು ಕೊಂಬಿವೆ
ಶಾಖೆಗಳಿವೆ ಭಾರಿ
ಜಿಗಿಜಗಿದು ಹಾರಿರುವೆ
ಅದೆಷ್ಟೋ ಸಾರಿ
ನಾನ್ಯಾರೆಂದು ಊಹಿಸೆ
ಪುಟಾಣಿ ಪೋರಿ?

೫

ನನಗೆ ಕಾಡೆಂದರೆ
ಬಹಳ ಇಷ್ಟ
ಊರಿಗೆ ಇಳಿದರೆ
ಬಂತು ಕಷ್ಟ
ಮೋಸ ಮಾಡದಿರೆ
ತುಂಬಾ ನಷ್ಟ
ಯಾರೆಂದು ಹೇಳಿರಿ
ಈಗಲೇ ಸ್ಪಷ್ಟ

೬

ಮರದಿಂದ ಮರಕೆ
ಹಾರುವೆ ಚಲಿಸುವೆ
ಬಳ್ಳಿಯು ಇಳಿದಿರೆ
ಸರ ಸರ ಜಾರುವೆ
ತೆಂಗಿನ ಮರವಿರೆ
ತಕ ತಕ ಏರುವೆ
ನಾನ್ಯಾರೆಂದು ಹೇಳಿರೆ
ಲಾಗ ಹೊಡೆಯುವೆ!

ಉತ್ತರ :

೧. ಆನೆ
೨. ಮೊಲ
೩. ಕಾಡು ಹಂದಿ
೪. ಜಿಂಕೆ
೫. ನರಿ
೬. ಮಂಗ

ನನ್ನ ಊರು

ಮಕ್ಕಳೇ,

ನಿಮ್ಮ ಊರಿನ ಬಗ್ಗೆ ನಿಮಗೆ ಬಹಳ ಅಭಿಮಾನ ಇರುವುದು ಸಹಜ. ಆ ಅಭಿಮಾನಕ್ಕೆ ಏನು ಕಾರಣ? ನಿಮ್ಮ ಊರಿನಲ್ಲಿ ಅಂತಹ ವೈಶಿಷ್ಟ್ಯ ಏನಿದೆ? ನಿಮ್ಮ ಊರಿನ ಊಟ, ತಿಂಡಿ, ಇತಿಹಾಸ, ವ್ಯಾಪಾರ, ಪ್ರತಿಭೆ ಇತ್ಯಾದಿ ಯಾವ ವಿಷಯದ ಬಗೆಗಾದರೂ ಆರು ವಾಕ್ಯಗಳ ಒಳಗೆ ಬರೆದು ಕಳಿಸಿ. ಮುಂದಿನ ಸಂಚಿಕೆಯಲ್ಲಿ ನಿಮ್ಮ ಬರಹಗಳು ಪ್ರಕಟವಾಗುತ್ತವೆ.

ಗಮನಿಸಿ :

- ❑ ನಿಮ್ಮ ವಯಸ್ಸು ೧೫ ವರ್ಷ ಮೀರಿರಬಾರದು.
- ❑ ನಿಮ್ಮ ಅನಿಸಿಕೆಯನ್ನು ಬಿಳಿ ಹಾಳೆಯಲ್ಲಿ ಬರೆದು ಪಕ್ಕದಲ್ಲಿರುವ ಕೂಪನ್-೨ನ್ನು ಲಗತ್ತಿಸಿ ಈ ಕೆಳಗಿನ ವಿಳಾಸಕ್ಕೆ ಅಂಚೆಯಲ್ಲಿ ಕಳಿಸಿ.
- ❑ ನಿಮ್ಮ ಬರಹ ನಮಗೆ ತಲುಪಲು ಕೊನೆಯ ದಿನಾಂಕ : ೦೬-೦೮-೧೯೯೭.

ಸಂಪಾದಕರು, ಬಿಸಿಲ ಬದುಕು
ಅಂಚೆ ಪೆಟ್ಟಿಗೆ ೭೯೫೧, ಬಸವೇಶ್ವರ ನಗರ, ಬೆಂಗಳೂರು-೭೯.

ಕಿಲ ಕಿಲ ಕೂಪನ್ - ೨

ಹೆಸರು..

ತರಗತಿ............................ ವಯಸ್ಸು...................

ತಂದೆ...

ತಾಯಿ..

ವಿಳಾಸ..

....

....

....

ನಾನು ಮುಖ್ಯಮಂತ್ರಿಯಾದರೆ?

ಕಳೆದ ಸಂಚಿಕೆಯಲ್ಲಿ "ನಾನು ಮುಖ್ಯಮಂತ್ರಿಯಾದರೆ?" ಎಂಬ ವಿಷಯದ ಬಗ್ಗೆ ಅಭಿಪ್ರಾಯ ಕಳುಹಿಸಲು ೧೫ ವರ್ಷದೊಳಗಿನ ಮಕ್ಕಳಿಗೆ ಸೂಚಿಸಿದ್ದೆವು. ನಾಡಿನ ಮೂಲೆ ಮೂಲೆಗಳಿಂದ ನಮ್ಮ ಕಚೇರಿಗೆ ನೂರಾರು ಕಾಗದಗಳು ಬಂದಿವೆ. ಅವುಗಳಲ್ಲಿ ಆಯ್ದ ಕೆಲವನ್ನು ಇಲ್ಲಿ ಪ್ರಕಟಿಸುತ್ತಿದ್ದೇವೆ.

ಮಕ್ಕಳ ಹೊರೆ ಇಳಿಸುವೆ

ನಾನು ಕರ್ನಾಟಕ ರಾಜ್ಯ ಮುಖ್ಯಮಂತ್ರಿಯಾದರೆ ಮೊದಲು ಮಾಡುವ ಕೆಲಸವೆಂದರೆ ಶಾಲಾ ಮಕ್ಕಳ ಪಠ್ಯಪುಸ್ತಕದ ಹೊರೆ ಕಡಿಮೆ ಮಾಡುವುದು. ಗಂಧದ ನಾಡು ಎಂದು ಪ್ರಸಿದ್ಧಿ ಪಡೆದಿದ್ದ ಈ ನಮ್ಮ ಕನ್ನಡನಾಡು ಈಗ ಕಾಂಕ್ರೀಟ್ ಕಾಡಾಗಿದೆ. ಆದ್ದರಿಂದ ಕಾಡು ಬೆಳೆಸುವುದು ನನ್ನ ಇನ್ನೊಂದು ಗುರಿ.

- ಜಿ.ಎಂ.ರೇಷ್ಮಾ (೪ನೇ ತರಗತಿ)
ಶಾಮರಾಯನಪಾಳ್ಯ

ಎಲ್ಲರಿಗೂ ಉದ್ಯೋಗ

ನಾನು ಮುಖ್ಯಮಂತ್ರಿಯಾದರೆ ಪ್ರಪ್ರಥಮವಾಗಿ ಭ್ರಷ್ಟಾಚಾರವನ್ನು ನಿರ್ಮೂಲನೆ ಮಾಡಲು ಪ್ರಯತ್ನಿಸುತ್ತೇನೆ. ಪರಿಸರ ಮಾಲಿನ್ಯ ತಡೆಯಲು ಕ್ರಮ ಕೈಗೊಳ್ಳುವೆ. ಎಲ್ಲರಿಗೂ ಉದ್ಯೋಗ ದೊರಕುವಂತೆ ನೋಡಿಕೊಳ್ಳುತ್ತೇನೆ.

- ನಂದಿನಿ ನಾಗನೂರು (೬ನೇ ತರಗತಿ)
ಹುನಗುಂದ

ಮಮ್ಮಿ-ಡ್ಯಾಡಿ ಶಾಲೆ

ರಾಜ್ಯದ ಎಲ್ಲಾ ಮದ್ಯದಂಗಡಿಗಳನ್ನು ಯಾವ ಮುಲಾಜು ಇಲ್ಲದೆ ಪರಿಹಾರವನ್ನೂ ಕೊಡದೆ ಮುಚ್ಚಿಸುತ್ತೇನೆ. ಮಮ್ಮಿ-ಡ್ಯಾಡಿ ಶಾಲೆಗಳನ್ನು ಕಡಿಮೆ ಮಾಡಿ ಮಾತೃಭಾಷೆಗೆ ಮನ್ನಣೆ ನೀಡುವೆ.

- ಜಿ.ಎನ್.ಶಶಿಧರ (೯ನೇ ತರಗತಿ)
ಗುಳಿಗೇನಹಳ್ಳಿ

ಕಡ್ಡಾಯ ಶಿಕ್ಷಣ

ಎಲ್ಲರೂ ಕಡ್ಡಾಯವಾಗಿ ಶಿಕ್ಷಣ ಕಲಿಯಲೇ ಬೇಕು. ಸಂಪೂರ್ಣ ಮದ್ಯಪಾನ ನಿಷೇಧ. ಜನರಿಗೆ ನೀರು, ವಿದ್ಯುತ್ತು ಸಮರ್ಪಕವಾಗಿ ದೊರೆಯುವಂತೆ ಪ್ರಯತ್ನ ಮಾಡುವುದು.

- ಅನಿತಾ ಎಂ. (೧೦ನೇ ತರಗತಿ)
ಬೆಂಗಳೂರು

ಫೀಜು ತೆಗೆಯುವೆ

★ ಫೀಜು ಇಲ್ಲದಂತೆ ಮಾಡುವೆ ★ ಎಲ್ಲರೂ ಓದುವಂತೆ ಮಾಡುವೆ ★ ಮಕ್ಕಳಿಗೆ ಉಚಿತ ಊಟ ಕೊಡಿಸುವೆ ★ ಕನ್ನಡ ಕಡ್ಡಾಯ ಮಾಡುವೆ

- ಶ್ರವಣಕುಮಾರ (೩ನೇ ತರಗತಿ)
ಬೆಂಗಳೂರು

ಬಡವರಿಗೆ ಹಣ

ಮೊದಲು ನಾನು ಬಡವರಿಗೆ ಹಣ ಸಹಾಯ ಮಾಡುವೆ. ಮನೆ ಕಟ್ಟಿಸಿಕೊಡುವೆ. ರಸ್ತೆಗಳಲ್ಲಿ ಕಸ ಬೀಳದಂತೆ ನೋಡಿಕೊಳ್ಳಲು ಮುನ್ಸಿಪಾಲಿಟಿಗೆ ಹೋಗಿ ಹೇಳಿಬರುತ್ತೇನೆ.

- ಎಚ್.ಗೌರಿ (೮ನೇ ತರಗತಿ)
ಸಂಗಾಪುರ

ಜಾತಿಮತ ಭೇದವಿಲ್ಲ

ಜಾತಿಮತ ಪಂಥ ಭೇದಗಳಿಗೆ ಜನರು ಬಲಿಯಾಗದಂತೆ ಅವರನ್ನು ಮನವೊಲಿಸುವೆ. ಸರ್ಕಾರದ ಕೆಲಸ ದೇವರ ಕೆಲಸವೆಂದು ತಿಳಿದು ಭಕ್ತಿಯಿಂದ ಮಾಡುತ್ತೇನೆ.

- ವಿಶಾಲ್‌ಕುಮಾರ್ ಕಾಮಿನ್
[೧೦ನೇ ತರಗತಿ]
ಗುರುಮಠಕಲ್

ಎಲ್ಲ ಶಾಲೆಗೂ ಶಿಕ್ಷಕರು

ರಾಜ್ಯದ ಎಲ್ಲ ಶಾಲೆಗಳಲ್ಲಿ ಸಾಕಷ್ಟು ಶಿಕ್ಷಕರು ಇರುವಂತೆ ನೋಡಿಕೊಳ್ಳುವೆ. ಎಲ್ಲರನ್ನು ಅಕ್ಷರಸ್ಥರನ್ನಾಗಿಸಲು ಪ್ರಯತ್ನಿಸುವೆ.

ಮೊದಲು ನನ್ನ ಸ್ವಾರ್ಥ!

ಮೊದಲು ನನ್ನ ಸ್ವಾರ್ಥ ಸಾಧಿಸುವೆ. ನನ್ನ ಮಕ್ಕಳು, ಮೊಮ್ಮಕ್ಕಳು, ಮರಿಮೊಮ್ಮಕ್ಕಳು ತಿನ್ನುವಷ್ಟು ದುಡ್ಡು, ಹೊಲ, ಮನೆ ಮಾಡುತ್ತೇನೆ. ಎಲ್ಲಾ ಕಡೆ ಅನ್ಯಾಯದ ಬೀಜ ಬಿತ್ತುವೆ. ಯಾರಿಗಾದರೂ ನೌಕರಿ ಬೇಕಾದರೆ ಲಕ್ಷಗಟ್ಟಲೆ ಲಂಚ ಹೊಡೆಯುತ್ತೇನೆ. ರಸ್ತೆ ನಿರ್ಮಾಣಕ್ಕೆ ಕೋಟಿ ಲೆಕ್ಕ ತೋರಿಸಿ ಲಕ್ಷ ಖರ್ಚು ಮಾಡಿ ಉಳಿದದ್ದು ನನ್ನ ಜೋಬಿಗೆ!

-ಎಂ.ಎಲ್.ರಾಕೇಶ್ (೯ನೇ ತರಗತಿ)
ಸಂತೇಬೆನ್ನೂರು

ಪ್ರತಿ ಹಳ್ಳಿಗೂ ಒಳ್ಳೆಯ ರಸ್ತೆ, ಬಸ್ ಸೌಕರ್ಯ, ದವಾಖಾನೆ ಮಾಡಿಸುವೆ. ಬಹಳಷ್ಟು ಸರಕಾರಿ ನೌಕರರು ಲಂಚ ಹೊಡೆಯುತ್ತಿದ್ದಾರೆ. ಅಂಥವರನ್ನು ನೌಕರಿಯಿಂದ ತೆಗೆಯುವೆ.

-ನಾಭಿರಾಜ ಅಕ್ಕಿ [೯ನೇ ತರಗತಿ]
ಗೋಗಿ

ಮೆರಿಟ್‌ಗೆ ಮೀಸಲಾತಿ

ರಾಜಕಾರಣಿಗಳ, ಕಳ್ಳ ಸಂತೆಕೋರರ ಅಕ್ರಮ ಆಸ್ತಿಯನ್ನು ಮುಟ್ಟುಗೋಲು ಹಾಕಿ ಸರ್ಕಾರಿ ಖಜಾನೆಗೆ ಜಮಾ ಮಾಡಿಸುತ್ತೇನೆ. ಲಂಚಕೋರ ಸರ್ಕಾರಿ ನೌಕರರನ್ನು ತಕ್ಷಣದಲ್ಲಿ ಕೆಲಸದಿಂದ ವಜಾ ಮಾಡಿಸುವೆ. ಕೇವಲ ಮೆರಿಟ್ ಆಧಾರಿಸಿ ಹಾಗೂ ಆರ್ಥಿಕವಾಗಿ ದುರ್ಬಲರಾದವರಿಗೆ ಶೇ.೭೫ರಷ್ಟು ಉದ್ಯೋಗ ಮೀಸಲಾತಿ ಜಾರಿಗೊಳಿಸುತ್ತೇನೆ.

- ಶಿವಲೀಲಾ ಸಜ್ಜನರ (೯ನೇ ತರಗತಿ)
ರೋಣ

ಸ್ಥಿರ ಆಡಳಿತ ನೀಡುವೆ

ಸದ್ಯ ಇರುವ ಅಸಮರ್ಪಕ ಆಡಳಿತ ಹೋಗಲಾಡಿಸಿ ಸ್ಥಿರತೆ ತರುವೆ. ಬಡತನ ನಿರ್ಮೂಲನ, ಅರಣ್ಯ ಬೆಳೆಸುವಿಕೆ, ಔದ್ಯೋಗಿಕ ಕ್ರಾಂತಿ ನನ್ನ ಇತರ ಗುರಿಗಳು.

- ಶ್ರೀಕಾಂತ ಪಟ್ಟಣಶೆಟ್ಟಿ [೮ನೇ ತರಗತಿ]
ಮುದ್ದೇಬಿಹಾಳ

ಪುಸ್ತಕಗಳ ಬೆಲೆ

ಎಷ್ಟೋ ಜನ ವಿದ್ಯಾರ್ಥಿಗಳು ನೋಟ್‌ಬುಕ್ ಮತ್ತು ಟೆಕ್ಸ್ಟ್ ಬುಕ್ ಬೆಲೆ ಗಗನಕ್ಕೇರಿರುವುದನ್ನು ಕಂಡು ತಮ್ಮ ವಿದ್ಯಾಭ್ಯಾಸವನ್ನು ಅರ್ಧದಲ್ಲಿ ಬಿಟ್ಟುಬಿಡುತ್ತಾರೆ. ಆದ್ದರಿಂದ ಪುಸ್ತಕಗಳ ಬೆಲೆ ಕಡಿಮೆ ಮಾಡಿ ಬಡ ವಿದ್ಯಾರ್ಥಿಗಳು ವಿದ್ಯಾಭ್ಯಾಸ ಮುಂದುವರಿಸುವಂತೆ ಮಾಡುವೆ.

- ರೇಣುಕಾ ಚಪ್ಪರದಳ್ಳಿ (೮ನೇ ತರಗತಿ)
ಹಿರೇಕೆರೂರು

ಯೋಗ್ಯ ನಾಯಕ

ಯಾವುದೇ ಒಂದು ರಾಜ್ಯ ಅಭಿವೃದ್ಧಿ ಹೊಂದಬೇಕಾದರೆ ಹಾಗೂ ಅಲ್ಲಿನ ಪ್ರಜೆಗಳು ಸುಖದಿಂದ ಬಾಳಬೇಕಾದರೆ ಅಂತಹ ರಾಜ್ಯಕ್ಕೆ ಒಬ್ಬ ಯೋಗ್ಯ ನಾಯಕನ ಅವಶ್ಯಕತೆ ಇರುತ್ತದೆ. ಅಂತಹ ನಾಯಕ ನಾನಾಗುತ್ತೇನೆ.

- ಎಚ್.ಸಂಗಪ್ಪ [೯ನೇ ತರಗತಿ]
ದ್ಯಾಂಪೂರ

ಸಂತೋಷದಿಂದ ರಾಜೀನಾಮೆ!

ಒಂದು ವೇಳೆ ನಾನು ಮುಖ್ಯಮಂತ್ರಿಯಾದರೆ ಮೊದಲು ಬಡತನ ಹಾಗೂ ವರದಕ್ಷಿಣೆ ಪಿಡುಗನ್ನು ಹೋಗಲಾಡಿಸುತ್ತೇನೆ. ಜಾತಿಭೇದ ನಿವಾರಿಸುತ್ತೇನೆ. ಸ್ನೇಹ, ಪ್ರೀತಿ, ಪ್ರೇಮಗಳಿಗೆ ಮೊದಲ ಸ್ಥಾನ ಕೊಡುತ್ತೇನೆ. ಇವೆಲ್ಲ ಸಾಧ್ಯವಾಗದಿದ್ದರೆ ಸಂತೋಷದಿಂದ ರಾಜೀನಾಮೆ ಕೊಡುತ್ತೇನೆ.

- ಮಡಿವಾಳ ಪಾಟೀಲ *(೧೦ನೇ ತರಗತಿ)*
ಮೋರಟಗಿ

ಕಡ್ಡಾಯ ವಿದ್ಯಾರ್ಹತೆ

ಶಾಸಕನಾಗಲು, ಸಂಪಾದಕನಾಗಲು ವಿದ್ಯಾರ್ಹತೆಯನ್ನು ಕಡ್ಡಾಯಗೊಳಿಸುತ್ತೇನೆ.

- ಜ್ಯೋತಿಲಕ್ಷ್ಮೀ ಆನಿಗೋಳ
ಬೆಳಗಾವಿ

ರೈತರ ಏಳಿಗೆ

ನನ್ನನ್ನು ಆರಿಸಿತಂದ ಕರ್ನಾಟಕದ ಜನತೆಗೆ ವಂದಿಸಿ ಅವರ ಕಷ್ಟಸುಖಗಳನ್ನು ವಿಚಾರಿಸುತ್ತೇನೆ. ರಾಜ್ಯದಲ್ಲಿ ವಿದ್ಯುತ್ ಸರಬರಾಜನ್ನು ಸರಿಪಡಿಸಿ ರೈತರನ್ನು ಮುಂದೆ ತರುತ್ತೇನೆ.

- ಎಂ.ಮಂಜುನಾಥ [೧೦ನೇ ತರಗತಿ]
ಹಿರೇಕೆರೂರು

ಆರು ಆದ್ಯತೆಗಳು

೧. ಪರಿಸರ ಮಾಲಿನ್ಯ ನಿವಾರಿಸುವುದು.
೨. ಬಡತನ ನಿವಾರಣೆ.
೩. ಕುಡಿಯುವ ನೀರಿನ ಪೂರೈಕೆ.
೪. ಉಚಿತ ಆರೋಗ್ಯ ತಪಾಸಣೆ.
೫. ಸಾಕ್ಷರತೆ, ಸಮಾನತೆ, ಆರ್ಥಿಕ ನೆರವು.
೬. ಸಹಬಾಳ್ವೆ, ಉದ್ಯೋಗಾವಕಾಶ.

- ಯಂ.ಲೇಖಾನಂದ (೭ನೇ ತರಗತಿ)
ಹೊಸಪೇಟೆ

ಆಯುರ್ವೇದದಲ್ಲಿ ಆರೋಗ್ಯಕರ ನಿದ್ರಾವಧಿ

೧ ತಿಂಗಳ ಮಗುವಿಗೆ	-	೧೮ ರಿಂದ ೨೦ ಗಂಟೆಗಳು
೧ ರಿಂದ ೬ ತಿಂಗಳ ಮಗುವಿಗೆ	-	೧೫ ರಿಂದ ೧೮ ಗಂಟೆಗಳು
೬ ತಿಂಗಳಿಂದ ೧ ವರ್ಷ	-	೧೪ ರಿಂದ ೧೬ ಗಂಟೆಗಳು
೧ ರಿಂದ ೨ ವರ್ಷ	-	೧೨ ರಿಂದ ೧೪ ಗಂಟೆಗಳು
೨ ರಿಂದ ೫ ವರ್ಷ	-	೧೦ ರಿಂದ ೧೨ ಗಂಟೆಗಳು
೫ ರಿಂದ ೧೬ ವರ್ಷ	-	೯ ರಿಂದ ೧೦ ಗಂಟೆಗಳು
ವಯಸ್ಕರಿಗೆ	-	೭ ರಿಂದ ೮ ಗಂಟೆಗಳು
ವೃದ್ಧರಿಗೆ	-	೪ ರಿಂದ ೬ ಗಂಟೆ


○ ಡಾ. ವಸುಂಧರಾ ಭೂಪತಿ

ಚಾಲಕ ಖಳನಾಯಕನಾದ ಕಥೆ

ಆರಡಿ ಎತ್ತರದ, ಕೆಂಡ ಉಗುಳುವ ಕಂಗಳ ಈ ದೃಢಕಾಯನನ್ನು ನೋಡಿದಾಕ್ಷಣ ಹೇಳಿಬಿಡಬಹುದು 'ಈತ ಖಳನ ಪಾತ್ರಕ್ಕೆ ಹೇಳಿ ಮಾಡಿಸಿದ ಆಸಾಮಿ' ಅಂತ. ಸೈಯದ್ ಕೇಸಲ್ಲಿ ಆಗಿದ್ದೇ ಇದು. ಸ್ನೇಹಿತರು 'ಒಳ್ಳೆ ಪರ್ಸನಾಲಿಟಿ ಕಣಯ್ಯಾ ನಿಂದು, ಸಿನಿಮಾಕ್ಕೆ ಯಾಕೆ ಸೇರಬಾರದು' ಎಂದು ಹುರಿದುಂಬಿಸಿದರು. ಸರಿ, ಸೈಯದ್ ಹೆಸರು ಬದಲಾಯಿಸಿ ಸತ್ಯಜಿತ್ ರೂಪ ತಾಳಿ ಖಳನಾಯಕನಾದರು. ಇದು ೧೫ ವರ್ಷಗಳ ಹಿಂದಿನ ಕಥೆ.

ಸತ್ಯಜಿತ್ ಸಿನಿಮಾ ಪ್ರವೇಶ ಸಾಕಷ್ಟು ಅಬ್ಬರದಲ್ಲೇ ಆಯಿತು. ಈ ಹುಬ್ಬಳ್ಳಿಯಾಂವನ ಮೊದಲ ಚಿತ್ರವೇ 'ಅಂಕುಶ್'. ನಾನಾ ಪಾಟೇಕರ್‌ನಂಥ ಘಟಾನುಘಟಿಗಳು ನಟಿಸಿದ್ದ ಈ ಹಿಂದಿ ಚಿತ್ರ ಬಾಲಿವುಡ್‌ನ ಹಾದಿಯನ್ನೇ ಬದಲಾಯಿಸಿತು. ಸತ್ಯಜಿತ್ ಹುಬ್ಬಳ್ಳಿಯಿಂದ ಬಾಂಬೆಗೆ ಸಾಗಿದ ಕಥೆ ಹೇಳುವ ಮೊದಲು ಒಂದು ಪ್ಲಾಷ್‌ಬ್ಯಾಕ್. ಸಂಪ್ರದಾಯಸ್ಥ ಮುಸ್ಲಿಂ ಕುಟುಂಬದಲ್ಲಿ ಜನಿಸಿದ ಸೈಯದ್ ಅವರ ತಂದೆ ಹುಬ್ಬಳ್ಳಿಯಲ್ಲಿ ಕಬ್ಬಿಣದ ವ್ಯಾಪಾರ ಮಾಡುತ್ತಿದ್ದರು. ಈತ ಅಪ್ಪನಿಗೆ ಒಬ್ಬನೇ ಮಗ. ಅತಿ ಮುದ್ದಿನಿಂದ ಬೆಳೆಯುವ ಅವಕಾಶವಿತ್ತಾದರೂ ಅಪ್ಪನ ಬಿಜಿನೆಸ್ ಇದ್ದಕ್ಕಿದ್ದಂತೆ ನಷ್ಟದ ಹಾದಿ ಹಿಡಿಯಿತು. ಆ ಹೊತ್ತಿಗೆ ಎಸ್ಸೆಸ್ಸೆಲ್ಸಿ ಮುಗಿಸಿ, ಕಾರು-ಲಾರಿ ಡ್ರೈವಿಂಗ್ ಕಲಿತಿದ್ದ ಸೈಯದ್ ತನ್ನ ಕುಟುಂಬದ ಕಷ್ಟ ನಿವಾರಣೆಗಾಗಿ ನೌಕರಿ ಹುಡುಕುವುದು ಅನಿವಾರ್ಯವಾಯಿತು. ಡ್ರೈವಿಂಗ್ ವಿದ್ಯೆ ಗೊತ್ತಿದ್ದುದರಿಂದ ರಾಜ್ಯ ಸಾರಿಗೆ ಸಂಸ್ಥೆಯಲ್ಲಿ ಬಸ್ ಚಾಲಕನ ಕೆಲಸ ಸಿಕ್ಕಿತು. ಅಂದಿನ ದಿನಗಳಲ್ಲಿ ಇವರೇ ಕೆ.ಎಸ್.ಆರ್.ಟಿ.ಸಿ.ಯ ಅತ್ಯಂತ ಕಿರಿಯ ಡ್ರೈವರ್.

ರಾತ್ರಿ-ಹಗಲು ಪಾಳಿಯಲ್ಲಿ ಬಸ್ ಓಡಿಸುತ್ತಿದ್ದರೂ ಸೈಯದ್ ಒಳಗೆ ಒಬ್ಬ ಕಲಾವಿದ ತೆಪ್ಪಗೆ ಕುಳಿತಿದ್ದ. ಈತನಿಗೆ ಮಹಮ್ಮದ್ ರಫಿಯ ಹಾಡು ಗುನುಗುವ ಹುಚ್ಚಿತ್ತು. ಅದೇ ಥರ ಶತ್ರುಘ್ನ ಸಿನ್ಹಾನನ್ನು ಅನುಕರಿಸುವ ಪ್ರತಿಭೆಯೂ ಇತ್ತು. ಇದನ್ನು ಗಮನಿಸಿದ ಹುಬ್ಬಳ್ಳಿಯ 'ಮ್ಯೂಸಿಕ್ ಮೆಲೊಡಿ' ಆರ್ಕೆಸ್ಟ್ರಾ ಕಂಪೆನಿಯವರು ಸೈಯದ್‌ನ್ನು ಸ್ಟೇಜ್‌ಗೆ ಕರೆತಂದರು. ಅಲ್ಲಿ ಆತ ಗಾಯಕ, ಮಿಮಿಕ್ರಿ ಪಟು, ನಿರೂಪಕ, ಎಲ್ಲವೂ ಆಗಿಬಿಟ್ಟ. ಶತ್ರುಘ್ನ ಸಿನ್ಹಾನ ಥರ ಸೈಯದ್ ಡೈಲಾಗ್ ಹೊಡೀತಾ ಇದ್ದರೆ ಪ್ರೇಕ್ಷಕರಿಂದ ಚಪ್ಪಾಳೆ, ಶಿಳ್ಳೆಯ ಉಡುಗೊರೆ. ಇದು ಸೈಯದ್ ಬದುಕಿನ ಮೊದಲ ಹಂತ.



ಕನ್ನಡ ಚಲನಚಿತ್ರದ ಖಳನಾಯಕ ಸತ್ಯಜಿತ್‌ನ ಮೂಲ ಹೆಸರು ಸಯದ್. ತನ್ನ ವೃತ್ತಿ ಬದುಕನ್ನು ಚಲನಚಿತ್ರದೆಡೆ ತಿರುಗಿಸಿಕೊಳ್ಳುವ ಮುಂಚೆ ಈ ಮಾಜಿ ಬಸ್ ಚಾಲಕ ಕೆಲ ಕಾಲ ದೇವೇಗೌಡರನ್ನು ನಂಬಿ ರಾಜಕೀಯ ನಿಲ್ದಾಣದಲ್ಲೂ ತಂಗಿದ್ದ.

○ ಕೇಶವ ನಾಡಕರ್ಣಿ

ಆರ್ಕೆಸ್ಟ್ರಾ ಸ್ಟೇಜ್‌ನಿಂದ ನಾಟಕದ ರಂಗಕ್ಕೆ ವರ್ಗವಾಗಲು ಹೆಚ್ಚು ದಿನಗಳೇನೂ ಬೇಕಾಗಲಿಲ್ಲ. ಸ್ನೇಹಿತರ ಒತ್ತಾಯದ ಮೇರೆಗೆ ಮೊಹಮ್ಮದ್ ನಥಾಪ್ ಎಂಬ ನಿರ್ದೇಶಕರ ನದಾಫ್ ನಾಟಕ ಕಂಪನಿಗೆ ಸೇರಿಕೊಂಡರು. 'ಸಿಂಹಾಸನ್ ಖಾಲಿ ಹೈ, ಸಿಪಾಯಿ ಕಿಯಾಂ, ಅಂಧಾ ಕಾಲಂ' ಮೊದಲಾದ ಹಿಂದಿ ನಾಟಕಗಳಲ್ಲಿ ನಟಿಸಿದ ನಂತರ ಸುಭಾಷ್, ನರೇಂದ್ರ ನಿರ್ದೇಶನದಲ್ಲಿ 'ಬೇಲಿ ಮತ್ತು ಹೊಲ' ನಾಟಕ ಸೈಯದ್‌ಗೆ ಬ್ರೇಕ್ ನೀಡಿತು. ಅದರಲ್ಲಿ ಇವರದ್ದು ಎಸ್ಸಿ ಪೋತರಾಜ್ ಪಾತ್ರ. ೧೯೮೨ರಲ್ಲಿ ಈ ನಾಟಕ ಮೊದಲ ಬಾರಿಗೆ ಬೆಂಗಳೂರಿನ ಕಲಾಕ್ಷೇತ್ರದಲ್ಲಿ ಪ್ರದರ್ಶನಗೊಂಡಾಗ ವರ್ಷದ ಅತ್ಯುತ್ತಮ ನಾಟಕ ಪ್ರಶಸ್ತಿ ದೊರಕಿತು. ಸೈಯದ್ ಅಭಿನಯವನ್ನು ಹೊಗಳುತ್ತಾ 'ಇವಾ ಹುಬ್ಬಳ್ಳಿಯ ರಜನಿ' ಎಂದು ಲಂಕೇಶ್ ಪತ್ರಿಕೆ ಬರೆಯಿತು.

'ಬೇಲಿ ಮತ್ತು ಹೊಲ'ದ ಜನಪ್ರಿಯತೆ ಹಾಗೂ ಸೈಯದ್ ಅಭಿನಯ ಮುಂಬೈನ ಜವಾಹರ್‌ಲಾಲ್ ಯೂತ್ ಸೆಂಟರ್ ಎಂಬ ಸಂಸ್ಥೆಯ ಗಮನಕ್ಕೆ ಬಂತು. ಆ ಸಂಸ್ಥೆ ನಿರ್ಮಿಸುತ್ತಿದ್ದ ಕನ್ನಡ-ಹಿಂದಿ ಚಿತ್ರವೊಂದಕ್ಕೆ ಸೈಯದ್ ಆಯ್ಕೆಯಾದರು. ಶಿಶುನಾಳ ಶರೀಫರ ಬದುಕನ್ನು ಆಧರಿಸಿದ ಆ ಚಿತ್ರಕ್ಕೆ ಕನ್ನಡದಲ್ಲಿ 'ಅಲ್ಲಾ ನೀನೇ ಈಶ್ವರ್ ನೀನೇ' ಹಾಗೂ ಹಿಂದಿಯಲ್ಲಿ 'ಈಶ್ವರ್ ಅಲ್ಲಾ ತೇರೇ ನಾಮ್' ಎಂದು ನಾಮಕರಣ ಮಾಡಲಾಗಿತ್ತು.

ಸೈಯದ್‌ರದ್ದು ಅದರಲ್ಲಿ ಶರೀಫನ ಪಾತ್ರ. ಈ ಚಿತ್ರದ ಕನ್ನಡ ಆವೃತ್ತಿ ಉತ್ತರ ಕರ್ನಾಟಕದಲ್ಲಷ್ಟೇ ತೆರೆಕಂಡಿತು. ಈ ಚಿತ್ರದಿಂದ ಸೈಯದ್‌ಗಾದ ಲಾಭವೆಂದರೆ ಬಾಂಬೆ ಕನೆಕ್ಷನ್. ಅಲ್ಲಿ ಪ್ರಸಿದ್ಧ ಪೃಥ್ವಿರಾಜ್ ಥಿಯೇಟರ್‌ನಲ್ಲಿ 'ಸಿಂಹಾಸನ್ ಖಾಲಿ ಹೈ' ನಾಟಕ ಪ್ರದರ್ಶನಕ್ಕೆ ಅವಕಾಶ ಸಿಕ್ಕಿತು. ಮುಂಜಾನೆ ಈ ನಾಟಕವಿದ್ದರೆ, ಅನಂತರ ನಾನಾಪಾಟೇಕರ್ ಅಭಿನಯದ ಪುರುಷ್ ನಾಟಕ ಪ್ರದರ್ಶನವಾಗುತ್ತಿತ್ತು. ಒಂದು ದಿನ ಮುಂಜಾನೆಯೇ ಥಿಯೇಟರ್‌ಗೆ ಆಗಮಿಸಿದ ನಾನಾ 'ಸಿಂಹಾಸನ್ ಖಾಲಿ ಹೈ' ನಾಟಕ ನೋಡಿದ, ಸೈಯದ್ ಅಭಿನಯ ಕಂಡು ದಂಗಾದ. ಹಿಂದಿ ಸಂಭಾಷಣೆಗೆ ಮರಾಠಿ ಒಗ್ಗರಣೆ ಹಾಕಿ ಒಪ್ಪಿಸುತ್ತಿದ್ದ ಶೈಲಿ ಆತನಿಗಿಷ್ಟವಾಯಿತು. ನಾಟಕ ಮುಗಿದಿದ್ದೇ ತಡ ಸೈಯದ್‌ನ್ನು ಅಭಿನಂದಿಸಿದ ನಾನಾ ಆತನನ್ನು ಸೀದಾ ನಿರ್ದೇಶಕ ಎನ್.ಚಂದ್ರರ ಬಳಿಗೆ ಕರೆದೊಯ್ದ. ಅವರಾಗ ಅಂಕುಶ್ ಚಿತ್ರದ ಖಳನ ಪಾತ್ರವೊಂದಕ್ಕೆ ಸಮರ್ಥ ನಟನ ಹುಡುಕಾಟದಲ್ಲಿದ್ದರು. ಅಲ್ಲಿಗೆ ಸೈಯದ್ ಭಾಗ್ಯದ ಬಾಗಿಲು ತೆರೆಯಿತು. ಅಂಕುಶ್ ಚಿತ್ರ ೮೬ರಲ್ಲಿ ಬೆಂಗಳೂರಿನ ಸ್ವಪ್ನಾ ಚಿತ್ರಮಂದಿರದಲ್ಲಿ ೪೮ ವಾರಗಳ ಪ್ರದರ್ಶನ ಕಂಡಿತು. ಈ ಚಿತ್ರ ವೀಕ್ಷಿಸಿದ ಶಿವಸೇನೆ ನಾಯಕ ಬಾಳಾಠಾಕ್ರೆ ಸೈಯದ್ ನಟನೆಗೆ ಮೆಚ್ಚುಗೆ ಸೂಚಿಸಿದರು. ಅನಂತರ ಆತ ಕನ್ನಡಿಗ ಎಂದು ಗೊತ್ತಾದಾಕ್ಷಣ ನಿರ್ದೇಶಕರ ಮೇಲೆ ರೇಗಿದರಂತೆ.

ಅಂಕುಶ್‌ನಿಂದಾಗಿ ಕನ್ನಡ ನಿರ್ಮಾಪಕರ ಕಣ್ಣಿಗೆ ಸೈಯದ್ ಬಿದ್ದರು. ಕೆ.ವಿ.ರಾಜು, ಸೋಮಶೇಖರ್, ಎ.ಟಿ.ರಘು, ಜಯರಾಂ, ಮೊದಲಾದ ನಿರ್ದೇಶಕರು ಸೈಯದ್‌ನ್ನು ಕರೆದು ಅವಕಾಶ ನೀಡಿದರು. ಸತ್ಯಜೀತ್ ಎಂಬ ಹೊಸ ಹೆಸರಿಟ್ಟರು. ಈ ಮಧ್ಯೆ ತೇಜಾಬ್ ಚಿತ್ರದ ವಿಲನ್ ಪಾತ್ರಕ್ಕೆ ಬಾಂಬೆಯಿಂದ ಬುಲಾವ್ ಬಂದರೂ ಆ ಸಂದರ್ಭದಲ್ಲಿ ವಿಜಯಾರೆಡ್ಡಿ ನಿರ್ದೇಶನದ ಕನ್ನಡ ಚಿತ್ರವೊಂದರಲ್ಲಿ ನಟಿಸುತ್ತಿದ್ದ ಸೈಯದ್, ಆ ಅವಕಾಶವನ್ನು ಬಿಟ್ಟರು. ಆದರೆ ಈ ನಿರ್ಧಾರ ತುಂಬಾ ದುಬಾರಿಯೆನಿಸಿದ್ದು 'ತೇಜಾಬ್' ಯದ್ವಾತದ್ವಾ ಹಿಟ್ ಆದಾಗ. ಸೈಯದ್ ನಿರ್ವಹಿಸಬೇಕಾಗಿದ್ದ ಖಳನ ಪಾತ್ರದಲ್ಲಿ ಕಾಣಿಸಿಕೊಂಡ ಕಿರಣ್‌ಕುಮಾರ್ ಅನಂತರ ಹಿಂದಿರುಗಿ ನೋಡಲಿಲ್ಲ. ಅಲ್ಲಿಯ ತನಕ ಹೀರೋ ಆಗಿ ಫ್ಲಾಪ್ ನಟ ಎಂಬ ಬಿರುದು ಹೊತ್ತಿದ್ದ ಕಿರಣ್‌ತೇಜಾಬ್ ನಂತರ ಖಳ ನಾಯಕನಾಗಿ ಇನ್ನಿಲ್ಲದ ಯಶಸ್ಸು ಕಂಡ.

ಕನ್ನಡದಲ್ಲಿ ಹಳೇ ಖಳರನ್ನೆಲ್ಲಾ ಸತ್ಯಜಿತ್ ಮೂಲೆಗುಂಪು ಮಾಡುವ ಸೂಚನೆ ಕಾಣಿಸಿಕೊಳ್ಳುತ್ತಿದ್ದಂತೆ ಆತ ಮತ್ತೆ ಎಡವಿದರು. ಹುಬ್ಬಳ್ಳಿಯಲ್ಲಿ ಸತ್ಯಜಿತ್ ಜನಪ್ರಿಯತೆಯನ್ನು ಕಂಡ ರಾಜಕಾರಣಿಗಳು ಅದನ್ನು ಕ್ಯಾಶ್ ಮಾಡಿಕೊಳ್ಳುವ ತಂತ್ರ ಹೂಡಿದರು. ೧೯೮೯ರ ಲೋಕಸಭಾ ಚುನಾವಣೆಗೆ ಹುಬ್ಬಳ್ಳಿಯಿಂದ ಜನತಾಪಕ್ಷದ ಅಭ್ಯರ್ಥಿಯಾಗಿ ಸ್ಪರ್ಧಿಸುವಂತೆ ಆಹ್ವಾನ ಬಂತು. ಈ ಆಹ್ವಾನ ನೀಡಿದವರು ಇನ್ನಾರೂ ಅಲ್ಲ, ಇಂದಿನ ಮಾಜಿ ಪ್ರಧಾನಿ ದೇವೇಗೌಡರು. ಚುನಾವಣಾ ಖರ್ಚಿಗಾಗಿ ೫ ಲಕ್ಷ ನೀಡುವ ಭರವಸೆಯೂ ಅವರಿಂದ ಬಂತು. ಆ ಹೊತ್ತಿಗೆ ೪೦ ಚಿತ್ರಗಳನ್ನು ಮುಗಿಸಿದ್ದ ಸತ್ಯಜಿತ್‌ಗೆ ಈ ಆಮಿಷ ಆಕರ್ಷಕವಾಗಿ ಕಂಡಿತು. ಚಿತ್ರರಂಗಕ್ಕೆ ರಜೆ ಹಾಕಿ ರಾಜಕೀಯಕ್ಕೆ ಇಳಿದರು. ಆದರೆ ಸಾರಿಗೆ ಸಂಸ್ಥೆಯ ನೌಕರನಾಗಿದ್ದುಕೊಂಡು ಚುನಾವಣೆಯಲ್ಲಿ ಸ್ಪರ್ಧಿಸುವಂತಿರಲಿಲ್ಲ. ಆ ಕೆಲಸಕ್ಕೆ ರಾಜೀನಾಮೆ ನೀಡಿದರು. ಅನಂತರ ಏನಾಗಬಾರದೋ ಅದಾಯಿತು. ಡಿ.ಕೆ.ನಾಯ್ಕರ್‌ನಂಥ ಅನುಭವಿ ರಾಜಕಾರಿಣಿಯ ಮುಂದೆ ಸತ್ಯಜಿತ್ ಯಾವ ಲೆಕ್ಕ. ಇವರಿಗೆ ಸಿಕ್ಕಿದ್ದು ೩೨ ಸಾವಿರ ಮತ. ಖರ್ಚಿಗೆ ೫ ಲಕ್ಷ ಕೊಡುತ್ತೇನೆ ಅಂದಿದ್ದ ಗೌಡರು ಕೊನೆಗೆ ಕೊಟ್ಟಿದ್ದು ಕೇವಲ ೫೪ ಸಾವಿರ ಎನ್ನುತ್ತಾರೆ ಸತ್ಯಜಿತ್. ಆದರೆ ಎಂದಿನಂತೆ ಸ್ನೇಹಿತರು ನೆರವಿಗೆ ಬಂದರು. ೪.೮೦ ಲಕ್ಷ ಸಾಲ ನೀಡಿದರು. ಸತ್ಯಜಿತ್ ಚುನಾವಣೆಯಲ್ಲಿ ಗೆದ್ದರೆ ತಮಗೆ ಅನುಕೂಲವಾಗಬಹುದು ಎಂಬ ದೂರದೃಷ್ಟಿ ಅವರದು. ಆದರೆ ಇವರು ನೆಲಕಚ್ಚಿದ ಸುದ್ದಿ ಬರುತ್ತಿದ್ದಂತೆ ಸಾಲಕೊಟ್ಟವರೆಲ್ಲಾ ಮನೆ ಮುಂದೆ ಹಾಜರಾದರಂತೆ. ಅದುವರೆಗೆ ದುಡಿದಿದ್ದ ಒಂದು ಬಂಗ್ಲೆ, ಎರಡುಸೈಟು, ಟ್ರಾವೆಲಿಂಗ್ ಏಜೆನ್ಸಿಯಲ್ಲಿದ್ದ ನಾಲ್ಕು ಕಾರು-ಇವಿಷ್ಟನ್ನು ಮಾರಿ ಸಾಲ ತೀರಿಸಿ, ಬರಿಗೈಯಲ್ಲಿ ಮತ್ತೆ ಬೆಂಗಳೂರಿಗೆ ಬಂದರು.

ಸತ್ಯಜಿತ್ ಬೆಂಗಳೂರಿಗೆ ಮರಳಿ ಬಂದಾಗ ಜೊತೆಯಲ್ಲಿ ಪತ್ನಿ, ಮೂರು ಮಕ್ಕಳು ಹಾಗೂ ಅಮ್ಮ ಇದ್ದರು. ವಾಸಕ್ಕೊಂದು ಮನೆ, ಹೊಟ್ಟೆಪಾಡಿಗೆ ಕೆಲಸ, ಆಗಿನ ತುರ್ತಾಗಿತ್ತು. ನಟ ಪ್ರಭಾಕರ್‌ಗೆ ಈತನ ಪರಿಸ್ಥಿತಿ ಅರ್ಥವಾಯಿತು. ಆಗ ಅಳರು ಮಹೇಂದ್ರವರ್ಮ ಚಿತ್ರದ ನಿರ್ಮಾಣದಲ್ಲಿ ಬಿಜಿಯಾಗಿದ್ದರು. ಸತ್ಯಜಿತ್ ಕೈಯಲ್ಲಿ ೨೫ ಸಾವಿರ ರೂಪಾಯಿ ಇಟ್ಟು ಸದ್ಯಕ್ಕೊಂದು ಮನೆ ಮಾಡು ಆಮೇಲೆ ನೋಡೋಣ ಅಂದರಂತೆ. ಸುಲ್ತಾನ್‌ಪಾಳ್ಯದಲ್ಲಿ ಮನೆ ಸಿಕ್ಕಿತು. ಸತ್ಯಜಿತ್ ಎರಡನೇ ಇನ್ನಿಂಗ್ಸ್ ಆರಂಭವಾಯಿತು. ಇಂದಿಗೂ ಸತ್ಯಜಿತ್ ಕಣ್ಣಲ್ಲಿ ಪ್ರಭಾಕರ್ ದೇವರು.

ಚುನಾವಣೆಯಲ್ಲಿ ಸೋತು, ಮನೆಮಠ ಕಳಕೊಂಡು ಮರಳಿ ಬಂದ ಸತ್ಯಜಿತ್‌ನ್ನು ಕನ್ನಡ ಚಿತ್ರರಂಗವೂ ಹಿಂದಿನಂತೆ ಸ್ವಾಗತಿಸಲಿಲ್ಲ. ಒಂದು ಕಾಲದಲ್ಲಿ ತಿಂಗಳ ಮುಂದೆ ತಮ್ಮ ಚಿತ್ರಗಳಿಗೆ ಸತ್ಯಜಿತ್‌ನ್ನು ಬುಕ್ ಮಾಡಿ ಅಡ್ವಾನ್ಸ್ ಕೈಯಲ್ಲಿಟ್ಟು ಹೋಗುತ್ತಿದ್ದ ನಿರ್ಮಾಪಕರು ಈಗ ಶೂಟಿಂಗ್‌ಗೆ ಹಿಂದಿನ ದಿನ ಹೇಳಿಕಳುಹಿಸತೊಡಗಿದರು. ಆ ಪಾತ್ರವೂ ಅಷ್ಟೆ ಕೆಲವು ನಿಮಿಷಗಳ ಕಾಲ ಬಂದು ಹೋಗುವಂಥಾದ್ದು. ಕಳೆದ ೧೫ ವರ್ಷಗಳಲ್ಲಿ ಸತ್ಯಜಿತ್ ನಟನೆಯ ಅಕೌಂಟಲ್ಲಿ ೧೪೦ ಚಿತ್ರಗಳು ಜಮೆಯಾಗಿವೆ. ಈ ಪೈಕಿ ೪೫ ಚಿತ್ರಗಳಲ್ಲಿ ಖಳನಾಯಕ. ಈಗ ಏನಿದ್ದರೂ ಖಳನಾಯಕನ ಡಜನ್ ಸಹಾಯಕರಲ್ಲಿ ಇವರೂ ಒಬ್ಬರು. ಎಂಥ ಪಾತ್ರಗಳನ್ನಾದರೂ ಮಾಡುವ ಸಾಮರ್ಥ್ಯ ತನಗಿದೆ. ಆದರೆ ಇತ್ತೀಚೆಗೆ ನಿರ್ಮಾಪಕರು ಕಾರಣವಿಲ್ಲದೆ ಪರಭಾಷೆಯ ನಟರನ್ನು ತಂದು ಇಲ್ಲಿ ಮೆರೆಸುತ್ತಿದ್ದಾರೆ. ಅವರಿಗೆ ಯಸ್ ಬಾಸ್ ಎನ್ನುವ ಪಾತ್ರ ತನ್ನದು. ಅವರನ್ನು ಮೀರಿಸುವಂಥ ನಟರು ನಮ್ಮಲ್ಲೇ ಇದ್ದಾರೆ. ಆದರೂ ಏಕೆ ಈ ಅನ್ಯಾಯ ಎಂದು ಪ್ರಶ್ನಿಸುವ ಸತ್ಯಜಿತ್ ಅವರ ಬದುಕು ಗತವೈಭವದ ಸ್ಮರಣೆಯಲ್ಲೇ ಸಾಗುತ್ತಿದೆ. ●

ವಿಳಾಸ:
ಸತ್ಯಜಿತ್
ನಂ.೨೬, ೪ನೇ ಅಡ್ಡ ರಸ್ತೆ
ಸನಾವುಲ್ಲಾ ಲೇಔಟ್,
ಸುಲ್ತಾನ್ ಪಾಳ್ಯ, ಬೆಂಗಳೂರು-೩೨.



ವಿದ್ಯುತ್ ದರ ಇಳಿಸದಿದ್ದರೆ ಪ್ರತಿಭಟನೆ - ಬಿಜೆಪಿ
ಎಲ್ಲದಕ್ಕೂ ಹೀಗೇ ಹೇಳಿ ತಣ್ಣಗಾಗ್ತೀರಿ... ಸುಮ್ಮನೆ ಟೇಪ್ ಮಾಡಿಸಿಬಿಡಿ
ಸಿಬಿಐ ನಿರ್ದೇಶಕರ ಅಧಿಕಾರ ವರ್ಗಾವಣೆ - ಸುದ್ದಿ
ದೇಶ ಬಿಡಿ... ಪಕ್ಷ ಉಳೀಬೇಕು.. ನಮ್ಮ ಅಧಿಕಾರ ಉಳೀಬೇಕು!
ಪ್ರಧಾನಿಯಾಗಿದ್ದಾಗ ನಿಮ್ಮ ಪಕ್ಷದವರೇ ಚೆನ್ನಾಗಿ ಇರಿದಿದ್ದಾರಲ್ಲ ಗೌಡ್ರೇ...
ವಿದ್ಯುತ್ ದುಬಾರಿ - ಸುದ್ದಿ
ವಿದೇಶದಿಂದ ಬಂದ ಮೇಲೆ ನಮ್ಮಂಥ ಬಡವರಿಗೆ ಏನಾದರೂ ಮಾಡಬೇಕಂತ ಹಂಬಲವಿತ್ತು ಪಾಪ ಪಟೇಲರಿಗೆ
ವಿದ್ಯುತ್ ಬಿಲ್ಲು
ಮುಖ್ಯಮಂತ್ರಿ
ದಳ

BISILA BADUKU Kannada Monthly No.MAG (2) PRB.DECL / 3 / 97-98 AUGUST 1997 Regd.BGW/394

ಆಧುನಿಕ ಅರ್ಥದಲ್ಲಿ
ವಿದ್ಯಾವಂತರು ಎಂದರೆ
ಕಂಪ್ಯೂಟರ್ ಕಲಿತವರು.

ಭವಿಷ್ಯದ ದಿನಗಳಲ್ಲಿ
ಕಂಪ್ಯೂಟರ್ ಕಲಿಯದವರೆಲ್ಲ
ಅವಿದ್ಯಾವಂತರು ಅಥವಾ
ಅರೆವಿದ್ಯಾವಂತರು !

ಹಾಗಾದರೆ ನೀವು
ಯಾವ ಗುಂಪಿಗೆ
ಸೇರುತ್ತೀರಿ ?



ವಿಶೇಷ ಉಚಿತ ಪುಸ್ತಕ

ಬಿಸಿಲ
ಬದುಕು
• ವಾಣಿಜ್ಯ • ವಿಕಾಸ • ಮಾಹಿತಿ • ಸಂಪರ್ಕ

ಸೆಪ್ಟಂಬರ್ ಸಂಚಿಕೆಯೊಂದಿಗೆ

ಕರ್ನಾಟಕದಲ್ಲಿ ಕಂಪ್ಯೂಟರ್ ಶಿಕ್ಷಣ

- ಕಂಪ್ಯೂಟರ್ ಶಿಕ್ಷಣ ಏಕೆ ಬೇಕು ?
- ಕಂಪ್ಯೂಟರ್ ಶಿಕ್ಷಣ ನೀಡುವ ಸಂಸ್ಥೆಗಳಾವುವು?
- ಯ್ಯಾರು ಯಾವ ಕೋರ್ಸು ಮಾಡಬೇಕು?
- ಕೋರ್ಸುಗಳ ಅವಧಿ, ಶುಲ್ಕ ಎಷ್ಟು ?
- ಕಲಿತ ನಂತರ ಉದ್ಯೋಗಾವಕಾಶ ?

ಇತ್ಯಾದಿ ಇತ್ಯಾದಿ ಉಪಯುಕ್ತ ಮಾಹಿತಿ ನೀಡುವ ಈ ಪ್ರತ್ಯೇಕ ಪುಸ್ತಕವನ್ನು ಸೆಪ್ಟಂಬರ್ ತಿಂಗಳ ಬಿಸಿಲ ಬದುಕು ಸಂಚಿಕೆಯೊಂದಿಗೆ ಉಚಿತವಾಗಿ ನೀಡಲಾಗುವುದು. ಮಾಸ ಪತ್ರಿಕೆಯ ಬೆಲೆಯಲ್ಲಿ ಯಾವುದೇ ವ್ಯತ್ಯಾಸವಿಲ್ಲ !

ಹತ್ತಿರದ ಏಜೆಂಟರಲ್ಲಿ ಪ್ರತಿ ಕಾದಿರಿಸಲು ಮಾತ್ರ ಮರೆಯಬೇಡಿ.

ಏಜೆಂಟರು ತಮಗೆ ಬೇಕಾದ ಹೆಚ್ಚುವರಿ ಪ್ರತಿಗಳಿಗೆ ಮುಂಗಡವಾಗಿ ಬೇಡಿಕೆ ಸಲ್ಲಿಸಬೇಕು.